ಬುಧವಾರ, ಫೆಬ್ರುವರಿ 5, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 36 | ಪುಟ 16


• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಹೊಸ ಹೊಸ ವಸ್ತುಗಳನ್ನು ಸೃಷ್ಟಿಸಲು ಮ್ಯಾಟರ್ ಜೆನ್ ಎಂಬ ಎಐ ತಂತ್ರಜ್ಞಾನ ನೆರವಾಗುತ್ತದೆ



ವಿದೇಶ ವಿದ್ಯಮಾನ
ಡೊನಾಲ್ಡ್ ಟ್ರಂಪ್ 'ತೆರಿಗೆ ತಂತ್ರಗಾರಿಕೆ'
'ಹಳೆ ತೆರಿಗೆ ಪದ್ಧತಿ ಕೈ ಬಿಡಲ್ಲ' 12

ರಾಹುಲ್ ವಿರುದ್ಧ ಹಕ್ಕುಚ್ಯುತಿ ಕ್ರಮಕ್ಕೆ ಮನವಿ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,583	23,739	₹87,750 (ಬೆಂಗಳೂರು)	₹99,500 (ಬೆಂಗಳೂರು)	87.07

ದೆಹಲಿ: ಇಂದು ಮತದಾನ

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭೆ ಚುನಾವಣೆಗೆ ಬುಧವಾರ ಮತದಾನ ನಡೆಯಲಿದೆ. ಪ್ರಮುಖವಾಗಿ ಆಮ್ ಆದ್ಮಿ ಪಕ್ಷ, ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಶಾಂತಿಯುತ ಮತದಾನಕ್ಕಾಗಿ ಚುನಾವಣಾ ಆಯೋಗವು ಸಕಲ ಸಿದ್ಧತೆಯನ್ನು ಮಾಡಿಕೊಂಡಿದೆ.

ಮತದಾನವು ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ನಡೆಯಲಿದೆ. 1.56 ಕೋಟಿ ಮತದಾರರಿರುವ ದೆಹಲಿಯಲ್ಲಿ, 699 ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದಾರೆ. ಶನಿವಾರ (ಫೆ.8) ಫಲಿತಾಂಶ ಹೊರಬೀಳಲಿದೆ.

ಶಾಂತಿಯುತ ಮತದಾನಕ್ಕಾಗಿ ಆಯೋಗವು ದೊಡ್ಡ ಪ್ರಮಾಣದಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜನೆ ಮಾಡಿದೆ. ಅರೆ ಸೇನಾ ಪಡೆಯ 220 ತುಕಡಿ, 35,626 ಪೊಲೀಸರು, ಗೃಹ ರಕ್ಷಕ ದಳದ 19 ಸಾವಿರ ಸಿಬ್ಬಂದಿಯನ್ನು ಭದ್ರತೆಗಾಗಿ ನಿಯೋಜನೆ ಮಾಡಲಾಗಿದೆ. ಒಟ್ಟು 13,766 ಮತಗಟ್ಟೆಗಳನ್ನು ತೆರೆಯಲಾಗಿದೆ.

ಅಕ್ರಮವಾಗಿ ನೆಲಸಿರುವ ಭಾರತೀಯ ವಲಸಿಗರ ವಿರುದ್ಧ ಅಮೆರಿಕ ಕ್ರಮ ಶುರು

205 ಮಂದಿ ಗಡೀಪಾರು

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ತನ್ನ ನೆಲದಲ್ಲಿ ಅಕ್ರಮವಾಗಿ ನೆಲಸಿರುವ ಭಾರತೀಯ ವಲಸಿಗರ ಗಡೀಪಾರು ಪ್ರಕ್ರಿಯೆಯನ್ನು ಅಮೆರಿಕ ಆರಂಭಿಸಿದ್ದು, ಮೊದಲ ಬ್ಯಾಚ್‌ನಲ್ಲಿ 205 ಮಂದಿಯನ್ನು ತನ್ನ ವಾಯುಪಡೆ ವಿಮಾನದಲ್ಲಿ ಭಾರತಕ್ಕೆ ಕಳುಹಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾಗಲು ವಾಷಿಂಗ್ಟನ್ ಡಿ.ಸಿಗೆ ಪ್ರಯಾಣ ಬೆಳೆಸುವುದಕ್ಕೆ ಕೆಲವೇ ದಿನಗಳ ಮುನ್ನ ಈ ಬೆಳವಣಿಗೆ ನಡೆದಿದೆ.

ಟ್ರಂಪ್ ಅವರು ಎರಡನೇ ಅವಧಿಗೆ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಎರಡು ವಾರಗಳ ನಂತರ ಅಕ್ರಮ ವಲಸಿಗರ ಮೊದಲ ತಂಡವನ್ನು ಭಾರತಕ್ಕೆ ಗಡೀಪಾರು ಮಾಡಲಾಗಿದೆ. ಭಾರತದ ವಲಸಿಗರಿರುವ ವಿಮಾನವು ಮಂಗಳವಾರ ಬೆಳಗಿನ ಜಾವ 3ಕ್ಕೆ (ಭಾರತೀಯ ಕಾಲಮಾನ) ಟೆಕ್ಸಾಸ್‌ನಿಂದ ಪ್ರಯಾಣ ಬೆಳೆಸಿದೆ ಎಂದು ಮೂಲಗಳು ತಿಳಿಸಿವೆ.

ಮೊದಲ ತಂಡದಲ್ಲಿ ಗಡೀಪಾರು ಆಗುತ್ತಿರುವ 205 ಮಂದಿಯ ಪೌರತ್ವವನ್ನು ಭಾರತವು ದೃಢಪಡಿಸಿದೆ. ಭಾರತದ ರಾಯಭಾರ ಕಚೇರಿಯ ಅಧಿಕಾರಿಗಳು ಪ್ರತಿಯೊಬ್ಬ ವಲಸಿಗರ ಗುರುತನ್ನು ಪರಿಶೀಲಿಸಿದ್ದಾರೆ. ಗಡೀಪಾರು ಪ್ರಕ್ರಿಯೆಯಲ್ಲಿ ಭಾರತವು ಅಮೆರಿಕಕ್ಕೆ ಸಹಕಾರ ನೀಡುತ್ತಿರುವುದನ್ನು ಇದು ಸೂಚಿಸುತ್ತದೆ.

ಟ್ರಂಪ್ ಅವರು ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ಅಮೆರಿಕವು ಅಕ್ರಮ ವಲಸಿಗರನ್ನು ಗಡೀಪಾರು ಮಾಡುವ ಪ್ರಕ್ರಿಯೆ ಆರಂಭಿಸಿತ್ತು. ತನ್ನ ವಾಯುಪಡೆ ವಿಮಾನದಲ್ಲಿ ನೂರಾರು ಅಕ್ರಮ ವಲಸಿಗರನ್ನು ಈಗಾಗಲೇ ಗ್ವಾಟೆಮಾಲ, ಪೆರು ಮತ್ತು ಹಾಂಡುರಸ್‌ಗೆ ಗಡೀಪಾರು ಮಾಡಿದೆ.

17,940 ಅಕ್ರಮ ವಲಸಿಗರು

ಅಕ್ರಮವಾಗಿ ಅಮೆರಿಕ ಪ್ರವೇಶಿಸಿದ 17,940 ಮಂದಿ ಭಾರತೀಯ ವಲಸಿಗರನ್ನು ಡೊನಾಲ್ಡ್ ಟ್ರಂಪ್ ಆಡಳಿತವು ಗುರುತಿಸಿದೆ.

ಇವರ ಪೌರತ್ವವನ್ನು ದೃಢಪಡಿಸಿರುವ ಭಾರತ ಕೂಡಾ ಈ ಅಂಕಿ–ಅಂಶವನ್ನು ಒಪ್ಪಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಸಿ–17 ವಿಮಾನ ಬಳಕೆ




2,647
ಅಮೆರಿಕದ ಅಧಿಕಾರಿಗಳ ವಶದಲ್ಲಿರುವ ಭಾರತದ ಅಕ್ರಮ ವಲಸಿಗರು

- ಗಡೀಪಾರು ಮಾಡಲು ಅಮೆರಿಕ ವಾಯುಪಡೆಯ ಸಿ–17 ಗ್ಲೋಬ್‌ಮಾಸ್ಟರ್ ವಿಮಾನ ಬಳಕೆ
- ಟೆಕ್ಸಾಸ್‌ನಿಂದ ಪ್ರಯಾಣ ಬೆಳೆಸಿದ ವಿಮಾನ
- ಅಮೃತಸರದಲ್ಲಿ ಬಂದಿಳಿಯುವ ಸಾಧ್ಯತೆ
- ಅಕ್ರಮ ವಲಸಿಗರ ಗುರುತು ದೃಢಪಡಿಸಿದ ಭಾರತ
- ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ವಲಸೆ ಕಾನೂನು ಬಿಗಿಗೊಳಿಸಿದ್ದ ಟ್ರಂಪ್

7ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ರಾಹುಲ್ ವಿರುದ್ಧ ಪ್ರಧಾನಿ ಕೆಂಡ

ನವದೆಹಲಿ (ಪಿಟಿಐ): ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ಮಂಗಳವಾರ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಕೆಲವರು ನಗರ ನಕ್ಸಲರ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ ಎಂದು ಆರೋಪಿಸಿದರು.

ಭಾರತದ ಮೇಲೆ ಯುದ್ಧ ಸಾರುವವರಿಗೆ ದೇಶದ ಸಂವಿಧಾನವೂ ಅರ್ಥವಾಗುವುದಿಲ್ಲ, ದೇಶದ ಏಕತೆಯೂ ಅರ್ಥವಾಗುವುದಿಲ್ಲ ಎಂದರು.

ಮೋದಿ ಅವರು ತಮ್ಮ ಮಾತಿನಲ್ಲಿ ಯಾರ ಹೆಸರನ್ನೂ ಉಲ್ಲೇಖಿಸಲಿಲ್ಲ. ಆದರೆ, ರಾಹುಲ್ ಅವರು ಕಳೆದ ತಿಂಗಳು 'ನಾವು ಬಿಜೆಪಿ, ಆರ್‌ಎಸ್‌ಎಸ್ ಮತ್ತು ಭಾರತ ಸರ್ಕಾರದ ವಿರುದ್ಧ ಹೋರಾಡುತ್ತಿದ್ದೇವೆ' ಎಂದಿದ್ದರು. ಹೀಗಾಗಿ, ಮೋದಿ ಅವರ ಮಾತುಗಳು ರಾಹುಲ್ ಅವರನ್ನು ಪರೋಕ್ಷವಾಗಿ ಗುರಿಯಾಗಿಸಿಕೊಂಡಿದ್ದವು ಎಂದು ವಿಶ್ಲೇಷಿಸಲಾಗಿದೆ.

> **ನಾವು ಸಂವಿಧಾನದ ಆಶಯಕ್ಕೆ ತಕ್ಕಂತೆ ಬದುಕುತ್ತೇವೆ, ವಿಷಕಾರಿ ರಾಜಕಾರಣದಲ್ಲಿ ತೊಡಗುವುದಿಲ್ಲ**
> **ನರೇಂದ್ರ ಮೋದಿ,** ಪ್ರಧಾನಿ

13ನೇ ಪುಟ ನೋಡಿ

ಬಿವೈವಿ ಬದಲಿಸಲು ಆರೆಸ್ಸೆಸ್‌ಗೆ ಅಶೋಕ, ಬೊಮ್ಮಾಯಿ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಬದಲಿಸುವಂತೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಸಂಸದ ಬಸವರಾಜ ಬೊಮ್ಮಾಯಿ ಅವರು ಆರ್‌ಎಸ್‌ಎಸ್‌ನ ಹಿರಿಯ ಮುಖಂಡರೊಬ್ಬರನ್ನು ಭೇಟಿ ಮಾಡಿ ಮನವಿ ಮಾಡಿದ್ದಾರೆ.

'ಪಕ್ಷದಲ್ಲಿ ಸಾಕಷ್ಟು ಗೊಂದಲಗಳು ಸೃಷ್ಟಿಯಾಗಿವೆ. ಪಕ್ಷದಲ್ಲಿ ಹಿಂದೆಂದೂ ಇಷ್ಟು ಗೊಂದಲ ನಿರ್ಮಾಣ ಆಗಿರಲಿಲ್ಲ' ಎಂಬ ಅಭಿಪ್ರಾಯ ಹೇಳಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ವಿಜಯೇಂದ್ರ ಬಣ: ಇಂದು ಸಭೆ

ವಿಜಯೇಂದ್ರ ಬಣದ ಎಂ.ಪಿ. ರೇಣುಕಾಚಾರ್ಯ, ಬಿ.ಸಿ. ಪಾಟೀಲ, ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತು ಇತರರು ಬುಧವಾರ ಬೆಂಗಳೂರಿನಲ್ಲಿ ಸಭೆ ನಡೆಸಿ ವಿಜಯೇಂದ್ರ ಅವರನ್ನೇ ಅಧ್ಯಕ್ಷರನ್ನಾಗಿ ಮುಂದುವರೆಸಲು ಪಕ್ಷದ ವರಿಷ್ಠರ ಮೇಲೆ ಒತ್ತಡ ಹೇರಲಿದ್ದಾರೆ.

10ನೇ ಪುಟ ನೋಡಿ

ಶ್ರಮಿಕ್ ಸಮ್ಮಾನ್ ಯಾತ್ರೆಗೆ ಚಾಲನೆ ಇಂದು

ಬೆಂಗಳೂರು: ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಫೆಬ್ರುವರಿ 5ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಕರ್ನಾಟಕ ಶ್ರಮಿಕ್ ಸಮ್ಮಾನ್ ಯಾತ್ರೆಗೆ ಚಾಲನೆ ನೀಡಲಾಗುತ್ತದೆ ಎಂದು ವರ್ಕಿಂಗ್ ಪೀಪಲ್ಸ್ ಒಕ್ಕೂಟ ತಿಳಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಸದಸ್ಯರಾದ ಲೀಲಾವತಿ, ಮೀನಾ, ನಯನಾ ಶೇಖರ್, 'ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿಸಿದ ಕಾರ್ಮಿಕರು ಸೇರಿದಂತೆ ಎಲ್ಲ ಅನೌಪಚಾರಿಕ ಕೆಲಸಗಾರರಿಗೆ ಶ್ರಮಿಕ್ ಸಮ್ಮಾನ್ ನಿಧಿ ₹5 ಸಾವಿರ ನೀಡಬೇಕು. ಕಾರ್ಮಿಕರಿಗೆ ಒಂದು ತಿಂಗಳಿಗೆ ಕನಿಷ್ಠ ₹26 ಸಾವಿರ ವೇತನ ನಿಗದಿಪಡಿಸಬೇಕು. ನಿವೃತ್ತರಿಗೆ ತಿಂಗಳಿಗೆ ₹5 ಸಾವಿರ ನಿವೃತ್ತಿ ವೇತನ ನೀಡುವಂತೆ ಯಾತ್ರೆಯ ಮೂಲಕ ಒತ್ತಾಯಿಸಲಾಗುತ್ತದೆ' ಎಂದು ತಿಳಿಸಿದರು.

ವಿಶ್ವ ಕ್ಯಾನ್ಸರ್ ದಿನ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಿಂದ ಜಾಥಾ

ಜಾಗೃತಿ, ಚಿಕಿತ್ಸೆಯ ಅರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಜಾಥಾದಲ್ಲಿ ವೈದ್ಯರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಕ್ಯಾನ್ಸರ್ ಕಾಯಿಲೆ ಬಗ್ಗೆ ಜಾಗೃತಿ ಮೂಡಿಸಿದರು.

ಸಂಸ್ಥೆಯ ಆವರಣದಲ್ಲಿ ಈ ಜಾಥಾಕ್ಕೆ ಚಲನಚಿತ್ರ ನಟ ವಸಿಷ್ಠ ಸಿಂಹ ಚಾಲನೆ ನೀಡಿದರು. 'ಶೀಘ್ರ ಪತ್ತೆ, ಕ್ಯಾನ್ಸರ್ ನಾಪತ್ತೆ' ಘೋಷವಾಕ್ಯದಡಿ ನಡೆದ ಈ ಜಾಥಾದಲ್ಲಿ 500ಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದರು.

ಇದೇ ವೇಳೆ ಮಾತನಾಡಿದ ವಸಿಷ್ಠ ಸಿಂಹ, 'ಕ್ಯಾನ್ಸರ್ ಎಂದ ಕೂಡಲೇ ಸಾಮಾನ್ಯವಾಗಿ ಎಲ್ಲರಲ್ಲೂ ಭಯ ಇರುತ್ತದೆ. ವೈದ್ಯಕೀಯ ವಿಜ್ಞಾನ ಕ್ಷೇತ್ರದಲ್ಲಿ ನಡೆದ ಸಂಶೋಧನೆಗಳಿಂದಾಗಿ ಎಲ್ಲ ರೀತಿಯ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ಲಭ್ಯವಿದೆ. ಕ್ಯಾನ್ಸರ್ ಕುರಿತು ಅರಿವು ಮೂಡಿಸುವ ಮೂಲಕ ಜನ ಸಮೂಹಕ್ಕೆ ಧೈರ್ಯ ತುಂಬಬೇಕಿದೆ. ಕ್ಯಾನ್ಸರ್ ಬಗ್ಗೆ ಯಾರೂ ಭಯ ಪಡಬೇಕಾಗಿಲ್ಲ. ತಂಬಾಕು ಹಾಗೂ ದುಶ್ಚಟಗಳಿಂದ ದೂರವಿದ್ದರೆ ಆರೋಗ್ಯಯುತ ಜೀವನ ಸಾಧ್ಯ' ಎಂದು ಹೇಳಿದರು

ಆರಂಭಿಕ ಹಂತದಲ್ಲೇ ಪತ್ತೆ: ಸಂಸ್ಥೆಯ ಆಡಳಿತಾಧಿಕಾರಿ ವೈ. ನವೀನ್ ಭಟ್, 'ಆರಂಭಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆ ಮಾಡಿದಲ್ಲಿ ಕಾಯಿಲೆ ಗುಣಪಡಿಸಬಹುದಾಗಿದೆ. ಕಿದ್ವಾಯಿ ಆಸ್ಪತ್ರೆಯು ಅತ್ಯಾಧುನಿಕ ಸೌಲಭ್ಯಗಳನ್ನು ಅಳವಡಿಸಿಕೊಂಡು, ವಿಶ್ವದರ್ಜೆಯ ಚಿಕಿತ್ಸೆ ಒದಗಿಸುತ್ತಿದೆ. ಕ್ಯಾನ್ಸರ್ ರೋಗಿಗಳಿಗೆ ಆತ್ಮಸ್ಥೈರ್ಯ ತುಂಬುವ ಮೂಲಕ ರೋಗದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ' ಎಂದರು.

ಸಂಸ್ಥೆ ನಿರ್ದೇಶಕ ಡಾ.ಟಿ. ನವೀನ್, 'ಕ್ಯಾನ್ಸರ್ ರೋಗವನ್ನು ಸೂಕ್ತ ಸಮಯದಲ್ಲಿ ಪತ್ತೆ ಹಚ್ಚಿ, ಸಮರ್ಪಕ ಚಿಕಿತ್ಸೆ ಒದಗಿಸಿದರೆ ಗುಣಪಡಿಸಲು ಸಾಧ್ಯ. ರೋಗಿಗಳು ಕ್ಯಾನ್ಸರ್ ಬಗ್ಗೆ ಭಯಪಡದೆ, ಅಗತ್ಯ ಚಿಕಿತ್ಸೆ ಪಡೆಯಬೇಕು. ನಮ್ಮ ಆಸ್ಪತ್ರೆಯು ಅತ್ಯಾಧುನಿಕ ಸೌಲಭ್ಯ, ನುರಿತ ವೈದ್ಯರನ್ನು ಒಳಗೊಂಡಿದೆ. ಸ್ತನ, ರಕ್ತ, ಶ್ವಾಸಕೋಶ ಸೇರಿದಂತೆ ಗರ್ಭಕಂಠ ಕ್ಯಾನ್ಸರ್ ಹೆಚ್ಚಿನ ಜನರನ್ನು ಕಾಡುತ್ತಿದೆ' ಎಂದು ಹೇಳಿದರು.

ಇದೇ ವೇಳೆ ಕ್ಯಾನ್ಸರ್‌ನಿಂದ ಚೇತರಿಸಿಕೊಂಡವರು ಹಾಗೂ ಅವರ ಕುಟುಂಬಸ್ಥರು ಅಭಿಪ್ರಾಯ ಹಂಚಿಕೊಂಡರು. ಸಂಸ್ಥೆಯ ಆವರಣದಿಂದ ತೆರಳಿದ ಜಾಥಾ, ಲಾಲ್‌ಬಾಗ್‌ವರೆಗೂ ಸಾಗಿ ರೋಗದ ಬಗ್ಗೆ ಜಾಗೃತಿ ಮೂಡಿಸಿತು.



ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ವಸಿಷ್ಠ ಸಿಂಹ, ವೈ. ನವೀನ್ ಭಟ್, ಡಾ.ಟಿ.ನವೀನ್ ಅವರು ವೈದ್ಯರು, ಸಿಬ್ಬಂದಿ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳ ಜತೆಗೆ ಹೆಜ್ಜೆ ಹಾಕಿದರು ಪ್ರಜಾವಾಣಿ ಚಿತ್ರ

ಕೆಎಸ್‌ಆರ್‌ಟಿಸಿ ನೌಕರರ ಆರೋಗ್ಯ ತಪಾಸಣೆ

ವಿಶ್ವ ಕ್ಯಾನ್ಸರ್ ದಿನಾಚರಣೆ ಪ್ರಯುಕ್ತ ಎಚ್‌ಸಿಜಿ ಕಾನ್ಸರ್ ಕೇಂದ್ರವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ಬೆಂಗಳೂರು ಕೇಂದ್ರೀಯ ವಿಭಾಗದ ಘಟಕ-2ರಲ್ಲಿ 1ಸಾವಿರಕ್ಕೂ ಹೆಚ್ಚು ಸಾರಿಗೆ ನೌಕರರಿಗೆ ಉಚಿತವಾಗಿ ಬಾಯಿ ಮತ್ತು ಸ್ತನ ಕ್ಯಾನ್ಸರ್ ತಪಾಸಣೆ ನಡೆಸಿತು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ಎಚ್‌ಸಿಜಿಯ ಸಿಇಒ ಮನೀಶಾ ಕುಮಾರ್ ಶಿಬಿರಕ್ಕೆ ಚಾಲನೆ ನೀಡಿದರು. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಆಡಳಿತಾಧಿಕಾರಿ ನವೀನ್ ಭಟ್, ಕೆಎಸ್‌ಆರ್‌ಟಿಸಿ ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತ) ನಂದಿನಿದೇವಿ ಕೆ., ಎಚ್‌ಸಿಜಿ ಆಸ್ಪತ್ರೆಯ ಡಾ. ಮಹೇಶ್ ಬಂಡೆಮೇಗಲ್ ಉಪಸ್ಥಿತರಿದ್ದರು.

ಭಾರತೀಯ ವೈದ್ಯಕೀಯ ಸಂಘ (ಐಎಂಎ) ಕರ್ನಾಟಕ ರಾಜ್ಯ ಶಾಖೆಯಿಂದಲೂ ವಿಶ್ವ ಕ್ಯಾನ್ಸರ್ ದಿನ ಆಯೋಜಿಸಿ, ರೋಗದ ಬಗ್ಗೆ ಜಾಗೃತಿ ಮೂಡಿಸಲಾಯಿತು. ಐಎಂಎ ರಾಜ್ಯ ಘಟಕದ ಉಪಾಧ್ಯಕ್ಷ ಡಾ. ಮರಿಗೌಡ ಟಿ.ಎಸ್., ಗೌರವ ಕಾರ್ಯದರ್ಶಿ ಡಾ. ಸೂರಿರಾಜು ವಿ. ಹಾಗೂ ಪದಾಧಿಕಾರಿಗಳು ಪಾಲ್ಗೊಂಡಿದ್ದರು. 'ಉತ್ತಮ ಜೀವನ ವಿಧಾನ ಅಳವಡಿಸಿಕೊಂಡು, ನಿಯಮಿತವಾಗಿ ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳಬೇಕು. ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಸುಲಭ ಸಾಧ್ಯ' ಎಂದು ಸಾರಿದರು.



ಸಾರಿಗೆ ನೌಕರರಿಗೆ ಎಚ್‌ಸಿಜಿ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣೆ ನಡೆಸಲಾಯಿತು

ಎಐಡಿಎಸ್‌ಒ ಪ್ರತಿಭಟನಾ ಸಮಾವೇಶದಲ್ಲಿ ಶಿಬಾಷಿಶ್ ಪ್ರಹರಾಜ್

‘ಶಿಕ್ಷಣ ನೀತಿ; ಸರ್ಕಾರಿ ಶಾಲೆಗೆ ಕುತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಹಾಗೂ ರಾಜ್ಯದಲ್ಲಿ ಆಡಳಿತ ನಡೆಸಿದ ಎಲ್ಲಾ ಪಕ್ಷಗಳು ಶಿಕ್ಷಣ ವಿರೋಧಿ ನೀತಿ ಅನುಸರಿಸಿವೆ ಎಂದು ಎಐಡಿಎಸ್‌ಒ ಕೇಂದ್ರ ಸಮಿತಿ ಪ್ರಧಾನ ಕಾರ್ಯದರ್ಶಿ ಶಿಬಾಷಿಶ್ ಪ್ರಹರಾಜ್ ದೂರಿದರು.

ಸಂಯೋಜನೆ ಹೆಸರಿನಲ್ಲಿ ರಾಜ್ಯದ 4,200ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿದೆ ಎಂದು ಆರೋಪಿಸಿ, ಎಐಡಿಎಸ್‌ಒ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಮಾವೇಶಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಶಿಕ್ಷಣ ವ್ಯಾಪಾರೀಕರಣದ ಫಲವಾಗಿ ರಾಜ್ಯದಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳು ಮುಚ್ಚಿವೆ. 1986ರಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿದ್ದ ನೀತಿಗಳು ಶಿಕ್ಷಣದ ಕೇಂದ್ರೀಕರಣ, ವ್ಯಾಪಾರೀಕರಣಕ್ಕೆ ನಾಂದಿ ಹಾಡಿತ್ತು. ಮುಂದೆ ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರಗಳೂ ಇದೇ ನೀತಿ ಅನುಸರಿಸಿಕೊಂಡು ಬಂದ ಫಲವಾಗಿ ಶಿಕ್ಷಣ ವ್ಯಾಪಾರದ ಸರಕಾಗಿದೆ ಎಂದು ಆರೋಪಿಸಿದರು.

ದೇಶದ ಸಂಪತ್ತಿನ ಸೃಷ್ಟಿಕರ್ತರಾದ ರೈತರು, ಕಾರ್ಮಿಕರು, ಬಡವರ ಮಕ್ಕಳಿಗೆ ಶಿಕ್ಷಣ ಮರೀಚಿಕೆಯಾಗಿದೆ. ಸರ್ಕಾರಿ ಶಾಲಾ-ಕಾಲೇಜುಗಳನ್ನು ಮುಚ್ಚಿ ಬಡವರು, ಪರಿಶಿಷ್ಟರು, ನಿರ್ಗತಿಕರ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡುತ್ತಿರುವ ಸರ್ಕಾರಗಳ ವಿರುದ್ಧ ವಿದ್ಯಾರ್ಥಿಗಳು ದೊಡ್ಡಮಟ್ಟದಲ್ಲಿ ಹೋರಾಟ ಬಲಪಡಿಸಬೇಕಿದೆ ಎಂದರು.

ಎಐಡಿಎಸ್‌ಒ ರಾಜ್ಯ ಉಪಾಧ್ಯಕ್ಷೆ ಚಂದ್ರಕಲಾ ಮಾತನಾಡಿ, ಎರಡು ವರ್ಷಗಳ ಹಿಂದೆ ಬಿಜೆಪಿ ಸರ್ಕಾರ 13,800 ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿತ್ತು. ವಿದ್ಯಾರ್ಥಿಗಳು 36 ಲಕ್ಷಕ್ಕೂ ಹೆಚ್ಚು ಸಹಿ ಸಂಗ್ರಹಿಸಿ ಶಾಲೆಗಳನ್ನು ಉಳಿಸಿದ್ದರು. ಈಗ ಕಾಂಗ್ರೆಸ್ ಸರ್ಕಾರ ಕಡಿಮೆ ದಾಖಲಾತಿ ಇರುವ ಶಾಲೆಗಳನ್ನು ಮುಚ್ಚುವುದಾಗಿ ಹೇಳುತ್ತಿದೆ. ರಾಜ್ಯದಲ್ಲಿ ಸುಮಾರು 6,000 ಏಕೋಪಾಧ್ಯಾಯ ಶಾಲೆಗಳಿವೆ. 3,500 ಶಾಲೆಗಳಲ್ಲಿ ಬಳಸಲು ಯೋಗ್ಯವಾದ ಶೌಚಾಲಯಗಳೇ ಇಲ್ಲ. 59,000 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇಂತಹ ಸ್ಥಿತಿಯಲ್ಲಿ ಸರ್ಕಾರಿ ಶಾಲೆಗಳು ಹೇಗೆ ಉಳಿಯುತ್ತವೆ ಎಂದು ಪ್ರಶ್ನಿಸಿದರು.

ಸಂಘಟನೆಯ ಕೇಂದ್ರ ಸಮಿತಿ ಅಧ್ಯಕ್ಷ ಸೌರವ್ ಘೋಷ್, ರಾಜ್ಯ ಘಟಕದ ಅಧ್ಯಕ್ಷೆ ಕೆ.ಎಸ್. ಅಶ್ವಿನಿ, ಕಾರ್ಯದರ್ಶಿ ಅಜಯ್ ಕಾಮತ್, ಉಪಾಧ್ಯಕ್ಷರಾದ ಅಭಯ ದಿವಾಕರ್, ಅಪೂರ್ವ, ಸುಭಾಷ್, ಮಹಾಂತೇಶ್, ಕಲ್ಯಾಣ್, ವಿನಯ್ ಚಂದ್ರ ಉಪಸ್ಥಿತರಿದ್ದರು.



ರಾಜ್ಯದ 4,200 ಶಾಲೆಗಳನ್ನು ಮುಚ್ಚಲು ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ ಎಐಡಿಎಸ್‌ಒ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಕನ್ನಡದಲ್ಲಿ ಮಾತನಾಡಲು ಹೇಳಿದ್ದಕ್ಕೆ ಹಲ್ಲೆ: ಪ್ರತಿಭಟನೆ



ಹೆಸರಘಟ್ಟ ಮುಖ್ಯ ರಸ್ತೆಯ ಆತ್ಮೀಯ ಗೆಳೆಯರ ಬಳಗ ಬಡಾವಣೆಯಲ್ಲಿ ಕನ್ನಡಿಗನ ಮೇಲೆ ನಡೆದ ಹಲ್ಲೆ ಖಂಡಿಸಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಹೋಟೆಲ್ ಮುಂದೆ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಕನ್ನಡದಲ್ಲಿ ಮಾತನಾಡಲು ಹೇಳಿದ ಫುಡ್‌ಡೆಲಿವರಿ ಬಾಯ್ ಮೇಲೆ ಹಲ್ಲೆ ಮಾಡಿದ ಹೋಟೆಲ್‌ನವರ ವಿರುದ್ಧ ಕನ್ನಡ ಪರ ಸಂಘಟನೆಗಳು ಮಂಗಳವಾರ ಪ್ರತಿಭಟಿಸಿದರು.

ಸ್ವಿಗ್ಗಿ ಫುಡ್ ಡೆಲಿವರಿ ಬಾಯ್ ಚಿಕ್ಕಸಂದ್ರದ ನಿವಾಸಿ ನವೀನ್ ಮೇಲೆ ಆತ್ಮೀಯ ಗೆಳೆಯರ ಬಳಗ ಬಡಾವಣೆಯಲ್ಲಿರುವ ಗಬ್ರು ಬಿಸ್ಟ್ರೊ ಆ್ಯಂಡ್ ಕೆಫೆ ಹೋಟೆಲ್‌ನವರು ಹಲ್ಲೆ ಮಾಡಿದ್ದಾರೆ. ಸಿಸಿಟಿವಿಯಲ್ಲಿ ಈ ದೃಶ್ಯ ಸೆರೆಯಾಗಿದ್ದು, ಇದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ. ಇದನ್ನು ಗಮನಿಸಿದ ಸ್ಥಳೀಯ ಕನ್ನಡ ಪರ ಸಂಘಟನೆಗಳು,ಈ ಘಟನೆ ಖಂಡಿಸಿ, ಹಲ್ಲೆ ಮಾಡಿದವರನ್ನು ಬಂಧಿಸುವಂತೆ ಒತ್ತಾಯಿಸಿದ್ದಾರೆ.

ಅತಿಥಿ ಶಿಕ್ಷಕರ ಪ್ರತಿಭಟನೆ 18ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2025–26ನೇ ಶೈಕ್ಷಣಿಕ ವರ್ಷದಿಂದ ಅತಿಥಿ ಶಿಕ್ಷಕರ ನೇಮಕಾತಿಯಲ್ಲಿ ಕಡ್ಡಾಯವಾಗಿ ಮೆರಿಟ್ ಪದ್ಧತಿಯನ್ನು ಕೈಬಿಟ್ಟು ಸೇವಾ ಹಿರಿತನಕ್ಕೆ ಆದ್ಯತೆ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಫೆಬ್ರುವರಿ 18ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಅತಿಥಿ ಶಿಕ್ಷಕರ ಸಂಘ ತಿಳಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಚಿತ್ರಲೇಖಾ ಕೆ., ‘ಪ್ರತಿ ತಿಂಗಳು ಕನಿಷ್ಠ ₹30 ಸಾವಿರ ಗೌರವ ಧನ ನೀಡಬೇಕು. ವರ್ಷಕ್ಕೆ 12 ತುರ್ತು ಸಾಂದರ್ಭಿಕ ರಜೆಗಳನ್ನು ಅಧಿಕೃತವಾಗಿ ಜಾರಿ ಗೊಳಿಸಬೇಕು. ನಾವು ಪ್ರತಿವರ್ಷ ಕಾರ್ಯ ನಿರ್ವಹಿಸುವ ಶಾಲೆಯ ಮುಖ್ಯ ಶಿಕ್ಷಕರು, ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಯಿಂದ ಸೇವಾ ಪ್ರಮಾಣ ಪತ್ರವನ್ನು ನೀಡಬೇಕು. ಅತಿಥಿ ಶಿಕ್ಷಕ ಎಂಬ ಪದನಾಮ ತೆಗೆದು, ಅರೆಕಾಲಿಕ, ಹೊರಗುತ್ತಿಗೆ ಶಿಕ್ಷಕರು ಎಂದು ನೇಮಕಾತಿ ಮಾಡಿಕೊಳ್ಳಬೇಕು’ ಎಂದು ಆಗ್ರಹಿಸಿದರು.

‘ಮಹಿಳಾ ಶಿಕ್ಷಕರಿಗೆ ಗೌರವಧನದ ಜೊತೆಗೆ ಹೆರಿಗೆ ರಜೆ ನೀಡುವುದು ಹಾಗೂ ಎಲ್ಲ ಅತಿಥಿ ಶಿಕ್ಷಕರಿಗೆ ಆರೋಗ್ಯ ವಿಮೆ ಸೌಲಭ್ಯ ಕಲ್ಪಿಸಬೇಕು. ಶಿಕ್ಷಕರ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ವಯಸ್ಸಿನ ಹಿರಿತನಕ್ಕೆ ಆದ್ಯತೆ ನೀಡಿ, ನಮ್ಮನ್ನು ಆಯ್ಕೆ ಮಾಡಿಕೊಳ್ಳಬೇಕು. ಸರ್ಕಾರಿ ಶಿಕ್ಷಕರಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ನಮಗೂ ಸಿಗುವಂತಾಗಬೇಕು. ದೆಹಲಿ, ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ರಾಜ್ಯಗಳಲ್ಲಿ ಸೇವಾ ಹಿರಿತನ ಆಧಾರದ ಮೇಲೆ ಶಿಕ್ಷಕರನ್ನು ಕಾಯಂಗೊಳಿಸಲಾಗಿದೆ. ಅದರಂತೆ ನಮ್ಮ ರಾಜ್ಯದಲ್ಲಿಯೂ ಸೇವಾ ಹಿರಿತನದ ಆಧಾರದ ಮೇಲೆ ಅತಿಥಿ ಶಿಕ್ಷಕರನ್ನು ಕಾಯಂಗೊಳಿಸಬೇಕು’ ಎಂದು ಒತ್ತಾಯಿಸಿದರು.

‘ಆಯುಕ್ತರ ನೇಮಕ ಅಂತಿಮ ಆದೇಶಕ್ಕೆ ಬದ್ಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಮಾಹಿತಿ ಹಕ್ಕು ಆಯೋಗದ ಮುಖ್ಯ ಆಯುಕ್ತರಾಗಿ ಎ.ಎಂ.ಪ್ರಸಾದ್ ಹಾಗೂ ಆಯುಕ್ತರಾಗಿ ಕೆ.ರಾಮನ್, ಡಾ.ಹರೀಶ್ ಕುಮಾರ್, ರುದ್ರಣ್ಣ ಹರ್ತಿಕೋಟೆ, ನಾರಾಯಣ ಜಿ. ಚನ್ನಾಳ, ಎಸ್.ರಾಜಶೇಖರ, ಕೆ.ಬದ್ರುದ್ದೀನ್ ಮತ್ತು ಬಿ.ಆರ್.ಮಮತಾ ಅವರ ನೇಮಕಾತಿಯು ನ್ಯಾಯಪೀಠದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ’ ಎಂದು ಹೈಕೋರ್ಟ್ ಆದೇಶಿಸಿದೆ.

ಹುದ್ದೆಯ ಆಕಾಂಕ್ಷಿಯಾಗಿದ್ದ ಜೆ.ಪಿ.ನಗರ 7ನೇ ಹಂತದ ನಿವಾಸಿ ಯಾದ ಸಾಮಾಜಿಕ ಕಾರ್ಯಕರ್ತ ಕೆ.ಮಲ್ಲಿಕಾರ್ಜುನ ರಾಜು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

‘ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ದಾಖಲೆಗಳನ್ನು ಸಲ್ಲಿಸಿದ ಬಳಿಕ ಸೂಕ್ತ ಆದೇಶ ಹೊರಡಿಸಲಾಗುವುದು’ ಎಂದು ತಿಳಿಸಿದ ನ್ಯಾಯಪೀಠ, ರಾಜ್ಯ ಸರ್ಕಾರ ಮತ್ತು ಎಲ್ಲಾ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 10ಕ್ಕೆ ಮುಂದೂಡಿದೆ.



ರಾಜ್ಯ ಮಾಹಿತಿ ಆಯೋಗದ ಮುಖ್ಯ ಆಯುಕ್ತರಾಗಿ ಎ.ಎಂ.ಪ್ರಸಾದ್, ಆಯುಕ್ತರಾಗಿ ಕೆ. ಬದ್ರುದ್ದೀನ್, ಎಸ್. ರಾಜಶೇಖರ್, ಡಾ. ಹರೀಶ್ ಕುಮಾರ್, ಎಸ್. ರಾಮನ್, ರುದ್ರಣ್ಣ ಹರ್ತಿಕೋಟೆ, ಬಿ.ಆರ್. ಮಮತಾ, ನಾರಾಯಣ ಜಿ. ಚನ್ನಾಳ ಅವರು ಪ್ರಮಾಣ ಸ್ವೀಕರಿಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರಮಾಣ ವಚನ ಬೋಧಿಸಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಭಾಗವಹಿಸಿದ್ದರು

ಕಿಣ್ವ ಬದಲಿ ಚಿಕಿತ್ಸೆ ಸ್ಥಗಿತ: ಮಧ್ಯಪ್ರವೇಶಿಸುವಂತೆ ಮೋದಿ, ನಡ್ಡಾಗೆ ಪತ್ರ

‘ಐಜಿಐಸಿಎಚ್‌ನಲ್ಲಿ 20 ಮಕ್ಕಳು ಸಾವಿನ ದವಡೆಯಲ್ಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವರಕ್ಷಕ ಕಿಣ್ವ ಬದಲಿ ಚಿಕಿತ್ಸೆ (ಎಆರ್‌ಟಿ) ನಿಲ್ಲಿಸಿರುವುದರಿಂದ, ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ (ಐಜಿಐಸಿಎಚ್) 20ಕ್ಕೂ ಹೆಚ್ಚು ಮಕ್ಕಳು ಸಾವಿನ ದವಡೆಗೆ ಸಿಲುಕಿದ್ದಾರೆ. ಇದರಿಂದ ರಾಜ್ಯದಲ್ಲಿ ಉದ್ಭವಿಸಿರುವ ತುರ್ತು ಆರೋಗ್ಯ ಬಿಕ್ಕಟ್ಟನ್ನು ಬಗೆಹರಿಸಲು ತಕ್ಷಣ ಮಧ್ಯ ಪ್ರವೇಶಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರನ್ನು ಒಆರ್‌ಡಿಐ (ಆರ್ಗನೈಜೇಷನ್ ಫಾರ್ ರೇರ್ ಡಿಸೀಸ್ ಇಂಡಿಯಾ) ನೇತೃತ್ವದಲ್ಲಿ ರೋಗಿಗಳ ಹಿತಾಸಕ್ತಿ ರಕ್ಷಣೆಯ ಸಂಘಟನೆಗಳು ಒತ್ತಾಯಿಸಿವೆ.

ಅಪರೂಪದ ರೋಗ ಆರೈಕೆಯಲ್ಲಿ ಕರ್ನಾಟಕವು ಮಾದರಿಯಾಗಿದೆ. ಆದರೂ ಇಂದು, ಈ ಮಕ್ಕಳನ್ನು ಧನಸಹಾಯದ ಅರ್ಹರ ಪಟ್ಟಿಯಿಂದ ಕೈಬಿಡಲಾಗುತ್ತಿದೆ. ಇದು ಕೇವಲ ಆರೋಗ್ಯ ಸಮಸ್ಯೆಯಲ್ಲ; ಮಾನವೀಯ ಬಿಕ್ಕಟ್ಟು. ನೆರವು ಸಿಗದೆ, ಸಾಕಷ್ಟು ರೋಗಿಗಳು ಸಾವಿನ ಅಪಾಯ ಎದುರಿಸುತ್ತಿದ್ದಾರೆ ಎಂದು ಅವರು ಪತ್ರದಲ್ಲಿ ಗಮನ ಸೆಳೆದಿದ್ದಾರೆ.

ಮೋದಿ ಮತ್ತು ನಡ್ಡಾ ಅವರಿಗೆ ಬರೆದಿರುವ ಪತ್ರದಲ್ಲಿ, ‘ಈ ಮಕ್ಕಳು ಅಪರೂಪದ ಮತ್ತು ದೀರ್ಘಕಾಲದ ಅಸ್ವಸ್ಥತೆಯಾದ ಲೈಸೋಸೋಮಲ್ ಸ್ಟೋರೇಜ್ ಡಿಸಾರ್ಡರ್ಸ್‌ನಿಂದ (ಎಲ್‌ಎಸ್‌ಡಿ) ಬಳಲುತ್ತಿದ್ದು, ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದರು. ಆದರೆ, ಅಪರೂಪದ ರೋಗಗಳ ರಾಷ್ಟ್ರೀಯ ನೀತಿ (ಎನ್‌ಪಿಆರ್‌ಡಿ) 2021ರಲ್ಲಿ ಅನುದಾನ ಬಿಡುಗಡೆಗೆ ವಿಳಂಬ ಮಾಡಿರುವುದರಿಂದ, ಅವರಿಗೆ ನೀಡುತ್ತಿದ್ದ ಚಿಕಿತ್ಸೆ ಸ್ಥಗಿತಗೊಂಡಿದೆ. ತಾವು ತುರ್ತು ಗಮನಹರಿಸಿ, ಸಾವಿನ ದವಡೆಯಲ್ಲಿರುವ ಜೀವಗಳನ್ನು ಉಳಿಸಲು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿ ಸಿವೆ.

ಅಲ್ಲದೆ, ಎನ್‌ಪಿಆರ್‌ಡಿಯಲ್ಲಿ ಅನುದಾನದ ಮಿತಿ ತೆಗೆದು ಹಾಕುವುದು ಸೇರಿದಂತೆ ಹಲವು ಸುಧಾರಣೆಗಳನ್ನು ತರುವಂತೆ ಶಿಫಾರಸು ಕೂಡ ಮಾಡಲಾಗಿದೆ.

ಎನ್‌ಪಿಆರ್‌ಡಿ 2021ರ ಅಡಿಯಲ್ಲಿ ಒಂದು ಬಾರಿ ಒದಗಿಸಲಾಗುವ ₹50 ಲಕ್ಷ ಮಿತಿಯ ನೆರವು ಅಸಮರ್ಪಕ ವಾಗಿದೆ. ಇದರಿಂದಾಗಿ, ಅಪರೂಪದ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಅಗತ್ಯ ಹಣವಿಲ್ಲದೆ ಅನೇಕ ರೋಗಿಗಳು ಪರದಾಡುತ್ತಿದ್ದಾರೆ. ಅಪರೂಪದ ರೋಗಗಳ ರಾಷ್ಟ್ರೀಯ ನಿಧಿ (ಎನ್‌ಎಫ್‌ಆರ್‌ಡಿ)ಅಡಿ ₹974 ಕೋಟಿಯನ್ನು ತಕ್ಷಣ ಬಿಡುಗಡೆ ಮಾಡುವಂತೆ ದೆಹಲಿ ಹೈಕೋರ್ಟ್ ಅಕ್ಟೋಬರ್ 4ರಂದು ನಿರ್ದೇಶನ ನೀಡಿದೆ. ಆದರೂ ಅನುದಾನ ಬಿಡುಗಡೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ರೋಗಿಗಳ ಪರವಾದ ಸಂಘಟನೆಗಳಾದ ಒಆರ್‌ಡಿಐ ಸಹ ಸಂಸ್ಥಾಪಕ ಮತ್ತು ನಿರ್ದೇಶಕ ಪ್ರಸನ್ನ ಶಿರೋಳ್, ಲೈಸೋಸೋಮಲ್ ಸ್ಟೋರೇಜ್ ಡಿಸಾರ್ಡರ್ಸ್ ಸಪೋರ್ಟ್ ಸೊಸೈಟಿ (ಎಲ್‌ಎಸ್‌ಡಿಎಸ್‌ಎಸ್) ಅಧ್ಯಕ್ಷ ಮಂಜಿತ್ ಸಿಂಗ್, ರೇರ್ ಡಿಸೀಸಸ್ ಇಂಡಿಯಾ ಫೌಂಡೇಷನ್ (ಆರ್‌ಡಿಐಎಫ್) ಸಹ ಸಂಸ್ಥಾಪಕ ಮತ್ತು ನಿರ್ದೇಶಕ ಸೌರಭ್ ಸಿಂಗ್, ನೀಮನ್-ಪಿಕ್ ಡಿಸೀಸ್ ಚಾರಿಟಬಲ್ ಟ್ರಸ್ಟ್ ಸಹ ಸಂಸ್ಥಾಪಕ ನವೀನ್‌ತಾರಾ ಕಾಮತ್ ಅವರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers / Professors

II Jai gurudev II
SRI SRI RAVISHANKAR VIDYA MANDIR
BROADEN THE VISION... DEEPEN THE ROOTS
Affiliated to CBSE, Bangalore North, Vidyaranyapura
Invites Applications From Experienced, Qualified, Passionate & Innovative Educators.
For The Following Posts.
1. PGT / PRT – English
2. PGT-Computer Science
4. Music / Dance
Apply With
Detailed Resume, Mobile No. and Latest Photograph.
080-23641305 / 9606354017/ 9035948644
bangalore.north@ssrvm.org www.bangalorenorth.ssrvm.org

St.PHILOMENA'S MEMORIAL SCHOOL & PU COLLEGE
Mariyappanapalya, Near Jnanabharathi, Bengaluru - 560056. Affiliated to ICSE- KA 413, New Delhi Contact : 7411940787, 9945387566
WANTED
Trained Graduates/Post Graduates to teach from Nursery to Grade X.
Qualified and Experienced
Chemistry and Physics Lecturer for PU College
Eligible candidate can send their resume along with the written application through mail spmhighschool.2011@gmail.com/ spmpucollege@gmail.com by 8th February 2025 or walk in directly. Attractive Salary offered based on the competence and skill.

"WANTED TRAINED Experienced Teachers for Primary and Middle school to teach Mathematics, Social Science, Kannada, Hindi, Sanskrit, PET (Ladies preferred). Apply with resume to: maithry2003@gmail.com or Call:- 9900311166"

VIDYA SOUDHA GROUP OF INSTITUTIONS
No.9/1, 1st Main Peenya, 1st Stage, Near Basaveshwara Bus Station, Bangalore – 560 058.

WE ARE RECRUITING

VIDYA SOUDHA PUBLIC SCHOOL, BANGALORE (ICSE)

Primary / High School Teachers
Subjects: Mathematics, Science, English, Hindi, Social Science
Qualification: Master / Bachelor's degree in relevant subject with M.Ed/ B.Ed
Experience: Minimum 3 years

Pre-Primary Teachers
Qualification: Degree with NTT/ MTT
Experience: Minimum 2 years

Co-Curricular Teachers
Subjects: Yoga/ Meditation, Art & Craft, Physical Education & Counsellor
Qualification: Degree / Diploma in relevant subject
Experience: Minimum 3 Years

Non-Teaching
Position: HR Executive & Accounts Executives
Qualification: MSW / MBA / M.Com / B.com
Experience: Minimum 3 Years in educational institutions

VIDYA SOUDHA PU COLLEGE, BANGALORE

Required Lectures As Below
Subjects: Physics, Mathematics, Biology, English, Economics, Physical Education Director (Female)
Qualification: Master Degree in relevant
Experience: Minimum 5 Years
Note : Experience in teaching IIT-JEE, NEET, CET is preferred

VIDYA SOUDHA DAY & EVENING DEGREE COLLEGE, BANGALORE

Position: Asst. Professor-Commerce
Qualification: M.Com with NET / KSET / Ph.D
Experience: Minimum 3 Years in Degree College

Position: Admin / Marketing Executive
Qualification: Any Degree
Experience: Minimum 3 Years

VIDYA SOUDHA ACADEMY OF MANAGEMENT SCIENCES DEGREE COLLEGE, HASSAN CAMPUS

Position: Principal
Qualification: Ph.D in Science / Commerce / Management / Computer Science
Experience: Minimum 5 Years of experience as Principal in reputed PU / Degree Colleges

www.vidyasoudha.edu.in 89715 66659 hr@vidyasoudha.edu.in
Please apply on or before 15th February 2025

Drivers

BHUMIKA BUILDERS jayanagar requires experienced Car Driver. Contact 9632449277

Factory

FACTORY WORKERS Needed Male Age Below 30 Eligibility: 10th Pass or PUC Pass Location: Rajajinagar Perks: Good Salary, Training Provided Contact: 9108458798/ 9845579620

General

WANTED IMMEDIATELY GENERAL MANAGER, SALES MANAGERS, RESTAURANT MANAGER, MARKETING EXECUTIVES, LADY RECEPTIONIST. Good Salary. Bannerghata Road nearby candidates Call: 9900001954.

WANTED OFFICE ASSISTANTS at Textile Export Company Bomannahalli (Bangalore) Email: starsilks@gmail.com

WANTED SUPERVISOR & STAFF FOR PETROL BUNK AT INDIRANAGAR. CANDIDATES Residing Near Indiranagar CALL 9738651162.

REAL ESTATE SELLING

Industrial & Factory

Tumkur Road

SALE, YESHWANTHPUR 45000 sqft Corner, Peenya 87120 sqft Industrial. Nelamangala, Dabaspet 9.5/ 12 acres. 9141326819

Sites

Nagarabhavi

"SALE 30X40 East facing Residential Site @ Nagarabhavi, Good location Genuine Buyers Call: 7760388034/ 9242135834"

PUBLIC NOTICE

ಅನುಪಮಾ ಆಸ್ಪತ್ರೆ
CIIIQ ರಸ್ತೆ, BEL ಲೇಔಟ್, ಬ್ಯಾಡರಹಳ್ಳಿ, ಬೆಂಗಳೂರು–91
ಸೂಚನೆ: ಆಸ್ಪತ್ರೆಯ ವೈದ್ಯಕೀಯ ದಾಖಲೆಗಳ ವಿಲೇವಾರಿ
ನವೆಂಬರ್ 2015 ರಿಂದ ಡಿಸೆಂಬರ್ 2020 ರವರೆಗಿನ ಅವಧಿಯ ಒಳ ರೋಗಿಯ ವೈದ್ಯಕೀಯ ದಾಖಲೆಗಳನ್ನು ನಾಶಪಡಿಸಲಾಗುತ್ತದೆ. ಆಸಕ್ತರು ಈ ಅಧಿಸೂಚನೆಯ ದಿನಾಂಕದಿಂದ ಒಂದು ತಿಂಗಳೊಳಗೆ ತಮ್ಮ ದಾಖಲೆಗಳನ್ನು ಸಂಗ್ರಹಿಸಲು ವೈದ್ಯಕೀಯ ದಾಖಲೆಗಳ ವಿಭಾಗವನ್ನು ಸಂಪರ್ಕಿಸಬಹುದು.
ಸೂಚನೆ: ಮೆಡಿಕೋ ಲೀಗಲ್ ಕೇಸ್, ಜನನ, ಮರಣ ಮತ್ತು ಮಕ್ಕಳ ವೈದ್ಯಕೀಯ ದಾಖಲೆಗಳಿಗೆ ಅನ್ವಯಿಸುವುದಿಲ್ಲ.

INVITATION FOR VENDORS
1. Sandeep Vihar Owners Welfare Association invites Tender Proposals from reputed Agencies (Vendors) for the undermentioned services.
2. Mandatory License/Certification from competent authorities is essential:-

AREA OF INTEREST	TYPE OF BID
(a) Sewage Treatment Plant (b) Horticulture (c) Security (d) House Keeping	Fresh Contract
(a) Swimming Pool (b) Solid Waste Management (c) Pest Control (d) CCTV (e) Sewage Treatment Plant	AMC

3. Once E of I is received, Request for Proposal (RFP) will be issued.
4. Prospective Vendors to submit their proposal by **17 Feb 2025** the office of Secretary.
Email ID : secretary@sandeepvihar.com

NOTICE INVITING TENDER
Sealed item rate tenders in two covers system for the construction of **"First Floor School Building at Gorinabele Village, Nelamangala Taluk, Bangalore"** are invited by:
HONORARY SECRETARY, RAJAJINAGAR PARENTS' EDUCATION SOCIETY®
CA-2, 69th Cross, 5th Block, Rajajinagar, Bangalore-560 010. Mobile: **84314 79346**
Approximate cost Rs.60 lakhs.
Tender open from 08.02.2025 to 12.02.2025.
For details visit
RPES office between 10.00 a.m. to 3.00 p.m.
OR **www.rpesgrips.com**

THE IDEAL HOMES CO-OPERATIVE BUILDING SOCIETY LIMITED
(Reg. No. DYR 352 dt. 29.4.1964)
Ideal Homes Township, Mysore Road, Bangalore - 560 098. Ph: 28600892 / 35006228
Email: ihcbs.idealhomes@gmail.com
NOTICE
All the Members of the Ideal Homes Co-operative Building Society are hereby informed that the Board of Directors of the Society have been unanimously elected for the next 5 years. (2025-26 to 2029-30) Hence the scheduled election on 09-02-2025 (Sunday) stands cancelled. Members are kindly requested to note this. The Board of Directors wish to express their gratitude to all our valuable Members of the Society.
By Order of the Board of Directors
Sd/-
Date: 04-02-2025 SECRETARY

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belgaum & Approved by AICTE, New Delhi)
Byranayakanahalli, Nelamangala Taluk, Bangalore Rural District - 562 132
Email: recruitdrsmce2211@gmail.com Website: www.drsmce.org
Faculty Positions for Engineering & Polytechnic
Applications are invited for the posts of Professors, Associate Professors and Asst. Professors in the following Disciplines...
- Computer Science & Engineering
- Information Science & Engineering
- Electronics & Communication Engineering
- Electrical & Electronics Engineering
- Basic Science Department : Physics, Chemistry and Mathematics
- Kannada, English
- MBA (Marketing, Finance, HR)
- Physical Education Director
- Librarian and Asst. Librarian

Non Teaching Posts
- Accountants, FDA, SDA.
- Typists (Kannada & English)
- Wardens : Boys Hostel & Girls Hostel
- Receptionist, Drivers
- Foremen, Instructors and attenders in the above departments

Qualification and Pay Scale: As per AICTE norms
Note: For the posts of Professor & Associate Professor, Candidates having Ph.D are only eligible. Apply Via email and hard copy so as to reach before 7 days from the date of advertisement along with your detailed CV & supporting documents.
Dr. H.D. Ramesh, Principal
98806 58861 / 77602 68213 /77600 97419
Sri D.C. Venugopal
Chairman

SHANTHINIKETHANA ENGLISH SCHOOL-GIRINAGAR REQUIRES TEACHERS EXPERIENCED/ TRAINED FRESHERS OF AGE: <40YRS 1) PRINCIPAL/ VICE PRINCIPAL, ACADEMIC HEAD, COORDINATOR - FEMALE Candidates with of Minimum 4 Years of Leadership Experience, Post Graduate with B.Ed 2) Primary & High school female teachers for subjects: Maths Physics Chemistry Biology English Social Studies EVS and Hindi. Qualification: Graduate with B.Ed/ D.Ed 3) CO-CURRICULAR TEACHERS, ART & CRAFT, LIBRARIAN, MUSIC, YOGA, P.E (Female only) WALK-IN-INTERVIW: between 05-02-2025 to 09-02-2025 Timings: 10:00 am to 4:00 pm. Salary is not a constraint for the deserving candidates. Submit resume with recent photograph: SHANTHINIKETHANA SCHOOL, 1341/A, 8-C Cross, 8th Main Girinagar 2nd Phase, Bengaluru-85 Phone: +917676068929/ 7760202693/ 080-26721334/ 080-26420794 Email: hrdsgps@gmail.com; www.shanthinikethana.com.

ST.PHILOMENA'S English School, Doddabommasandra, Bengaluru-97.State &.ICSE Board Hiring teachers for all the classes for all the subjects including Art, Music, PE-Female and Admin Staff. Qualification: BA,B.Sc, MA,M.Sc B.Ed. Walk-in or send Resume WhatsApp: 9741275231, Email: office@st-philomena.org Contact:40903810.

ADELIE INTERNATION ALPRESCHOOL -GIRINAGAR, Asia's largest unique premium Preschool Requires: PRE-PRIMARY TEACHERS: Young & Dynamic, Fluent In English, any degree with NTT/ MTT/ ECCE, OTHERS: RECEPTIONIST, ART & CRAFT DATE: WALK-IN BETWEEN: Between 05-02-2025 to 09-02-2025 Timings: 10:00 am to 4:00 pm. Salary is not a constraint for the deserving candidates. Submit resume with recent photograph: ADELIE INTERNATIONAL PRESCHOOL, #4263, Opp SwamiViveknanda Circle, Giringar, Bengaluru-85. Phone:+919845030600/ 9591622353/ 080-26420796/ 080-26724522. Email: hrdsgps@gmail.com; www.adelieinternational.com

Multiple Vacancy

WANTED
An Polyester Button Manufacturing Company needs
1) Marketing Executives -2
2) Marketing Trainees -2
At their Marketing Office (Near to City Market)
3) Accounts Trainee -2
4) Sales Coordinator -2
(Bidadi Industrial Area)
Contact
9448093531 / 8867409697
Skb@multisales.in
Office@multisales.in

WANTED LADY Office Assistant and Lady Teacher with Computer Knowledge for School. Staying in and around Laggere/ Peenya. Bangalore. Contact: 8147011054, 8147011059.

St Sophia Convent High School (CBSE)
Nagarabhavi REQUIRES
Trained experienced Female NTT & MTT Teachers.
ACADEMIC COORDINATORS and TEACHERS for the Academic year 2025-26
To teach Mathematics Science, Social Science, English, Kannada, Sanskrit, Hindi, Phyical Education,
Librarian and Computers for Primary and High School.
Walk-in interview is scheduled on Saturday 15th Feb 2025 .
Timing 1:30pm to 3:00pm
principal@stsophiaconvent.org
92430 31872

NIRMAN INTERNATIONAL PUBLIC SCHOOL (CBSE), Near Automated RTO,7th Block, Vishweshwaraiah Layout, Bangalore-91 Requires Qualified, Experienced TEACHERS for All Subjects, from Nursery to X. Contact: 8123030731/ 9986055970. Email: nirmaninfo24@gmail.com Walk-in Interview on all working days between 9:30am to 2:00pm

Recruitment of Vocational Trainers
Skill Tree Consulting Ltd, a NSDC empaneled Vocational Training Partner (VTP), invites applications for the positions of Vocational Trainers to be engaged in Government Senior Secondary Schools of **Karnataka.**

Sector: IT/ ITES — **No. of Positions: 56**
Job Role: Domestic Data Entry Operator & Domestic Biometric Data Operator
Essential Qualifications:
- Post graduate/ Degree/Diploma/B. Voc in Computer science/Information science from a recognized Institute /University with at least 60% marks with at least 2 years of work/teaching exp.
- OR DOEACC B Level Certificate with at least 1 year of work/teaching experience Desirable: Knowledge of Biometric System. Minimum Competencies :Effective communication skills (oral and written) , Basic computing skills , Technical competencies , Soft skills, Facilitation skills are mandatory

Sector: Retail — **No. of Positions: 08**
Job Role: Store Operation Assistant & Retail Sales Associate
Essential Qualifications:
Postgraduate/ Degree/ Diploma/ B. Voc in Retail Management, Marketing/ BBA/ BBM/ MBA from a recognized Institute /University with at least 60% marks with at least 2 years of work/teaching exp. Minimum Competencies: Effective communication skills (oral and written) , Basic computing skills , Technical competencies , Soft skills, Facilitation skills are mandatory

All Inclusive Gross Honorarium 22000 & 27500* per Month (As per Level-L1,L2,L3,L4)
Note: 1. All Positions are on contractual basis only. This is not a government/permanent job. Management reserves the right to Accept reject an application without assigning any reason whatsoever.
2. The Candidates should be domicile of Karnataka.
How to Apply : Scan the QR Code Or Fill the Application form given below.
https://forms.office.com/r/g3EZ7ixUh9
- Last date for the receipt of online application is **Feb 9th, 2025 till 5pm.**
- Only Shortlisted candidates(based on the filled application form)will be called for written test & personal interview.
- Date and venue of the Examination will be informed through mail on the provided mail id of the candidate.

Office Boys/ Peon

WANTED HELPER & PACKER (Male) Bommanahalli (Bangalore) Ph: 9980140661/ 08025631755 Mail: starsilks@gmail.com

BUSINESS

Business Offers

Finance

URGENT LOAN Avail @ 3.5% per annum Personal-Business Housing- Project Take Over all types loan. Good Finance. Phone:: 7678360713.

Business For Sale

BAKING EQUIPMENT for SALE. 2-Tier Gasoven, 10-Litre Mixer-Grinder, Chiller Unit. Contact: 8301092766, Doddanekkunddi, Marathahalli, Bangalore.

KAIRALEE NIKETHAN EDUCATION TRUST
Estd. 1966
5th Main, 9th Cross, Indiranagar, Bangalore-560038
Sealed quotations are invited from experienced contractors for the construction of indoor badminton courts with MS structure, PVC floors, electrical works etc. Adjacent to this a football turf with a cricket pitch (grass area) to be done. The above project is in Malur. Contractors with experience of the construction of sports facilities only need to apply. All details can be obtained from our office contact no: 8095064195 /9535800165 between 10.00 am to 4.00 pm. • The details will be issued from 05.02.2025 to 11.02.2025 between 10.00 am to 4.00 pm. • Quotation quoted should be inclusive of GST & their experience in the construction may also be furnished (Work completion certificate copy to be attached). • The last date for submission of the filled sealed quotation is on or before 12.02.2025 before 2:30 p.m. • Quotation will be opened on the same day at 4.00 pm. The decision of the Management will be final.
Sd/- Hon. Secretary

PERSONAL

Change of Name

CHANGE OF NAME
I, **Nemi Chand Sohan Lal** and **N. Sohan Lal Bohra** S/o G. Nemi Chand Bohra, R/at #12, Muthyalamma Koil C Street, Bharathinagar, Bengaluru-560001, declare that the above names pertain to me only. Henceforth I shall be known as **N. Sohan Lal Bohra** vide affidavit dated 04.02.2025 sworn before Notary C.V. Earappa, Bengaluru.

CHANGE OF NAME
I, **IKABAL HUSAIN MUKKADAYIL KOYAKUTTY** Residing at # 2397, Crescent 2nd Main, 3rd Cross Near, Old Airport Road, H.A.L 3rd Stage, Bangalore North, Vimanapura Bangalore-560017 have changed my name to **IQBAL HUSSAIN MUKKADAYIL KOYAKUTTY** vide affidavit dated 01.02.2025 before notary V. Rajashekhara, Bangalore.

I, PURUSHOTHAM S MODHALIAR S/o.Subramani S. R/a#695 Next to Police Station Road Bannerughatta PO: Bannerughatta, Bangalore 560083 Have changed my Name to PURUSHOTHAM S vide affidavit dated:26.12.2024 before Notary L.Puttaraju Bengaluru.

I, PRAJWAL, residing at Mysuru City-11 have changed my name as PRAJWAL GOWDA MAKALI KARIYAPPA, vide affidavit dated 04/02/2025 before Notary K.S. Bammappanavar, Bengaluru

MATRIMONIAL

Grooms Wanted

Telugu

LOOKING FOR Naidu boy settled in US for Naidu girl, 27/160. Very fair beautiful. No Siblings. Masters in Luxury Brand Management UK. Email to bharathi.bhasker@gmail.com

ದಲಿತ ಕುಟುಂಬಗಳ ಒಕ್ಕಲೆಬ್ಬಿಸಿದ ಆರೋಪ ಪ್ರಕರಣ • ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ

‘ಮುನಿರತ್ನ ಒಂದು ಕಾಲದ ಲೀಡಿಂಗ್ ರೌಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೀಣ್ಯದ ಅಕ್ಕಮಹಾದೇವಿ ಕೊಳೆಗೇರಿ ಪ್ರದೇಶವನ್ನು ತೆರವುಗೊಳಿಸಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಧಿಕಾರಿಗಳ ಕಾರ್ಯಾಚರಣ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಮುನಿರತ್ನ ಅವರ ಕರಾಳ ಚರಿತ್ರೆಯ ಮುಂದುವರಿದ ಭಾಗ. . .

ಸಂತ್ರಸ್ತೆಯ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಅವರು ವಿಶೇಷ ನ್ಯಾಯಾಲಯದಲ್ಲಿ ವಾದಿಸಿದ ಪರಿ ಇದು.

‘ಮಾದಿಗ ಸಮುದಾಯದ 20 ವರ್ಷದ ಮಹಿಳೆಯ ಮೇಲೆ ದೌರ್ಜನ್ಯ ನಡೆಸಿದ್ದಾರೆ’ ಎಂದು ಆರೋಪಿಸಲಾದ ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿಯಾಗಿರುವ ಮುನಿರತ್ನ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಮಂಗಳವಾರ ವಿಚಾರಣೆ ನಡೆಸಿದರು.

ಈ ವೇಳೆ, ಸಿ.ಎಚ್. ಹನುಮಂತರಾಯ ಅವರು, ‘ಮುನಿರತ್ನ ಒಂದು ಕಾಲದ ಲೀಡಿಂಗ್ ರೌಡಿ. ಇವರ ವಿರುದ್ಧ ಈಗಲೂ ಎಂಟು ಕ್ರಿಮಿನಲ್ ಕೇಸುಗಳು ಬಾಕಿ ಇವೆ. ‘ಈ ಪ್ರಕರಣದಲ್ಲಿ ಮುನಿರತ್ನ ಅವರ ಯಾವುದೇ ಪಾತ್ರವೂ ಇಲ್ಲ. ಪಿತೂರಿಯನ್ನೂ ಮಾಡಿಲ್ಲ. ತೆರವು ಕಾರ್ಯಾಚರಣೆಯೆಲ್ಲಾ ಕಾನೂನು ಬದ್ಧವಾಗಿಯೇ ನಡೆದಿದೆ’ ಎಂದು ಅವರ ಪರ ಹಿರಿಯ ವಕೀಲರು ಈ ಹಿಂದಿನ ವಿಚಾರಣೆ ವೇಳೆ ಪ್ರತಿಪಾದಿಸಿದ್ದರು. ಆದರೆ, ಇದನ್ನೆಲ್ಲಾ ಈ ಫೋಟೊಗಳು ಸುಳ್ಳು ಮಾಡುತ್ತವೆ ಎಂದು ತೆರವು ಕಾರ್ಯಾಚರಣೆ ನಡೆಸಿದ ದಿನದಂದು ಮುನಿರತ್ನ ಸ್ಥಳದಲ್ಲಿ ಹಾಜರಿದ್ದು, ತಮ್ಮ ಅನುಯಾಯಿಗಳಿಗೆ ಹುಕುಂ ನೀಡುತ್ತಿದ್ದರು’ ಎಂಬ ಫೋಟೊಗಳನ್ನು ಪ್ರದರ್ಶಿಸಿ ನ್ಯಾಯಾಧೀಶರಿಗೆ ಸಲ್ಲಿಸಿದರು. ಅಂತೆಯೇ, ‘ಬಿಬಿಎಂಪಿ ವಲಯ ಆಯುಕ್ತರು ಅಂದು ತೆರವು ಕಾರ್ಯಾಚರಣೆಗೆ ಅನುಮತಿ ನೀಡಿರಲಿಲ್ಲ’ ಎಂಬ ಹಿಂಬರಹವನ್ನು ನೀಡಿದರು.

‘ಪತ್ರಕರ್ತ ರವಿ ಬೆಳಗೆರೆ 1995ರಲ್ಲೇ ಬರೆದಿರುವ ಪಾಪಿಗಳ ಲೋಕ ಪುಸ್ತಕದಲ್ಲಿ ಕೊತ್ವಾಲ ರಾಮಚಂದ್ರನ ಶಿಷ್ಯ ಮುನಿರತ್ನಂ ಹೇಳಿದ ಕಥೆಯಲ್ಲಿ; ಮುನಿರತ್ನ ಹೇಗಿದ್ದರು, ಹೇಗಾಗಿದ್ದಾರೆ ಎಂಬುದನ್ನು ಸವಿವರವಾಗಿ ಪ್ರಕಟಿಸಲಾಗಿದೆ. ಅಂದು ಮುನಿರತ್ನ, ಕೊತ್ವಾಲ ರಾಮಚಂದ್ರ ಮುಂದೆ ಬೇಡಿಕೊಂಡು ತಿರುಗಾಡುತ್ತಿದ್ದರು. ಇವತ್ತು ಶಾಸಕ. ಮಾಜಿ ಮಂತ್ರಿ. ಇವರ ಘೋಷಿತ ಆಸ್ತಿಯ ಒಟ್ಟು ಮೊತ್ತ ₹293 ಕೋಟಿ. ಇದನ್ನೆಲ್ಲಾ ಹೇಗೆ ಗಳಿಸಿದ್ದೀರಿ ಎಂದು ಯಾರಾದರೂ ಕೇಳಿದರೆ ಬಿಸಿನೆಸ್ ಎನ್ನುತ್ತಾರೆ. ಯಾವ ರೀತಿಯ ಬಿಸಿನೆಸ್‌ನಲ್ಲಿ ಇದನ್ನೆಲ್ಲಾ ಗಳಿಸಿದ್ದಾರೋ ಗೊತ್ತಿಲ್ಲ. ಆದರೆ, ಇಷ್ಟೊಂದು ಮೊತ್ತವನ್ನು ಬಿಬಿಎಂಪಿ ಗುಡಿಸಿ ಗುಂಡಾರ ಮಾಡಿ ಗುಡ್ಡೆ ಹಾಕಿಕೊಂಡಿರುವುದು ಮಾತ್ರ ಸ್ಪಷ್ಟ’ ಎಂದು ದಾಖಲೆಗಳ ಸಮೇತ ಬಣ್ಣಿಸಿದರು.

ವಾದ ಆಲಿಸಿದ ನ್ಯಾಯಾಧೀಶರು, ‘ಆರೋಪಿ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂಬ ಆದೇಶವನ್ನು ವಿಸ್ತರಿಸಿ, ತೆರವು ಕಾರ್ಯಾಚರಣೆ ನಡೆಸಿದ ದಿನದಂದು ಪೊಲೀಸರು ಯಾವ ಕ್ರಮ ಕೈಗೊಂಡಿದ್ದರು ಎಂಬ ಬಗೆಗಿನ ಕೇಸ್ ಡೈರಿಯನ್ನು (ಸಿ.ಡಿ) ನಾಳೆ ಕೋರ್ಟ್‌ಗೆ ಹಾಜರುಪಡಿಸಬೇಕು’ ಎಂದು ಪ್ರಾಸಿಕ್ಯೂಷನ್ ಪರ ವಕೀಲರಿಗೆ ಆದೇಶಿಸಿ ವಿಚಾರಣೆಯನ್ನು ಬುಧವಾರಕ್ಕೆ (ಫೆ.5) ಮುಂದೂಡಿದರು. ಮುನಿರತ್ನ ಪರ ಹೈಕೋರ್ಟ್ ವಕೀಲ ಎಸ್.ಎಸ್. ಶ್ರೀನಿವಾಸ ರಾವ್ ಹಾಜರಿದ್ದರು.

ಮುಖ್ಯಾಂಶಗಳು

- ಕೊತ್ವಾಲ ರಾಮಚಂದ್ರ ಮುಂದೆ ಒಂದು ಕಾಲದ ಬೆಗ್ಗರ್: ವಕೀಲರ ವಾದ
- ಇವತ್ತು ₹293 ಕೋಟಿ ಆಸ್ತಿ ಒಡೆಯ!

ತೆಲುಗು–ತಮಿಳರೆಂದರೆ ಪ್ರೀತಿ...!



‘ಈ ಪ್ರಕರಣಕ್ಕೆ ಕೇವಲ ಒಂದೇ ಆಯಾಮವಿಲ್ಲ’ ಎಂದ ಹನುಮಂತರಾಯ ಅವರು, ‘ಅಂದು ತೆರವುಗೊಂಡ ವರೆಲ್ಲಾ ಉತ್ತರ ಕರ್ನಾಟಕದ ಬಡ ದಲಿತ ಕುಟುಂಬಗಳು. ಮುನಿರತ್ನ ಬೆಂಗಳೂರಿನಲ್ಲಿ ತಮ್ಮ ಕ್ಷೇತ್ರದಲ್ಲಿ ಯಾವತ್ತೂ ತೆಲುಗರು ಮತ್ತು ತಮಿಳರಿಗೇ ಮಣೆ ಹಾಕುತ್ತಾ ಬಂದಿದ್ದಾರೆ. ಇದೇ ಕಾರಣಕ್ಕೆ ಉತ್ತರ ಕರ್ನಾಟಕದ ಬಡವರನ್ನು ಒಕ್ಕಲೆಬ್ಬಿಸಿದ್ದಾರೆ. ಆವತ್ತು ನಡೆಸಿದ ಬಲವಂತದ ತೆರವು ಕಾರ್ಯದ ವೇಳೆ ಯಾವೊಬ್ಬ ಪೊಲೀಸರೂ ಸ್ಥಳದಲ್ಲಿ ಇರಲಿಲ್ಲ. ಅವರಿಗೆ ಪುನರ್ವಸತಿ ಕಲ್ಪಿಸಿಲ್ಲ’ ಎಂದು ಆಕ್ಷೇಪಿಸಿದರು.

ಬಿಬಿಎಂಪಿ ಚುನಾವಣೆ 25ರಂದು ಅರ್ಜಿ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಚುನಾವಣೆಗೆ ಸಂಬಂಧಿಸಿದ ಅರ್ಜಿಯನ್ನು ಇದೇ 25ರಂದು ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿಕೊಂಡಿದೆ.

ಖಾಸಗಿ ಮಧ್ಯಸ್ಥಗಾರರ ಪರವಾಗಿ ವಕೀಲ ಅನಿಲ್ ಸಿ. ನಿಶಾನಿ ಅವರು ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠದ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಿದರು.

ಬಿಬಿಎಂಪಿ ಸದಸ್ಯರ ಅಧಿಕಾರದ ಅವಧಿಯು 2019ರ ಸೆಪ್ಟೆಂಬರ್ 10ರಂದು ಪೂರ್ಣಗೊಂಡಿತ್ತು. ಆರು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ 2020ರ ಡಿಸೆಂಬರ್ 18ರಂದು ಅಮಾನತಿನಲ್ಲಿ ಇರಿಸಿತ್ತು. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ–2020ರ ಅನ್ವಯ ರಚಿಸಲಾಗುವ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ತ್ವರಿತಗತಿಯಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರದ ಸ್ಥಳೀಯ ಸಂಸ್ಥೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಸಂಬಂಧ, ವಾರ್ಡ್‌ಗಳ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸಲೆಂದೇ ನೂತನ ಕಾನೂನನ್ನು ಅಂಗೀಕರಿಸಲಾಗಿದೆ ಎಂದು ಮೇಲ್ಮನವಿಯಲ್ಲಿ ಹೇಳಿತ್ತು.

ಅಲ್ಲದೆ, ಹೊಸದಾಗಿ ಜಾರಿಗೊಳಿಸಲಾದ ಕಾಯ್ದೆಯನ್ನು ರಿಟ್ ಅರ್ಜಿಯ ಮೂಲಕ ಪ್ರಶ್ನಿಸಲು ರಾಜ್ಯ ಚುನಾವಣಾ ಆಯೋಗಕ್ಕೆ ಯಾವುದೇ ರೀತಿಯ ಅಧಿಕಾರವಿಲ್ಲ ಎಂದೂ ಸರ್ಕಾರ ಹೇಳಿತ್ತು.

ವಾರ್ಡ್‌ಗಳ ಪುನರ್ ವಿಂಗಡಣೆ ಹಾಗೂ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿ ಅಂತಿಮಗೊಳಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದ ಕೂಡಲೇ ಬಿಬಿಎಂಪಿ ಚುನಾವಣೆ ನಡೆಸುವಂತೆ ಕರ್ನಾಟಕ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಮೇ 20ರಂದು ಸೂಚಿಸಿತ್ತು. ಬಿಬಿಎಂಪಿಯ ವಾರ್ಡ್‌ಗಳ ಪುನರ್ ವಿಂಗಡಣೆ ಮತ್ತು ಒಬಿಸಿ ಮೀಸಲಾತಿ ನಿರ್ಣಯದ ಪ್ರಕ್ರಿಯೆ ಪೂರ್ಣಗೊಳಿಸಲು ಸರ್ಕಾರಕ್ಕೆ ಎಂಟು ವಾರಗಳ ಕಾಲಾವಕಾಶ ನೀಡಿತ್ತು. ವಾರ್ಡ್‌ಗಳ ಮೀಸಲಾತಿಯ ಅಧಿಸೂಚನೆಯನ್ನು ವಾರದೊಳಗೆ ಪ್ರಕಟಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ 2022ರಲ್ಲಿ ನಿರ್ದೇಶನ ನೀಡಿತ್ತು.

ಮರಗಳ ನಿರ್ವಹಣೆ: ಟೆಂಡರ್ ನಿಯಮ ತಿದ್ದುಪಡಿಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮರಗಳ ವ್ಯವಸ್ಥಿತ ನಿರ್ವಹಣಾ ಕಾಮಗಾರಿಗೆ ಸಂಬಂಧಿಸಿದಂತೆ ಬಿಬಿಎಂಪಿ ಅರಣ್ಯ ಘಟಕವು ಜನವರಿ 16ರಂದು ಆಹ್ವಾನಿಸಿದ್ದ ಟೆಂಡರ್ ಅಧಿಸೂಚನೆಗೆ ಜ. 30ರಂದು ಮಾಡಿರುವ ತಿದ್ದುಪಡಿಯನ್ನು ರದ್ದುಪಡಿಸಬೇಕು’ ಎಂದು ಆಗ್ರಹಿಸಿ ಬಿಬಿಎಂಪಿ ವಿಶೇಷ ಆಯುಕ್ತರಿಗೆ (ಅರಣ್ಯ) ಕೆಲವು ಗುತ್ತಿಗೆದಾರರು ಮನವಿ ಸಲ್ಲಿಸಿದ್ದಾರೆ.

ಅರಣ್ಯ ಘಟಕವು 30 ವಿಧಾನಸಭಾ ಕ್ಷೇತ್ರಗಳಲ್ಲಿ ಮರಗಳ ವ್ಯವಸ್ಥಿತ ನಿರ್ವಹಣೆಗಾಗಿ ಒಂದೇ ರೀತಿಯ ಕೆಲಸ ಮಾಡುವವರಿಂದ (ಮರಗಳನ್ನು ತೆರವುಗೊಳಿಸುವ ಕೆಲಸದಲ್ಲಿ ಪರಿಣತರು) ಟೆಂಡರ್ ಆಹ್ವಾನಿಸಿತ್ತು. ಆ ಬಳಿಕ ‘ಎಲ್ಲ ನಿರ್ಮಾಣ ಕಾಮಗಾರಿ’ಗಳನ್ನು ನಿರ್ವಹಿಸುವವರೂ ಟೆಂಡರ್‌ನಲ್ಲಿ ಭಾಗವಹಿಸಬಹುದು ಎಂದು ನಿಯಮ ತಿದ್ದುಪಡಿ ಮಾಡಿದೆ. ಮರಗಳ ವ್ಯವಸ್ಥಿತ ನಿರ್ವಹಣಾ ಕಾಮಗಾರಿಯು ಎಲ್ಲ ನಿರ್ಮಾಣ ಕಾಮಗಾರಿ ವ್ಯಾಪ್ತಿಗೆ ಬರುವುದಿಲ್ಲವೆಂದು 2024ರ ಏಪ್ರಿಲ್ 25ರಂದೇ ಪಿಡಬ್ಲ್ಯುಡಿ ಮುಖ್ಯ ಎಂಜಿನಿಯರ್ ವರದಿ ನೀಡಿದ್ದರೂ ಈ ತಿದ್ದುಪಡಿ ಮಾಡಲಾಗಿದೆ ಎಂದು ಗುತ್ತಿಗೆದಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಿದವರಿಗೂ ಮರಗಳ ವ್ಯವಸ್ಥಿತ ನಿರ್ವಹಣೆಯ ಟೆಂಡರ್‌ನಲ್ಲಿ ಭಾಗವಹಿಸಲು ಕಳೆದ ವರ್ಷ ಅವಕಾಶ ನೀಡಿದ್ದಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು. ಆ ಬಳಿಕ, ಅರ್ಜಿಯನ್ನು ವಾಪಸು ಪಡೆಯುವಂತೆ ಸಲಹೆ ನೀಡಿದ್ದ ವಿಶೇಷ ಆಯುಕ್ತರು, ಪಿಡಬ್ಲ್ಯುಡಿ ಮುಖ್ಯ ಎಂಜಿನಿಯರ್ ಅವರಿಂದ ವರದಿ ಪಡೆದಿದ್ದರು. ಮರಗಳ ತೆರವು ಕಾಮಗಾರಿಯು ನಿರ್ಮಾಣ ಕಾಮಗಾರಿಗಳ ಅಡಿಯಲ್ಲಿ ಬರುವುದಿಲ್ಲವೆಂದು ಅವರು ವರದಿ ನೀಡಿದ್ದರು. ಹೀಗಾಗಿ, ಮರಗಳನ್ನು ತೆರವುಗೊಳಿಸುವ ಕೆಲಸದಲ್ಲಿ ಪರಿಣತರಷ್ಟೇ ಟೆಂಡರ್‌ನಲ್ಲಿ ಭಾಗವಹಿಸಲು ಸಾಧ್ಯವಾಗಿತ್ತು. ಆದರೆ, ಈ ಬಾರಿ ಮತ್ತೆ ಟೆಂಡರ್ ನಿಯಮ ಬದಲಾಯಿಸಿ, ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಿದವರಿಗೂ ಟೆಂಡರ್‌ನಲ್ಲಿ ಭಾಗವಹಿಸಲು ಅರಣ್ಯ ಘಟಕ ಅವಕಾಶ ನೀಡಿರುವುದನ್ನು ರದ್ದುಪಡಿಸಬೇಕು’ ಎಂದು ಗುತ್ತಿಗೆದಾರರ ಜಿ. ಗೋವಿಂದಯ್ಯ, ವಿ. ಶ್ರೀನಿವಾಸ್ ಮನವಿ ಸಲ್ಲಿಸಿದ್ದಾರೆ.

ಎಎಬಿ ಚುನಾವಣೆ: ನೋಟಿಸ್ ಜಾರಿಗೆ ಆದೇಶ

ನಾಲ್ವರು ವಕೀಲರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇದೇ 16ರಂದು ನಡೆಯಲಿರುವ ಎಎಬಿ (ಬೆಂಗಳೂರು ವಕೀಲರ ಸಂಘ) ಚುನಾವಣೆಯಲ್ಲಿ ಹೈಕೋರ್ಟ್ ಆವರಣದಲ್ಲಿಯೂ ಸದಸ್ಯರು ಮತ ಚಲಾಯಿಸಲು ಅನುವು ಮಾಡಿಕೊಡಬೇಕು. ಹೆಚ್ಚುವರಿ ಮತಗಟ್ಟೆ ಸ್ಥಾಪಿಸಲು ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಮುಖ್ಯ ಚುನಾವಣಾಧಿಕಾರಿ ಹಾಗೂ ಎಎಬಿ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ಘಟಕದ ಪದಾಧಿಕಾರಿಗಳಾದ ಎಂ.ಚಾಮರಾಜ್, ಎಸ್.ರಾಜು, ಬಿ.ಬಾಲಕೃಷ್ಣ ಮತ್ತು ಕೆ.ಚಂದ್ರಕಾಂತ ಪಾಟೀಲ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲ ಎಂ.ಆರ್. ರಾಜಗೋಪಾಲ ಅವರು, ‘ಹೈಕೋರ್ಟ್ ಘಟಕದಲ್ಲಿ 4,598 ವಕೀಲ ಮತದಾರರಿದ್ದಾರೆ. ಅವರಲ್ಲಿ ಬಹುತೇಕರಿಗೆ ವಯಸ್ಸಾಗಿದೆ. ಹೀಗಾಗಿ, ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಸ್ಥಾಪಿಸಲಾಗುವ ಮತಗಟ್ಟೆಗೆ ತೆರಳಿ ಮತದಾನ ಮಾಡಲಾಗದು. ಆದ್ದರಿಂದ, ಹೈಕೋರ್ಟ್‌ನಲ್ಲಿಯೂ ಹೆಚ್ಚುವರಿ ಮತಗಟ್ಟೆ ಸ್ಥಾಪಿಸಲು ಮುಖ್ಯ ಚುನಾವಣಾಧಿಕಾರಿಗೆ ನಿರ್ದೇಶಿಸಬೇಕು’ ಎಂದು ಕೋರಿದರು.

ಇದನ್ನು ಆಲಿಸಿದ ಪೀಠವು ಮುಖ್ಯ ಚುನಾವಣಾಧಿಕಾರಿ ಹಾಗೂ ಎಎಬಿ ಪ್ರಧಾನ ಕಾರ್ಯದರ್ಶಿಗೆ ಹ್ಯಾಂಡ್ ಸಮನ್ಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಇದೇ 6ಕ್ಕೆ ಮುಂದೂಡಲಾಗಿದೆ.

ಹೈಕೋರ್ಟ್, ಸಿಟಿ ಸಿವಿಲ್ ಕೋರ್ಟ್, ಮ್ಯಾಜಿಸ್ಟ್ರೇಟ್ ಕೋರ್ಟ್ ಮತ್ತು ಮೆಯೊ ಹಾಲ್ ಕೋರ್ಟ್ ಸೇರಿದಂತೆ ನಾಲ್ಕೂ ಘಟಕಗಳಿಗೆ ಇದೇ 16ರಂದು ಚುನಾವಣೆ ನಡೆಯಲಿದೆ. ಸಿಟಿ ಸಿವಿಲ್ ಕೋರ್ಟ್‌ನಲ್ಲಿ ಮತದಾನ ಮತ್ತು ಅಂದೇ ಎಣಿಕೆ ನಡೆಯಲಿದೆ.



ಹೈಕೋರ್ಟ್

ಆಕ್ಷೇಪಣೆ ಸಲ್ಲಿಸಲು ನಿರ್ದೇಶನ

ಬೆಂಗಳೂರು: ‘ಚಾಮರಾಜಪೇಟೆಯ ಛಲವಾದಿ ಪಾಳ್ಯದಲ್ಲಿರುವ ಪಶು ಚಿಕಿತ್ಸಾಲಯದ ಎರಡು ಎಕರೆ ಜಾಗವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಿದ ಸರ್ಕಾರದ ಆದೇಶ ರದ್ದುಪಡಿಸಬೇಕು’ ಎಂದು ಕೋರಿರುವ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಗಿರೀಶ್ ಭಾರದ್ವಾಜ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪಿ.ವೆಂಕಟೇಶ್ ದಳವಾಯಿ, ‘ಛಲವಾದಿ ಪಾಳ್ಯದಲ್ಲಿರುವ ಪಶುವೈದ್ಯ ಆಸ್ಪತ್ರೆಯನ್ನು ಈಗಿರುವ ಸ್ಥಳದಲ್ಲೇ ಮುಂದುವರಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ಸರ್ಕಾರಿ ವಕೀಲರು, ‘ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು’ ಎಂದು ಕೋರಿದ ಕಾರಣದಿಂದ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 6ಕ್ಕೆ ಮುಂದೂಡಿತು.

‘ಚಾಮರಾಜಪೇಟೆ ಛಲವಾದಿ ಪಾಳ್ಯದಲ್ಲಿರುವ ಪಶು ವೈದ್ಯಕೀಯ ಆಸ್ಪತ್ರೆಯ ಜಾಗವನ್ನು ಸಚಿವ ಜಮೀರ್ ಅಹ್ಮದ್ ಖಾನ್ ಸೂಚನೆ ಮೇರೆಗೆ ಮೌಲಾನಾ ಅಜಾದ್ ಮೊರಾರ್ಜಿ ವಸತಿ ಶಾಲೆಗೆ ಹಸ್ತಾಂತರಿಸಿ ರಾಜ್ಯ ಸರ್ಕಾರ 2024ರ ಫೆಬ್ರುವರಿ 26ರಂದು ಹೊರಡಿಸಿರುವ ಆದೇಶ ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ನೆಕ್ರೋಫಿಲಿಯಾ: ರಾಜ್ಯದ ಅರ್ಜಿ ವಜಾ

ನವದೆಹಲಿ: ನೆಕ್ರೋಫಿಲಿಯಾವನ್ನು (ಶವ ಸಂಭೋಗ ನಡೆಸುವ ವಿಕೃತ ನಡವಳಿಕೆ) ಅತ್ಯಾಚಾರವೆಂದು ಪರಿಗಣಿಸಲು ನಿರಾಕರಿಸಿದ ಹೈಕೋರ್ಟ್‌ನ 2023ರ ಮೇ 30ರ ತೀರ್ಪಿನ ವಿರುದ್ಧ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿದೆ. ‘ಕಾನೂನಿನಲ್ಲಿ ಬದಲಾವಣೆ ಮಾಡುವುದು ಸಂಸತ್ತಿಗೆ ಬಿಟ್ಟಿದ್ದು. ಈ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಬಹುದು’ ಎಂದು ಪೀಠ ಹೇಳಿದೆ.

ಮೃತ ವ್ಯಕ್ತಿಯು ಒಪ್ಪಿಗೆ ನೀಡಲು ಸಾಧ್ಯವಿಲ್ಲದ ಕಾರಣ ಅತ್ಯಾಚಾರವನ್ನು ಅಪರಾಧವೆಂದು ಪರಿಗಣಿಸಬೇಕು ಎಂಬ ರಾಜ್ಯ ಸರ್ಕಾರದ ವಾದವನ್ನು ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಪೀಠವು ತಿರಸ್ಕರಿಸಿತು.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಗೊಲಗೇನಹಳ್ಳಿಯ ನಿವಾಸಿಯಾದ ಅಪರಾಧಿಯು ಮಹಿಳೆಯನ್ನು ಕೊಲೆ ಮಾಡಿ ನಂತರ ಅತ್ಯಾಚಾರ ಎಸಗಿದ್ದ. ಪ್ರಕರಣದ ವಿಚಾರಣೆ ನಡೆಸಿದ್ದ ಸೆಷನ್ಸ್ ನ್ಯಾಯಾಲಯವು ಕೊಲೆಯ ಆರೋಪಕ್ಕೆ ಭಾರತೀಯ ದಂಡ ಸಂಹಿತೆ ಸೆಕ್ಷನ್ 302ರ ಅಡಿಯಲ್ಲಿ ಅಪರಾಧಿಗೆ ಜೀವಾವಧಿ ಶಿಕ್ಷೆ ಹಾಗೂ ಶವ ಸಂಭೋಗ ನಡೆಸಿದ್ದಕ್ಕಾಗಿ ಐಪಿಸಿ ಸೆಕ್ಷನ್ 376 ರ ಅಡಿಯಲ್ಲಿ 10 ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಿತ್ತು. ಅಪರಾಧಿಯು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ. ಜೀವಾವಧಿ ಶಿಕ್ಷೆಯನ್ನು ಹೈಕೋರ್ಟ್ ಕಾಯಂಗೊಳಿಸಿತ್ತು. ಆದರೆ, ಅತ್ಯಾಚಾರ ಸಂಬಂಧ ವಿಧಿಸಿದ್ದ ಶಿಕ್ಷೆಯನ್ನು ವಜಾಗೊಳಿಸಿತ್ತು.

ಅಧ್ಯಕ್ಷರಾಗಿ ಕೃಷ್ಣಪ್ಪ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶ್ರೀ ಕಾಳಿದಾಸ ಸಹಕಾರ ಬ್ಯಾಂಕ್‌ನ 2025–30ರ ಅವಧಿಗೆ ಅಧ್ಯಕ್ಷರಾಗಿ ಕೆ.ಸಿ. ಕೃಷ್ಣಪ್ಪ ಮತ್ತು ಉಪಾಧ್ಯಕ್ಷರಾಗಿ ವೈ. ಸರೋಜಮ್ಮ ಆಯ್ಕೆಯಾಗಿದ್ದಾರೆ.

ನಿರ್ದೇಶಕರಾಗಿ ಸಿ.ಎನ್. ಗೋವಿಂದಪ್ಪ, ಬಿ.ಡಿ. ರಾಜು, ಎಂ.ಕೆ. ಗುರುಮೂರ್ತಿ, ಎಂ. ಗಂಗಾಧರ್, ಆರ್. ರಾಮಕೃಷ್ಣಪ್ಪ (ಗುಂಜೂರುಪಾಳ್ಯ), ಆರ್. ಲಿಂಗಣ್ಣ, ಎಂ.ಸಿ. ಮುದ್ದಯ್ಯ, ಎಸ್. ಚಂದ್ರಣ್ಣ, ಎಂ.ಎಚ್. ಪ್ರೇಮಲತಾ, ಎ. ಪದ್ಮಾ ಪ್ರಕಾಶ್ ಮತ್ತು ಬಿ.ಎಲ್. ಸುರೇಶ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೆ.ಸಿ. ಕೃಷ್ಣಪ್ಪ ಮತ್ತು ವೈ. ಸರೋಜಮ್ಮ



ಜಾಗೃತ ನಾಗರಿಕರು ಕರ್ನಾಟಕ ನಿಯೋಗವು ಮಂಗಳವಾರ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರನ್ನು ಭೇಟಿ ಮಾಡಿ ಯುಜಿಸಿ ನಿಯಮಾವಳಿ ತಿದ್ದುಪಡಿ ಕುರಿತು ಚರ್ಚೆ ನಡೆಸಿತು. ಈ ವೇಳೆ ನಿವೃತ್ತ ಕುಲಪತಿ ಪ್ರೊ.ಎಸ್.ಜಾಫೆಟ್, ಪ್ರೊ.ರಾಜಾಸಾಬ್, ಡಾ. ಹಿ. ಚಿ. ಬೋರಲಿಂಗಯ್ಯ, ಪ್ರೊ.ಎಸ್. ಜಿ. ಸಿದ್ದರಾಮಯ್ಯ, ಮಾವಳ್ಳಿ ಶಂಕರ್, ಬಿ. ಶ್ರೀಪಾದ ಭಟ್, ವಿಮಲಾ ಕೆ. ಎಸ್. ಡಾ.ವಸುಂಧರಾ ಭೂಪತಿ, ಟಿ.ಸುರೇಂದ್ರರಾವ್ ಭಾಗವಹಿಸಿದ್ದರು

ಪೌರಕಾರ್ಮಿಕರ ವಿಶ್ರಾಂತಿಗೆ 42 ಶಾಶ್ವತ ಕೊಠಡಿ

‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಕಾರ್ಯಕ್ರಮದಲ್ಲಿ ತುಷಾರ್ ಗಿರಿನಾಥ್

ಪ್ರಜಾವಾಣಿ ವಾರ್ತೆ



ತುಷಾರ್ ಗಿರಿನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪೌರಕಾರ್ಮಿಕರು ವಿಶ್ರಾಂತಿ ಪಡೆಯಲು 42 ಸ್ಥಳಗಳಲ್ಲಿ ಶಾಶ್ವತ ಕೊಠಡಿಗಳ ನಿರ್ಮಾಣವನ್ನು ಶೀಘ್ರ ಪೂರ್ಣಗೊಳಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪೂರ್ವ ವಲಯ ವ್ಯಾಪ್ತಿಯಲ್ಲಿ ‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದ ಸಂದರ್ಭದಲ್ಲಿ, ‘ಪೌರಕಾರ್ಮಿಕರ ವಿಶ್ರಾಂತಿಗಾಗಿ ವ್ಯವಸ್ಥೆ ಕಲ್ಪಿಸಬೇಕು’ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, ‘ವಿಶ್ರಾಂತಿ ಕೊಠಡಿಗಳು ನಿರ್ಮಾಣವಾಗುತ್ತಿವೆ’ ಎಂದರು.

‘ಜೈ ಭಾರತ್ ನಗರದ 4ನೇ ಅಡ್ಡ ರಸ್ತೆಯಲ್ಲಿ ಕಾರು ಹೋಗಲು ಹಾಕಿದ್ದ ರ‍್ಯಾಂಪ್‌ನ ಮರು ನಿರ್ಮಾಣಕ್ಕೆ ಅವಕಾಶ ನೀಡಬೇಕು’ ಎಂದು ನಾಗರಿಕರೊಬ್ಬರು ಮನವಿ ಮಾಡಿಕೊಂಡರು. ‘ರಸ್ತೆ ಹಾಗೂ ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡು ರ‍್ಯಾಂಪ್ ನಿರ್ಮಿಸುವಂತಿಲ್ಲ. ರಸ್ತೆ ಬದಿಯ ಎಲ್ಲ ಮನೆಗಳನ್ನು ಪರಿಶೀಲಿಸಿ ಅನಧಿಕೃತ ರ‍್ಯಾಂಪ್‌ಗಳಿದ್ದರೆ ತೆರವುಗೊಳಿಸಿ’ ಎಂದು ಅಧಿಕಾರಿಗಳಿಗೆ ತುಷಾರ್ ಗಿರಿನಾಥ್ ಸೂಚಿಸಿದರು.

‘ಅನಧಿಕೃತ ಜಾಹೀರಾತು ತೆರವು ಗೊಳಿಸಬೇಕು, ರಸ್ತೆ ಬದಿ ಕಸ ಸುರಿಯುವುದನ್ನು ತಡೆಯಬೇಕು, ಲಿಂಗರಾಜಪುರ ಕೆಎಸ್‌ಎಫ್‌ಸಿ ಲೇಔಟ್‌ನಲ್ಲಿ ಹೆಚ್ಚಿನ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು, ಮರದ ರೆಂಬೆಗಳನ್ನು ಕಟಾವು ಮಾಡಿ, ರಿಚ್ಮಂಡ್ ಟೌನ್ ಸುತ್ತಮುತ್ತಲಿನ ರಸ್ತೆಗಳಿಗೆ ಡಾಂಬರೀಕರಣ ಮಾಡಬೇಕು, ಪುಲಕೇಶಿನಗರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಪಡಿಸಿ’ ಎಂದು ಹಲವು ನಾಗರಿಕರು ಮನವಿ ಮಾಡಿದರು.

ಪೂರ್ವ ವಲಯ ವ್ಯಾಪ್ತಿಯಲ್ಲಿ ಕಳೆದ ಬಾರಿ ನಡೆದ ಮುಖ್ಯ ಆಯುಕ್ತರ ನಡೆ ವಲಯದ ಕಡೆ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಬಂದಂತಹ ಬಹುತೇಕ ದೂರುಗಳನ್ನು ಇತ್ಯರ್ಥಪಡಿಸಲಾಗಿದೆ. ಮಂಗಳವಾರ, 36 ದೂರುಗಳನ್ನು ಸ್ವೀಕರಿಸಲಾಗಿದ್ದು, ಕಾಲಮಿತಿಯೊಳಗೆ ಅವುಗಳೆಲ್ಲವನ್ನೂ ಬಗೆಹರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಲಯ ಆಯುಕ್ತೆ ಸ್ನೇಹಲ್, ವಲಯ ಜಂಟಿ ಆಯುಕ್ತೆ ಸರೋಜಾ, ಉಪ ಆಯುಕ್ತ ರಾಜು, ಮುಖ್ಯ ಎಂಜಿನಿಯರ್ ಸುಗುಣಾ ಉಪಸ್ಥಿತರಿದ್ದರು.

‘ಪಾರ್ಕಿಂಗ್ ಶುಲ್ಕ ಪಡೆದರೆ ಕ್ರಮ’

‘ನಗರದ ಕಮರ್ಷಿಯಲ್ ಸ್ಟ್ರೀಟ್ ಮತ್ತು ಬ್ರಿಗೇಡ್ ರಸ್ತೆಯಲ್ಲಿ ‘ಪೇ ಆ್ಯಂಡ್ ಪಾರ್ಕಿಂಗ್’ ಟೆಂಡರ್ ಮುಗಿದಿದೆ. ವಾಹನಗಳಿಂದ ಹಣ ವಸೂಲಿ ಮಾಡುವಂತಿಲ್ಲ. ಟೆಂಡರ್ ಕರೆದು, ಅದು ಅಂತಿಮಗೊಳ್ಳುವವರೆಗೂ ಯಾರೂ ಶುಲ್ಕ ಪಡೆಯುವಂತಿಲ್ಲ. ಯಾರಾದರೂ ಶುಲ್ಕ ಪಡೆಯುತ್ತಿದ್ದರೆ ಅಂತಹವರ ಮೇಲೆ ಕ್ರಮ ಕೈಗೊಳ್ಳಿ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

‘ಬಿಬಿಎಂಪಿಯಲ್ಲಿ ವಾರ್ಡ್‌ಗಳ ಸಂಖ್ಯೆ ಹೆಚ್ಚಾಗಿರುವುದರಿಂದ, ಯಾವ ವಾರ್ಡ್‌ನಲ್ಲಿ ನಮ್ಮ ಸಮಸ್ಯೆ ಹೇಳಿಕೊಳ್ಳಬೇಕು ಎಂದು ತಿಳಿಯುತ್ತಿಲ್ಲ. ವಾರ್ಡ್ ಗಡಿ ನಿರ್ಮಾಣ ಮಾಡಿಕೊಡಬೇಕು’ ಎಂದು ನಾಗರಿಕರು ಮನವಿ ಮಾಡಿದರು. ಸಂಬಂಧಪಟ್ಟ ಅಧಿಕಾರಿಗಳು ಗಡಿ ನಿರ್ಮಾಣ ಮಾಡಬೇಕು ಎಂದು ಮುಖ್ಯ ಆಯುಕ್ತರು ಆದೇಶಿಸಿದರು.

ಎಸ್‌ಬಿಐನಿಂದ ರಫ್ತುದಾರರ ಸಭೆ



ಎಸ್‌ಬಿಐನಿಂದ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ರಫ್ತುದಾರರ ಸಭೆಯಲ್ಲಿ ಅಧಿಕಾರಿಗಳು ಪಾಲ್ಗೊಂಡಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಸೇರಿ ದೇಶದ ರಫ್ತು ವ್ಯವಹಾರಕ್ಕೆ ಉತ್ತೇಜನ ನೀಡಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಬದ್ಧವಾಗಿದೆ’ ಎಂದು ಬ್ಯಾಂಕ್‌ನ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಹೇಳಿದ್ದಾರೆ.

ಬ್ಯಾಂಕ್‌ನಿಂದ ಇತ್ತೀಚೆಗೆ ನಗರದಲ್ಲಿ ನಡೆದ ರಫ್ತುದಾರರ ಸಭೆಯಲ್ಲಿ ಅವರು ಮಾತನಾಡಿದರು.

ರಾಷ್ಟ್ರದ ರಫ್ತುದಾರರಿಗೆ ಎಸ್‌ಬಿಐ ಅಗತ್ಯ ನೆರವು ನೀಡಲಿದೆ. ದೇಶದ ರಫ್ತು ವ್ಯವಹಾರಗಳಿಗೆ ಆರ್ಥಿಕ ಸೌಲಭ್ಯ ಕಲ್ಪಿಸಲಿದೆ. ಜತೆಗೆ, ಜಾಗತಿಕ ವ್ಯಾಪಾರದಲ್ಲಿ ರಫ್ತುದಾರರ ಯಶಸ್ಸಿಗೆ ಪೂರಕವಾಗಿ ವಿಶ್ವದರ್ಜೆಯ ಬ್ಯಾಂಕಿಂಗ್ ಸವಲತ್ತು ಕಲ್ಪಿಸಲಿದೆ ಎಂದರು.

ಹಣಕಾಸು ಆಯ್ಕೆ, ವಿದೇಶಿ ವಿನಿಮಯ ಸೇವೆ, ಎಸ್‌ಎಂಇ ರಫ್ತು, ಸಾಲ ಸೌಲಭ್ಯ, ವಿದೇಶಿ ಬ್ಯಾಂಕ್‌ಗಳಲ್ಲಿ ವಿಶೇಷ ಖಾತೆ, ಅಂತರರಾಷ್ಟ್ರೀಯ ವ್ಯಾಪಾರ ಪ್ರಕ್ರಿಯೆಗಳ ಸರಳೀಕರಣ, ಡಿಜಿಟಲ್ ಬ್ಯಾಂಕಿಂಗ್ ಸೌಲಭ್ಯದ ಬಗ್ಗೆ ಸಭೆಯಲ್ಲಿ ಮಾಹಿತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಬ್ಯಾಂಕ್ ಮುಖ್ಯ ಪ್ರಧಾನ ವ್ಯವಸ್ಥಾಪಕ (ಗ್ಲೋಬಲ್ ಮಾರ್ಕೆಟ್ಸ್) ಸಮೀರ್ ಸಾಹ್ನಿ, ಮುಖ್ಯ ಪ್ರಧಾನ ವ್ಯವಸ್ಥಾಪಕ (ಎಸ್‌ಎಂಇ) ಅನಿಂದ್ಯಾ ಎಸ್. ಪಾಲ್ ಇದ್ದರು.

ತಂತ್ರಜ್ಞಾನ ಓದಿರಿ

ಐತಿಹಾಸಿಕ ದೊರೆಕೆರೆ ಸಂರಕ್ಷಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಹಳ್ಳಿ ಹೋಬಳಿ ಕುಮಾರಸ್ವಾಮಿ ಲೇಔಟ್‌ನಲ್ಲಿರುವ ಐತಿಹಾಸಿಕ ದೊರೆಕೆರೆ ಒತ್ತುವರಿ ತೆರವುಗೊಳಿಸಿ, ಸಂರಕ್ಷಣೆ ಮಾಡಬೇಕು ಎಂದು ಕನ್ನಡ ನಾಡು ಹಿತರಕ್ಷಣಾ ಸಮಿತಿ, ದೊರೆಕೆರೆ ಸಂಘದ ಮುಖಂಡರು ಒತ್ತಾಯಿಸಿದರು.

ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಕೆರೆ ನಿರ್ಮಾಣವಾಗಿದೆ. ಕೆಂಪೇಗೌಡರ ಕಾರಣಕ್ಕೆ ದೊರೆಕೆರೆ ಎಂಬ ಹೆಸರು ಬಂದಿದೆ ಎಂದು ಇತಿಹಾಸ ಹೇಳುತ್ತದೆ. ಕೆಂಪೇಗೌಡರು ಕೃಷಿಗೆ ಮೂಲವಾಗಿದ್ದ ಈ ಕೆರೆ ಸಂರಕ್ಷಣೆಗೆ ಆದ್ಯತೆ ನೀಡಿದ್ದರು. ಇಂತಹ ಕೆರೆಯನ್ನು ಖಾಸಗಿ ವ್ಯಕ್ತಿಗಳು, ಸಂಸ್ಥೆಗಳು ಒತ್ತುವರಿ ಮಾಡಿದ್ದಾರೆ. 15 ವರ್ಷಗಳಿಂದ ಬೆಳೆದು ನಿಂತಿರುವ ಮರಗಳನ್ನು ಕಡಿದಿದ್ದಾರೆ ಎಂದು ಕನ್ನಡ ನಾಡು ಹಿತರಕ್ಷಣಾ ಸಮಿತಿ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಗೀತಾ ಗಿರಿಜಾ ಆರೋಪಿಸಿದರು.

ಪ್ರತಿನಿತ್ಯ ವಾಯುವಿಹಾರ ಮಾಡುವ ನಾಗರಿಕರು ಬಿಬಿಎಂಪಿ ಆಯುಕ್ತರಿಗೆ ಮನವಿ ಮಾಡಿದ್ದೇವೆ. ತಕ್ಷಣ ದೊರೆಕೆರೆ ಸಂರಕ್ಷಿಸಬೇಕು. ಜೀರ್ಣೋದ್ಧಾರ ಮಾಡಬೇಕು. ಮರಗಳನ್ನು ಕಡಿದು ಪ್ರಕೃತಿ ನಾಶ ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದರು.



ಕುಮಾರಸ್ವಾಮಿ ಲೇಔಟ್‌ನಲ್ಲಿರುವ ಐತಿಹಾಸಿಕ ದೊರೆಕೆರೆ ಒತ್ತವರಿ ತೆರವುಗೊಳಿಸಿ, ಸಂರಕ್ಷಣೆ ಮಾಡಬೇಕು ಎಂದು ಕನ್ನಡ ನಾಡು ಹಿತರಕ್ಷಣಾ ಸಮಿತಿ ಮುಖಂಡರು, ಅಧ್ಯಕ್ಷೆ ಗೀತಾ ಗಿರಿಜಾ ನೇತೃತ್ವದಲ್ಲಿ ಬಿಬಿಎಂಪಿ ಅಧಿಕಾರಿಗೆ ಮನವಿ ಸಲ್ಲಿಸಿದರು.

‘ಕಿರುಕುಳದ ಹಿಂದೆ ಕಾಣದ ಕೈ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಕ್ರೊ ಫೈನಾನ್ಸ್ ಕಂಪನಿಗಳ ಕಿರುಕುಳದ ಹಿಂದೆ ಕಾಣದ ಕೈಗಳು ಇರಬಹುದು’ ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಟಿ. ರವಿ ಅನುಮಾನ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಮೈಕ್ರೊ ಫೈನಾನ್ಸ್ ಮೂಲಕ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಜನರ ಸಮಸ್ಯೆ ಪರಿಹಾರ ಮಾಡುತ್ತಿದೆ. ಹೀಗೆ ಅನೇಕ ಸಂಸ್ಥೆಗಳು ಒಳ್ಳೆಯ ಕೆಲಸ ಮಾಡುತ್ತಿವೆ. ನಾವು ಮೊದಲು ಕಿರುಕುಳ ಕೊಡುವ ಸಂಸ್ಥೆಗಳಿಗೆ ಕಡಿವಾಣ ಹಾಕಬೇಕು’ ಎಂದು ಹೇಳಿದರು.

‘ಗೋವು ಕಳವು ಮಾಡಿದರೆ ಆರೋಪಿಗಳಿಗೆ ಗುಂಡೇಟು ನೀಡಲು ಆದೇಶಿಸುವೆ’ ಎಂದು ಸಚಿವ ಮಂಕಾಳ ವೈದ್ಯ ನೀಡಿದ ಹೇಳಿಕೆಯ ಬಗ್ಗೆ ಕೇಳಿದಾಗ, ‘ಈ ರೀತಿ ಹೇಳುವ ಧೈರ್ಯ ಕಾಂಗ್ರೆಸ್‌ನ ಉಳಿದ ನಾಯಕರಿಗೂ ಬಂದರೆ ತನ್ನಿಂದ ತಾನೆ ಸಮಸ್ಯೆ ಪರಿಹಾರ ಆಗುತ್ತದೆ. ಕಾಂಗ್ರೆಸ್‌ನಲ್ಲಿ ಗಾಂಧಿ ನಂತರ ಬಂದ ಗಾಂಧಿ ವಾರಸುದಾರರು ಗೋಹತ್ಯೆಯನ್ನು ಪರೋಕ್ಷವಾಗಿ ಸಮರ್ಥನೆ ಮಾಡಿಕೊಂಡು ಬಂದಿದ್ದಾರೆ’ ಎಂದರು.

ನಿಧನ ವಾರ್ತೆ

ಚಂದ್ರಮ್ಮ



ಬೆಂಗಳೂರು: ಬೆಂಗಳೂರಿನ ಜಿಪಿಒ ಕಚೇರಿಯಲ್ಲಿ ಅಧಿಕಾರಿಯಾಗಿ ನಿವೃತ್ತರಾಗಿದ್ದ ಚಂದ್ರಮ್ಮ (67) ಅವರು ಮಂಗಳವಾರ ನಿಧನರಾದರು. ಅವರಿಗೆ ಪತಿ , ಪುತ್ರ, ಪುತ್ರಿ ಇದ್ದಾರೆ.

ಹೆಬ್ಬಾಳದ ಚಿತಾಗಾರದಲ್ಲಿ ಬುಧವಾರ ಸಂಜೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉದ್ಯೋಗ ವಾಣಿ



ಪೆರಿಫೆರಲ್ ವರ್ತುಲ ರಸ್ತೆ–2 ಯೋಜನೆ ಅನುಷ್ಠಾನ • ದಾಸನಪುರ: 2006ರಲ್ಲಿ ಅಧಿಸೂಚನೆ

ಭೂ ಮಾಲೀಕರಿಗೆ ಬಿಡಿಎ ನೋಟಿಸ್; ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ ಮೂಲಕ ಮೈಸೂರು ರಸ್ತೆವರೆಗೆ ಪೆರಿಫೆರಲ್ ವರ್ತುಲ ರಸ್ತೆ–2 (ಬೆಂಗಳೂರು ಬ್ಯುಸಿನೆಸ್ ಕಾರಿಡಾರ್) ನಿರ್ಮಿಸಲು ಸಜ್ಜಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ವು, ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಗ್ರಾಮಗಳ ಭೂ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದೆ.

100 ಮೀಟರ್ ಅಗಲದಲ್ಲಿ 30 ಕಿ.ಮೀ. ಉದ್ದ ನಿರ್ಮಾಣವಾಗುವ ಈ ಕಾರಿಡಾರ್‌ನ ಎರಡೂ ಬದಿಯಲ್ಲಿ ತಲಾ 24 ಮೀಟರ್ ವಾಣಿಜ್ಯ ನಿವೇಶನ ರಚಿಸಲಾಗುತ್ತದೆ. ಈ ವಾಣಿಜ್ಯ ಪ್ರದೇಶವನ್ನು ಮಾರಾಟ ಮಾಡಿ ವ್ಯವಹಾರಕ್ಕೆ ಉತ್ತೇಜನ ನೀಡಲಾಗುತ್ತದೆ.

ದಾಸನಪುರ ಹೋಬಳಿ ವ್ಯಾಪ್ತಿಯ ದೊಂಬರಹಳ್ಳಿ, ಮಾಚೋಹಳ್ಳಿ, ವಡ್ಡರಹಳ್ಳಿ,



ಲಕ್ಷ್ಮೀಪುರ, ಕದರೇನಹಳ್ಳಿ, ಹಾರೊಕ್ಯಾತನಹಳ್ಳಿ, ಸಿದ್ದನಹೊಸಹಳ್ಳಿ, ಮಾದನಾಯಕನಹಳ್ಳಿ ಗ್ರಾಮಗಳ ಭೂಮಾಲೀಕರಿಗೆ ವಿಶೇಷ ಭೂಸ್ವಾಧೀನಾಧಿಕಾರಿ ನೋಟಿಸ್ ಜಾರಿ ಮಾಡಿರುವುದಕ್ಕೆ ಆಕ್ರೋಶ ವ್ಯಕ್ತವಾಗಿದೆ.

‘2006ರಲ್ಲಿ ಬಿಡಿಎ ಅಧಿಸೂಚನೆ ಹೊರಡಿಸಿ, 30 ದಿನದೊಳಗೆ ಸೂಕ್ತ ದಾಖಲೆಗಳೊಂದಿಗೆ ಆಕ್ಷೇಪಣೆ ಸಲ್ಲಿಸಲು ಸೂಚಿಸಿತ್ತು. ಆದಾದ ಬಳಿಕ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಈಗ ಜಮೀನಿನಲ್ಲಿ ಮನೆಗಳನ್ನು ನಿರ್ಮಿಸಲಾಗಿದ್ದು, ಕೆಲವರು ನಿವೇಶನ ಮಾಡಿ ಮಾರಾಟ ಮಾಡಿ ಹೋಗಿದ್ದಾರೆ. ಸಾವಿರಾರು ಮನೆಗಳು ನಿರ್ಮಾಣವಾಗಿದ್ದು, ಮನೆ ಕಳೆದುಕೊಂಡು ಎಲ್ಲಿಗೆ ಹೋಗಬೇಕು’ ಎಂದು ಆಸ್ತಿಗಳ ಮಾಲೀಕರು ಪ್ರಶ್ನಿಸಿದ್ದಾರೆ.

‘ಮನೆ ಕಟ್ಟಲು ಅನುಮತಿ ನೀಡಿ, ನೀರು, ವಿದ್ಯುತ್ ಸಂಪರ್ಕವನ್ನು ಕಾನೂನು ಪ್ರಕಾರವೇ ನೀಡಲಾಗಿದೆ. ಕಂದಾಯ ಸಹ ಪಾವತಿಸಲಾಗಿದೆ. ಈಗ ಜಮೀನಿನ ಮಾಲೀಕರಿಗೆ ನೋಟಿಸ್ ನೀಡಿದ್ದಾರೆ. ದಿಕ್ಕು ತೋಚುತ್ತಿಲ್ಲ’ ಎಂದು ಆತಂಕ ವ್ಯಕ್ತಪಡಿಸಿದರು.

‘ದಾಸನಪುರ ಹೋಬಳಿಯ ಆಲೂರು, ಅಡಕಮಾರನಹಳ್ಳಿ, ದೊಂಬರಹಳ್ಳಿ, ಲಕ್ಷ್ಮಿಪುರ ಮಾದಾವರ, ದಾಸನಪುರ, ಚಿಕ್ಕಬಿದರಕಲ್ಲು, ಭೋವಿ ಪಾಳ್ಯದ ಸಾವಿರಾರು ಸರ್ವೆ ನಂಬರ್‌ಗಳ ಭೂ ಮಾಲೀಕರಿಗೆ ನೋಟಿಸ್ ನೀಡಲಾಗಿದೆ. ಸರ್ಕಾರ 2006ರಲ್ಲಿಯೇ ಈ ಪ್ರದೇಶದಲ್ಲಿ ರಸ್ತೆ, ಬಿಎಂಟಿಸಿ ಡಿಪೊ ಮತ್ತು ಟ್ರಕ್ ಟರ್ಮಿನಲ್ ನಿರ್ಮಿಸುವ ನಿರ್ಧಾರ ಕೈಗೊಂಡಿದ್ದರೆ ಈ ಸರ್ವೆ ನಂಬರ್‌ಗಳನ್ನು ಬ್ಲಾಕ್ ಮಾಡಬೇಕಾಗಿತ್ತು. ಈಗ ನೋಟಿಸ್ ನೀಡಿ ಗೊಂದಲ ಸೃಷ್ಟಿಸಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಸರ್ಕಾರ ನಮ್ಮ ಮನವಿ ಆಲಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ದಾಸನಪುರ ಹೋಬಳಿಯಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಮಾಡಿ, ಹೋರಾಟ ಮಾಡಲಾಗುವುದು’ ಎಂದು ಎಚ್ಚರಿಸಿದರು.

ರೈತರ ಮನವೊಲಿಸಿ: ಡಿ.ಕೆ.ಶಿವಕುಮಾರ್

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಯೋಜನೆಗೆ ಭೂಮಿ ನೀಡುವ ರೈತರ ಮನವೊಲಿಸಿ, ಪರಿಹಾರವನ್ನು ನಿಗದಿಗೊಳಿಸುವಂತೆ ಬಿಡಿಎ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ ನೀಡಿದ್ದಾರೆ.

‘ಪರಿಹಾರ ವಿಚಾರದಲ್ಲಿ ಕಾನೂನು ಹೋರಾಟ ಆರಂಭವಾಗಿ ಯೋಜನೆ ವಿಳಂಬವಾಗುವುದು ಬೇಡ. ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕು’ ಎಂದು ಅವರು ಹೇಳಿದ್ದಾರೆ.

‘ಸದ್ಯದ ಮಾಹಿತಿ ಪ್ರಕಾರ ಯೋಜನೆಗೆ ಭೂಮಿ ನೀಡುವ ರೈತರಿಗೆ ಎಕರೆಗೆ ₹1.5 ಕೋಟಿಯಿಂದ ₹8 ಕೋಟಿವರೆಗೂ ಪರಿಹಾರ ದೊರೆಯಲಿದೆ. ಆದರೆ, ಜಮೀನು ಯಾವ ಪ್ರದೇಶದಲ್ಲಿ ಎಂಬುದರ ಮೇಲೆ ಪರಿಹಾರದ ಮೊತ್ತ ಎಷ್ಟು ಎಂಬುದು ತೀರ್ಮಾನ ಆಗಲಿದೆ. ಸರ್ಕಾರದ ಮಾರ್ಗಸೂಚಿ ದರದ ಮೇಲೆ ಪರಿಹಾರ ನೀಡಲಾಗುವುದು’ ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

13ರಿಂದ ಅಲಯನ್ಸ್ ಸಾಹಿತ್ಯ ಉತ್ಸವ

ಬೆಂಗಳೂರು: ಅಲಯನ್ಸ್ ವಿಶ್ವ-ವಿದ್ಯಾಲಯವು ಇದೇ 13ರಿಂದ 15ರವರೆಗೆ ‘ಅಲಯನ್ಸ್ ಸಾಹಿತ್ಯ ಉತ್ಸವ’ ಹಮ್ಮಿಕೊಂಡಿದೆ.

ವಿಶ್ವವಿದ್ಯಾಲಯದಲ್ಲಿ ನಡೆಯುವ ಮೂರು ದಿನಗಳ ಈ ಉತ್ಸವದಲ್ಲಿ 25ಕ್ಕೂ ಹೆಚ್ಚು ದೇಶಗಳ 120ಕ್ಕೂ ಅಧಿಕ ಭಾಷಣಕಾರರು ಪಾಲ್ಗೊಳ್ಳುತ್ತಾರೆ. ಸಾಹಿತ್ಯ, ಸಂಗೀತ, ನೃತ್ಯ, ಆಹಾರ, ಕರಕುಶಲ ವಸ್ತುಗಳು, ಫ್ಯಾಷನ್, ಹಾಸ್ಯ ಸೇರಿ ಹಲವು ವೈವಿಧ್ಯತೆಗಳನ್ನು ಈ ಉತ್ಸವ ಒಳಗೊಂಡಿದೆ.

ಗೀತ ರಚನೆಕಾರ ಜಾವೇದ್ ಅಖ್ತರ್, ಜಪಾನಿನ ಲೇಖಕ ಅಸಕೊ ಯುಜುಕಿ, ಪತ್ರಕರ್ತೆ ಪಾಲ್ಕಿ ಶರ್ಮಾ ಉಪಾಧ್ಯಾ, ಮಾಜಿ ಕ್ರಿಕೆಟಿಗ ಅನಿಲ್ ಕುಂಬ್ಳೆ, ಪತ್ರಕರ್ತ ರಾಜ್‌ದೀಪ್ ಸರ್ದೇಸಾಯಿ, ಲೇಖಕ ಪೆರುಮಾಳ್ ಮುರುಗನ್, ಚಿತ್ರ ನಿರ್ದೇಶಕ ಸಂಜಯ್ ಪಟೇಲ್ ಸೇರಿ ವಿವಿಧ ಕ್ಷೇತ್ರಗಳ ಗಣ್ಯರು ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ.

ಬೌದ್ಧಿಕ ಸಂವಾದ ನಡೆಸುವುದು ಮತ್ತು ಸಾಂಸ್ಕೃತಿಕ ವೈವಿಧ್ಯತೆ ವಿಸ್ತರಿಸುವುದು ಈ ಉತ್ಸವದ ಮುಖ್ಯ ಉದ್ದೇಶ ಎಂದು ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ವಿಭಾಗದ ಡೀನ್ ಅನಿರುದ್ಧ ಶ್ರೀಧರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷೇತ್ರದ ಜನರ ಪ್ರೀತಿಗೆ ಚಿರಋಣಿ ಶಾಸಕ ಬೈರತಿ ಬಸವರಾಜ



ಕೆ.ಆರ್.ಪುರ: ‘ಕ್ಷೇತ್ರದ ಜನರು ನನ್ನ ಮೇಲೆ ನಂಬಿಕೆ ಇಟ್ಟು ಬೆಂಬಲಿಸುತ್ತಿದ್ದಾರೆ. ಕ್ಷೇತ್ರದ ಜನರ ಪ್ರೀತಿಗೆ ಚಿರಋಣಿಯಾಗಿವೆ. ಕ್ಷೇತ್ರದಲ್ಲಿ ಅಭಿವೃದ್ಧಿಯ ಮೂಲಕ ಜನರ ಕಷ್ಟಗಳನ್ನು ಅರಿಯುವೆ’ ಎಂದು ಶಾಸಕ ಬೈರತಿ ಬಸವರಾಜ ಹೇಳಿದರು.

ತಮ್ಮ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳು, ಕಾರ್ಯಕರ್ತರು ಹಮ್ಮಿಕೊಂಡಿದ್ದ ಸೇವಾ ಕಾರ್ಯಗಳಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮಾಜಿ ಪಾಲಿಕೆ ಸದಸ್ಯ ಜಯಪ್ರಕಾಶ್, ‘ಶಾಸಕ ಬೈರತಿ ಬಸವರಾಜ ಅವರ ಹುಟ್ಟು ಹಬ್ಬವನ್ನು ಸರಳವಾಗಿ ಆಚರಿಸಿದ್ದೇವೆ. ಸಾರ್ವಜನಿಕರು ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದ್ದಾರೆ’ ಎಂದರು.

ಇದೇ ವೇಳೆ ನೂರಾರು ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಬೈರತಿ ಬಸವರಾಜ ಅವರಿಗೆ ಶುಭಾಶಯ ಕೋರಿದರು. ವಿಜ್ಞಾನನಗರ ಅಸೋಸಿಯೇಷನ್, ಲಯನ್ಸ್ ಕ್ಲಬ್ ಮತ್ತು ಎಸ್.ಕೆ.ಎಫ್ ಫೌಂಡೇಶನ್‌ವತಿಯಿಂದ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಪಾಲಿಕೆ ಮಾಜಿ ಸದಸ್ಯರಾದ ಶ್ರೀಕಾಂತ್, ಪಿ.ಜೆ.ಅಂತೋಣಿಸ್ವಾಮಿ, ಸುರೇಶ್, ಮುಖಂಡರಾದ ಹೇಮಂತ್ ಚಿನ್ನಿ, ಭಟ್ಟರಹಳ್ಳಿ ರಾಖಿ, ಎಂ.ಎಲ್.ಡಿ.ಸಿ ಮುನಿರಾಜು, ನಾಗೇನಹಳ್ಳಿ ಲೋಕೇಶ್, ಪ್ರಕಾಶ್ ಇದ್ದರು.

ರಾಹುಲ್ ದ್ರಾವಿಡ್ ಕಾರಿಗೆ ಸರಕು ಸಾಗಣೆ ಆಟೊ ಡಿಕ್ಕಿ



ರಾಹುಲ್ ದ್ರಾವಿಡ್ ಹಾಗೂ ಸರಕು ಸಾಗಣೆ ಆಟೊದ ಚಾಲಕನ ನಡುವೆ ವಾಗ್ವಾದ ನಡೆದ ದೃಶ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ಕೋಚ್ ರಾಹುಲ್ ದ್ರಾವಿಡ್ ಅವರ ಕಾರಿಗೆ ಸರಕು ಸಾಗಣೆಯ ಆಟೊವೊಂದು ಡಿಕ್ಕಿ ಹೊಡೆದ ಘಟನೆ ಇಲ್ಲಿನ ಹೈಗ್ರೌಂಡ್ಸ್ ಪೊಲೀಸ್ ಠಾಣಾ ವ್ಯಾಪ್ತಿಯ ರಸ್ತೆಯಲ್ಲಿ ನಡೆದಿದೆ. ಮಂಗಳವಾರ ಸಂಜೆ ಅಪಘಾತ ಸಂಭವಿಸಿದೆ.

‘ನಗರದ ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿ ಅಪಘಾತ ಸಂಭವಿಸಿದೆ. ಯಾರಿಗೂ ಸಮಸ್ಯೆ ಆಗಿಲ್ಲ’ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಅಪಘಾತದ ಬಳಿಕ ರಾಹುಲ್ ದ್ರಾವಿಡ್ ಅವರು ಕಾರಿನಿಂದ ಕೆಳಕ್ಕೆ ಇಳಿದು ಪರಿಶೀಲಿಸುತ್ತಾರೆ. ಆಗ ರಾಹುಲ್ ಮತ್ತು ಆಟೊ ಚಾಲಕನ ಮಧ್ಯೆ ಸಣ್ಣ ವಾಗ್ವಾದ ನಡೆಯುತ್ತದೆ. ಬಳಿಕ ರಾಹುಲ್ ಅವರು ಆಟೊ ನೋಂದಣಿ ಸಂಖ್ಯೆ ಬರೆದುಕೊಂಡು ಅಲ್ಲಿಂದ ತೆರಳುತ್ತಾರೆ. ಸ್ಥಳೀಯರು ಮೊಬೈಲ್‌ನಲ್ಲಿ ಈ ದೃಶ್ಯ ಸೆರೆ ಹಿಡಿದಿದ್ದು, ವಿಡಿಯೊ ತುಣುಕು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಬಾಂಗ್ಲಾ ಮಹಿಳೆ ಕೊಲೆ: ಚಾಲಕ ಸೆರೆ

ಮಾತನಾಡಲು ನಿರಾಕರಣೆ: ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾದೇಶದ ಮಹಿಳೆ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿ, ಬಾಗಲಕೋಟೆಯ ಮುದುಕಪ್ಪ (28) ಎಂಬಾತನನ್ನು ರಾಮಮೂರ್ತಿ ನಗರ ಪೊಲೀಸರು ಬಂಧಿಸಿದ್ದಾರೆ.

ಜನವರಿ 24ರಂದು ರಾಮಮೂರ್ತಿ ನಗರ ಠಾಣಾ ವ್ಯಾಪ್ತಿಯ ಕಲ್ಕೆರೆ ಕೆರೆ ಬಳಿಯ ನಿರ್ಜನ ಪ್ರದೇಶದಲ್ಲಿ ಅತ್ಯಾಚಾರ ಎಸಗಿ ಬಳಿಕ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ ಸ್ಥಿತಿಯಲ್ಲಿ ಮಹಿಳೆಯ ಶವ ಪತ್ತೆಯಾಗಿತ್ತು. ಸ್ಥಳೀಯರು ನೀಡಿದ ಮಾಹಿತಿ ಆಧರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಯನ್ನು ಪತ್ತೆ ಹಚ್ಚಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿ ಹಾಗೂ ಕೊಲೆಯಾದ ಮಹಿಳೆ ನಡುವೆ ಸಲುಗೆ ಇತ್ತು. ಇಬ್ಬರು ಅಕ್ಕಪಕ್ಕದ ಶೆಡ್‌ಗಳಲ್ಲಿ ವಾಸವಾಗಿದ್ದರು. ಆರು ತಿಂಗಳ ಹಿಂದೆ ಬಾಂಗ್ಲಾ ವಲಸಿಗರು ವಾಸವಿದ್ದ ಶೆಡ್‌ಗಳನ್ನು ತೆರವು ಮಾಡಿಸಲಾಗಿತ್ತು. ಆಗಿನಿಂದ ಇಬ್ಬರ ನಡುವೆ ಸಂಪರ್ಕ ಇರಲಿಲ್ಲ.

> ಬಾಂಗ್ಲಾದೇಶದವರನ್ನಷ್ಟೇ ಅಲ್ಲ, ನಗರದಲ್ಲಿ ಅಕ್ರಮವಾಗಿ ನೆಲಸಿರುವ ಆಫ್ರಿಕಾ ದೇಶದ ಪ್ರಜೆಗಳು ಸೇರಿದಂತೆ ಇತರರನ್ನು ಪತ್ತೆ ಹಚ್ಚಿ ಗಡೀಪಾರು ಮಾಡಲಾಗುತ್ತಿದೆ
> **ಬಿ.ದಯಾನಂದ,** ನಗರ ಪೊಲೀಸ್ ಕಮಿಷನರ್

ಅಪರಾಧ ಸುದ್ದಿ

ವಾಟರ್ ಟ್ಯಾಂಕರ್ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದ ಮುದುಕಪ್ಪ, ಮಹಿಳೆ ಕೆಲಸ ಮಾಡುತ್ತಿದ್ದ ಅಪಾರ್ಟ್‌ಮೆಂಟ್‌ಗೆ ನೀರು ಪೂರೈಸಲು ಹೋದಾಗ ಮಾತನಾಡಿಸಲು ಪ್ರಯತ್ನಿಸುತ್ತಿದ್ದ. ಆದರೆ, ಆಕೆ ನಿರಾಕರಿಸುತ್ತಿದ್ದಳು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಜನವರಿ 23ರಂದು ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದ ಮಹಿಳೆಯನ್ನು ಹಿಂಬಾಲಿಸಿದ್ದ ಆರೋಪಿ, ಆಕೆಯನ್ನು ಕಲ್ಕೆರೆ ಸಮೀಪದ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಲೈಂಗಿಕ ಕ್ರಿಯೆಗೆ ಒತ್ತಾಯಿಸಿದ್ದ. ಆಕೆ ವಿರೋಧಿಸಿದಾಗ, ಅತ್ಯಾಚಾರ ಎಸಗಿ ನಂತರ ಉಸಿರುಗಟ್ಟಿಸಿ ಕೊಲೆ ಮಾಡಿ, ತಲೆ ಮೇಲೆ ಕಲ್ಲು ಎತ್ತಿ ಹಾಕಿ ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

ಪ್ರಕರಣ ದಾಖಲಿಸಿಕೊಂಡಿದ್ದ ರಾಮಮೂರ್ತಿ ನಗರ ಠಾಣೆ ಪೊಲೀಸರು ಘಟನೆಯ ದಿನ ಕೆರೆಯ ಸುತ್ತಮುತ್ತ ಓಡಾಡಿದ್ದ 30ಕ್ಕೂ ಹೆಚ್ಚು ಜನರನ್ನು ವಿಚಾರಣೆಗೆ ಒಳಪಡಿಸಿದ್ದರು. ಮೃತ ದೇಹದ ಮರಣೋತ್ತರ ಪರೀಕ್ಷಾ ವರದಿ ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್ಎಸ್ಎಲ್) ವರದಿಯನ್ನು ಆಧರಿಸಿ ಆರೋಪಿಯನ್ನು ಬಂಧಿಸಿದ್ದಾರೆ.

ಸಿಸಿಟಿವಿ ಕ್ಯಾಮೆರಾ ಸುಳಿವು ಆಧರಿಸಿ ಬಂಧನ: ಕೆಲವು ಸ್ಥಳಗಳ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲಿಸಿದಾಗ ಕೆರೆಯ ಪಕ್ಕದ ರಸ್ತೆಯಲ್ಲಿ ಐದಾರು ಮಂದಿ ಅನುಮಾನಾಸ್ಪದವಾಗಿ ಓಡಾಡಿರುವುದು ಕಂಡು ಬಂದಿತ್ತು. ಇದರಲ್ಲಿ ಆರೋಪಿ ಮುದುಕಪ್ಪನ ಚಲನವಲನ ಸೆರೆಯಾಗಿತ್ತು. ಹೀಗಾಗಿ ಆತನನ್ನು ಪತ್ತೆಹಚ್ಚಿ ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಆರೋಪಿ ಮುದುಕಪ್ಪನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ವಶಕ್ಕೆ ಪಡೆದಿದ್ದು, ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೊಲೆಯಾದ ಮಹಿಳೆ ಅಕ್ರಮ ವಾಸಿ

ಬಾಂಗ್ಲಾದೇಶ ಸುಮನ್ ಮತ್ತು ಕೊಲೆಯಾದ ಮಹಿಳೆ ಕಳೆದ ಆರು ವರ್ಷಗಳಿಂದ ನಗರದಲ್ಲಿ ನೆಲಸಿದ್ದರು. ದಂಪತಿಗೆ ಮೂವರು ಮಕ್ಕಳಿದ್ದಾರೆ. ಮಕ್ಕಳನ್ನು ಬಾಂಗ್ಲಾದೇಶದಲ್ಲೇ ದಂಪತಿ ಬಿಟ್ಟು ಬಂದಿದ್ದರು. ಸುಮನ್ ಬಿಬಿಎಂಪಿ ಕಸದ ಯಾರ್ಡ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಮಹಿಳೆ ಡಿಎಸ್ಆರ್ ಅಪಾರ್ಟ್‌ಮೆಂಟ್‌ನಲ್ಲಿ ಮನೆಗೆಲಸ ಮಾಡಿಕೊಂಡಿದ್ದರು. ಸುಮನ್ ಪಾಸ್‌ಪೋರ್ಟ್ ಮೂಲಕ ಭಾರತಕ್ಕೆ ಬಂದಿದ್ದರೆ. ಮಹಿಳೆ ಅಕ್ರಮವಾಗಿ ಭಾರತಕ್ಕೆ ಬಂದು ಪತಿ ಜತೆಗೆ ನೆಲಸಿದ್ದಳು ಎಂಬುದು ತನಿಖೆಯಲ್ಲಿ ಗೊತ್ತಾಗಿದೆ.

ಟ್ರ್ಯಾಕ್ಟರ್ ಕಳವು: ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಎದುರು ನಿಲುಗಡೆ ಮಾಡಿದ್ದ ಟ್ರ್ಯಾಕ್ಟರ್ ಕಳವು ಮಾಡಿದ್ದ ನಾಲ್ವರು ಆರೋಪಿಗಳನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಿಳ್ಳಗಾನಹಳ್ಳಿ ನಿವಾಸಿ ಸಾದಿಕ್(32), ಫೈರೋಜ್(30), ಗುರಪ್ಪನಪಾಳ್ಯ ನಿವಾಸಿ ಸಾದಿಕ್(36) ಮತ್ತು ತಿಪಟೂರು ಮೂಲದ ಸೈಫುಲ್ಲಾ ಬಂಧಿತರು.

ಆರೋಪಿಗಳಿಂದ ಟ್ರ್ಯಾಲಿ ಸಹಿತ ನಾಲ್ಕು ಟ್ರ್ಯಾಕ್ಟರ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಜನವರಿ 5ರಂದು ಜೆ.ಪಿ.ನಗರ 8ನೇ ಹಂತದಲ್ಲಿರುವ ಜಂಬೂಸವಾರಿ ದಿಣ್ಣೆಯಲ್ಲಿ ನಿಲ್ಲಿಸಿದ್ದ ಟ್ರ್ಯಾಕ್ಟರ್ ಅನ್ನು ಆರೋಪಿಗಳು ಕಳವು ಮಾಡಿ ಪರಾರಿ ಆಗಿದ್ದರು. ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.



ಕನ್ನಡ ಕಲರವ

ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನ ಕನ್ನಡ ವಿಭಾಗ ಆಯೋಜಿಸಿದ್ದ ಕಲರವ ರಾಜ್ಯ ಮಟ್ಟದ ಅಂತರ ಕಾಲೇಜು ಕನ್ನಡ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಜ್ಯೋತಿ ನಿವಾಸ್ ಕಾಲೇಜಿನ ಕನ್ನಡ ವಿಭಾಗದ ವಿದ್ಯಾರ್ಥಿನಿಯರು ಭಾಗವಹಿಸಿ ಅತ್ಯಧಿಕ ಬಹುಮಾನಗಳನ್ನು ಗೆಲ್ಲುವುದರ ಮೂಲಕ ಸರ್ವೋತ್ತಮ ಪ್ರಶಸ್ತಿ ಪಡೆದುಕೊಂಡರು. ಕಾಲೇಜಿನ ಪ್ರಾಂಶುಪಾಲ ಲೂಯಿಸಾ ಸೆಬಾಸ್ಟಿಯನ್, ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಗೂಳಪ್ಪ ವಕ್ಕುಂದ, ಲೀಲಾವತಿ ಎಚ್.ಎಸ್., ಮಂಜುನಾಥ್ ಜಿ. ಉಪಸ್ಥಿತರಿದ್ದರು

‘ಪಿಂಟರಗುಂಟ ಗ್ಯಾಂಗ್’ನ ಇಬ್ಬರ ಬಂಧನ

ಗಮನ ಬೇರೆಡೆ ಸೆಳೆದು ಚಿನ್ನಾಭರಣ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರು ಹಾಗೂ ಬೈಕ್ ಚಾಲಕರ ಗಮನವನ್ನು ಬೇರೆಡೆ ಸೆಳೆದು ಚಿನ್ನಾಭರಣ ಮತ್ತು ಹಣ ಕಳವು ಮಾಡುತ್ತಿದ್ದ ‘ಪಿಂಟರಗುಂಟ ಗ್ಯಾಂಗ್’ನ ಇಬ್ಬರನ್ನು ಕಾಡುಗೋಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅಖಿಲ್ ಹಾಗೂ ಗೋಪಿ ಬಂಧಿತರು.

ಬಂಧಿತರಿಂದ 101 ಗ್ರಾಂ. ಚಿನ್ನಾಭರಣ, ₹4.50 ಲಕ್ಷ ನಗದು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಸಾಯಿ ಕಾಲೊನಿಯಲ್ಲಿ ವಾಸವಿದ್ದ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ.

ತಮ್ಮ ಬಳಿ ಇದ್ದ ₹5 ಲಕ್ಷ ನಗದು, 250 ಗ್ರಾಂ. ಚಿನ್ನಾಭರಣವನ್ನು ಬ್ಯಾಂಕ್‌ನಲ್ಲಿ ಇಡಲು ದೂರುದಾರರು ನಿರ್ಧರಿಸಿದ್ದರು. ಬ್ಯಾಗ್‌ನಲ್ಲಿ ಹಣ ಹಾಗೂ ಚಿನ್ನಾಭರಣವನ್ನು ಇಟ್ಟುಕೊಂಡು ಬೆಳತ್ತೂರು ಗೇಟ್ ಹತ್ತಿರದ ಬ್ಯಾಂಕ್‌ವೊಂದರಲ್ಲಿ ₹50 ಸಾವಿರ ಜಮೆ ಮಾಡಿದ್ದರು. ಉಳಿದ, ₹4.50 ಲಕ್ಷ ಹಣ ಹಾಗೂ ಚಿನ್ನಾಭರಣವನ್ನು ಹೋಪ್ ಫಾರ್ಮ್ ಬಳಿಯ ಬ್ಯಾಂಕ್‌ನ ಭದ್ರತಾ ಲಾಕರ್‌ನಲ್ಲಿ ಇರಿಸಲು ತೆರಳಿದ್ದರು.

‘ಲಾಕರ್‌ಗಳು ಖಾಲಿಯಿಲ್ಲ’ ಎಂದು ಬ್ಯಾಂಕ್ ಅಧಿಕಾರಿಗಳು ಹೇಳಿದ್ದರಿಂದ ದೂರುದಾರರು, ಚಿನ್ನಾಭರಣ ಹಾಗೂ ಹಣವನ್ನು ಕಾರಿನಲ್ಲಿ ಇಟ್ಟುಕೊಂಡು ಮನೆಗೆ ತೆರಳುತ್ತಿದ್ದರು. ಅದೇ ಮಾರ್ಗದಲ್ಲಿ ಹಿಂದಿನಿಂದ ಬೈಕ್‌ನಲ್ಲಿ ಬಂದಿದ್ದ


ಗೋಪಿ


ಅಖಿಲ್

ಆರೋಪಿಗಳು ‘ನಿಮ್ಮ ಕಾರಿನ ಟೈರ್ ಪಂಕ್ಚರ್ ಆಗಿದೆ’ ಎಂದು ಹೇಳಿ ಮುಂದಕ್ಕೆ ಸಾಗಿದ್ದರು. ನಂತರ ದೂರುದಾರರು ಕಾರು ನಿಲ್ಲಿಸಿ ಪರಿಶೀಲಿಸಿದಾಗ ಟೈರ್‌ನಲ್ಲಿ ಗಾಳಿ ಇರಲಿಲ್ಲ. ದೂರುದಾರರು ದಿಣ್ಣೂರು ರಸ್ತೆಯಲ್ಲಿ ಕಾರನ್ನು ಬಿಟ್ಟು ಪಂಕ್ಚರ್ ಹಾಕುವವರನ್ನು ಕರೆತರಲು ತೆರಳಿದ್ದರು. ಅವರು ವಾಪಸ್ ಬಂದು ನೋಡುವಷ್ಟರಲ್ಲಿ ಕಾರಿನ ಗಾಜು ಒಡೆದು ಚಿನ್ನ ಹಾಗೂ ನಗದು ಕಳ್ಳತನ ಮಾಡಿ ಆರೋಪಿಗಳು ಪರಾರಿ ಆಗಿದ್ದರು’ ಎಂದು ಮೂಲಗಳು ಹೇಳಿವೆ.

‘ಆರೋಪಿಗಳ ಪೈಕಿ ಒಬ್ಬ, ಕಳ್ಳತನ ಮಾಡಿದ್ದ ಚಿನ್ನವನ್ನು ತನ್ನ ತಾಯಿಗೆ ನೀಡಿದ್ದ. ತಾಯಿ ಬಳಿಯಿದ್ದ ಚಿನ್ನಾಭರಣವನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಹೆಚ್ಚಿನ ವಿಚಾರಣೆಗೆ 19 ದಿನ ತಮ್ಮ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಇಬ್ಬರು ಆರೋಪಿಗಳೂ ‘ಪಿಂಟರಗುಂಟ ಗ್ಯಾಂಗ್’ನಲ್ಲಿ ಗುರುತಿಸಿಕೊಂಡಿದ್ದರು. ಈ ಗ್ಯಾಂಗ್ ಆಂಧ್ರಪ್ರದೇಶ ಸೇರಿ ವಿವಿಧ ರಾಜ್ಯಗಳಲ್ಲಿ ಕಳ್ಳತನ, ಸುಲಿಗೆ ಕೃತ್ಯದಲ್ಲಿ ಸಕ್ರಿಯವಾಗಿದೆ’ ಎಂದು ಮೂಲಗಳು ತಿಳಿಸಿವೆ.

₹60 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಮಾದಕ ವಸ್ತುಗಳನ್ನು ಪೂರೈಸುತ್ತಿದ್ದ ಡ್ರಗ್ಸ್ ಪೆಡ್ಲರ್ ಇಮ್ರಾನ್ ಹುಸೇನ್ ಎಂಬಾತನನ್ನು ಸಿಸಿಬಿಯ ಮಾದಕ ದ್ರವ್ಯ ದಳದ ಸಿಬ್ಬಂದಿ ಬಂಧಿಸಿದ್ದಾರೆ.

ಆರೋಪಿಯಿಂದ ಹೆರಾಯಿನ್, ಮಾದಕ ವಸ್ತುಗಳನ್ನು ತುಂಬಿದ ಮಾತ್ರೆ ಹಾಗೂ ಟಾನಿಕ್, ಎರಡು ಮೊಬೈಲ್ ಜಪ್ತಿ ಮಾಡಲಾಗಿದೆ. ಇದರ ಮೌಲ್ಯ ₹60 ಲಕ್ಷವೆಂದು ಅಂದಾಜಿಸಲಾಗಿದೆ.

ಆರ್.ಟಿ. ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹೊರ ರಾಜ್ಯದ ಡ್ರಗ್ಸ್ ಪೆಡ್ಲರ್ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಮಾಹಿತಿ ಬಂದಿತ್ತು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

ಅನಧಿಕೃತ ವಾಸ: ಅನಧಿಕೃತವಾಗಿ ನಗರದಲ್ಲಿ ವಾಸಿಸುತ್ತಿದ್ದ ಇಬ್ಬರು ವಿದೇಶಿ ಪ್ರಜೆಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ವೀಸಾ ಅವಧಿ ಮುಕ್ತಾಯಗೊಂಡಿದ್ದರೂ, ಅವರು ಅನಧಿಕೃತವಾಗಿ ಅಮೃತಹಳ್ಳಿ ಹಾಗೂ ಕೊಡಿಗೇಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ನೆಲಸಿದ್ದರು.

ತಂದೆ, ಮಗ ಸೇರಿ ಮೂವರ ಸೆರೆ

ಸಾರ್ವಜನಿಕರಿಂದ ಮೊಬೈಲ್ ಸುಲಿಗೆ ಮಾಡಿ, ಮಾರಾಟ • 93 ಮೊಬೈಲ್ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಫೋನ್‌ಗಳನ್ನು ಸುಲಿಗೆ ಮಾಡಿ ಮಾರಾಟ ಮಾಡುತ್ತಿದ್ದ ತಂದೆ, ಮಗ ಸೇರಿದಂತೆ ಮೂವರನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿ, ₹30.40 ಲಕ್ಷ ಮೌಲ್ಯದ 93 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಸಾರಾಯಿ ಪಾಳ್ಯ ನಿವಾಸಿ ಮೊಹಮದ್ ಅಹಮದ್, ಮಂಗಮ್ಮನ ಪಾಳ್ಯ ನಿವಾಸಿ ಸಾಜಿದ್ ಹಾಗೂ ಪಾದರಾಯನಪುರದ ಮುಷ್ತಾಕ್ ಬಂಧಿತ ಆರೋಪಿಗಳು.

ನಗರದ ವಿವಿಧೆಡೆ ಸಾರ್ವಜನಿಕರಿಂದ ಮೊಬೈಲ್‌ಗಳನ್ನು ಮಗ ಮೊಹಮದ್ ಅಹಮದ್ ಸುಲಿಗೆ ಮಾಡಿಕೊಂಡು ಬಂದು ಮಾರಾಟ ಮಾಡಲು ತಂದೆ ಮುಷ್ತಾಕ್ ಹಾಗೂ ಸ್ನೇಹಿತ ಸಾಜಿದ್‌ಗೆ ಕೊಡುತ್ತಿದ್ದ ಎಂಬುದು ಪೊಲೀಸ್ ತನಿಖೆ ವೇಳೆ ಗೊತ್ತಾಗಿದೆ.

ಪಿ.ಜಿ.ಯಲ್ಲಿ ವಾಸವಿರುವ ವ್ಯಕ್ತಿಯೊಬ್ಬರು ಜನವರಿ 15 ರಂದು ರಾತ್ರಿ ಬಿ. ನಾರಾಯಣಪುರ ಹತ್ತಿರ


ಮೊಹಮದ್ ಅಹಮದ್


ಸಾಜಿದ್


ಮುಷ್ತಾಕ್

ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ದ್ವಿಚಕ್ರ ವಾಹನದಲ್ಲಿ ಹಿಂಬದಿಯಿಂದ ಬಂದು ಅವರ ಕೈಯಲ್ಲಿದ್ದ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡರು.

ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಸುಲಿಗೆ ಮಾಡಿದ್ದ ಮೊಬೈಲ್ ಫೋನ್‌ಗಳು ಹಾಗೂ ದ್ವಿಚಕ್ರ ವಾಹನ ಸಮೇತ ಆರೋಪಿ ಮೊಹಮದ್ ಅಹಮದ್‌ನನ್ನು ಮಹದೇವಪುರದ ರೈನ್ ಬೋ ಆಸ್ಪತ್ರೆ ಬಳಿ ಬಂಧಿಸಿದರು.

‘ನಗರದ ವಿವಿಧೆಡೆ ಸಾರ್ವಜನಿಕರಿಂದ ಮೊಬೈಲ್ ಫೋನ್‌ಗಳನ್ನು ಸುಲಿಗೆ ಮಾಡಿರುವುದಾಗಿ ವಿಚಾರಣೆ ವೇಳೆ ಆರೋಪಿ ಒಪ್ಪಿಕೊಂಡಿದ್ದಾನೆ. ಆತನ ಮನೆಯಿಂದ 21 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಮೊಬೈಲ್‌ಗಳನ್ನು ಮಾರಾಟ ಮಾಡಲು ತಂದೆ ಹಾಗೂ ಸ್ನೇಹಿತನಿಗೆ ನೀಡಿರುವುದಾಗಿ ಹೇಳಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ನೀಡಿದ ಮಾಹಿತಿ ಆಧರಿಸಿ ಥಣಿಸಂದ್ರದ ಮುಖ್ಯರಸ್ತೆಯಲ್ಲಿ ಆತನ ಸ್ನೇಹಿತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಮಾರಾಟ ಮಾಡಲು ನೀಡಿದ್ದ ಎರಡು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಯಿತು. ಬಳಿಕ ಆರೋಪಿಯ ತಂದೆಯನ್ನು ಅವರ ಮನೆಯಲ್ಲೇ ವಶಕ್ಕೆ ಪಡೆದು ವಿಚಾರಣೆ ಮಾಡಲಾಯಿತು. ಅವರ ಬಳಿಯಿದ್ದ 47 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಹೇಳಿದರು.

ಪ್ರಕರಣದಲ್ಲಿ ಒಟ್ಟಾರೆ 93 ಮೊಬೈಲ್ ಹಾಗೂ ದ್ವಿಚಕ್ರ ವಾಹನ ವಶಪಡಿಸಿಕೊಂಡಿದ್ದು, ತನಿಖೆ ಮುಂದುವರಿಸಲಾಗಿದೆ ಎಂದು ತಿಳಿಸಿದರು.

ವಿಮ್ಸ್‌ನಲ್ಲಿ ಮತ್ತೊಬ್ಬ ಬಾಣಂತಿ ಸಾವು

ಬಳ್ಳಾರಿ: ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆಯ ಬಾಣಂತಿಯೊಬ್ಬರು ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ವಿಜ್ಞಾನ ಕೇಂದ್ರ (ವಿಮ್ಸ್)ದಲ್ಲಿ ಮಂಗಳವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ.

‘ರೇಷ್ಮಾ ಗೌಸ್‌ಫೀರ್ (20) ಎಂಬುವವರಿಗೆ ಜ.4ರಂದು ಸಿಜೇರಿಯನ್ ಹೆರಿಗೆ ಮಾಡಲಾಗಿತ್ತು. ನಾಲ್ಕು ದಿನಗಳ ಬಳಿಕ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದರು. ಬಳಿಕ ಅವರಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದು, ಜ. 14 ರಂದು ಮತ್ತೆ ವಿಮ್ಸ್‌ಗೆ ದಾಖಲಿಸಲಾಗಿತ್ತು.

ಪೊಲೀಸ್ ಸಮವಸ್ತ್ರ, ಸೊಂಟದಲ್ಲಿ ಪಿಸ್ತೂಲ್, ಕೈಯಲ್ಲಿ ಲಾಠಿ...

ಪೊಲೀಸ್ ಅಧಿಕಾರಿಗಳಾದ ಮಕ್ಕಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಂಚಾರ ನಿರ್ವಹಣಾ ಕೇಂದ್ರದ ಸಭಾಂಗಣದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರೊಂದಿಗೆ ನಾಲ್ವರು ಮಕ್ಕಳು ಪೊಲೀಸ್ ಸಮವಸ್ತ್ರ ಧರಿಸಿ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿ ಗಮನ ಸೆಳೆದರು.

ಒಂದು ದಿನದ ಮಟ್ಟಿಗೆ ಪೊಲೀಸ್ ಅಧಿಕಾರಿಗಳಾಗಿ ಕೊಪ್ಪಳ, ವಿಜಯಪುರ, ತುಮಕೂರು ಹಾಗೂ ಮೈಸೂರಿನ ನಾಲ್ವರು ಮಕ್ಕಳು ಕೆಲಸ ಮಾಡಿದರು. ಪತ್ರಿಕಾಗೋಷ್ಠಿಯಲ್ಲೂ ದಯಾನಂದ ಅವರ ಅಕ್ಕಪಕ್ಕ ಕುಳಿತಿದ್ದರು. ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವ ಮಕ್ಕಳ ಆಸೆಯನ್ನು ನಗರ ಪೊಲೀಸ್ ಇಲಾಖೆ ಸಿಬ್ಬಂದಿ ಈಡೇರಿಸಿದರು. ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಈ ಅವಕಾಶ ಕಲ್ಪಿಸಲಾಗಿತ್ತು.

ಪೊಲೀಸ್ ಸಮವಸ್ತ್ರ, ಸೊಂಟದಲ್ಲಿ ಪಿಸ್ತೂಲ್, ಕೈಯಲ್ಲಿ ಲಾಠಿ.. ಹಿಡಿದು ಕಚೇರಿ ಪ್ರವೇಶಿಸಿದರು. ಅಲ್ಲಿದ್ದ ಪೊಲೀಸರು ಸಲ್ಯೂಟ್‌ನೊಂದಿಗೆ ಸ್ವಾಗತ ಕೋರಿದರು. ನೇರವಾಗಿ ಅವರನ್ನು ಕಳೆದ ವಾರ ಉದ್ಘಾಟನೆಗೊಂಡ ಪೊಲೀಸ್ ವಸ್ತು ಸಂಗ್ರಹಾಲಯ ಹಾಗೂ ಅನುಭವ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಮಕ್ಕಳು ಸಂಗ್ರಹಾಲಯ ಕಣ್ತುಂಬಿಕೊಂಡರು.

ಬಳಿಕ ಅವರು ಪತ್ರಿಕಾಗೋಷ್ಠಿಗೆ ಹಾಜರಾದರು. ಹೂಗುಚ್ಛ ನೀಡಿ ಅವರನ್ನು ದಯಾನಂದ ಅವರು ಸ್ವಾಗತಿಸಿದರು. ಮಕ್ಕಳ ಜತೆಗೆ ಫೋಟೊ ತೆಗೆಸಿಕೊಂಡರು. ಇದರಿಂದ ಮಕ್ಕಳು ಸಂಭ್ರಮಪಟ್ಟರು.

ನಂತರ ಮಾತನಾಡಿದ ದಯಾನಂದ ಅವರು, ‘ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ನಾಲ್ವರು ಕಿರಿಯ ಸ್ನೇಹಿತರಿಗೆ ಒಂದು ದಿನದ ಮಟ್ಟಿಗೆ ಪೊಲೀಸ್ ಅಧಿಕಾರಿಯಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಲಾಯಿತು. ಜೀವನ ಬಹಳ ಅಮೂಲ್ಯವಾದದ್ದು. ಅಪಘಾತದಿಂದ ಜೀವನ ಹಾಳು ಮಾಡಿಕೊಳ್ಳಬಾರದು’ ಎಂದು ತಿಳಿಸಿದರು.

‘ಮನುಷ್ಯನನ್ನು ಕ್ಯಾನ್ಸರ್ ಕಾಡುವಂತೆಯೇ ಈ ಸಮಾಜವನ್ನು ಅಪರಾಧ ಚಟುವಟಿಕೆಗಳು ಕಾಡುತ್ತಿವೆ. ಅಪರಾಧ ಚಟುವಟಿಕೆಗಳ ನಿಯಂತ್ರಣಕ್ಕೆ ಇಲಾಖೆ ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಲೇ ಇದೆ’ ಎಂದು ಅವರು ಹೇಳಿದರು.

ಮಕ್ಕಳಾದ ಪಲ್ಲವಿ, ದಿವ್ಯಶ್ರೀ, ವಿಶ್ವಾಸ್ ಜೀವನ್ ಅವರಿಗೆ ಉಡುಗೊರೆ ನೀಡಲಾಯಿತು. ಮಕ್ಕಳು ಅವಕಾಶ ಕಲ್ಪಿಸಿದ್ದಕ್ಕೆ ಪೊಲೀಸ್ ಇಲಾಖೆಗೆ ಧನ್ಯವಾದ ತಿಳಿಸಿದರು. ಕಿದ್ವಾಯಿ ಆಸ್ಪತ್ರೆ ಸಿಬ್ಬಂದಿ ಹಾಗೂ ಮಕ್ಕಳ ಪೋಷಕರು ಹಾಜರಿದ್ದರು.



ನಾಲ್ವರು ಮಕ್ಕಳು ಒಂದು ದಿನ ಮಟ್ಟಿಗೆ ಪೊಲೀಸ್ ಅಧಿಕಾರಿಗಳಾಗಿ ಕೆಲಸ ಮಾಡಿದರು. ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಹಾಗೂ ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್ ಪಾಲ್ಗೊಂಡಿದ್ದರು

ನಗರದಲ್ಲಿ ಇಂದು

ಗವಿಗಂಗಾಧರೇಶ್ವರ ಬ್ರಹ್ಮರಥೋತ್ಸವ: ಬೆಳಿಗ್ಗೆ 10.30ಕ್ಕೆ ಅಭಿಷೇಕ, ಗಣಪತಿ ಉತ್ಸವ, ಸಂಜೆ 6.30ಕ್ಕೆ ಕಾಮಧೇನು ಉತ್ಸವ, ಆಯೋಜನೆ ಮತ್ತು ಸ್ಥಳ: ಗವಿಗಂಗಾಧರೇಶ್ವರ ದೇವಸ್ಥಾನ, ಗವಿಪುರ ಗುಟ್ಟಹಳ್ಳಿ, ಹನುಮಂತನಗರ

ಮಹಾತ್ಮಗಾಂಧಿ ನರೇಗಾ ಯೋಜನೆಯ ಅನುಷ್ಠಾನದಲ್ಲಿ 2023-24ನೇ ಸಾಲಿನಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಪಂಚಾಯಿತಿಗಳು ಮತ್ತು ಅನುಷ್ಠಾನ ಇಲಾಖೆಗಳಿಗೆ ನರೇಗಾ ಪ್ರಶಸ್ತಿ ಪ್ರದಾನ: ಪ್ರಿಯಾಂಕ್ ಖರ್ಗೆ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 11


ಲಿವಿಂಗ್ ಲೈಟ್ಲಿ: ಮಾತು ಕಥೆ: ಆಯೋಜನೆ: ಸೆಂಟರ್ ಫಾರ್ ಪೆಸ್ಟೊರಾಲಿಸ್ಮ್, ಸಹಜೀವನ್, ಸ್ಥಳ: ಇಂದಿರಾ ಗಾಂಧಿ ಕಲಾ ಕೇಂದ್ರದ ಪ್ರಾದೇಶಿಕ ಕಚೇರಿ, ಮಲ್ಲತ್ತಹಳ್ಳಿ, ಬೆಳಿಗ್ಗೆ 11

ಎಸ್. ಚಂದ್ರಶೇಖರ್ ಅವರ ‘ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಆಧುನಿಕ ಮೈಸೂರು’ ಪುಸ್ತಕ ಬಿಡುಗಡೆ: ಎಚ್.ಸಿ. ಮಹದೇವಪ್ಪ, ಪುಸ್ತಕದ ಕುರಿತು: ಕೆ.ವೈ. ನಾರಾಯಣಸ್ವಾಮಿ, ಅಧ್ಯಕ್ಷತೆ: ಪಿ.ಟಿ. ಶ್ರೀನಿವಾಸನಾಯಕ್, ಅತಿಥಿ: ಚ. ನಾಗರಾಜ, ಪ್ರಾಸ್ತಾವಿಕ ನುಡಿ: ಎಂ. ಪ್ರಕಾಶಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ವಿಶ್ವೇಶ್ವರಯ್ಯ ಮೆಟ್ರೊ ನಿಲ್ದಾಣದ ಬಳಿ, ಸಂಜೆ 4

ಭಾರತ ರಂಗ ಮಹೋತ್ಸವ ಅಂತರರಾಷ್ಟ್ರೀಯ ನಾಟಕೋತ್ಸವ: ಉತ್ಸವದ ಗೌರವ: ‘ಮುಖ್ಯಮಂತ್ರಿ’ ಚಂದ್ರು, ‘ರೋಮಿಯೊ ಆ್ಯಂಡ್ ಜೂಲಿಯಟ್’ ನಾಟಕದ ಪ್ರಸ್ತುತಿ: ವಿ 4 ಥಿಯೇಟರ್ ಶ್ರೀಲಂಕಾ, ನಿರ್ದೇಶನ: ಜಯಂತ ಬಂಡಾರ, ಭಾಷೆ: ಸಿಂಹಳ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 5ರಿಂದ

60ನೇ ನಾದಜ್ಯೋತಿ ಸಂಗೀತ ಸಂಭ್ರಮ–2025: ಗಾಯನ: ರುದ್ರಪಟ್ಟಣಂ ಎಸ್. ರಮಾಕಾಂತ್, ಪಿಟೀಲು: ಸಿ.ಎನ್. ಚಂದ್ರಶೇಖರ್, ಮೃದಂಗ: ಬಿ.ಸಿ. ಮಂಜುನಾಥ್, ಖಂಜೀರಾ: ಎ.ಎಸ್.ಎನ್. ಸ್ವಾಮಿ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್‌ಪಾರ್ಕ್, ಮಲ್ಲೇಶ್ವರ, ಸಂಜೆ 6

‘ಕುವೆಂಪು ಸಾಹಿತ್ಯ ದರ್ಶನ’ ಎರಡು ದಿನಗಳ ರಾಷ್ಟ್ರೀಯ ವಿಚಾರಸಂಕಿರಣದ ಉದ್ಘಾಟನೆ: ಲಿಂಗರಾಜ ಗಾಂಧಿ, ಅತಿಥಿ: ಅಗ್ರಹಾರ ಕೃಷ್ಣಮೂರ್ತಿ, ಅಧ್ಯಕ್ಷತೆ: ಜ್ಯೋತಿ ವೆಂಕಟೇಶ್, ಉಪಸ್ಥಿತಿ: ಟಿ. ಜವರೇಗೌಡ, ಆಯೇಷಾ ಫರ್ಜಾನಾ, ಆನಂದಕುಮಾರ್ ಸಿ.ಎಸ್., ವಿಜಯಲಕ್ಷ್ಮಿ ಎಂ.ವಿ., ‘ಕುವೆಂಪು ಕಾವ್ಯ’ ಗೋಷ್ಠಿ: ಗೀತಾವಸಂತ, ‘ಕುವೆಂಪು ಕನ್ನಡ ಚಿಂತನೆ’ ಗೋಷ್ಠಿ: ರಘುನಾಥ ಚ.ಹ., ಅಧ್ಯಕ್ಷತೆ: ರಹಮತ್ ತರೀಕೆರೆ, ‘ಕುವೆಂಪು ಸಾಹಿತ್ಯ ಅಂಚಿನ ದೃಷ್ಟಿಕೋನ’ ಗೋಷ್ಠಿ: ತಾರಕೇಶ್ವರ್ ವಿ.ಬಿ., ‘ಕುವೆಂಪು ಅವರ ವಿಮರ್ಶೆ’ ಗೋಷ್ಠಿ: ಮೇಟಿ ಮಲ್ಲಿಕಾರ್ಜುನ, ಅಧ್ಯಕ್ಷತೆ: ಪುರುಷೋತ್ತಮ ಬಿಳಿಮಲೆ, ಆಯೋಜನೆ: ಕನ್ನಡ ಅಧ್ಯಯನ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಸೆಮಿನಾರ್ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10ರಿಂದ


ರಹಮತ್ ತರೀಕೆರೆ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಸಚಿವ ಶಿವರಾಜ್ ತಂಗಡಗಿ

‘ಒಗ್ಗಟ್ಟಿನಿಂದ ಮಾತ್ರ ಅಭಿವೃದ್ಧಿ’

ಪ್ರಜಾವಾಣಿ ವಾರ್ತೆ



ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಧರಣಿ ದೇವಿ ಮಾಲಗತ್ತಿ, ಎನ್‌.ಮಂಜುಳಾ, ಶಿವರಾಜ್ ತಂಗಡಗಿ, ದಿನೇಶ್ ಗುಂಡೂರಾವ್, ಎಂ.ಸಿ.ವೇಣುಗೋಪಾಲ್ ಅವರು ಸವಿತಾ ಮಹರ್ಷಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ಸವಿತಾ ಸಮಾಜದ ಬೇಡಿಕೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು ಈಡೇರಿಸಲು ಪ್ರಯತ್ನಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂಗಳವಾರ ಆಯೋಜಿಸಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಸವಿತಾ ಸಮಾಜ ಅಭಿವೃದ್ಧಿ ನಿಗಮಕ್ಕೆ ಸಮಾಜದವರನ್ನೇ ಅಧ್ಯಕ್ಷರನ್ನಾಗಿ ಮಾಡುವ ಕುರಿತು ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗುವುದು. ಸವಿತಾ ಸಮಾಜದ ಹೆಸರನ್ನು ನಿಷೇಧಿತ ಶಬ್ದ ಬಳಸಿ ಕರೆದವರಿಗೆ ಶಿಕ್ಷೆ ವಿಧಿಸಲು ಅವಕಾಶವಾಗುವಂತೆ ಕಾನೂನು ತರುವ ಕುರಿತು ಸಂಪುಟದಲ್ಲಿ ಚರ್ಚೆ ನಡೆಸಲಾಗುವುದು’ ಎಂದು ಹೇಳಿದರು.

‘ಈ ವರ್ಷ ಸವಿತಾ ಸಮಾಜದ ಅಭಿವೃದ್ಧಿಗೆ ₹23.70 ಕೋಟಿ ಅನುದಾನ ಮೀಸಲಿರಿಸಿದ್ದೇವೆ. ಈ ಮೂಲಕ ಸಮುದಾಯದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಯೋಜನೆ ತಲುಪಿಸಲಾಗುವುದು’ ಎಂದು ತಿಳಿಸಿದರು.

‘ಸಣ್ಣ-ಸಣ್ಣ ಸಮುದಾಯದ ಮುಖಂಡರು ವೈಯಕ್ತಿಕ ಪ್ರತಿಷ್ಠೆ ಬಿಟ್ಟು ಒಗ್ಗಟ್ಟು ಪ್ರದರ್ಶಿಸಿದಾಗ ಮಾತ್ರ ಅಭಿವೃದ್ಧಿಯಾಗಲು ಸಾಧ್ಯ. ಯಾರಾದರೂ ಬೆಳೆಯುತ್ತಿದ್ದರೆ, ಅವರ ಕಾಲೆಳೆಯುವ ಕೆಲಸವಾಗುತ್ತಿದೆ. ಇರುವುದೇ ಸಣ್ಣ ಸಮಾಜ, ಅದರಲ್ಲೇ ಎರಡು ಗುಂಪುಗಳಿದ್ದರೆ ಆ ಸಮುದಾಯದ ಅಭಿವೃದ್ಧಿ ಹೇಗೆ ಸಾಧ್ಯ? ರಾಜಕೀಯ ಮತ್ತು ಸಾಮಾಜಿಕ ಪ್ರಾತಿನಿಧ್ಯ ಸಿಗಬೇಕೆಂದರೆ ಒಗ್ಗಟ್ಟಿನ ಪ್ರದರ್ಶನ ಆಗಬೇಕು. ಸಣ್ಣ- ಸಣ್ಣ ಸಮುದಾಯಗಳು ಬಲಿಷ್ಠ ಸಮುದಾಯದವರನ್ನು ನೋಡಿ ಕಲಿಯಬೇಕಿದೆ’ ಎಂದು ಕಿವಿ ಮಾತು ಹೇಳಿದರು

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ‘ಈ ಬಾರಿ ಸಣ್ಣ ಸಮುದಾಯದವರಿಗೆ ಹೆಚ್ಚಿನ ಅನುದಾನ ನೀಡುವಂತೆ ಮುಖ್ಯಮಂತ್ರಿಯವರಿಗೆ ಮನವಿ ಮಾಡಲಾಗುವುದು’ ಎಂದರು.

ಸವಿತಾ ಕ್ಷೇಮಾಭಿವೃದ್ಧಿ ಮತ್ತು ಜಾಗೃತ ವೇದಿಕೆ ಕಾರ್ಯಾಧ್ಯಕ್ಷ ಭೈರಪ್ಪ ನಾರಾಯಣ ಸ್ವಾಮಿ ಮಾತನಾಡಿ, ‘ಸಮುದಾಯದವರಿಗೆ ನಿಗಮ, ಮಂಡಳಿಯಲ್ಲಿ ಸ್ಥಾನ ನೀಡಬೇಕು, ಪ್ರವರ್ಗ 1ಕ್ಕೆ ಸೇರಿಸಬೇಕು, ನಾದಸ್ವರ ಕಲಾವಿದರಿಗೆ ಉಚಿತ ಬಸ್ ಪಾಸ್ ನೀಡಬೇಕು ಮತ್ತು 10 ಎಕರೆ ಜಾಗ ನೀಡಬೇಕು’ ಎಂದು ಸಚಿವರಿಗೆ ಮನವಿ ಮಾಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಸಿ.ವೇಣುಗೋಪಾಲ್, ಇಲಾಖೆ ಕಾರ್ಯದರ್ಶಿ ಡಾ.ಎನ್.ಮಂಜುಳಾ, ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಜಂಟಿ ನಿರ್ದೇಶಕರಾದ ಬಲವಂತರಾವ್ ಪಾಟೀಲ್, ಬನಶಂಕರಿ ವಿ.ಅಂಗಡಿ, ಸವಿತಾ ಸಮಾಜದ ಮುಖಂಡರಾದ ಮುತ್ತುರಾಜ್, ಕೃಷ್ಣ, ಶಿವಶಂಕರ್ ಉಪಸ್ಥಿತರಿದ್ದರು.

‘ಇವಿಗೆ ಮಾತ್ರ ಅನುಮತಿ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯ ನಿಯಂತ್ರಿಸಲು ಸಾರ್ವಜನಿಕ ಸಾರಿಗೆ ಬಳಕೆಯನ್ನು ಪ್ರೋತ್ಸಾಹಿಸುವುದರ ಜತೆಗೆ ಭವಿಷ್ಯದಲ್ಲಿ ವಿದ್ಯುತ್‌ಚಾಲಿತ ವಾಹನಗಳಿಗೆ (ಇವಿ) ಮಾತ್ರ ಅನುಮತಿ ನೀಡುವುದು ಸೂಕ್ತ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟಿದ್ದಾರೆ.

ಈ ಬಗ್ಗೆ ಅವರು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಪತ್ರ ಬರೆದಿದ್ದಾರೆ. ‘ಸಾಂಪ್ರದಾಯಿಕ ಇಂಧನ ಬಳಸುವ ವಾಹನಗಳಿಂದ ವಾಯುಮಾಲಿನ್ಯ ಹೆಚ್ಚುತ್ತಿದೆ. ವಾಯು ಮಾಲಿನ್ಯದಿಂದ ನವದೆಹಲಿಯಂತೆ ಬೆಂಗಳೂರು ನಗರ ಸಹ ಕುಖ್ಯಾತ ಗೊಳ್ಳುವ ಪೂರ್ವದಲ್ಲಿಯೇ ನಾವು ಎಚ್ಚೆತ್ತುಕೊಳ್ಳಬೇಕು’ ಎಂದು ಹೇಳಿದ್ದಾರೆ.

‘ಪರಿಸರದ ಮೇಲೆ ದೂರಗಾಮಿ ದುಷ್ಪರಿಣಾಮಗಳನ್ನು ಮಿತಿಗೊಳಿಸುವ ನಿಟ್ಟಿನಲ್ಲಿ, ವಾಯು ಮಾಲಿನ್ಯವನ್ನು ನಿಯಂತ್ರಿಸಲು ನಮ್ಮ ತಲೆಮಾರು ಕ್ರಮ ಕೈಗೊಳ್ಳಬೇಕಿದೆ. ಸರ್ಕಾರವು ಈ ಬಗ್ಗೆ ಉತ್ತರದಾಯಿತ್ವವನ್ನು ಹೊಂದಿದೆ. ಆದ್ದರಿಂದ ಸಾರ್ವಜನಿಕ ಸಾರಿಗೆ ಬಳಕೆಯನ್ನು ಹೆಚ್ಚಿಸುವುದು ಅತ್ಯಗತ್ಯವಾಗಿದೆ. ಇದರ ಜತೆಯಲ್ಲೇ ನಗರದಲ್ಲಿ ವಿದ್ಯುತ್ ಚಾಲಿತ ವಾಹನಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ’ ಎಂದಿದ್ದಾರೆ.

‘ನಗರದಲ್ಲಿ ಭವಿಷ್ಯದಲ್ಲಿ ವಿದ್ಯುತ್ ಚಾಲಿತ ಆಟೊ ರಿಕ್ಷಾಗಳು, ಕ್ಯಾಬ್‌ಗಳು, ಸರಕು ಆಟೊಗಳು ಹಾಗೂ ಘನತ್ಯಾಜ್ಯ ಸಂಗ್ರಹಣೆ ವಾಹನಗಳಿಗೆ ಮಾತ್ರ ಅನುಮತಿ ನೀಡುವುದು ಸೂಕ್ತ. ಇದಕ್ಕೆ ಪೂರಕವಾಗಿ ಇನ್ನು ಮುಂದೆ ನಗರ ಸಾರಿಗೆ ಬಸ್‌ಗಳನ್ನು ಖರೀದಿಸುವಾಗ ಸಹ ಎಲೆಕ್ಟ್ರಿಕ್ ಬಸ್‌ಗಳನ್ನು ಮಾತ್ರ ಸಾರಿಗೆ ಸೇವೆಗೆ ಬಳಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಬೇಕು’ ಎಂದು ಮನವಿ ಮಾಡಿದ್ದಾರೆ.

‘ಹೊಸ ಅಣೆಕಟ್ಟೆಗೆ ಅನುಮತಿ ಇಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ನದಿಗೆ ಹೊಸ ಅಣೆಕಟ್ಟು ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿಲ್ಲ ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ಸ್ಪಷ್ಟಪಡಿಸಿದೆ.


ರಾಜ್ಯಸಭೆಯಲ್ಲಿ ಸದಸ್ಯ ಎಸ್. ಕಲ್ಯಾಣಸುಂದರಂ ಕೇಳಿದ ಪ್ರಶ್ನೆಗೆ ಜಲಶಕ್ತಿ ಖಾತೆಯ ರಾಜ್ಯ ಸಚಿವ ರಾಜ್ ಭೂಷಣ್ ಚೌಧರಿ ಈ ಉತ್ತರ ನೀಡಿದ್ದಾರೆ. ಬೆಂಗಳೂರಿಗೆ ಕುಡಿಯುವ ನೀರು ಪೂರೈಕೆಗೆ ಮೇಕೆದಾಟು ಯೋಜನೆಗೆ ಅನುಮತಿ ನೀಡುವಂತೆ ರಾಜ್ಯ ಸರ್ಕಾರ ಐದು ವರ್ಷಗಳ ಹಿಂದೆಯೇ ಪ್ರಸ್ತಾವ ಸಲ್ಲಿಸಿದೆ. ಕಾವೇರಿ ಕಣಿವೆಯ ಹೆಚ್ಚುವರಿ ನೀರು ಬಳಕೆಗೆ ತಮಿಳುನಾಡು ಸರ್ಕಾರ ‘ಕಾವೇರಿ- ವೆಲ್ಲಾರ್-ಗುಂಡಾರ್’ ನದಿ ಜೋಡಣೆ ಯೋಜನೆ ಕೈಗೆತ್ತಿಕೊಂಡಿದೆ. ಇದಕ್ಕೂ ಕೇಂದ್ರ ಒಪ್ಪಿಗೆ ನೀಡಿಲ್ಲ.

ಬಸವರಾಜು ಬೆಂಗಳೂರು ಗ್ರಾಮಾಂತರ ಡಿ.ಸಿ

ಬೆಂಗಳೂರು: ಐಎಎಸ್ ಅಧಿಕಾರಿ ಬಸವರಾಜು ಎ.ಬಿ ಅವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ವಾಣಿಜ್ಯ ತೆರಿಗೆ ಇಲಾಖೆ ಹೆಚ್ಚುವರಿ ಕಮಿಷನರ್ (ಜಾರಿ) ಚಂದ್ರಶೇಖರ್ ನಾಯಕ ಎಲ್. ಅವರಿಗೆ ಅದೇ ಇಲಾಖೆಯ ಹೆಚ್ಚುವರಿ ಕಮಿನಷರ್ (ಸರ್ವೀಸ್ ಅನಾಲಿಸಿಸ್ ವಿಂಗ್) ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಸುಧಾ, ಮಯೂರ ಓದಿರಿ





ಮ್ಯಾಟರ್‌ಜೆನ್ ಎಐ ವಿಶ್ವಾಮಿತ್ರ!

ಕೊಳ್ಳೇಗಾಲ ಶರ್ಮ

ಎಐ ಅಥವಾ ಕೃತಕ ಬುದ್ಧಿಮತ್ತೆ ಮತ್ತೆ ಮತ್ತೆ ಸುದ್ದಿಯಲ್ಲಿದೆ. ಹೊಸದೊಂದು ಲೇಖನ ಬರೆಯಲು, ಇಲ್ಲವೇ ಸಂಶೋಧನೆಗೆ ಎಐ ಬಳಸುವ ಚಾಟ್‌ಜಿಪಿಟಿಯಂತಹ ವ್ಯವಸ್ಥೆಯನ್ನು ಕೇಳಿದರೆ ಸಾಕು, ಸಿದ್ಧಲೇಖನ ದೊರೆಯುತ್ತದೆ. ಅದನ್ನು ಅಷ್ಟಿಷ್ಟು ತಿದ್ದಿ, ಸುಂದರವಾಗಿಸುವುದಷ್ಟೆ ಬಾಕಿ. ಇದೇ ರೀತಿ ಹೊಸ ವಸ್ತುಗಳನ್ನು ಸೃಷ್ಟಿಸುವುದು ಸಾಧ್ಯವಿದ್ದರೆ? ಬಹುಶಃ ಆಗ ಬಹಳಷ್ಟು ವರ್ಷಗಳಿಂದ ಕನಸು ಕಾಣುತ್ತಿರುವ ಸೂಪರ್‌ಕಂಡಕ್ಟರ್‌ಗಳು, ಎಂದಿಗೂ ಒಡೆಯದ ಪಿಂಗಾಣಿ, ಅತ್ಯಲ್ಪ ಬೆಳಕು ಬಿದ್ದರೂ ವಿದ್ಯುತ್ ಉತ್ಪಾದಿಸುವ ಸೌರಫಲಕ ಮೊದಲಾದವು ನನಸಾಗಬಹುದು. ಇಂತಹುದೊಂದು ತಂತ್ರಜ್ಞಾನವನ್ನು ಮೈಕ್ರೊಸಾಫ್ಟ್ ಸಿದ್ಧಪಡಿಸಿದೆಯಂತೆ.

'ಮ್ಯಾಟರ್‌ಜೆನ್' ಎನ್ನುವ ಈ ಸೃಷ್ಟಿಶಕ್ತ ಎಐ, ಇಂತಿಂತಹ ಗುಣವಿರುವ ವಸ್ತುವಿನ ರಚನೆ ಹೇಗಿರುತ್ತದೆ ಎಂದು ಕೇಳಿದರೆ, ಅದನ್ನು ಹೇಳುವುದರ ಜೊತೆಗೆ, ಆ ವಸ್ತುವನ್ನು ತಯಾರಿಸುವ ವಿಧಾನವನ್ನೂ ಈ ತಂತ್ರಜ್ಞಾನ ತಿಳಿಸುತ್ತದೆಯಂತೆ. ವಸ್ತುವಿಜ್ಞಾನಿಗಳಿಗೆ ಇದು ಖುಷಿಯ ವಿಷಯ. ಏಕೆಂದರೆ ಇದುವರೆವಿಗೂ ವಸ್ತುವಿಜ್ಞಾನಿಗಳಲ್ಲಿ, ಪ್ಲಾಸ್ಟಿಕ್, ಔಷಧಗಳು ಮೊದಲಾದ ಸಾವಯವ ವಸ್ತುಗಳನ್ನು ರಚಿಸುವವರ ಕೈ ಮೇಲಾಗಿತ್ತು. ಆದರೆ ಖನಿಜ ಹಾಗೂ ಲೋಹವಸ್ತುಗಳಿಂದ ಹೊಸ ಉತ್ಪನ್ನಗಳನ್ನು ರಚಿಸುವುದು ಕಷ್ಟಸಾಧ್ಯ ಎನ್ನಿಸಿತ್ತು. ಇದೀಗ ಈ ಅಸಾವಯವ ಅಥವಾ ಇನಾರ್ಗಾನಿಕ್ ವಸ್ತುಗಳಲ್ಲಿ ಹೊಸ ವಸ್ತುಗಳ ಶೋಧಕ್ಕೆ ಮ್ಯಾಟರ್‌ಜೆನ್ ಇಂಬು ಕೊಡಲಿದೆ. ಮಾನವ ನಾಗರಿಕತೆಯ ಬೆಳವಣಿಗೆಗೆ ಮೂಲವಾದ ಈ ವಿಜ್ಞಾನ ಇನ್ನಷ್ಟು ಬೆಳೆಯಲಿದೆ.

ಅಸಾವಯವ ವಸ್ತುಗಳು ಮಾನವನ ವಿಕಾಸದಲ್ಲಿ ಪ್ರಮುಖ ಪಾತ್ರಧಾರಿಗಳು ಎನ್ನುವುದರಲ್ಲಿ ಎರಡು ಮಾತಿಲ್ಲ. ಲೋಹಗಳು, ಮಣ್ಣು, ಗಾಜು ಮತ್ತು ಪಿಂಗಾಣಿ ಇವು ಬಲು ಪುರಾತನ ವಸ್ತುಗಳು. ಇವುಗಳಲ್ಲಿ ಗಾಜು ಮತ್ತು ಪಿಂಗಾಣಿ ಮಾನವನ ಸೃಷ್ಟಿ. ಲೋಹಗಳು ಮತ್ತು ಮಣ್ಣು ನೈಸರ್ಗಿಕವಾದಂಥವು. ಮಣ್ಣಿನಲ್ಲಿರುವ ಹಲವು ಖನಿಜಗಳು ಕೂಡ ಉಪಯುಕ್ತವಾದಂಥವೇ. ಜಗತ್ತಿನ ಎಲ್ಲ ಯಂತ್ರಸಾಧನಗಳಿಗೂ ಇವು ಮೂಲವಸ್ತುಗಳು. ಆದರೂ ಹೊಸ, ಹೊಸ ವಸ್ತುಗಳು ಬೇಕಾಗುತ್ತಲೇ ಇವೆ. ದುರದೃಷ್ಟವಶಾತ್, ಸಾವಯವ ವಸ್ತುಗಳನ್ನು ಸೃಷ್ಟಿಸಿದಂತೆ ಗಣಕಯಂತ್ರವನ್ನು ಬಳಸಿಕೊಂಡು ಹೊಸ ಗಾಜನ್ನೋ, ಹೊಸ ಹರಳನ್ನೋ ರೂಪಿಸುವುದು ಸಾಧ್ಯವಾಗಿಲ್ಲ. ಹೀಗಾಗಿಯೇ ಅಸಾವಯವ ವಸ್ತುಗಳ ನಿರ್ಮಾಣ ನಿಧಾನವಾಗಿದೆ.

ಮ್ಯಾಟರ್‌ಜೆನ್ ಇದನ್ನು ಬದಲಿಸಲಿದೆ. ಚಾಟ್ ಜಿಪಿಟಿ ಅಥವಾ ಜೆಮಿನಿ ತಂತ್ರಾಂಶಗಳಿಗೆ ಒಂದು ಪ್ರಶ್ನೆ ಕೇಳಿದೆವೆನ್ನಿ. ಅವು ತಮ್ಮ ಸ್ಮೃತಿಭಂಡಾರದಲ್ಲಿರುವ ಮಾಹಿತಿಯನ್ನು ಹೆಕ್ಕಿ, ಸುಮ್ಮನೆ ಪಟ್ಟಿ ಮಾಡದೆಯೇ, ನಮಗೆ ಅರ್ಥವಾಗುವಂತೆ ಪ್ರಬಂಧದ ರೂಪದಲ್ಲಿ ಕೊಡುತ್ತವೆ. ಈ ಮ್ಯಾಟರ್‌ಜೆನ್ ಕೂಡ ಅಷ್ಟೆ. ಈಗಾಗಲೇ ನಮಗೆ ಪರಿಚಿತವಿರುವ ವಸ್ತುಗಳ ಗುಣ, ವಿಶೇಷ ರಚನೆಗಳೆಲ್ಲವನ್ನೂ ಮನದಲ್ಲಿಟ್ಟುಕೊಂಡು, ನಾವು ಕೇಳಿದ ಅಥವಾ ಕಲ್ಪಿಸಿದ ವಸ್ತುಗಳ ಗುಣ, ರಚನೆಗಳನ್ನು ಹೀಗಿರಬೇಕು ಎಂದು ಊಹಿಸುತ್ತದೆ. ಅನಂತರ, ಅದನ್ನು ರಚಿಸುವ ವಿಧಾನವನ್ನೂ ತಿಳಿಸುತ್ತದೆ.

ಚಾಟ್‌ಜಿಪಿಟಿಯಂತೆಯೇ ಮ್ಯಾಟರ್‌ಜೆನ್ ಕೂಡ ಈಗಾಗಲೇ ಇರುವ ಮಾಹಿತಿಯನ್ನು ಬಳಸಿಕೊಳ್ಳುತ್ತದೆ. ಸದ್ಯಕ್ಕೆ ನಮಗೆ ಪರಿಚಯವಿರುವ ಸುಮಾರು ಆರುಲಕ್ಷ ಲೋಹ, ಅಲೋಹ, ಇವುಗಳ ಸಂಯುಕ್ತಗಳು, ಮಿಶ್ರಣಗಳು, ಮಿಶ್ರಲೋಹಗಳು ಹಾಗೂ ಕಂಪೋಸಿಟ್ ವಸ್ತುಗಳ ಮಾಹಿತಿ ಇರುವ ಮೆಟೀರಿಯಲ್ಸ್ ಪ್ರಾಜೆಕ್ಟ್, ಈ ವಸ್ತುಗಳ ವಿದ್ಯುತ್, ಕಾಂತೀಯ ಗುಣಗಳನ್ನು ವಿಶ್ಲೇಷಿಸುವ ಅಲೆಕ್ಸಾಂಡ್ರಿಯ, ಹಾಗೂ ಪರಿಚಿತವಿರುವ ವಸ್ತುಗಳಲ್ಲಿ ಅಣುಗಳ ಜೋಡಣೆಯನ್ನು ವಿವರಿಸುವ ಐಸಿಎಸ್‌ಡಿ ಡೇಟಬೇಸ್ ಮುಂತಾದ ಡೇಟಬೇಸುಗಳನ್ನೇ ಮ್ಯಾಟರ್‌ಜೆನ್ನನ್ನು ರೂಪಿಸಲು ಬಳಸಲಾಗಿದೆ. ಇಪ್ಪತ್ತು ಅಣುಗಳಿರುವ ನಿರ್ದಿಷ್ಟ ಗುಣವಿರುವ ಒಂದು ಲಕ್ಷಕ್ಕೂ ಹೆಚ್ಚು ವಸ್ತುಗಳನ್ನು ಅಥವಾ ಅವುಗಳ ರಚನೆಯನ್ನು ವಿನ್ಯಾಸ ಮಾಡಿದ್ದಾರೆ.

ಮ್ಯಾಟರ್‌ಜೆನ್ ಗುರುತಿಸಿದ ಈ ರಚನೆಗಳು ಕೇವಲ ಕಾಲ್ಪನಿಕ ರಚನೆಗಳಷ್ಟೆ. ಇವುಗಳು ಸೂಚಿಸುವ ವಸ್ತುಗಳನ್ನು ಪಡೆಯಬಹುದೇ? ಇದು ಪ್ರಶ್ನೆ. ಇದಕ್ಕಾಗಿ ಮೈಕ್ರೊಸಾಫ್ಟ್ ತಂಡ ಮತ್ತೂ ಒಂದು ಪ್ರಯತ್ನವನ್ನು ಮಾಡಿತು. ಸುಲಭವಾಗಿ ದೊರೆಯುವ ವಸ್ತುಗಳಿಂದ ಅತ್ಯಂತ ಅಧಿಕವಾದ ಅಂದರೆ 50, 100, 150, 200 ಗಿಗಾ ಪ್ಯಾಸ್ಕಲ್ ಕಾಂತಶಕ್ತಿ ಇರುವ ಅಯಸ್ಕಾಂತಗಳನ್ನು ತಯಾರಿಸಲು ಪ್ರಯತ್ನಿಸಿತು. ಮ್ಯಾಟರ್‌ಜೆನ್ನಿಗೆ ಸುಲಭವಾಗಿ ದೊರೆಯದ ಗ್ಯಾಡೊಲೀನಿಯಂ ಹಾಗೂ ಕೋಬಾಲ್ಟ್ ಇಲ್ಲದೆಯೇ ಇತರೆ ಲೋಹಗಳಿಂದ ಇಂತಹುದೊಂದು ಅಯಸ್ಕಾಂತದ ಮಿಶ್ರಲೋಹ ಸಾಧ್ಯವೇ ಎಂದು ಪ್ರಶ್ನಿಸಲಾಯಿತು. ಮ್ಯಾಟರ್‌ಜೆನ್ ಇದಕ್ಕಾಗಿ 8192 ವಸ್ತುಗಳನ್ನು ರಚಿಸಬಹುದು ಎಂದು ಕಲ್ಪಿಸಿತು. ಈ ವಸ್ತುಗಳಲ್ಲಿ ಆಕ್ಸಿಜನ್ ಇಲ್ಲದ, ಬೇರಾವ ವಸ್ತುಗಳ ರಚನೆಗೂ ಹೋಲದ ಹಾಗೂ ರಚನೆ ಸ್ಥಿರವಾಗಿರುವಂತಹ ವಸ್ತುಗಳನ್ನು ಹೆಕ್ಕುವಂತೆ ತಿಳಿಸಿದಾಗ, ಒಟ್ಟು ಎಪ್ಪತ್ತೈದು ವಿಶಿಷ್ಟ ರಚನೆಗಳನ್ನು ಮ್ಯಾಟರ್‌ಜೆನ್ ತಿಳಿಸಿತು. ಇವುಗಳನ್ನು ಪರಿಶೀಲಿಸಿದ ವಿಜ್ಞಾನಿಗಳು, ನಾಲ್ಕು ರಚನೆಗಳನ್ನು ಹೆಕ್ಕಿ ಅವನ್ನು ಪ್ರಯೋಗಶಾಲೆಯಲ್ಲಿ ತಯಾರಿಸಿದ್ದಾರೆ. ಆ ವಸ್ತುಗಳ ಕಾಂತಬಲವನ್ನು ಅಳೆದಿದ್ದಾರೆ. ಅವು ತಾವು ನಿಗದಿ ಪಡಿಸಿದ ಕಾಂತಬಲಕ್ಕೆ ಹೋಲುತ್ತಿದ್ದುದನ್ನು ಕಂಡಿದ್ದಾರೆ.

ಹೀಗೆ ನಿಯೋಡೈಮಿಯಂ, ಕೋಬಾಲ್ಟ್ ಇಲ್ಲದೆಯೇ ಕೇವಲ ಟ್ಯಾಂಟಾಲಂ, ಕ್ರೋಮಿಯಂ ಮತ್ತು ಆಕ್ಸಿಜನ್ ಇರುವ ಅತಿ ಬಲಶಾಲಿ ಅಯಸ್ಕಾಂತಗಳನ್ನು ತಯಾರಿಸಬಹುದು ಎಂದು ಕಂಡುಕೊಂಡಿದ್ದಾರೆ. ಇದೇ ಶೋಧವನ್ನು ಸಾಂಪ್ರದಾಯಿಕ ರೀತಿಯಲ್ಲಿ ಮಾಡಬೇಕಿದ್ದರೆ ಕನಿಷ್ಠವೆಂದರೆ ಸಾವಿರವಾದರೂ ಮಾದರಿಗಳನ್ನು ತಯಾರಿಸಿ, ಪರೀಕ್ಷಿಸಬೇಕಾಗುತ್ತಿತ್ತು. ಅಷ್ಟು ಶ್ರಮ ಹಾಗೂ ಸಮಯವನ್ನು ಮ್ಯಾಟರ್‌ಜೆನ್ ಉಳಿಸಿದೆ.

ಮ್ಯಾಟರ್‌ಜೆನ್ ಬಳಸಿ ವಿನೂತನವಾದ, ವಿಶಿಷ್ಟ ಗುಣಗಳುಳ್ಳ ವಸ್ತುಗಳನ್ನು ಸೃಷ್ಟಿಸುವುದು ಸಾಧ್ಯ ಎನ್ನುತ್ತಾರೆ, ಮೈಕ್ರೊಸಾಫ್ಟ್ ಮುಖ್ಯಸ್ಥ ಸತ್ಯಾ ನಾದೆಲ್ಲ. ಇದು ರಾಸಾಯನಿಕ ಕ್ರಿಯೆಗಳನ್ನು ತ್ವರಿತಗೊಳಿಸುವ ಹೊಸ ಬಗೆಯ ಕೆಟಲಿಸ್ಟುಗಳನ್ನು ರೂಪಿಸಲು ನೆರವಾಗಬಹುದು. ಮಾಲಿನ್ಯ ನಿಯಂತ್ರಣ, ಔಷಧಗಳ ತಯಾರಿಕೆ, ಹಲವು ಸಾವಯವ ರಾಸಾಯನಿಕ ವಸ್ತುಗಳನ್ನು ತಯಾರಿಸುವ ಅಗ್ಗದ ವಿಧಾನಗಳಲ್ಲಿ ಬಳಸುವ ಕೆಟಲಿಸ್ಟುಗಳಿಗಾಗಿ ಹುಡುಕಾಟ ನಡೆದಿದೆ. ಹಾಗೆಯೇ ಸೂಪರ್‌ಕಂಡಕ್ಟರುಗಳು, ಅಂತರಿಕ್ಷದಲ್ಲಿ ಅತಿಯಾದ ಉಷ್ಣತೆಯನ್ನು ತಾಳಿಕೊಳ್ಳುವ ಹೆಂಚುಗಳು, ಕಾರ್ಬನ್ ಡಯಾಕ್ಸೈಡನ್ನು ಹೀರುವ ವಸ್ತುಗಳು ಹಾಗೂ ರಾಸಾಯನಿಕ ಗೊಬ್ಬರಗಳಿಗೆ ಪರ್ಯಾಯವಾಗಿ ನೇರವಾಗಿ ಗಾಳಿಯಲ್ಲಿರುವ ನೈಟ್ರೊಜನನ್ನು ಹೀರುವ ವಸ್ತುಗಳನ್ನು ತಯಾರಿಸಲು ಇದು ನೆರವಾಗಬಲ್ಲುದು ಎಂಬುದು ಆಶಯ. ❖

ಸ್ವಾಸ್ಥ್ಯಕ್ಕೆ ಸೌರಶಕ್ತಿ

ಕರಿಸ್ವಾಮಿ ಕೆ.

ಒಳಪ್ರದೇಶಗಳ ಅಂಚಿನ ಜನರಿಗೆ ಆರೋಗ್ಯ ಸೌಲಭ್ಯಗಳನ್ನು ಸೂಕ್ತ ಸಮಯಕ್ಕೆ ತಲುಪಿಸುವ ಸವಾಲು ಹೆಚ್ಚಾಗುತ್ತಲೇ ಇವೆ. ಒಂದು ಕಾಲದಲ್ಲಿ ನಗರದ ಸುಸಜ್ಜಿತ ಸಾರ್ವಜನಿಕ ಆರೋಗ್ಯ ಕೇಂದ್ರಗಳು ಮತ್ತು ಖಾಸಗಿ ಆಸ್ಪತ್ರೆಗಳಿಗೆ ಸೀಮಿತವಾಗಿದ್ದ ಅತ್ಯಾಧುನಿಕ ಚಿಕಿತ್ಸಾ ಉಪಕರಣಗಳು ಈಗ ಒಳಪ್ರದೇಶದ ಕೆಲವು ಆರೋಗ್ಯ ಕೇಂದ್ರಗಳಲ್ಲೂ ಲಭ್ಯವಿವೆ. ಆದರೆ, ಈ ಉಪಕರಣಗಳು ಕೆಲಸ ಮಾಡಬೇಕಾದರೆ ಅಗತ್ಯವಾದ ನಿರಂತರ ವಿದ್ಯುತ್ ಎಲ್ಲ ಕಡೆಯಲ್ಲೂ ಲಭ್ಯವಿಲ್ಲ. ಹಾಗಾಗಿ ಅನೇಕ ಉಪಕರಣಗಳು ವೈದ್ಯಕೀಯ ತುರ್ತಿನಲ್ಲಿ ಪ್ರಯೋಜನಕ್ಕೆ ಬರುವುದಿಲ್ಲ.

ಆರೋಗ್ಯ ಕೇಂದ್ರಗಳಲ್ಲಿ, ತುರ್ತು ಚಿಕಿತ್ಸೆಗಳಿಗೆ ಬೇಕಾದ ಬೆಳಕಿಗಾಗಿ ಮತ್ತು ಉಪಕರಣಗಳನ್ನು ಬಳಸಲು ಡೀಸೆಲ್‌ನಂತಹ ಮಾಲಿನ್ಯಕಾರಕ ಇಂಧನಗಳನ್ನು ಉಪಯೋಗಿಸಲಾಗುತ್ತದೆ. ಇದು ರೋಗಿಗಳಿಗಷ್ಟೇ ಅಲ್ಲದೆ ಸಿಬ್ಬಂದಿಗೂ ಹಾಗೂ ಪರಿಸರಕ್ಕೂ ಹಾನಿಯುಂಟುಮಾಡುತ್ತದೆ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವಾಗಿ ಶುದ್ಧ ಇಂಧನವಾದ ಸೌರಶಕ್ತಿಯಿಂದ ನಡೆಯುವ ತಂತ್ರಜ್ಞಾನವು ನೂರಾರು ಬಗೆಯ ಯಂತ್ರಗಳಲ್ಲಿ ಬಳಸಲು ಅನುವಾಗುವಂತೆ ಅಭಿವೃದ್ಧಿಯಾಗಿದೆ.

ಸೌರಶಕ್ತಿಚಾಲಿತ ಸುಸ್ಥಿರ ಆರೋಗ್ಯಸೇವೆಗಳು: ಆಸ್ಪತ್ರೆಗಳಲ್ಲಿ ಬೆಳಕಿಗಾಗಿ ಮಾತ್ರವಲ್ಲದೆ, ಲಸಿಕೆಗಳನ್ನು ಸಂರಕ್ಷಿಸಿಡಲು ತಂಪುಕಾರಕ ವ್ಯವಸ್ಥೆ, ಬಿಸಿನೀರು, ಮಕ್ಕಳಿಗೆ ಬೇಕಾದ ಇನ್‌ಕ್ಯೂಬೇಟರ್ ಮುಂತಾದ ಉಪಕರಣಗಳು ಪೂರ್ಣ ಸಾಮರ್ಥ್ಯದೊಂದಿಗೆ ಕೆಲಸ ಮಾಡಲು ನಿರಂತರ ವಿದ್ಯುತ್ ಲಭ್ಯವಿರಬೇಕಾಗುತ್ತದೆ. ಬಾಣಂತಿ ಮತ್ತು ನವಜಾತ ಶಿಶುಗಳ ಮರಣವನ್ನು ತಡೆಯಬಲ್ಲ, ಶಸ್ತ್ರಚಿಕಿತ್ಸೆಗಳಂತಹ ಕ್ರಮಗಳಿಗೆ ಸೌರಶಕ್ತಿಚಾಲಿತ ವ್ಯವಸ್ಥೆ ವರದಾನವಾಗಿದೆ.

ಅಪಘಾತದ ನಂತರದ ಶಸ್ತ್ರಚಿಕಿತ್ಸೆಗಳು, ನಾಯಿ ಮತ್ತು ಹಾವುಕಡಿತದಿಂದ ಉದ್ಭವವಾಗುವ ಸನ್ನಿವೇಶಗಳನ್ನು ಎದುರಿಸಲು ಸೂಕ್ತ ಲಸಿಕೆ ಪ್ರತಿ ಕ್ಷಣದಲ್ಲೂ ಲಭ್ಯವಿರಬೇಕಾಗುತ್ತದೆ. ಕೆಲವು ಲಸಿಕೆಗಳನ್ನೂ ಸಾಮಾನ್ಯ ಉಷ್ಣಾಂಶದಲ್ಲಿ ಶೇಖರಿಸಿಡಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಆಸ್ಪತ್ರೆಗಳಲ್ಲಿ ತಂಪುಕಾರಕ ವ್ಯವಸ್ಥೆ ಅಗತ್ಯ. ಎಲ್ಲ ರೀತಿಯ ಲಸಿಕೆಗಳನ್ನೂ ಸಂರಕ್ಷಿಸಿಡಲು ತಂಪುಕಾರಕ ವ್ಯವಸ್ಥೆಗೆ ನಿರಂತರವಾಗಿ ವಿದ್ಯುತ್ ಪೂರೈಸುವ ಸೌರತಂತ್ರಜ್ಞಾನದಿಂದ ಅನೇಕ ಜೀವಗಳು ಉಳಿಯುತ್ತಿವೆ.

ಸುಸ್ಥಿರ ಅಭಿವೃದ್ಧಿ: ಆರೋಗ್ಯವು ಜಾಗತಿಕ ಸುಸ್ಥಿರ ಅಭಿವೃದ್ಧಿಯ 17 ಗುರಿಗಳ ಪೈಕಿ 3ನೇ ಗುರಿಯಾಗಿದ್ದು, ಎಲ್ಲರಿಗೂ ಗುಣಮಟ್ಟದ ಆರೋಗ್ಯ ವ್ಯವಸ್ಥೆಯನ್ನು ಖಾತರಿಪಡಿಸುವ ಉದ್ದೇಶ ಹೊಂದಿದೆ. ಈ ಗುರಿಗಳನ್ನು ಸಾಕಾರಗೊಳಿಸಲು ವಿಶ್ವಸಂಸ್ಥೆಯೊಟ್ಟಿಗೆ ಸರ್ಕಾರಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ಸಂಘ-ಸಂಸ್ಥೆಗಳು ಕೆಲಸ ಮಾಡುತ್ತಿವೆ. ಅಪೌಷ್ಟಿಕತೆ ಮತ್ತು ಇತರ ಕಾರಣಗಳಿಂದ ಬಾಣಂತಿ ಮತ್ತು ಶಿಶುಗಳ ಮರಣ ಪ್ರಮಾಣ ಅಧಿಕವಾಗಿರುವ ಜಿಲ್ಲೆಗಳಲ್ಲಿ ವಿದ್ಯುತ್ ಕೊರತೆಯಿಂದ ಆಗುತ್ತಿರುವ ತೊಂದರೆಗಳನ್ನು ನಿವಾರಿಸುವ ಕೆಲಸಗಳು ನಡೆಯುತ್ತಿವೆ. ಕಳೆದ ಕೆಲವು ವರ್ಷಗಳಿಂದ ಪ್ರತಿ ಆರೋಗ್ಯ ಕೇಂದ್ರಗಳನ್ನೂ ಸೌರತಂತ್ರಜ್ಞಾನದೊಂದಿಗೆ ಬೆಸೆಯಲಾಗುತ್ತಿದೆ. ರಾಜ್ಯದಾದ್ಯಂತ ಹಲವು ಜಿಲ್ಲೆಗಳ ಆರೋಗ್ಯಕೇಂದ್ರಗಳನ್ನು ಸೌರತಂತ್ರಜ್ಞಾನದ ವ್ಯಾಪ್ತಿಗೆ ತರಲಾಗಿದೆ.

ಸೌರಸ್ವಾಸ್ಥ್ಯ ಯೋಜನೆ: ಸೌರಶಕ್ತಿಚಾಲಿತ ತಂತ್ರಜ್ಞಾನದ ಅಗತ್ಯವನ್ನು ಮನಗಂಡಿರುವ ಸರ್ಕಾರಗಳು, ಇದನ್ನು ಆರೋಗ್ಯ ಕ್ಷೇತ್ರದಲ್ಲಿ ವ್ಯಾಪಕವಾಗಿ ಅಳವಡಿಸುತ್ತಿವೆ. ಇದರ ಪರಿಣಾಮವಾಗಿ ಕರ್ನಾಟಕ ಸರ್ಕಾರವು ಇತ್ತೀಚೆಗಷ್ಟೇ ಸೌರಸ್ವಾಸ್ಥ್ಯ ಯೋಜನೆಯನ್ನು ಉದ್ಘಾಟಿಸಿದೆ. ಈ ಯೋಜನೆ ಅಡಿಯಲ್ಲಿ 2026ರ ಹೊತ್ತಿಗೆ, ರಾಜ್ಯದಾದ್ಯಂತ ವಿವಿಧ ರೀತಿಯ ಐದು ಸಾವಿರ ಆರೋಗ್ಯ ಕೇಂದ್ರಗಳಿಗೆ ಸೌರಶಕ್ತಿ ತಂತ್ರಜ್ಞಾನದ ಸಂಪರ್ಕ ಸಿಗಲಿದೆ. ದೇಶದಲ್ಲಿಯೇ ಮೊದಲ ಬಾರಿಗೆ ಈ ಸೌರಶಕ್ತಿಚಾಲಿತ ವ್ಯವಸ್ಥೆಗಳನ್ನು ದೂರದಿಂದಲೇ ನಿಯಂತ್ರಿಸುವ (ರಿಮೋಟ್ ಮಾನಿಟರಿಂಗ್ ಸಿಸ್ಟಂ (ಆರ್.ಎಂ.ಎಸ್.) ನಿರಂತರ ನಿಗಾ ವ್ಯವಸ್ಥೆಯ ಮೂಲಕ ನಿರ್ವಹಿಸಲು ಈ-ಮಿತ್ರ ಮೊಬೈಲ್ ಆ್ಯಪ್‌ಗಳನ್ನು ಬಳಸಲಾಗುವುದು.

ವಿಕೇಂದ್ರೀಕೃತ ಮಾದರಿಯಲ್ಲಿ ಸಿಗುವ ಸೌರಶಕ್ತಿಚಾಲಿತ ತಂತ್ರಜ್ಞಾನವನ್ನು ಕೇವಲ ಆರೋಗ್ಯ ಕ್ಷೇತ್ರವಲ್ಲದೆ ಹಲವು ಕ್ಷೇತ್ರಗಳ ವಿದ್ಯುತ್ ಅಗತ್ಯಗಳಿಗೆ ಪರ್ಯಾಯ ಇಂಧನವಾಗಿ ಬಳಸಬಹುದು. ❖



ತಪ್ಪು ಮಾಹಿತಿ

ಜನವರಿ 29ರ 'ತಂತ್ರಜ್ಞಾನ' ಪುರವಣಿಯ 'ಗ್ರಹಗಳ ಮೆರವಣಿಗೆಯ ನೋಡಾ' ಲೇಖನದಲ್ಲಿ ತಪ್ಪುಗಳು ಸೇರಿಕೊಂಡಿವೆ. ಮೊದಲನೆಯದಾಗಿ, ಗ್ರಹಗಳು ಜ್ಯೋತಿರ್ವರ್ಷಗಳಷ್ಟು ದೂರದಲ್ಲಿ ಇಲ್ಲ. ಜ್ಯೋತಿರ್ವರ್ಷ ಎಂದರೆ ಬೆಳಕು ಒಂದು ವರ್ಷದಲ್ಲಿ ಪ್ರಯಾಣ ಮಾಡುವಷ್ಟು ದೂರ. ಸೂರ್ಯನಿಂದ ಹೊರಟ ಬೆಳಕು ಭೂಮಿಯನ್ನು 8 ನಿಮಿಷಗಳಲ್ಲಿ, ಗುರುಗ್ರಹವನ್ನು 43 ನಿಮಿಷಗಳಲ್ಲಿ ಮತ್ತು ನೆಪ್ಚೂನನ್ನು 4 ಗಂಟೆಗಳಲ್ಲಿ ತಲಪುತ್ತದೆ. ನಕ್ಷತ್ರಗಳು ಮಾತ್ರ ಜ್ಯೋತಿರ್ವರ್ಷಗಳಷ್ಟು ದೂರವಿರುತ್ತವೆ. ಇದೇ ನಕ್ಷತ್ರಗಳಿಗೂ ಗ್ರಹಗಳಿಗೂ ಇರುವ ಮುಖ್ಯ ವ್ಯತ್ಯಾಸ. ಎರಡನೆಯದಾಗಿ, 'ಈ ನಾಲ್ಕು ಗ್ರಹಗಳಂತೂ ಬರಿಗಣ್ಣಿಗೆ ಗೋಚರಿಸುವಷ್ಟು' ಎಂದಿದೆ. ಮೂರು ಗ್ರಹಗಳು – ಗುರು, ಶನಿ ಮತ್ತು ಮಂಗಳ - ಯಾವಾಗಲೂ, ಆದರೆ ವಿವಿಧ ಸಮಯಗಳಲ್ಲಿ, ಬರಿಗಣ್ಣಿಗೆ ಕಾಣಿಸುತ್ತವೆ; ಸೂರ್ಯನಿಗೆ ಹತ್ತಿರವಿರುವುದರಿಂದ ಶುಕ್ರ ಕೆಲವು ಬಾರಿ ಬೆಳಿಗ್ಗೆ ಮತ್ತು ಕೆಲವು ಬಾರಿ ಸಂಜೆ ಕಾಣಿಸಿಕೊಳುತ್ತದೆ.

ಪಾಲಹಳ್ಳಿ ವಿಶ್ವನಾಥ್ ಬೆಂಗಳೂರು

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–


27) ಸರಿದೂಗಿಸಿದ ರಾಸಾಯನಿಕ ಸಮೀಕರಣ ಎಂದರೇನು? ರಾಸಾಯನಿಕ ಸಮೀಕರಣಗಳನ್ನು ಏಕೆ ಸರಿದೂಗಿಸಬೇಕು?

ಉತ್ತರ:– ಪ್ರತಿ ಧಾತುವಿನ ಪರಮಾಣುಗಳ ಸಂಖ್ಯೆ ರಾಸಾಯನಿಕ ಕ್ರಿಯೆಯ ಮೊದಲು ಮತ್ತು ನಂತರ ಒಂದೇ ರೀತಿ ಇರಬೇಕು ಅಂದರೆ ಪ್ರತಿವರ್ತಕ ಮತ್ತು ಉತ್ಪನ್ನಗಳಲ್ಲಿ ಸಮನಾದ ಧಾತುಗಳ ಒಟ್ಟು ರಾಶಿ ಇರುವಿಕೆಯನ್ನು ಸರಿದೂಗಿಸಿದ ರಾಸಾಯನಿಕ ಸಮೀಕರಣ ಎನ್ನುವರು.

ರಾಶಿ ಸಂರಕ್ಷಣೆಯ ನಿಯಮದಂತೆ ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ ಆದ್ದರಿಂದ ಸಮೀಕರಣಗಳನ್ನು ಸರಿದೂಗಿಸಬೇಕು.


28) ಮಾನವನ ಕಣ್ಣಿನ ನೀಳ ಛೇದ ನೋಟದ ಚಿತ್ರ ಬರೆದು ಭಾಗಗಳನ್ನು ಗುರುತಿಸಿ.

ಉತ್ತರ:–



ಮಾನವನ ಕಣ್ಣಿನ ನೀಳ ಛೇದನೋಟ

29) ಕೊಟ್ಟಿರುವ ಚಿತ್ರಗಳನ್ನು ಗಮನಿಸಿ ಮತ್ತು ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿ:–



1) ಮೇಲಿನ ಚಿತ್ರಗಳಲ್ಲಿ ಯಾವ ಚಿತ್ರವು ಕಾಂತಕ್ಷೇತ್ರದ ದಿಕ್ಕನ್ನು ಸರಿಯಾಗಿ ತೋರಿಸುವುದು?

2) ಸರಿಯಾದ ಚಿತ್ರವನ್ನು ಆರಿಸಲು ಸಹಾಯ ಮಾಡಿದ ನಿಯಮವನ್ನು ಹೆಸರಿಸಿ ಮತ್ತು ನಿರೂಪಿಸಿ

ಉತ್ತರ:–(1) ಚಿತ್ರ(ಬಿ) ಕಾಂತಕ್ಷೇತ್ರದ ಸರಿಯಾದ ದಿಕ್ಕನ್ನು ತೋರಿಸುತ್ತದೆ

(2) ಸರಿಯಾದ ಚಿತ್ರವನ್ನು ಆರಿಸಲು ಸಹಾಯ ಮಾಡಿದ ನಿಯಮವು " ಬಲಗೈ ಹೆಬ್ಬೆರಳ ನಿಯಮ"

30) ಒಂದು ಆಟೋಮೊಬೈಲ್ ವಾಹನದಲ್ಲಿ ಹಿನ್ನೋಟವನ್ನು ಪಡೆಯಲು ಉಪಯೋಗಿಸಿದ ಪೀನ ದರ್ಪಣದ ವಕ್ರತಾ ತ್ರಿಜ್ಯವು 3.00 m ಇದೆ. ಒಂದು ವೇಳೆ ಬಸ್ಸು ದರ್ಪಣದಿಂದ 5.00 m ದೂರದಲ್ಲಿ ಇದ್ದರೆ ಪ್ರತಿಬಿಂಬದ ಸ್ಥಾನ, ಸ್ವಭಾವ ಮತ್ತು ಗಾತ್ರವನ್ನು ಕಂಡುಹಿಡಿಯಿರಿ

ಪರಿಹಾರ : ವಕ್ರತಾ ತ್ರಿಜ್ಯ $R = +3.00$ m

ವಸ್ತು ದೂರ $u = -5.00$ m

ಪ್ರತಿಬಿಂಬ ದೂರ $v = ?$

ಪ್ರತಿಬಿಂಬದ ಎತ್ತರ $h' = ?$

ಸಂಗಮ ದೂರ

$$f = \frac{R}{2} = \frac{3.00}{2} = +1.50m$$

$\frac{1}{v} + \frac{1}{u} = \frac{1}{f}$ ಆಗಿರುವುದರಿಂದ

ಅಥವಾ,

$$\frac{1}{v} = \frac{1}{f} - \frac{1}{u} = \frac{1}{1.50} - \frac{1}{(-5.00)} = \frac{1}{1.50} + \frac{1}{5.00}$$

$$= \frac{5.00+1.50}{7.50}$$

$$v = \frac{+7.50}{6.50} + 1.15m$$

ಪ್ರತಿಬಿಂಬವು ದರ್ಪಣದ ಹಿಂದೆ 1.15 m ದೂರದಲ್ಲಿದೆ.

ವರ್ಧನೆ,

$$m = \frac{h'}{h} = \frac{v}{u} = -\frac{1.15m}{-5.00m} = +0.23$$

ಪ್ರತಿಬಿಂಬವು ಮಿಥ್ಯ, ನೇರ ಮತ್ತು ಗಾತ್ರದಲ್ಲಿ 0.23 ಅಂಶದಷ್ಟು ಚಿಕ್ಕದಾಗಿದೆ.

31) ಈ ಕೆಳಗಿನ ಯಾವುದೆಲ್ಲವೂ ಭೌತಿಕ ಕ್ರಿಯೆ ಅಥವಾ ರಾಸಾಯನಿಕ ಕ್ರಿಯೆಗಳಾಗಿವೆ ಎಂಬುದನ್ನು ತಿಳಿಸಿ

1) ಪೆಟ್ರೋಲಿಯಂ ಅನಿಲ ದಹನ
2) ಪೆಟ್ರೋಲ್ ಬಾಷ್ಪೀಕರಿಸುವಿಕೆ
3) ಕಬ್ಬಿಣವನ್ನು ಕೆಂಪಗೆ ತ್ಯಾಯಿಸುವುದು
4) ಹಾಲು ಮೊಸರಾಗುವಿಕೆ
5) ಅಮೋನಿಯಂ ಕ್ಲೋರೈಡ್ ನ ಸಂಸ್ಕರಣೆ
6) ನೀರು ಮಂಜುಗಡ್ಡೆಯಾಗುವುದು

ಉತ್ತರ: ಭೌತಿಕ ಕ್ರಿಯೆ: (1) ಪೆಟ್ರೋಲ್ ಬಾಷ್ಪೀಕರಿಸುವಿಕೆ
(2) ಕಬ್ಬಿಣ ಕೆಂಪಗೆ ಕಾಯಿಸುವುದು
(3) ನೀರು ಮಂಜುಗಡ್ಡೆಯಾಗುವುದು

ರಾಸಾಯನಿಕ ಕ್ರಿಯೆ: (1) ಪೆಟ್ರೋಲಿಯಂ ಅನಿಲದ ದಹನ
(2) ಹಾಲು ಮೊಸರಾಗುವಿಕೆ
(3) ಅಮೊನಿಯಂಅ ಕ್ಲೋರೈಡ್‌ನ ಸಂಸ್ಕರಣೆ

32) ಮಾನವನಲ್ಲಿ ಆಲೋಚನೆ ಮಾಡಲು ಸಹಾಯ ಮಾಡುತ್ತದೆ. ವಿವಿಧ ಭಾಗಳಿಂದ ಸಂವೇದನಾ ಆವೇಗಗಳನ್ನು ಸ್ವೀಕರಿಸುತ್ತದೆ. ಈ ಪ್ರದೇಶ ಶ್ರವಣ, ವಾಸನೆ, ದೃಷ್ಟಿ ಮತ್ತಿತ್ತರ ಕಾರ್ಯ ನಡೆಸಲು ಅನುಕೂಲವಾಗಿದೆ.
ಇದು ಯಾವುದಕ್ಕೆ ಸಂಬಂಧಿಸಿದ ವಿವರಣೆಯಾಗಿದೆ?

ಉತ್ತರ:– ಮುಮ್ಮಿದುಳು

33) ಸಣ್ಣ ಕರಳಿನ ಬತ್ತಿಯಲ್ಲಿರುವ ಗ್ರಂಥಿಗಳು ರಸವನ್ನು ಸ್ರವಿಸುತಿದ್ದು ಅವು ಸ್ರವಿಸುವ ಕಿಣ್ವಗಳು ಈ ಕೆಳಗಿನವುಗಳನ್ನು ಏನನ್ನಾಗಿ ಪರಿವರ್ತಿಸುತ್ತವೆ?

ಅ) ಪ್ರೋಟೀನ್ (ಬ) ಸಂಕೀರ್ಣ ಕಾರ್ಬೋಹೈಡ್ರೇಟ್ (ಕ) ಕೊಬ್ಬು

ಉತ್ತರ:– ಸಣ್ಣ ಕರಳಿನ ಬತ್ತಿಯಲ್ಲಿರುವ ಗ್ರಂಥಿಗಳು ರಸವನ್ನು ಸ್ರವಿಸುತಿದ್ದು ಅವು ಸ್ರವಿಸುವ ಕಿಣ್ವಗಳು

ಅ) ಪ್ರೋಟೀನ್‌ಗಳನ್ನು ಅಮಿನೋ ಆಮ್ಲಗಳಾಗಿ ಪರಿವರ್ತಿಸುತ್ತದೆ

ಬಿ) ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳನ್ನು ಗ್ಲುಕೋಸ್‌ಗಳಾಗಿ ಪರಿವರ್ತಿಸುತ್ತವೆ

ಕ) ಕೊಬ್ಬನ್ನು ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್ ಆಗಿ ಪರಿವರ್ತಿಸುತ್ತವೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC CHEMISTRY

REVISION : MODEL QUESTIONS

29. Explain the bonding in coordination compounds in terms of Werner's postulates.


Ans: (a) A metal shows two kinds of valencies viz primary valency and secondary valency. Negative ions satisfy primary valencies, and secondary valencies are filled by both neutral ions and negative ions.

(b) A metal ion has a fixed amount of secondary valencies about the central atom. These valencies also orient themselves in a particular direction in the space provided to the definite geometry of the coordination compound.

(c) Secondary valencies cannot be ionised, while primary valencies can usually be ionised.


30. a) i) Explain the preparation of phenol from cumene.

ii) Complete the reaction




b) Explain Williamson's ether synthesis.

Ans:- a) i) Cumene is oxidized in air to cumene hydroperoxide. Cumene hydroperoxide is treated with dilute acid to get phenol and acetone



ii)




b) Alkyl halide reacts with sodium alkoxide to form ether

R – X	+	NaOR'	→	R – O – R' + NaX
alkyl halide		Sodium alkoxide		Ether

31. a] i] How do you convert benzoic acid to benzamide? Write the reaction.


ii] Complete the reaction:




Benzene

b] What happens when carbonyl compounds are treated with hydrazine? Write the reaction.

Ans:- a] i] When benzoic acid treated with ammonia, ammonium benzoate is obtained which on heating to high temperature gives benzamide.



ii]



b] When carbonyl compounds are treated with hydrazine, respective hydrazones are obtained.

$$>C{=}O + H_2N{-}NH_2 \xrightarrow{H^+} >C{=}N{-}NH_2 + H_2O$$

32. What is meant by the chelate effect? Give an example.

Ans: When a polydentate or a bidentate ligand fastens itself to a metal ion in such a way that it assumes the shape of a ring, the metal-ligand bond becomes more stable. These rings are called chelate rings.


From here, we can infer that complexes with chelate rings are more stable than complexes without the rings. This phenomenon is termed the chelate effect

$Ni^{2+}(aq) + 6NH_3 \leftrightarrow [Ni(NH_3)_6]^{2+}(aq)$

$\log\beta = 7.99$

$Ni^{2+}(aq) + 3en(aq) \leftrightarrow [Ni(en)_3]^{2+}(aq)$

$\log\beta = 18.1$ (more stable)



33. a) i) Example Hoffmann bromamide degradation for the preparation of aniline.

ii] Give the IUPAC name of $CH_3 - NH - CH_2 - CH_3$

b) What is Hinsberg's reagent? Between CH_3NH_2 and C_6H_5NH which is more basic?

Ans:(a)i) When amides are heated with bromine and NaOH/KOH(alcoholic/aqueous) Hoffmann's bromamide degradation takes place leading to the formation of amines containing one carbon less than the respective amide.

$$\underset{\text{Amide}}{R{-}CO{-}NH_2} + Br_2 + 4\,NaOH \xrightarrow{\Delta} \underset{\text{Amine}}{R{-}NH_2} + Na_2CO_3 + 2\,NaBr + 2\,H_2O$$

(Contd)

ವಿಧಾನಸೌಧದಲ್ಲಿ ₹25.76 ಲಕ್ಷ ಪತ್ತೆ ಪ್ರಕರಣ • ಲೋಕಾಯುಕ್ತ ಪೊಲೀಸರಿಗೆ ನ್ಯಾಯಾಲಯ ಆದೇಶ

ಪುಟ್ಟರಂಗಶೆಟ್ಟಿ ಆಪ್ತನ ಪ್ರಕರಣದ ಮರುತನಿಖೆ

ಪ್ರಜಾವಾಣಿ ವಾರ್ತೆ



ಸಿ.ಪುಟ್ಟರಂಗಶೆಟ್ಟಿ

ಬೆಂಗಳೂರು: ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಆಪ್ತ ಸಹಾಯಕನ ಬಳಿ ₹25.75 ಲಕ್ಷ ಲಂಚದ ಹಣ ಪತ್ತೆಯಾಗಿದ್ದ ಪ್ರಕರಣದಲ್ಲಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಮತ್ತು ಲೋಕಾಯುಕ್ತ ಪೊಲೀಸರು ಸರಿಯಾಗಿ ತನಿಖೆ ನಡೆಸಿಲ್ಲ ಎಂದು ಹೇಳಿರುವ ಲೋಕಾಯುಕ್ತ ವಿಶೇಷ ನ್ಯಾಯಾಲಯ, ಮತ್ತೆ ತನಿಖೆ ನಡೆಸುವಂತೆ ಆದೇಶಿಸಿದೆ.

ಪುಟ್ಟರಂಗಶೆಟ್ಟಿ ಅವರು 2019ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾಗಿದ್ದರು. ಅದೇ, 2019ರ ಜನವರಿ 4ರಂದು ಪುಟ್ಟರಂಗಶೆಟ್ಟಿ ಅವರ ಆಪ್ತ ಸಹಾಯಕ ಮೋಹನ್ ಕುಮಾರ್ ವಿಧಾನಸೌಧದಲ್ಲೇ, ₹25.76 ಲಕ್ಷ ನಗದಿನೊಂದಿಗೆ ವಿಧಾನಸೌಧ ಪೊಲೀಸರಿಗೆ ಸಿಕ್ಕಿಬಿದ್ದಿದ್ದರು.

ತಮ್ಮ ವಿರುದ್ಧದ ಪ್ರಕರಣ ಕೈಬಿಡುವಂತೆ ಮೋಹನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶ ರಾಧಾಕೃಷ್ಣ ಅವರು, ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಲಂಚ ನೀಡಿದ ಗುತ್ತಿಗೆದಾರರನ್ನೂ ಒಳಗೊಂಡು ತನಿಖೆ ನಡೆಸಿ ಎಂದು ಆದೇಶಿಸಿದ್ದಾರೆ.

'ಈ ಪ್ರಕರಣದಲ್ಲಿ ಮೋಹನ್ ಕುಮಾರ್ ಅವರಿಗೆ ಲಂಚದ ಹಣ ನೀಡಿದ್ದ ಅನಂತಕೃಷ್ಣ, ಶ್ರೀನಿಧಿ, ನಂದನ, ಮಂಜುನಾಥ, ಕೃಷ್ಣಮೂರ್ತಿ ಅವರನ್ನು ಎಫ್‌ಐಆರ್‌ನಲ್ಲಿ ಆರೋಪಿಗಳನ್ನಾಗಿ ಉಲ್ಲೇಖಿಸಲಾಗಿತ್ತು. ಆದರೆ ಅವರ ವಿರುದ್ಧ ಸಾಕ್ಷ್ಯ ಇಲ್ಲ ಎಂದು ಆರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ. ಇದು ಎಷ್ಟು ಸರಿ' ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

'ತಾನು ಹಣ ಪಡೆದುಕೊಂಡಿದ್ದಕ್ಕೆ ಮತ್ತು ಹಣವನ್ನು ಪಡೆದುಕೊಂಡಿದ್ದು ಏತಕ್ಕೆ ಎಂಬುದಕ್ಕೆ ಸಾಕ್ಷ್ಯಗಳಿಲ್ಲ. ಇವೆಲ್ಲವನ್ನೂ ಪರಸ್ಪರ ಸಮೀಕರಿಸುವ ಸಾಕ್ಷ್ಯಗಳಿಲ್ಲ. ಹೀಗಾಗಿ ಆರೋಪದಿಂದ ನನ್ನನ್ನು ಕೈಬಿಡಬೇಕು ಎಂದು ಆರೋಪಿ ಕೋರಿದ್ದಾರೆ. ಈ ಪ್ರತಿಯೊಂದಕ್ಕೂ ಪರಸ್ಪರ ಸಂಬಂಧವಿದೆ ಎಂಬುದನ್ನು ಲಭ್ಯವಿರುವ ಸಾಕ್ಷ್ಯಗಳು ಮತ್ತು ಆರೋಪಿಗಳ ಹೇಳಿಕೆಗಳು ತೋರಿಸುತ್ತವೆ. ತನಿಖೆಯ ಅಪೂರ್ಣ ಎಂಬುದನ್ನು ಸೂಚಿಸುತ್ತದೆ' ಎಂದಿದೆ.

'ಇಲ್ಲಿ ಲಂಚ ನೀಡುವ ಮೂಲಕ ಗುತ್ತಿಗೆದಾರರೂ ಅಪರಾಧದಲ್ಲಿ ಭಾಗಿಯಾಗಿದ್ದಾರೆ ಎಂಬುದರಲ್ಲಿ ಅನುಮಾನವಿಲ್ಲ. ಹೀಗಿರುವಾಗ ತನಿಖೆಯ ಯಾವ ಹಂತದಲ್ಲೂ ಅವರನ್ನು ವಿಚಾರಣೆಗೆ ಒಳಪಡಿಸಿಲ್ಲ. ಈ ಕಾರಣದಿಂದಲೂ ತನಿಖೆ ಅಪೂರ್ಣ. ಮತ್ತೆ ತನಿಖೆ ನಡೆಸಿ, ಮೂರು ತಿಂಗಳಲ್ಲಿ ವರದಿ ಸಲ್ಲಿಸಿ' ಎಂದು ಆದೇಶಿಸಿದೆ.

ಮುಖ್ಯಾಂಶಗಳು

- ಐವರನ್ನು ಆರೋಪ ಪಟ್ಟಿಯಿಂದ ಕೈಬಿಟ್ಟದ್ದಕ್ಕೆ ಆಕ್ಷೇಪ
- ಲಂಚ ನೀಡಿದವರನ್ನೂ ಒಳಗೊಂಡು ತನಿಖೆಗೆ ಆದೇಶ
- ಮೂರು ತಿಂಗಳಲ್ಲಿ ವರದಿ ಸಲ್ಲಿಸಲು ಸೂಚನೆ

'ಸಚಿವರಿಗೆ ಸಂಬಂಧವಿಲ್ಲ ಎನ್ನುವುದು ಅಸಾಧ್ಯ'

ಸಚಿವರ ಕಚೇರಿಯಲ್ಲಿ, ಅವರ ಹೆಸರಿನಲ್ಲಿ, ಅವರ ಅಧಿಕೃತ ಆಪ್ತ ಸಹಾಯಕ ಲಂಚದ ಹಣ ಪಡೆದುಕೊಂಡಿದ್ದಾರೆ ಎಂಬುದು ತನಿಖೆಯಲ್ಲಿ ಗೊತ್ತಾಗಿದೆ. ಆರೋಪಿಗಳ ಹೇಳಿಕೆಗಳೂ ಇದನ್ನೇ ಹೇಳುತ್ತವೆ. ಸಚಿವರಿಗೆ ಅರಿವಿಲ್ಲದ ಹಾಗೆ ಇವೆಲ್ಲಾ ನಡೆಯುವುದು ಅಸಾಧ್ಯ ಎಂದು ನ್ಯಾಯಾಲಯದ ಆದೇಶ ಪ್ರತಿಪಾದಿಸಿದೆ.

'ಪ್ರತಿ ಕಾಮಗಾರಿಗೆ, ಕಾರ್ಯಕ್ರಮದಲ್ಲಿ ಸಚಿವರಿಗೆ ಶೇ 6ರಷ್ಟು ಕಮಿಷನ್ ನೀಡಬೇಕು ಎಂದು ಆರೋಪಿ ಮೋಹನ್ ಇತರ ಆರೋಪಿಗಳಿಗೆ ತಿಳಿಸಿದ್ದಾನೆ. ಸಚಿವರ ಆಪ್ತ ಸಹಾಯಕರಾಗಿ ಗುತ್ತಿಗೆ ಆಧಾರದಲ್ಲಿ ನೇಮಕವಾಗಿರುವ ಆರೋಪಿ, ಸ್ವತಃ ತಾನೆ ಲಂಚದ ಹಣ ಪಡೆದುಕೊಂಡಿದ್ದಾನೆ. ಹೀಗಿರುವಾಗ ಲಂಚ ಪಡೆದುಕೊಂಡಿದ್ದರಲ್ಲಿ ಸಚಿವರಿಗೂ ಆರೋಪಿಗೂ ಸಂಬಂಧವೇ ಇಲ್ಲ ಎಂದು ಹೇಳುವುದು ಅಸಾಧ್ಯ' ಎಂದೂ ಹೇಳಿದೆ.

ಮುಡಾ: ಆಯೋಗದ ಅವಧಿ ಮೇ 31ರವರೆಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) 2006ರಿಂದ 2024ರ ಜುಲೈ 15ರವರೆಗೂ ನಡೆದಿರುವ ಭೂಸ್ವಾಧೀನ, ಬಡಾವಣೆಗಳ ನಿರ್ಮಾಣ, ನಿವೇಶನ ಹಂಚಿಕೆ, ಪರಿಹಾರ ವಿತರಣೆ ಮತ್ತು ಬದಲಿ ನಿವೇಶನಗಳ ಹಂಚಿಕೆ ಕುರಿತ ಆರೋಪಗಳ ಕುರಿತು ವಿಚಾರಣೆ ನಡೆಸಲು ರಾಜ್ಯ ಸರ್ಕಾರ ನೇಮಿಸಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದ ಏಕ ಸದಸ್ಯ ಆಯೋಗದ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಲಾಗಿದೆ.

ಅವಧಿಯನ್ನು ವಿಸ್ತರಿಸುವಂತೆ ಆಯೋಗದ ಕಾರ್ಯದರ್ಶಿ ಜ. 6ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಎಚ್‌.ಡಿ. ಕುಮಾರಸ್ವಾಮಿ, ಬಿ.ಎಸ್‌. ಯಡಿಯೂರಪ್ಪ (ಎರಡು ಅವಧಿ), ಡಿ.ವಿ. ಸದಾನಂದ ಗೌಡ, ಜಗದೀಶ ಶೆಟ್ಟರ್, ಸಿದ್ದರಾಮಯ್ಯ (ಎರಡು ಅವಧಿ) ಮತ್ತು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಪ್ರಾಧಿಕಾರದಲ್ಲಿ ನಡೆದಿರಬಹುದಾದ ಅವ್ಯವಹಾರಗಳ ಕುರಿತು ವಿಚಾರಣೆ ನಡೆಸಿ, ವರದಿ ಸಲ್ಲಿಸುವ ಜವಾಬ್ದಾರಿಯನ್ನು ಆಯೋಗಕ್ಕೆ ವಹಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಮುಡಾದಿಂದ ಬದಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಬಂದ ಕಾರಣದಿಂದ ವಿಚಾರಣಾ ಆಯೋಗ ನೇಮಿಸಿ ಜುಲೈ 14ರಂದು ಆದೇಶ ಹೊರಡಿಸಲಾಗಿತ್ತು.

205 ಮಂದಿ ಗಡೀಪಾರು

ಒಂದನೇ ಪುಟದಿಂದ...

'ಇತಿಹಾಸದಲ್ಲೇ ಮೊದಲ ಬಾರಿಗೆ ನಾವು ವಿದೇಶಗಳ ಅಕ್ರಮ ವಲಸಿಗರನ್ನು ಪತ್ತೆ ಮಾಡುತ್ತಿದ್ದೇವೆ. ಮಿಲಿಟರಿ ವಿಮಾನಗಳಿಗೆ ಹತ್ತಿಸಿ, ಅವರು ಎಲ್ಲಿಂದ ಬಂದಿದ್ದಾರೋ, ಅದೇ ಸ್ಥಳಕ್ಕೆ ವಾಪಸ್ ಕಳುಹಿಸುತ್ತಿದ್ದೇವೆ' ಎಂದು ಟ್ರಂಪ್ ಕಳೆದ ವಾರ ಹೇಳಿದ್ದರು.

ಅಕ್ರಮ ವಲಸಿಗರನ್ನು ವಾಯುಪಡೆ ವಿಮಾನದ ಮೂಲಕ ಭಾರತಕ್ಕೆ ಗಡೀಪಾರು ಮಾಡಿರುವ ಬಗ್ಗೆ ಕೇಳಿದಾಗ, ಅಮೆರಿಕದ ರಾಯಭಾರ ಕಚೇರಿಯ ವಕ್ತಾರರು ಹೆಚ್ಚಿನ ಮಾಹಿತಿ ನೀಡಲಿಲ್ಲ.

'ಆ ಬಗ್ಗೆ ಯಾವುದೇ ವಿವರಗಳನ್ನು ಹಂಚಿಕೊಳ್ಳಲು ಸಾಧ್ಯವಿಲ್ಲ, ಆದರೆ ಅಮೆರಿಕವು ತನ್ನ ವಲಸೆ ಕಾನೂನುಗಳನ್ನು ಬಿಗಿಗೊಳಿಸುತ್ತಿದೆ ಮತ್ತು ಅಕ್ರಮ ವಲಸಿಗರನ್ನು ದೇಶದಿಂದ ಹೊರಹಾಕುತ್ತಿದೆ ಎಂದಷ್ಟೇ ಹೇಳಬಲ್ಲೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಅಮೆರಿಕ ಸೇರಿದಂತೆ ವಿದೇಶಗಳಲ್ಲಿ 'ಕಾನೂನುಬಾಹಿರವಾಗಿ' ನೆಲಸಿರುವ ಭಾರತೀಯ ಪ್ರಜೆಗಳನ್ನು ವಾಪಸ್ ಕರೆಸಿಕೊಳ್ಳಲು ಭಾರತ ಸಿದ್ಧವಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಈ ಹಿಂದೆ ಹೇಳಿದ್ದರು.

'ಅಕ್ರಮ ವಲಸೆಯನ್ನು ಭಾರತವು ವಿರೋಧಿಸುತ್ತದೆ ಮತ್ತು ಅಮೆರಿಕದಲ್ಲಿ ಭಾರತದ ಪ್ರಜೆಗಳು ಅಕ್ರಮವಾಗಿ ವಾಸಿಸುತ್ತಿರುವುದಕ್ಕೆ ಸಂಬಂಧಿಸಿದಂತೆ ಸೂಕ್ತ ದಾಖಲೆಗಳನ್ನು ನೀಡಿದರೆ ಅವರನ್ನು ಭಾರತಕ್ಕೆ ಕರೆಸಿಕೊಳ್ಳಲು ಸಿದ್ಧರಿದ್ದೇವೆ' ಎಂದಿದ್ದರು.

'ನಮ್ಮೊಂದಿಗೆ ದಾಖಲೆಗಳನ್ನು ಹಂಚಿಕೊಂಡರೆ, ಅವರ ಪೌರತ್ವವನ್ನು ಪರಿಶೀಲಿಸಬಹುದು. ನಿಜವಾಗಿಯೂ ಭಾರತೀಯರೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುತ್ತದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದರು.

'ಗೃಹಲಕ್ಷ್ಮಿ' ಹಣ ಸರ್ಕಾರಿ ಶಾಲೆಗೆ ದೇಣಿಗೆ

ಪ್ರಜಾವಾಣಿ ವಾರ್ತೆ



ಗಂಗಮ್ಮ ಮಹೇಶಪ್ಪ ಲಗುಬಿಗಿ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ತಾಲ್ಲೂಕಿನ ಐರಣಿ ಗ್ರಾಮದ ಆಶಾ ಕಾರ್ಯಕರ್ತೆ ಗಂಗಮ್ಮ ಮಹೇಶಪ್ಪ ಲಗುಬಿಗಿ ಅವರು ಗೃಹಲಕ್ಷ್ಮಿ ಯೋಜನೆಯಿಂದ ತಮಗೆ ಬಂದಿರುವ ₹ 24 ಸಾವಿರವನ್ನು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ದೇಣಿಗೆಯಾಗಿ ನೀಡಿದ್ದಾರೆ.

'ಶಾಲಾ ಮಕ್ಕಳಿಗೆ ಆರೋಗ್ಯ ಇಲಾಖೆಯ ಜಂತಿನ ಗುಳಿಗಿ ವಿತರಣೆ ಹಾಗೂ ಇನ್ನಿತರ ಆರೋಗ್ಯ ಇಲಾಖೆ ಕಾರ್ಯಕ್ರಮಗಳಲ್ಲಿ ನಿರಂತರ ಭಾಗವಹಿಸುತ್ತೇನೆ. ಆಗ ಅಲ್ಲಿನ ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ಸಮಸ್ಯೆ ಇರುವುದು ಕಂಡು ಬಂತು. ದೂರದಿಂದ ಶುದ್ಧ ನೀರಿನ ಘಟಕದಿಂದ ನೀರು ತರುತ್ತಿದ್ದರು. ಶಾಲೆಯ ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ಮಿನಿ ಘಟಕ ಅಥವಾ ನಲಿಕಲಿ ಸ್ಮಾರ್ಟ್ ಕ್ಲಾಸ್ ಮಾಡಲು ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಹಣ ನೀಡಲು ಮುಂದಾದೆ' ಎಂದು ಗಂಗಮ್ಮ 'ಪ್ರಜಾವಾಣಿ'ಗೆ ತಿಳಿಸಿದರು.

'ಅಲ್ಲದೇ, ಗ್ರಾಮಸ್ಥರು ಶಾಲಾ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಪ್ರೋತ್ಸಾಹ ನೀಡುತ್ತಿದ್ದರು. ಅದನ್ನು ಕಂಡು ನನಗೂ ಶಾಲೆಗೆ ದೇಣಿಗೆ ಕೊಡಬೇಕೆಂದು ಪ್ರೇರಣೆ ಬಂತು. ಇದಕ್ಕೆ ನಮ್ಮ ಮನೆಯವರು ಒಪ್ಪಿಗೆ ನೀಡಿದರು' ಎಂದರು.

ಮುಖ್ಯ ಶಿಕ್ಷಕಿ ಅನ್ನಪೂರ್ಣ ಎನ್. ಬಣಕಾರ, 'ಗಂಗಮ್ಮ ಅವರು ನೀಡಿದ ಹಣವನ್ನು ಶಾಲೆಯ ಅಭಿವೃದ್ಧಿಗೆ ಬಳಸಲಾಗುವುದು. ಅವರ ಇಚ್ಛೆಯಂತೆ ಶುದ್ಧ ಕುಡಿಯುವ ನೀರಿನ ಮಿನಿ ಘಟಕ ಅಥವಾ ಸ್ಮಾರ್ಟ್ ಕ್ಲಾಸ್ ಮಾಡಲು ಬಳಸಲಾಗುವುದು' ಎಂದರು.

ವಿಧಾನಸೌಧ: ಬೀದಿ ನಾಯಿ ಸ್ಥಳಾಂತರ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಆವರಣದಲ್ಲಿರುವ ಬೀದಿ ನಾಯಿಗಳನ್ನು ಸ್ಥಳಾಂತರ ಮಾಡದಂತೆ ತಜ್ಞರ ಸಮಿತಿ ಸೂಚಿಸಿದೆ. ಆದ್ದರಿಂದ ಇದೇ ಆವರಣದಲ್ಲಿ ನಾಯಿಗಳಿಗೆ ಆಶ್ರಯತಾಣ ನಿರ್ಮಿಸಲು ತೀರ್ಮಾನಿಸಲಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ.

ತಜ್ಞರ ಸಮಿತಿಯ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ವಿಧಾನಸೌಧ ಮತ್ತು ವಿಕಾಸಸೌಧಗಳನ್ನು ರಾತ್ರಿ ವೇಳೆ ಬೀದಿ ನಾಯಿಗಳೇ ಕಾವಲು ಕಾಯುತ್ತಿವೆ. ಇಲ್ಲೇ ಉಳಿಸಿಕೊಳ್ಳುವುದು ಸೂಕ್ತ' ಎಂದು ಭದ್ರತಾ ಸಿಬ್ಬಂದಿ ಹೇಳಿದ್ದಾರೆ ಎಂದರು.

'ವಿಧಾನಸೌಧದ ಆವರಣದಲ್ಲಿರುವ ನಾಯಿಗಳ ಹಾವಳಿ ತಪ್ಪಿಸಲು ತಜ್ಞರ ಸಮಿತಿಯಿಂದ ವರದಿ ಕೇಳಲಾಗಿತ್ತು. ಇವತ್ತಿನ ಸಭೆಯಲ್ಲಿ ಚರ್ಚಿಸಲಾಯಿತು. ಅಲ್ಲೇ ಉಳಿಸಿಕೊಳ್ಳುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಆಶ್ರಯತಾಣದ ನಿರ್ವಹಣೆಯನ್ನು ಪ್ರಾಣಿ ದಯಾ ಸಂಘಕ್ಕೆ ಒಪ್ಪಿಸುವ ಬಗ್ಗೆ ಚರ್ಚೆ ನಡೆಯಿತು' ಎಂದರು.

ಸಭೆಯಲ್ಲಿ ನಡೆದ ಚರ್ಚೆ: 'ವಿಧಾನಸೌಧ ಮತ್ತು ವಿಕಾಸಸೌಧದ ವ್ಯಾಪ್ತಿಯಲ್ಲಿ 54 ನಾಯಿಗಳು ಇವೆ. ಇಲ್ಲಿ ವಾಕಿಂಗ್ ಮಾಡುವವರಿಗೆ ಮತ್ತು ವಿಧಾನಸೌಧ ನೋಡಲು ಬರುವ ಮಕ್ಕಳಿಗೆ ಭಯ ಆಗುತ್ತದೆ. ಆದ್ದರಿಂದ, ನಾಯಿಗಳನ್ನು ಬೇರೆಡೆ ಸಾಗಿಸಬೇಕು ಎಂಬ ವಿಚಾರವಾಗಿ ಪರ ವಿರೋಧ ಅಭಿಪ್ರಾಯ ವ್ಯಕ್ತವಾಯಿತು' ಎಂದು ಅವರು ತಿಳಿಸಿದರು.

'ನಾಯಿಗಳನ್ನು ಇರಲು ಬಿಡುವುದೇ ಸೂಕ್ತ ಎಂಬ ಅಭಿಪ್ರಾಯ ಹೆಚ್ಚಿನವರದ್ದಾಗಿತ್ತು. ಅವುಗಳಿಗೆ ಆಶ್ರಯ ತಾಣ ಮಾಡಿಕೊಡಲು ಲೋಕೋಪಯೋಗಿ ಇಲಾಖೆಗೆ ಹೇಳಿದರಾಯಿತು. ಮಳೆ–ಬಿಸಿಲು ಇದ್ದಾಗ ಅಲ್ಲಿಗೆ ಬಂದು ರಕ್ಷಣೆ ಪಡೆಯುತ್ತವೆ' ಎಂದು ಖಾದರ್ ಹೇಳಿದರು.

ವಿಧಾನಸೌಧ ಮತ್ತು ವಿಕಾಸಸೌಧ ಆವರಣದಲ್ಲಿ ಇಲಿಗಳನ್ನು ಹಿಡಿಯಲು ₹8 ಲಕ್ಷ ಟೆಂಡರ್ ಕೊಟ್ಟ ವಿಚಾರ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, 'ಆ ವಿಚಾರ ನನಗೆ ಗೊತ್ತಿಲ್ಲ. ಸಮಸ್ಯೆ ಬಗೆಹರಿಯಬೇಕು ಅಷ್ಟೆ. ಹಣದ ಸಮಸ್ಯೆ ಇಲ್ಲ, ನಮಗೆ ಸಮಸ್ಯೆ ಬಗೆಹರಿಯಬೇಕು' ಎಂದರು.

ಕಿರುಕುಳ: ಇಬ್ಬರು ರೈತರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ




ಜಯ ರಾಮೇಗೌಡ

ಎಚ್‌.ಡಿ.ಕೋಟೆ (ಮೈಸೂರು ಜಿಲ್ಲೆ)/ಬೆಳಗಾವಿ: ಮೈಕ್ರೊ ಫೈನಾನ್ಸ್ ಕಂಪನಿಯವರ ಕಿರುಕುಳ ತಾಳಲಾರದೆ ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ರೈತರು ವಿಷ ಸೇವಿಸಿ ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ.

ಕಂಪನಿಯಲ್ಲಿ ₹ 5 ಲಕ್ಷ ಸಾಲ ಪಡೆದಿದ್ದ ತಾಲ್ಲೂಕಿನ ಕಣಿಯನಹುಂಡಿ ಗ್ರಾಮದ ರೈತ ಜಯರಾಮೇಗೌಡ (50) ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಸಾಲ ಪಡೆದು ಜಮೀನಿನಲ್ಲಿ ಕಬ್ಬು, ಶುಂಠಿ, ಬಾಳೆ ಬೆಳೆದಿದ್ದರು. ಫಸಲು ನಷ್ಟವಾದ್ದರಿಂದ ಮತ್ತೆ ₹ 5 ಲಕ್ಷ ಕೈಸಾಲ ಮಾಡಿದ್ದರು. ಕಂಪನಿಯವರ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪುತ್ರ ಜಗದೀಶ್ ದೂರು ನೀಡಿದ್ದಾರೆ.

ವಿಷಸೇವಿಸಿ ಆತ್ಮಹತ್ಯೆ



ಶಿವನಪ್ಪ ಧರ್ಮಟ್ಟಿ

ಮೈಕ್ರೊ ಫೈನಾನ್ಸ್ ಕಂಪನಿಯ ಕಿರುಕುಳ ತಾಳಲಾರದೆ ಬೆಳಗಾವಿ ಜಿಲ್ಲೆಯ ಅಳಗವಾಡಿಯ ರೈತ ಶಿವನಪ್ಪ ಧರ್ಮಟ್ಟಿ (66) ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಅವರು ಪತ್ನಿಯ ಕ್ಯಾನ್ಸರ್ ಚಿಕಿತ್ಸೆಗೆ ವಿವಿಧ ಫೈನಾನ್ಸ್ ಕಂಪನಿಗಳಲ್ಲಿ ₹10 ಲಕ್ಷ ಸಾಲ ಮಾಡಿಕೊಂಡಿದ್ದರು. ಆದರೆ, ಆಸ್ಪತ್ರೆ ಖರ್ಚಿಗೆ ಹಣ ಹೊಂದಿಸುವುದರಲ್ಲೇ ಬೇಸರಗೊಂಡ ಅವರು ಸಾಲದ ಕಂತು ಪಾವತಿಸಿರಲಿಲ್ಲ. ಕಂಪನಿಯವರು ಆಗಾಗ ಫೋನ್ ಕರೆ ಮಾಡಿ ಕಿರುಕುಳ ನೀಡುತ್ತಿದ್ದರು. ಇದರಿಂದ ಬೇಸತ್ತು ಆತ್ಮಹತ್ಯೆಗೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆ ಆತ್ಮಹತ್ಯೆಗೆ ಯತ್ನ

ಕೊಟ್ಟೂರು (ವಿಜಯನಗರ ಜಿಲ್ಲೆ): 'ಎರಡು ಫೈನಾನ್ಸ್ ಕಂಪನಿಗಳ ಕಿರುಕುಳಕ್ಕೆ ಬೇಸತ್ತು ಮಹಿಳೆಯೊಬ್ಬರು ಆತ್ಮಹತ್ಯೆಗೆ ಯತ್ನಿಸಿದ್ದು, ಹರಪನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅವರು ಅಪಾಯದಿಂದ ಪಾರಾಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪಟ್ಟಣದ ಬಳ್ಳಾರಿ ಕ್ಯಾಂಪಿನ ನಿವಾಸಿ ಅಫ್ರೀನ್ ಬೀ ಆತ್ಮಹತ್ಯೆಗೆ ಯತ್ನಿಸಿದವರು.

'ಧರ್ಮಸ್ಥಳ ಗ್ರಾಮಾಭಿವೃದ್ಧಿ ಮಹಿಳಾ ಸಂಘದ ಸೇವಾ ಪ್ರತಿನಿಧಿ ಜಗದೀಶ್ ಹಾಗೂ ಎಲ್ ಅಂಡ್ ಟಿ ಫೈನಾನ್ಸ್ ಕಂಪನಿಯ ಗಂಗಾಧರಸ್ವಾಮಿ ಅವರು ಸಾಲದ ಕಂತನ್ನು ಪಾವತಿಸುವಂತೆ ತೀವ್ರ ಒತ್ತಡ ಹಾಕಿದ್ದರಿಂದ ವಿಷದ ಪುಡಿ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದೆ' ಎಂದು ಸಂತ್ರಸ್ತ ಮಹಿಳೆ ದೂರು ನೀಡಿದ್ದು ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುಸಿಸಿ: ಸಮಿತಿ ರಚಿಸಿದ ಗುಜರಾತ್ ಸರ್ಕಾರ

ಗಾಂಧಿನಗರ (ಪಿಟಿಐ): ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಏಕೆ ಜಾರಿ ಮಾಡಬೇಕು ಮತ್ತು ರಾಜ್ಯಕ್ಕೆ ಯುಸಿಸಿ ಅಗತ್ಯ ಇದೆಯೇ ಎಂಬ ಪರಾಮರ್ಶೆಗೆ ಗುಜರಾತ್ ಸರ್ಕಾರ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಂಜನಾ ದೇಸಾಯಿ ನೇತೃತ್ವದಲ್ಲಿ ಸಮಿತಿಯೊಂದನ್ನು ಮಂಗಳವಾರ ರಚಿಸಿದೆ.

ಐವರು ಸದಸ್ಯರ ಸಮಿತಿ ಇದಾಗಿದ್ದು, 45 ದಿನಗಳಲ್ಲಿ ವರದಿ ನೀಡಲಿದೆ. ಈ ಬಗ್ಗೆ ಮುಖ್ಯಮಂತ್ರಿ ಭುಪೆಂದರ್ ಪಟೇಲ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. 'ಸಮಿತಿಯು ಯುಸಿಸಿ ಕರಡು ಮಸೂದೆಯೊಂದನ್ನೂ ರೂಪಿಸಲಿದೆ. ವರದಿ ಬಂದ ಬಳಿಕ ಯುಸಿಸಿ ಜಾರಿಯ ಬಗ್ಗೆ ನಿರ್ಧರಿಸಲಾಗುವುದು' ಎಂದರು.

'ಮುಸ್ಲಿಂ ಧಾರ್ಮಿಕ ನಾಯಕರನ್ನೂ ಒಳಗೊಂಡು, ಈ ಸಮಿತಿಯು ಎಲ್ಲ ಧಾರ್ಮಿಕ ನಾಯಕರನ್ನು ಭೇಟಿ ಮಾಡಲಿದೆ. ದೇಶದಾದ್ಯಂತ ಯುಸಿಸಿ ಜಾರಿಯಾಗಬೇಕು ಎಂಬ ಪ್ರಧಾನಿ ಮೋದಿ ಅವರ ಆಶಯ ಪೂರೈಸಲು ಸರ್ಕಾರ ಬದ್ಧವಾಗಿದೆ' ಎಂದರು. ಬಿಜೆಪಿ ಆಡಳಿತವಿರುವ ಉತ್ತರಾಖಂಡದಲ್ಲಿ ಯುಸಿಸಿ ಜಾರಿಯಾಗಿದೆ.

32 ಗ್ರಾಮಗಳಿಗೆ ಭೇಟಿ ನೀಡಿದ ಸ್ವಾಮೀಜಿ

'ತರಳಬಾಳು ಹುಣ್ಣಿಮೆ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಭರಮಸಾಗರದಲ್ಲಿರುವ ಐತಿಹಾಸಿಕ, ತುಂಬಿ ತುಳುಕುತ್ತಿರುವ ಭರಮಣ್ಣ ನಾಯಕನ ಕೆರೆಯಲ್ಲಿ ಮಂಗಳವಾರ ದೋಣಿ ವಿಹಾರ ನಡೆಸುವ ಮೂಲಕ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು 9 ದಿನಗಳ ತರಳಬಾಳು ಹುಣ್ಣಿಮೆ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.

ಸ್ವಾಮೀಜಿಯವರು ತಾಲ್ಲೂಕಿನ ಹಲವಾರು ಕೆರೆಗಳಿಗೆ ನೀರು ತುಂಬಿಸಲು ಶ್ರಮಿಸಿದ್ದು, ಸಿರಿಗೆರೆ ಭಾಗದ ಬಹುತೇಕ ಕೆರೆಗಳು ಮೈದುಂಬಿಕೊಂಡಿವೆ. ಸಮೃದ್ಧಿಯ ಸಂಕೇತವಾಗಿ ಶ್ರೀಗಳು ದೋಣಿ ವಿಹಾರ ನಡೆಸಿ ಹುಣ್ಣಿಮೆ ಮಹೋತ್ಸವಕ್ಕೆ ನಾಂದಿ ಹಾಡಿದರು. ಮುರುಡೇಶ್ವರದಿಂದ ತರಿಸಿದ್ದ ಅಲಂಕೃತ ದೋಣಿಯಲ್ಲಿ ಶ್ರೀಗಳು 20 ನಿಮಿಷ ವಿಹಾರ ನಡೆಸಿದರು.

ಸಾವಿರ ಎಕರೆ ವಿಸ್ತೀರ್ಣ ಹೊಂದಿರುವ ಕೆರೆಯ ಇಕ್ಕೆಲಗಳಲ್ಲಿ ನಡೆದ ದೋಣಿ ವಿಹಾರವನ್ನು ಸಾವಿರಾರು ಜನರು ಕಣ್ತುಂಬಿಕೊಂಡರು. ನಂತರ ಭರಮಣ್ಣ ನಾಯಕ ಮಹಾಮಂಟಪದ ಆವರಣಕ್ಕೆ ಬಂದ ಸ್ವಾಮೀಜಿ ಶಿವ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಭಕ್ತರ ಸಂಭ್ರಮ ಮುಗಿಲು ಮುಟ್ಟಿತ್ತು.

ಇದಕ್ಕೂ ಮೊದಲು ಬೆಳಿಗ್ಗೆ ಸಿರಿಗೆರೆ ಐಕ್ಯಮಂಟಪದಲ್ಲಿ ಶ್ರೀಗಳು ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿ ಭರಮಸಾಗರದತ್ತ ಹೊರಟರು. ಮಾರ್ಗದುದ್ದಕ್ಕೂ 32 ಹಳ್ಳಿಗಳಿಗೆ ಭೇಟಿ ನೀಡಿ ಮುಂದೆ ಸಾಗಿದರು. ಸಂಜೆ 5 ಗಂಟೆಗೆ ಭರಮಸಾಗರದ ಭರಮಣ್ಣನಾಯಕನ ಕೆರೆಯಂಗಳ ತಲುಪಿದರು. ಇಳಿಸಂಜೆಯಲ್ಲಿ ನಡೆದ ದೋಣಿ ವಿಹಾರ ನೋಡುಗರ ಕಣ್ಮನ ಸೆಳೆಯಿತು.



ಚಿತ್ರದುರ್ಗ ತಾಲ್ಲೂಕು ಭರಮಸಾಗರದ ಐತಿಹಾಸಿಕ ಭರಮಣ್ಣನಾಯಕನ ಕೆರೆಯಲ್ಲಿ ದೋಣಿ ವಿಹಾರ ಮಾಡುವ ಮೂಲಕ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತರಳಬಾಳು ಹುಣ್ಣಿಮೆ ಮಹೋತ್ಸವಕ್ಕೆ ಚಾಲನೆ ನೀಡಿದರು

ಮಠದ ಕೋಣೆಯಲ್ಲಿ ವ್ಯಕ್ತಿ ಆತ್ಮಹತ್ಯೆ



ಮಲ್ಲಿಕಾರ್ಜುನ ಹಿರೇಮಠ

ವಾಡಿ: ನಾಲವಾರ ಗ್ರಾಮದ ಕೋರಿ‌ಸಿದ್ದೇಶ್ವರ ಸಂಸ್ಥಾನ ಮಠದಲ್ಲಿ ಮಠದ ಪೀಠಾಧಿಪತಿ ಸಿದ್ಧತೋಟೇಂದ್ರ ಶಿವಾಚಾರ್ಯರ ಪೂರ್ವಾಶ್ರಮದ ಸಂಬಂಧಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಲ್ಲಿಕಾರ್ಜುನ ಹಿರೇಮಠ (35) (ಗುಂಡು ಮುತ್ಯಾ) ಅವರ ಶವ ಮಂಗಳವಾರ ಪತ್ತೆಯಾಗಿದೆ. ವರ್ಷದ ಹಿಂದೆ ಮದುವೆಯಾಗಿದ್ದ ಅವರು ಮಠದ ಕೋಣೆಯಲ್ಲಿ ಒಂಟಿಯಾಗಿ ವಾಸಿಸುತ್ತಿದ್ದರು.

ನಿಧನ ವಾರ್ತೆ

ಯಕ್ಷಗಾನದ ಅರ್ಥಧಾರಿ ಕೆ.ವಿ.ಗಣಪಯ್ಯ



ಗಣಪಯ್ಯ ಕೆ.ವಿ

ಸುಳ್ಯ (ದಕ್ಷಿಣ ಕನ್ನಡ): ಯಕ್ಷಗಾನ ಕಲಾವಿದ, ಅರ್ಥಧಾರಿ, ನಿವೃತ್ತ ಶಿಕ್ಷಕ ಕೆ.ವಿ ಗಣಪಯ್ಯ (92) ಅವರು ಅಲ್ಪಕಾಲದ ಅಸೌಖ್ಯದಿಂದ ಮಂಗಳವಾರ ನಿಧನರಾದರು.

ಬೆಳ್ತಂಗಡಿ, ಪುತ್ತೂರು, ಸುಳ್ಯ ತಾಲ್ಲೂಕುಗಳ ವಿವಿಧ ಸರ್ಕಾರಿ ಶಾಲೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು. ಬಳಿಕ ಕಾಣಿಯೂರು ನಿಂತಿಕಲ್ಲು ಬಳಿಯ ಆಲಾಜೆ ಎಂಬಲ್ಲಿ ಕೃಷಿಕರಾಗಿ ನಿವೃತ್ತ ಜೀವನ ನಡೆಸುತ್ತಿದ್ದರು.

ಹರಿತವಾದ ಮಾತಿನ ಅರ್ಥಗಾರಿಕೆಗೆ ಹೆಸರಾಗಿದ್ದ ಗಣಪಯ್ಯನವರು, ಭೀಷ್ಮ, ಕೌರವ, ವಾಲಿ, ತಾಮ್ರಧ್ವಜ ಮೊದಲಾದ ಪಾತ್ರಗಳನ್ನು ವಿಶಿಷ್ಟವಾಗಿ ಕಟ್ಟಿಕೊಡುತ್ತಿದ್ದರು. ಅನೇಕ ಯಕ್ಷಗಾನ ಸಂಘ ಸಂಸ್ಥೆಗಳಿಗೆ, ಅರ್ಥಧಾರಿಗಳಿಗೆ ಮಾರ್ಗದರ್ಶನ ಮಾಡಿದ್ದರು.



ಸುಭಾಷಿತ

ಶ್ರೀಮಂತಿಕೆಯ ಗುಟ್ಟು ಇರುವುದು ಗಳಿಸುವುದರಲ್ಲಿ ಅಲ್ಲ, ಉಳಿಸುವುದರಲ್ಲಿ.

–ಬೀಚಿ

ಒಳಚರಂಡಿ ಸ್ವಚ್ಛತೆಗೆ ಕಾರ್ಮಿಕರು ಅಮಾನವೀಯ ಪದ್ಧತಿಗೆ ಅಂತ್ಯ ಬೇಕು

ಒಳಚರಂಡಿ ಸ್ವಚ್ಛಗೊಳಿಸಲು ಯಂತ್ರಗಳನ್ನು ಬಳಸುವ ಬದಲು ಕಾರ್ಮಿಕರನ್ನು ಇಳಿಸುವ ಪದ್ಧತಿಯನ್ನು ದೇಶದಲ್ಲಿ ಕಾನೂನಿನ ಮೂಲಕವೇ ನಿಷೇಧಿಸಲಾಗಿದೆ. ಈ ಪದ್ಧತಿಯನ್ನು ಕೊನೆಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಹಲವು ಬಾರಿ ಹೇಳಿದೆ. ಆದರೂ ಈ ಪದ್ಧತಿಯನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಕೋರ್ಟ್ ಸೂಚನೆ ನೀಡಬೇಕಾದ ಸ್ಥಿತಿ ಇದೆ. ಇದೊಂದು ಬಗೆಯಲ್ಲಿ ವಿಷಾದಕರ ಸ್ಥಿತಿ. ಈ ಪದ್ಧತಿಯನ್ನು ಕೊನೆಗೊಳಿಸಲು ಆಗದೇ ಇದ್ದುದಕ್ಕೆ ಕೇಂದ್ರ ಸರ್ಕಾರವನ್ನು ಕೋರ್ಟ್ ಈಚೆಗೆ ಮತ್ತೊಮ್ಮೆ ತರಾಟೆಗೆ ತೆಗೆದುಕೊಂಡಿದೆ, ಬೆಂಗಳೂರು ಸೇರಿದಂತೆ ಹಲವು ಮಹಾನಗರಗಳ ಆಡಳಿತ ವ್ಯವಸ್ಥೆಗೆ ಛೀಮಾರಿ ಹಾಕಿದೆ. 'ಮನುಷ್ಯರನ್ನು ಇಳಿಸಿ ಒಳಚರಂಡಿ ಸ್ವಚ್ಛಗೊಳಿಸುವ ಪದ್ಧತಿಯನ್ನು ಯಾವಾಗ ಮತ್ತು ಹೇಗೆ ಕೊನೆಗೊಳಿಸಲಾಗಿದೆ' ಎಂಬ ಬಗ್ಗೆ ಮಹಾನಗರ ಪಾಲಿಕೆಗಳ ಆಯುಕ್ತರು ಫೆಬ್ರುವರಿ 13ರ ಒಳಗೆ ಪ್ರಮಾಣಪತ್ರ ಸಲ್ಲಿಸಬೇಕು ಎಂದು ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ಅಮಾನವೀಯವಾದ ಈ ಪದ್ಧತಿಯನ್ನು ಕೊನೆಗೊಳಿಸಬೇಕು ಎಂದು ತಾನು 2023ರ ಅಕ್ಟೋಬರ್‌ನಲ್ಲಿ ಎಲ್ಲ ರಾಜ್ಯಗಳಿಗೆ ನೀಡಿದ್ದ ಸೂಚನೆಯ ಮೇಲ್ವಿಚಾರಣೆ ನಡೆಸುವ ಸಂದರ್ಭದಲ್ಲಿ ಕೋರ್ಟ್ ಹೊಸ ನಿರ್ದೇಶನಗಳನ್ನು ನೀಡಿದೆ. ಇಂತಹ ಪದ್ಧತಿಯು ಈಗಲೂ ಜಾರಿಯಲ್ಲಿದೆ ಎಂಬುದನ್ನು ಹೇಳಿರುವ ಕೋರ್ಟ್, ಕೆಲವು ದಿನಗಳ ಹಿಂದಷ್ಟೇ 'ಇಬ್ಬರು ಈ ಕೆಲಸದಲ್ಲಿ ತೊಡಗಿದ್ದಾಗ ಮೃತಪಟ್ಟಿದ್ದಾರೆ' ಎಂಬುದನ್ನು ಕೂಡ ಉಲ್ಲೇಖಿಸಿದೆ. ಕೋರ್ಟ್ ನಿರ್ದೇಶನ ಇದ್ದರೂ ಕೋಲ್ಕತ್ತದಲ್ಲಿ ನಡೆದ ಒಂದು ದುರ್ಘಟನೆಯಲ್ಲಿ ಮೂವರು ಕಾರ್ಮಿಕರು ಒಳಚರಂಡಿಯಲ್ಲಿ ಸಿಲುಕಿ ಮೃತಪಟ್ಟಿದ್ದಾರೆ. 2023ರಲ್ಲಿ ನೀಡಿದ್ದ ಸೂಚನೆಗಳನ್ನು ರಾಜ್ಯಗಳು ಅನುಷ್ಠಾನಕ್ಕೆ ತಂದಿಲ್ಲ, ತಪ್ಪು ಪ್ರಮಾಣಪತ್ರ ಸಲ್ಲಿಸುವ ರಾಜ್ಯ ಸರ್ಕಾರಗಳ ವಿರುದ್ಧ ನ್ಯಾಯಾಂಗ ನಿಂದನೆ ಕಾನೂನಿನ ಅಡಿ ಕ್ರಮ ಜರುಗಿಸಬೇಕಾಗುತ್ತದೆ ಎಂದು ಕೋರ್ಟ್ ಎಚ್ಚರಿಕೆ ನೀಡಿದೆ.



> ಇಂತಹ ಗಂಭೀರ ಸಮಸ್ಯೆಯ ವಿಚಾರದಲ್ಲಿ ಸ್ವಯಂಪ್ರೇರಿತವಾಗಿ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಬೇಕಾದ ಹೊಣೆಗಾರಿಕೆ ಸರ್ಕಾರಗಳ ಮೇಲಿದೆ

ಕಾನೂನಿನ ಹಾಗೂ ಕೋರ್ಟ್‌ನ ಸೂಚನೆಗಳ ಅನುಷ್ಠಾನದಲ್ಲಿನ ಲೋಪಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಒಬ್ಬರ ಮೇಲೆ ಒಬ್ಬರು ಆರೋಪ ಹೊರಿಸುವ ಕೆಲಸ ಮಾಡುತ್ತಿದ್ದಾರೆ. ನೈರ್ಮಲ್ಯ ಎಂಬುದು ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿರುವ ವಿಷಯ, ಅಗತ್ಯ ಕ್ರಮಕ್ಕಾಗಿ ರಾಜ್ಯಗಳ ಜೊತೆ ಸಭೆ ನಡೆಸುವುದಕ್ಕೆ ತಾನು ಸಮನ್ವಯಕಾರನ ಕೆಲಸ ಮಾಡಿದ್ದಾಗಿ ಕೇಂದ್ರ ಸರ್ಕಾರವು ಕಳೆದ ಬಾರಿಯ ವಿಚಾರಣೆ ಸಂದರ್ಭದಲ್ಲಿ ಕೋರ್ಟ್‌ಗೆ ಹೇಳಿದೆ. ಆದರೆ ಯಾವುದೇ ಪ್ರಾಧಿಕಾರವು ಈ ಪದ್ಧತಿಯನ್ನು ಕೊನೆಗೊಳಿಸಲು ಒಂದು ಹೆಜ್ಜೆ ಮುಂದಕ್ಕೆ ಹೋಗಿ ಕೆಲಸ ಮಾಡಿಲ್ಲ. ಈ ಬಗೆಯ ಅಮಾನವೀಯ ಕೆಲಸಗಳಲ್ಲಿ ತೊಡಗಿಸಿಕೊಂಡವರು ಸಮಾಜದಲ್ಲಿ ಅತ್ಯಂತ ಹಿಂದುಳಿದವರು, ಬಹುತೇಕರು ಪರಿಶಿಷ್ಟ ಜಾತಿಗಳಿಗೆ ಸೇರಿದವರು. ದೇಶದ ಶೇಕಡ 40ರಷ್ಟು ಜಿಲ್ಲೆಗಳಲ್ಲಿ ಈ ಪದ್ಧತಿಯು ಚಾಲ್ತಿಯಲ್ಲಿದೆ. 2019ರ ನಂತರದಲ್ಲಿ ಒಳಚರಂಡಿಗಳಲ್ಲಿ ಇಳಿದು ಕೆಲಸ ಮಾಡುವಾಗ ವಿಷಕಾರಿ ಅನಿಲವನ್ನು ಸೇವಿಸಿ ಅಥವಾ ಇತರ ಬಗೆಯ ಅಪಘಾತಗಳ ಕಾರಣದಿಂದಾಗಿ ಪ್ರತಿವರ್ಷ ಕನಿಷ್ಠ 75 ಮಂದಿ ಮೃತಪಟ್ಟಿದ್ದಾರೆ. ಒಳಚರಂಡಿ ಇಳಿದು ಸ್ವಚ್ಛಗೊಳಿಸುವ ಪದ್ಧತಿ ಹಾಗೂ ಅಪಾಯಕಾರಿ ಬಗೆಯಲ್ಲಿ ಸ್ವಚ್ಛಗೊಳಿಸುವ ಕೆಲಸಗಳನ್ನು ಕಾನೂನಿನ ಅಡಿಯಲ್ಲಿ ಪ್ರತ್ಯೇಕವಾಗಿ ವಿವರಿಸಲಾಗಿದೆ. ಈ ವಿವರಣೆಯನ್ನು ಆಧಾರವಾಗಿ ಇರಿಸಿಕೊಂಡು ರಾಜ್ಯಗಳು ತಮ್ಮಲ್ಲಿ ಇಂತಹ ಪದ್ಧತಿಯೇ ಇಲ್ಲ ಎಂದು ಹೇಳುತ್ತಿವೆ. ಯಂತ್ರಗಳ ಬಳಕೆಗೆ ಹಾಗೂ ಕಾರ್ಮಿಕರ ರಕ್ಷಣೆಗೆ ಅಗತ್ಯ ಸಾಧನಗಳ ಬಳಕೆಗೆ ಕೋರ್ಟ್ ಆದೇಶ ನೀಡಿದೆಯಾದರೂ ಅದರ ಪಾಲನೆ ಆಗುತ್ತಿಲ್ಲ. ಒಳಚರಂಡಿ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಮೃತಪಟ್ಟ ಕಾರ್ಮಿಕರ ಹತ್ತಿರದ ಸಂಬಂಧಿಕರಿಗೆ ಪರಿಹಾರ ರೂಪದಲ್ಲಿ ₹30 ಲಕ್ಷ ನೀಡಬೇಕು ಎಂದು ಕೋರ್ಟ್ ಆದೇಶಿಸಿದೆ. ಆದರೆ ಈ ಆದೇಶದ ಪಾಲನೆ ಸರಿಯಾಗಿ ಆಗಿಲ್ಲ.

ಕರ್ನಾಟಕದಲ್ಲಿ ಸರಿಸುಮಾರು 7,500 ಮಂದಿ ಇಂತಹ ಕೆಲಸ ಮಾಡುತ್ತಿದ್ದಾರೆ, ಈ ಪೈಕಿ 1,600 ಮಂದಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ವ್ಯಾಪ್ತಿಯಲ್ಲೇ ಇದ್ದಾರೆ. ಆದರೆ, ಬೆಂಗಳೂರಿನಲ್ಲಿ ಇರುವ ಇಂತಹ ಕಾರ್ಮಿಕರ ಸಂಖ್ಯೆಯು 25 ಸಾವಿರ ಆಗಿರಬಹುದು ಎಂಬ ಅಂದಾಜು ಕೂಡ ಇದೆ. ಈ ಕಾರ್ಮಿಕರ ಸಾವು ರಾಜ್ಯದಲ್ಲಿ ಅತಿಹೆಚ್ಚು ವರದಿಯಾಗಿರುವುದು ಬೆಂಗಳೂರಿನಲ್ಲಿ. ಕೆಲವು ತಿಂಗಳ ಹಿಂದೆ ಬೆಂಗಳೂರಿನಲ್ಲಿ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದರು. ಈ ಕೆಲಸಗಳಲ್ಲಿ ತೊಡಗಿರುವವರಿಗೆ ಪರ್ಯಾಯ ವ್ಯವಸ್ಥೆಗಳನ್ನು ಕಲ್ಪಿಸಿಕೊಡಲಾಗುತ್ತದೆ ಎಂಬ ಭರವಸೆಗಳು ಸರ್ಕಾರಗಳಿಂದ ಈಡೇರಿಲ್ಲ. ದೇಶದಲ್ಲಿ ಈ ಪದ್ಧತಿಯು ವ್ಯಾಪಕವಾಗಿದೆ ಎಂಬುದು ನಾಚಿಕೆಗೇಡಿನ ಸಂಗತಿ. ಈಗ ಇದನ್ನು ಕೊನೆಗಾಣಿಸಲು ಕೋರ್ಟ್ ಮುಂದಡಿ ಇರಿಸಿರುವ ಕಾರಣ, ವ್ಯವಸ್ಥೆಯಲ್ಲಿ ಒಂದಿಷ್ಟು ಬದಲಾವಣೆಗಳು ಬರಬಹುದು ಎಂಬ ನಿರೀಕ್ಷೆ ಇಟ್ಟುಕೊಳ್ಳಬಹುದು. ಇಂತಹ ಗಂಭೀರ ಸಮಸ್ಯೆಯ ವಿಚಾರದಲ್ಲಿ ನ್ಯಾಯಾಲಯಗಳ ಆದೇಶಕ್ಕಾಗಿಯೇ ಕಾಯುವ ಬದಲು ಸ್ವಯಂಪ್ರೇರಿತವಾಗಿ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಬೇಕಾದ ಹೊಣೆಗಾರಿಕೆ ಸರ್ಕಾರಗಳ ಮೇಲಿದೆ.

ನುಡಿಮಾಲಿನ್ಯದಿಂದ ಸಭ್ಯರ ನಾಲಿಗೆಯು ನಾಚಿಕೆಯಿಂದ ನುಡಿಮೌನಕ್ಕೆ ಸರಿಯುವಂತಾಗಿದೆ

ನುಡಿ ನೈತಿಕತೆಯ ಅರಸುತ್ತಾ...



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಇತ್ತೀಚಿನ ವರ್ಷಗಳಲ್ಲಿ ದ್ವೇಷದಿಂದ ಕಾರಿಕೊಳ್ಳುವ ಪ್ರವೃತ್ತಿ ಅನೇಕರಲ್ಲಿ ಸಭ್ಯತೆಯ ಎಲ್ಲೆ ದಾಟಿ ವ್ಯಕ್ತವಾಗುತ್ತಿದೆ. ನಾವು ಆಡುವ ಮಾತು ಬರೀ ನಾಲಿಗೆಯ ನುಡಿಯಲ್ಲ, ಅದು ಮನಸ್ಸಿನ ಭಾಷಾರೂಪ. ನಮ್ಮ ಮನಸ್ಸಿನಲ್ಲಿ ಮಾಲಿನ್ಯ ತುಂಬಿಕೊಂಡಿದ್ದರೆ ಅದಕ್ಕನುಗುಣವಾದ ನುಡಿಮಾಲಿನ್ಯ ವಿಜೃಂಭಿಸುತ್ತದೆ; ನುಡಿ ನೈತಿಕತೆಯು ನಾಶಕ್ಕೆ ದಾರಿ ಬಿಡುತ್ತದೆ. ಈ ನನ್ನ ಮಾತಿಗೆ ನಿದರ್ಶನವಾಗುವ ನೂರಾರು ನುಡಿಮಾಲಿನ್ಯದ ಮುಂದಾಳುಗಳು ನಮ್ಮ ಸಮಾಜದಲ್ಲಿ ಇದ್ದಾರೆ. ಸಾಮಾಜಿಕ, ಧಾರ್ಮಿಕ, ರಾಜಕೀಯ ವಲಯಗಳಿಂದ ಎದ್ದುಬಂದು ಜಿದ್ದು ಸಾಧಿಸುವ ಇಂತಹ ಕೆಲವು ಮುಂದಾಳುಗಳು ತಮ್ಮ ನುಡಿ ಮಾಲಿನ್ಯದಿಂದ ಸಾಮಾಜಿಕ ಪರಿಸರದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿದ್ದಾರೆ.

ಕೆಲವರು ಜಾತಿಮೂಲವನ್ನು ಹಿಡಿದು ಹೀಯಾಳಿಸಿ ಮಾತಾಡುತ್ತಾರೆ. ಇನ್ನು ಕೆಲವರು ರಾಜಕೀಯ ಮತ್ತು 'ಧರ್ಮ' ದ್ವೇಷದಿಂದ ಪ್ರಚೋದನಾತ್ಮಕ ಭಾಷೆ ಬಳಸಿ ಹಿಂಸೆಯನ್ನು ಉದ್ದೀಪಿಸುತ್ತಾರೆ. ಯಾವ ಧರ್ಮವೂ ಮೂಲತಃ ಹಿಂಸೆಗೆ ಕರೆ ಕೊಡುವುದಿಲ್ಲವಾದರೂ ಆಯಾ ಧರ್ಮದ ಹೆಸರಿನಲ್ಲಿ 'ಹೊಡಿ ಬಡಿ ಕಡಿ'ಯ ನುಡಿಮಾಲಿನ್ಯವನ್ನು ಮೆರೆಯುವ ಕೆಲವರು, ಅವರವರ ಧರ್ಮಕ್ಕೆ ಅವಮಾನ ಮಾಡುತ್ತಿದ್ದಾರೆ. ರಾಜಕೀಯ ಮುಂದಾಳುಗಳಲ್ಲಿ ಕೆಲವರು ಏಕವಚನ ಪ್ರಯೋಗ ಸ್ಪರ್ಧೆಯಲ್ಲಿ ನಿತ್ಯ ನಿರತರಾಗಿದ್ದಾರೆ. 'ನೀನು ಹೆಚ್ಚೊ ನಾನು ಹೆಚ್ಚೊ' ಎಂದು ವೈಯಕ್ತಿಕ ಸವಾಲು ಎಸೆಯಲು ಪ್ರತಿಷ್ಠಾಪಿತವಾದ ಬೀದಿ ಬೈಗುಳ ಮಾದರಿ ಅನುಸರಿಸುತ್ತಿದ್ದಾರೆ. ಇದರಿಂದ, ರಾಜಕೀಯ ವಲಯದಲ್ಲಿ ಇರುವ ಸಭ್ಯರ ನಾಲಿಗೆಯು ನಾಚಿಕೆಯಿಂದ ನುಡಿಮೌನಕ್ಕೆ ಸರಿಯುವಂತಾಗಿದೆ. ಸಭ್ಯರ ನುಡಿಯು ನಿಷ್ಕ್ರಿಯಗೊಂಡು ನಿರ್ವಾಣ ಮಾಡಲಾಗುತ್ತಿದೆ. ಧಾರ್ಮಿಕ ಕ್ಷೇತ್ರದಲ್ಲಿಯೂ ಅಷ್ಟೇ. ಮತೀಯತೆಯ ಅಬ್ಬರದಲ್ಲಿ ಮಾನವೀಯ ಮೌಲ್ಯದ ಮಾತಾಡುವ ಧಾರ್ಮಿಕರಿಗೆ ಹಿನ್ನಡೆಯಾಗುತ್ತಿದೆ.

ಧಾರ್ಮಿಕ ಮೂಲಭೂತವಾದ ಮತ್ತು ಫ್ಯೂಡಲ್ ಪದ್ಧತಿಯ ಪಳೆಯುಳಿಕೆಯ ಮನೋಧರ್ಮದವರಿಂದ ಮಾತ್ರ ಇಂತಹ ಹಿಂಸಾತ್ಮಕ ಮತ್ತು ವೈಯಕ್ತಿಕ ನಿಂದನೆಯ ಅತಿರೇಕದ ಮಾತುಗಳು ಬರುತ್ತವೆ.

ಇಂಥವರ ವರ್ತನೆಯು ಮಾತಿನ ಉಡಾಫೆತನಕ್ಕಷ್ಟೇ ಸೀಮಿತವಾದುದಲ್ಲ. ಹೀಗೆ ತಂತಮ್ಮ ಪಕ್ಷ, ಪಂಥ, ಧರ್ಮ, ಜಾತಿ, ಲಿಂಗ ತಾರತಮ್ಯಗಳ ನೆಲೆಯಲ್ಲಿ ನುಡಿ ನೈತಿಕತೆಯ ನಾಶಕ್ಕೆ ನಿಂತು ನುಡಿಮಾಲಿನ್ಯಕ್ಕೆ ಕಾರಣರಾಗುವವರು ಮೂಲತಃ ಮಾನಸಿಕ ಮಾಲಿನ್ಯದ ಮಾಲೀಕರಾಗಿರುತ್ತಾರೆ. ಹಾಗೆಂದು ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರಕ್ಕೆ ಹೊರತಾದ ಸಾಂಸ್ಕೃತಿಕ ಕ್ಷೇತ್ರದ ಎಲ್ಲರೂ ನುಡಿ ನೈತಿಕತೆಯ ಸಂರಕ್ಷಕರೆಂದು ಸಾರುವಂತಿಲ್ಲ. ಇಲ್ಲಿಯೂ ನುಡಿ ನೈತಿಕತೆಗೆ ಧಕ್ಕೆ ತರುವ ಮಾನಸಿಕ ಮಾಲಿನ್ಯದ ಕೆಲವರು ಇದ್ದಾರೆ.

ನುಡಿ ನೈತಿಕತೆಯು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯದಂತಹ ಎಲ್ಲ ಕ್ಷೇತ್ರಗಳ ನೈತಿಕತೆಯನ್ನು ಅವಲಂಬಿಸಿದೆ. ಜಾತಿ ತಾರತಮ್ಯವಿಲ್ಲದ ಸಾಮಾಜಿಕ ನ್ಯಾಯದ ನೆಲೆಯುಳ್ಳ ಸಾಮಾಜಿಕ ನೈತಿಕತೆ, ಪ್ರಜಾಸತ್ತಾತ್ಮಕ ಸಭ್ಯ ಸಂವಾದದ ತಳಹದಿಯುಳ್ಳ ರಾಜಕೀಯ ನೈತಿಕತೆ, ಪರಸ್ಪರ ದ್ವೇಷದ ದಳ್ಳುರಿ ಹಬ್ಬಿಸದೆ ಸೌಹಾರ್ದ ಸಾರುವ ಧಾರ್ಮಿಕ ನೈತಿಕತೆ, ಬಹುಸಂಸ್ಕೃತಿಗೆ ಮನ್ನಣೆ ಕೊಡುವ ಮತ್ತು ವೈಯಕ್ತಿಕ ಈರ್ಷ್ಯೆಗಳನ್ನು ಮೀರಿದ ಸಮಚಿತ್ತದ ಸಾಂಸ್ಕೃತಿಕ ನೈತಿಕತೆ, 'ಪಕ್ಷ'ಪಾತವಿಲ್ಲದ ನೈಜ ವಿಶ್ಲೇಷಣೆ ಮತ್ತು ಸುದ್ದಿ ಪ್ರಕಟಣೆಯ ಮಾಧ್ಯಮ ನೈತಿಕತೆ- ಇವೆಲ್ಲವೂ ಆರೋಗ್ಯಕರ ಸಮಾಜದ ಗುಣಲಕ್ಷಣಗಳು. ಆಯಾ ಕ್ಷೇತ್ರದ ಆಂತರಿಕ ನೈತಿಕತೆ ಕುಸಿಯತೊಡಗಿದಾಗ ಬಹಿರಂಗದಲ್ಲಿ ನುಡಿ ನೈತಿಕತೆಯು ನಾಶದತ್ತ ಸಾಗುತ್ತದೆ. ನುಡಿ ನೈತಿಕತೆಯ ನಾಶಕ್ಕೂ ಆಯಾ ಕ್ಷೇತ್ರದ ಮಾನಸಿಕ ಮಾಲಿನ್ಯಕ್ಕೂ ಅವಿನಾಭಾವ ಸಂಬಂಧವಿರುತ್ತದೆ.

ನಾವಿಂದು ಪರಿಸರ ಮಾಲಿನ್ಯ, ವಾಯುಮಾಲಿನ್ಯ, ಜಲಮಾಲಿನ್ಯಗಳ ವಿರುದ್ಧ ಮಾತಾಡುತ್ತಿದ್ದೇವೆ. ಈಗ ಮಾನಸಿಕ ಮಾಲಿನ್ಯದ ವಿರುದ್ಧವೂ ದನಿಯೆತ್ತಿ ನುಡಿ ನೈತಿಕತೆಯನ್ನು ಉಳಿಸಬೇಕಾಗಿದೆ. ಮಾನಸಿಕ ಮಾಲಿನ್ಯದ ವಿರುದ್ಧ ದನಿ ಎತ್ತುವುದೆಂದರೆ, ಪ್ರಜಾಸತ್ತಾತ್ಮಕ ಪರಿಭಾಷೆಯ ಪರವಾಗಿ ಪ್ರತಿಪಾದನೆ ಮಾಡಿದಂತೆ ಆಗುತ್ತದೆ. ಯಾಕೆಂದರೆ, ನುಡಿ ನೈತಿಕತೆಗೆ ಧಕ್ಕೆ ತರುವ ಮಾನಸಿಕ ಮಾಲಿನ್ಯವು ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ತಾರತಮ್ಯಗಳನ್ನು ಆಧರಿಸಿದ ನೀತಿ ನಿಲುವುಗಳ ಫಲಿತವಾಗಿರುತ್ತದೆ. ಪ್ರಜಾಸತ್ತಾತ್ಮಕ ತಾತ್ವಿಕತೆಯ ವಿರೋಧಿಯಾಗಿರುತ್ತದೆ.

ವಿವಿಧ ಕ್ಷೇತ್ರದ ಮುಂದಾಳುಗಳಿಗೆ ಪಾಠ ಆಗುವಂತಹ ತಾತ್ವಿಕ ನುಡಿ ಸಂದೇಶಗಳು ಕನ್ನಡ ಸಾಹಿತ್ಯದಲ್ಲಿ ಇರುವುದನ್ನು ಇಲ್ಲಿ ಗಮನಿಸಬಹುದು. ಮಹಾಕವಿ ಪಂಪ, ಕನ್ನಡ ಭಾಷೆಯನ್ನು 'ತಿರುಳ್ಗನ್ನಡ' ಎಂದು ಕರೆದದ್ದನ್ನು ಎಲ್ಲ ಭಾಷೆಗಳಿಗೂ ಅನ್ವಯಿಸಿಕೊಳ್ಳಬಹುದು. ಕ್ರಿ.ಶ. 850ರ ಶ್ರೀವಿಜಯ ಕೃತ 'ಕವಿರಾಜಮಾರ್ಗ'ದಲ್ಲಿ ಜನಸಾಮಾನ್ಯರನ್ನು 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂದು ಪ್ರಶಂಸೆ ಮಾಡುವುದಲ್ಲದೆ 'ಪದವನ್ನು ಅರ್ಥ ಮಾಡಿಕೊಂಡು ನುಡಿಯುವ, ಹೀಗೆ ನುಡಿದುದನ್ನು ಅರಿತು ಅವಲೋಕಿಸುವ ಪ್ರಭಾವವಂತರು ನಮ್ಮ ನಾಡಿನವರು' ಎಂದು ವಿಶ್ಲೇಷಿಸಲಾಗಿದೆ. ಜನಸಾಮಾನ್ಯ ಕನ್ನಡಿಗರ ಈ ವಿವೇಕವು ಎಲ್ಲ ಕ್ಷೇತ್ರದ ಮುಂದಾಳುಗಳಿಗೆ ಮಾದರಿಯಾಗಬೇಕಾಗಿದೆ. ಯಾಕೆಂದರೆ, ಇಂದು ಪದವರಿತು ನುಡಿಯುವ, ನುಡಿದುದನ್ನು ಅರಿತು ಅವಲೋಕಿಸಿ ವ್ಯಾಖ್ಯಾನ ಮಾಡುವ ಬದಲು ಅಪವ್ಯಾಖ್ಯಾನ ಮಾಡುವವರು ಮುನ್ನೆಲೆಗೆ ಬಂದಿದ್ದಾರೆ. ಆಡಿದ ಮಾತಿನ ಸಂದರ್ಭ ಮತ್ತು ಆಚೆ-ಈಚಿನ ಹಿನ್ನೆಲೆಯನ್ನು ಕತ್ತರಿಸಿ ನಿಜಾರ್ಥದ ಹತ್ಯೆ ಮಾಡಿ ಹಾದಿ ತಪ್ಪಿಸುತ್ತಿದ್ದಾರೆ. 'ಕವಿರಾಜಮಾರ್ಗ'ದಲ್ಲಿ ಹೇಳಿರುವ ಜನಸಾಮಾನ್ಯರ ವಿವೇಕವೂ ಇಂಥವರಲ್ಲಿ ಇಲ್ಲವಾಗಿದೆ.

ಬಸವಣ್ಣನವರು ನುಡಿಯನ್ನು ಕುರಿತು ಹೇಳಿದ ಒಂದು ವಚನ ಯಾವತ್ತಿಗೂ ಆದರ್ಶಪ್ರಾಯವಾದುದು: 'ನುಡಿದರೆ ಮುತ್ತಿನ ಹಾರದಂತಿರಬೇಕು| ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು| ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು| ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು'- ನಮ್ಮ ನುಡಿ ಹೇಗಿರಬೇಕು ಎನ್ನುವುದಕ್ಕೆ ಬಸವಣ್ಣನವರ ಈ ವಚನಕ್ಕಿಂತ ಉದಾಹರಣೆ ಬೇಕೆ?

ಹದಿನೇಳನೇ ಶತಮಾನದ ಕವಿ ಮಹಲಿಂಗರಂಗ, ಕನ್ನಡ ನುಡಿಯ ಸೊಗಸಿನ ಕುರಿತು ಬರೆದ ಮಾತುಗಳು ಮನನೀಯವಾಗಿವೆ: 'ಸುಲಿದ ಬಾಳೆಯ ಹಣ್ಣಿನಂದದಿ| ಕಳೆದ ಸಿಗುರಿನ ಕಬ್ಬಿನಂದದಿ| ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ| ಲಲಿತವಹ ಕನ್ನಡದ ನುಡಿಯಲಿ' ಎಂದು ಮೆಚ್ಚುಗೆಯ ಮಾತಾಡುವ ಮಹಲಿಂಗರಂಗ, ಕನ್ನಡ ನುಡಿಯಲ್ಲಿ ತನ್ನನ್ನು ತಾನು ತಿಳಿದು, ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೆ, ಮೋಕ್ಷಕ್ಕೆ ಸಂಸ್ಕೃತ ಯಾಕೆ ಎಂದು ಕೇಳಿದ್ದಾರೆ. ಇಲ್ಲಿ ತನ್ನನ್ನು ತಾನು ಕಂಡುಕೊಳ್ಳಲು ಕನ್ನಡ ನುಡಿ ಸಾಕು ಎಂಬ ಮಾತನ್ನು ಎಲ್ಲ ಜನಭಾಷೆಗಳಿಗೂ ಅನ್ವಯಿಸಬಹುದು. ಹಾಗೆಯೇ ತಂತಮ್ಮ ನುಡಿಯ ಮೂಲಕ ತಮ್ಮನ್ನು ತಾವು ತಿಳಿದುಕೊಂಡರೆ ನುಡಿ ನೈತಿಕತೆ ಉಳಿಯುತ್ತದೆಯೆಂದೂ ಆಶಿಸಬಹುದು.

ಇದು ಬರೀ ನುಡಿಯ ವಿಷಯವಲ್ಲ; ನಡೆಯ ವಿಷಯವೂ ಹೌದು; ನಡೆಯ ವಿಷಯವೆಂದರೆ ಅದು ಅವರವರ ಮನೋಧರ್ಮದ ವಿಷಯವೂ ಹೌದು, ಮನೋಧರ್ಮವು ವಿಚಾರಾತ್ಮಕವೊ, ವಿಕಾರಾತ್ಮಕವೊ ಎನ್ನುವುದು ನಡೆ-ನುಡಿಗಳಲ್ಲಿ ವ್ಯಕ್ತವಾಗುತ್ತದೆ.

ಇಂದು ನಮ್ಮ ಸನ್ನಿವೇಶ ಗಂಭೀರವಾಗಿದೆ. ಕೆಲವರಿಗೆ ಬಂದೂಕೇ ಬಾಯಿಯಾಗಿದೆ. ಇನ್ನು ಕೆಲವರಿಗೆ ಬಾಯಿಯೇ ಬಂದೂಕಾಗಿದೆ. ಬಂದೂಕನ್ನೇ ಬಾಯಿ ಮಾಡಿಕೊಂಡಿರುವ ಭಯೋತ್ಪಾದನೆಗೆ ಮತ್ತು ಬಾಯಿಯನ್ನೇ ಬಂದೂಕಿನಂತೆ ಬಳಸುವ ದ್ವೇಷೋತ್ಪಾದನೆಗೆ ಇತಿಶ್ರೀ ಹಾಡಬೇಕಾಗಿದೆ. ಫ್ಯೂಡಲ್ ಪಳೆಯುಳಿಕೆ ಮತ್ತು ಧಾರ್ಮಿಕ ಮೂಲಭೂತವಾದದ ಆಳ್ವಿಕೆ ಅಳಿಸಿಹೋದರೆ ನುಡಿ ನೈತಿಕತೆ ಉಳಿಯುತ್ತದೆ. ನುಡಿ ನೈತಿಕತೆಯು ಉಳಿದು ಬೆಳೆಯುವುದಕ್ಕೂ ಪ್ರಜಾಸತ್ತಾತ್ಮಕ ಸಂಸದೀಯ ಸಂವೇದನೆಯು ಉಳಿದು ಬೆಳೆಯುವುದಕ್ಕೂ ಪರಸ್ಪರ ಸಂಬಂಧವಿರುತ್ತದೆ. ಆದ್ದರಿಂದ ಸಂಸದೀಯ ಸಂವೇದನೆ ಸಾಮಾಜೀಕರಣಗೊಳ್ಳುವುದು ಅಗತ್ಯ.



ಚುರುಮುರಿ



ಕಲರ್‌ಫುಲ್ ಸೀರೆ

• ಆನಂದ

'ಈ ಬಾರಿಯ ಕೇಂದ್ರ ಬಜೆಟ್‌ನ ವಿಶೇಷ ಏನು?' ಎಂದು ಮಡದಿಯನ್ನು ಕೇಳಿದೆ.

'ತುಂಬಾ ಇಂಪ್ರೆಸಿವ್ ಆಗಿತ್ತು' ಎಂದಳು.

'ಇಂಪ್ರೆಸಿವ್? ಏಕೆ? ಹೇಗೆ?'

'ಅದೇರಿ, ನಿರ್ಮಲಾಜಿ ಮಧುಬನಿ ಕಲಾ ಕೆಲಸವಿದ್ದ ಕ್ರೀಂ ಕಲರ್ ಸೀರೆ ಉಟ್ಟಿದ್ದರು. ತುಂಬಾ ಇಂಪ್ರೆಸಿವ್ ಆಗಿ ಕಾಣ್ತಿದ್ದರು' ಎಂದಳು.

'ನಾನು ಕೇಳಿದ್ದು ಬಜೆಟ್ ಯಾರಿಗೆ ಎಷ್ಟು, ಏನು ಉಪಯೋಗ ಆಗುತ್ತೆ ಅಂತ'.

'ಅಯ್ಯೋ! ಅದನ್ನೆಲ್ಲ ಹೇಳೋಕೆ ತಜ್ಞರಿದ್ದಾರೆ ಹೇಳ್ಕೊತಾರೆ, ಅದನ್ನು ಓದ್ಕೊಳ್ಳಿ. ನಮಗೆ ಇಂಪಾರ್ಟೆಂಟ್ ಅಂದರೆ ಮಂತ್ರಿಗಳು ಹೇಗೆ ಡ್ರೆಸ್ ಮಾಡ್ಕೊಂಡು ಬಂದಿದ್ದರು, ಸೀರೆ ಯಾವುದು, ಹೋದ ವರ್ಷದ ಸೀರೆ ಯಾವುದು...?'

'ಹೋದ ವರ್ಷ ಯಾವ ಸೀರೆ ಉಟ್ಟಿದ್ದರು?'

'ನೀಲಿ ಬಣ್ಣದ ಸಿಲ್ಕ್, ಕಾಂತ ಎಂಬ್ರಾಯಿಡರಿ, ಬಂಗಾಳದ್ದು'.

ನನಗೋ ಎಲ್ಲ ಸೀರೆಗಳೂ ಒಂದೇ. ಆದರೂ 'ಹೋ! ಗ್ರೇಟ್' ಎಂದೆ.

'2023ರಲ್ಲಿ ಕೆಂಪು ಬಣ್ಣದ ರೇಷ್ಮೆ ಸೀರೇಲಿ ಹೊಳೀತಿದ್ದರು. 2022ರಲ್ಲಿ ಬೊಮ್‌ಕೈ ಸೀರೆ ಉಟ್ಟಿದ್ದರೆ, ಅದರ ಹಿಂದಿನ ವರ್ಷ 2021ರಲ್ಲಿ ಆಫ್ ವೈಟ್ ಪೋಚಂಪಲ್ಲಿ ರೇಷ್ಮೆ ಮೈಮೇಲಿತ್ತು...'

'ಯಾವಾಗಲೂ ಸಿಲ್ಕ್ ಸೀರೇನೇ ಉಡ್ತಾರಾ?'

'ಹೌದ್ರೀ, ಸಿಲ್ಕು ಕೈಮಗ್ಗದ ಸೀರೆಗಳೇ. 2020ರಲ್ಲಿ ಹಳದಿ ರೇಷ್ಮೆ, 2019ರಲ್ಲಿ ಗುಲಾಬಿ ಬಣ್ಣದ ರೇಷ್ಮೆ... ಎಲ್ಲಾ ಕಲರ್‌ಫುಲ್ ಸೀರೆಗಳೇ ಅವರ ಬಳಿ ಇರೋದು. ಭಾರಿ ಕಲೆಕ್ಷನ್ ಇರಬೇಕು' ಎಂದಳು ಅಸೂಯೆಯಿಂದ.

'ಅದು ಸರಿ, ಅವರು ಯಾವಾಗಲೂ ಆ ಕೆಂಪು ಬಣ್ಣದ ಬ್ಯಾಗೇ ತರ್ತಾರಲ್ಲ?'

'ಬ್ಯಾಗ್? ವ್ಯಾನಿಟಿ ಬ್ಯಾಗ್ ಇರೋಲ್ವಲ್ಲಾ? ಬಜೆಟ್ ಪೇಪರ್ಸ್ ಇರುತ್ತೆ...'

'ಅದೇ ನಾನೂ ಹೇಳಿದ್ದು, ಆ ಬ್ಯಾಗ್ ಯಾವಾಗಲೂ ಕೆಂಪು ಬಣ್ಣದಲ್ಲಿರುತ್ತದೆ. ಸೀರೆ ಕಲರ್‌ಗೆ ಮ್ಯಾಚಾಗೋ ಹಾಗೆ ಬ್ಯಾಗೂ ಇದ್ದರೆ ಚೆನ್ನಾಗಿರುತ್ತಲ್ವಾ?' ಎಂದು ಕೇಳಿದೆ. 'ಆಮೇಲೆ ಮೈಸೂರು ಸಿಲ್ಕ್ ಸೀರೆ ಯಾಕೆ ಬಳಸಿಲ್ಲ ಒಂದು ಸಲಾನೂ? ಕರ್ನಾಟಕದ ಎಂಪಿಯಾಗಿ ನಮ್ಮ ಸಿಲ್ಕಿಗೂ ಗೌರವ ಕೊಡಬೇಕಲ್ಲವೆ?' ಎಂದು ಪ್ರಶ್ನಿಸಿದೆ. ಅವಳು ಯೋಚಿಸಲಾರಂಭಿಸಿದಳು.

ದಿನದ ಟ್ವೀಟ್

ವಾಯುಮಾಲಿನ್ಯ: ಹೊಣೆ ಅರಿಯಬೇಕಿದೆ



ಭಾರತದ ವಾಯು ಗುಣಮಟ್ಟ ಸೂಚ್ಯಂಕ ಅಪಾಯಕಾರಿಯಾಗಿದೆ. ಈ ಸಮಸ್ಯೆಗೆ ಪರಿಹಾರ ಹುಡುಕುವ ಜವಾಬ್ದಾರಿ ರಾಜಕಾರಣಿಗಳದ್ದಾಗಿದ್ದರೂ ನಾವು ಈ ವಿಷಯದಲ್ಲಿ ಅವರನ್ನು ಹೊಣೆ ಮಾಡುತ್ತಿಲ್ಲ. ವಾಯುಮಾಲಿನ್ಯವು ನವಜಾತ ಶಿಶುಗಳಿಂದ ಹಿಡಿದು ಹಿರಿಯರವರೆಗೆ ಎಲ್ಲರ ಮೇಲೂ ಪರಿಣಾಮ ಬೀರುತ್ತಿದೆ. ಈ ವಿಷಯದಲ್ಲಿ ತುರ್ತಾಗಿ ಕ್ರಮ ಜರುಗಿಸಬೇಕಾಗಿದೆ.

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ

ಕಿಡಿನುಡಿ

ಭಿನ್ನಮತೀಯರು ಮಾನಸಿಕ ಅಸ್ವಸ್ಥರಾಗಿದ್ದು, ಬಿಜೆಪಿಯನ್ನು ಹಾಳು ಮಾಡಲೆಂದೇ ಈ ರೀತಿ ಹಾದಿ-ಬೀದಿಯಲ್ಲಿ ಮಾತನಾಡುತ್ತಿದ್ದಾರೆ. ಅವರಿಗೆ ಮಾನ, ಮರ್ಯಾದೆ ಇದ್ದರೆ ಕಾಂಗ್ರೆಸ್ ನೇತೃತ್ವದ ಸರ್ಕಾರದ ವಿರುದ್ಧ ಹೋರಾಟ ನಡೆಸಲಿ.



ಎಂ.ಪಿ.ರೇಣುಕಾಚಾರ್ಯ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 5-2-2000

• ನಲವತ್ತೇಳು ಲಕ್ಷದ ಜಯಾ ಡಾಬು!

ಚೆನ್ನೈ, ಫೆ. 4 (ಪಿಟಿಐ): ಅಪರಂಜಿ ಚಿನ್ನದಿಂದ ತಯಾರಿಸಿದ, 2,389 ವಜ್ರದ ಹರಳುಗಳಿರುವ ಒಂದು ಕೆ.ಜಿ. ತೂಕದ ಡಾಬು ಇಲ್ಲಿನ ವಿಶೇಷ ನ್ಯಾಯಾಲಯದಲ್ಲಿ ಆಕರ್ಷಣೆಗೊಳಗಾಯಿತು.

ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಅವರ ನಿವಾಸದಿಂದ ವಶಪಡಿಸಿಕೊಂಡ ಆಭರಣಗಳ ಪರಿಶೀಲನೆಯ ವೇಳೆ ನವರತ್ನಖಚಿತ ಅಪೂರ್ವ ಡಾಬು ಎಲ್ಲರ ಗಮನ ಸೆಳೆಯಿತು.

ಅಂತೆಯೇ ರೂ.6.16 ಲಕ್ಷ ಮೌಲ್ಯದ, 165 ವಜ್ರದ ಹರಳುಗಳ ಚಿನ್ನದ ಸರ ಕಣ್ಮನ ಸೆಳೆಯಿತು. ಬಳೆಗಳು, ಚಿನ್ನದ ಸರ, ಅಮೂಲ್ಯ ಹರಳುಗಳ ಪದಕಗಳು ಸೇರಿ ಒಟ್ಟು ರೂ. ನಾಲ್ಕು ಕೋಟಿ ಮೌಲ್ಯದ ಆಭರಣಗಳನ್ನು ಅಕ್ರಮ ಸಂಪತ್ತು ಕ್ರೋಡೀಕರಣ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ನ್ಯಾಯಾಧೀಶರು ಪರಿಶೀಲಿಸಿದರು.

• ಶೌಚಾಲಯ ಕಡ್ಡಾಯ ಆಯೋಗ ತಾಕೀತು

ಬೆಂಗಳೂರು, ಫೆ. 4– ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಯು ತನ್ನ ಮನೆಯಲ್ಲಿ ಶೌಚಾಲಯ ಹೊಂದಿರಬೇಕಾಗುತ್ತದೆ ಎಂದು ರಾಜ್ಯ ಚುನಾವಣಾ ಆಯೋಗ ಸ್ಪಷ್ಟವಾಗಿ ತಿಳಿಸಿದೆ.

50 ವರ್ಷಗಳ ಹಿಂದೆ

ಬುಧವಾರ, 5-2-1975

• ಗಂಧದ ಮರ: ರೈತರಿಗೂ ಅರ್ಧ ಹಕ್ಕು

ಹುಬ್ಬಳ್ಳಿ, ಫೆ. 4– ರೈತರು ಮತ್ತು ಖಾಸಗಿ ವ್ಯಕ್ತಿಗಳಿಗೆ ಸೇರಿದ ಜಮೀನುಗಳಲ್ಲಿ ಬೆಳೆದಿರುವ ಶ್ರೀಗಂಧದ ಮರಗಳ ಮೇಲಿನ ತನ್ನ ಸಂಪೂರ್ಣ ಹಕ್ಕನ್ನು ಅನುಭವಿಸುತ್ತಿರುವ ರಾಜ್ಯ ಸರ್ಕಾರ, ಇನ್ನು ಮುಂದೆ ತನ್ನ ಹಕ್ಕಿನ ಅರ್ಧಭಾಗವನ್ನು ಅವು ಬೆಳೆದಿರುವ ಜಮೀನಿನ ಒಡೆಯರಿಗೆ ನೀಡಲಿದೆ.

'ಗಂಧದ ನಾಡು' ಎನಿಸಿರುವ ಕರ್ನಾಟಕ ರಾಜ್ಯದಲ್ಲಿ ಗಂಧದ ಸಿರಿ ಸಂಪತ್ತನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ರಿಯಾಯಿತಿ ಮತ್ತು ಪ್ರೋತ್ಸಾಹ ಕೊಡುವ ಮೂಲಕ ಖಾಸಗಿ ಜಮೀನು ಹಾಗೂ ಕಾರ್ಖಾನೆ ಆವರಣಗಳಲ್ಲಿ ಗಂಧದ ಮರಗಳನ್ನು ಬೆಳೆಸಲು ಪ್ರೋತ್ಸಾಹ ಕೊಡಲು ಸರ್ಕಾರ ಉದ್ದೇಶಿಸಿದೆ.

• ಉಚಿತ ನೀರು ರದ್ದು ವಿರುದ್ಧ ಹೋರಾಟಕ್ಕೆ ಜನತಾ ಸಮಿತಿ

ಬೆಂಗಳೂರು, ಫೆ. 4– ನಗರದಲ್ಲಿ ಉಚಿತ ನೀರು ರದ್ದುಪಡಿಸಬೇಕು ಎಂಬ ಬೆಂಗಳೂರು ನಗರ ಕಾರ್ಪೊರೇಷನ್ನಿನ ತೀರ್ಮಾನದ ವಿರುದ್ಧ ಚಳವಳಿ ಹೂಡಲು 'ಜನತಾ ನಗರ ಸಂಘರ್ಷ' ಎಂಬ ಸಮಿತಿಯೊಂದು ರಚಿತವಾಗಿದೆ. ಎಚ್.ಎಸ್. ದೊರೆಸ್ವಾಮಿ ಮತ್ತು ಎ. ಲಕ್ಷ್ಮೀಸಾಗರ ಅವರು ಸಂಚಾಲಕರಾಗಿರುವ ಈ ಸಮಿತಿಗೆ ಸದ್ಯಕ್ಕೆ 20 ಮಂದಿ ಸದಸ್ಯರಾಗಿದ್ದಾರೆ.

ಸಂಗತ

ಮರೆಯುತ್ತಿದ್ದೇವೆ ಸಾಂಸ್ಕೃತಿಕ ಹೊಣೆ

ಮಕ್ಕಳಲ್ಲಿ ಸೃಜನಶೀಲ ಹವ್ಯಾಸಗಳನ್ನು ಬೆಳೆಸುವ ಮೂಲಕ ಸುಸಂಸ್ಕೃತ ಸಮಾಜವನ್ನು ನಿರ್ಮಿಸುವುದು ಪ್ರತಿಯೊಬ್ಬರ ಸಾಂಸ್ಕೃತಿಕ ಜವಾಬ್ದಾರಿಯಾಗಬೇಕು

• ರಾಜಕುಮಾರ ಕುಲಕರ್ಣಿ

'ಈಗೀಗ ಮಕ್ಕಳು ಮತ್ತು ಯುವಜನ ಸಾಹಿತ್ಯ, ಸಂಗೀತ ಮತ್ತು ಕಲೆಗಳಿಂದ ವಿಮುಖರಾಗುತ್ತಿದ್ದಾರೆ. ಮಕ್ಕಳಲ್ಲಿ ಸಾಂಸ್ಕೃತಿಕ ಹವ್ಯಾಸಗಳನ್ನು ಬೆಳೆಸಬೇಕಾದ ಪಾಲಕರಾದ ನಾವು, ಆ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎನಿಸುತ್ತಿದೆ'– ಇತ್ತೀಚೆಗೆ ನಾಟಕ ವೀಕ್ಷಣೆಗೆಂದು ಹೋಗಿದ್ದ ಸಂದರ್ಭದಲ್ಲಿ ವಿರಾಮದ ವೇಳೆ ಹಿರಿಯರೊಬ್ಬರು ಹೀಗೆ ಆತಂಕ ವ್ಯಕ್ತಪಡಿಸಿದರು. ಅವರು ಹೀಗೆ ಹೇಳುವುದಕ್ಕೆ, ಅಂದು ನಾಟಕ ವೀಕ್ಷಿಸಲು ಸೇರಿದ್ದ ಪ್ರೇಕ್ಷಕರ ಸಮೂಹದಲ್ಲಿ ಮಕ್ಕಳು ಮತ್ತು ಯುವಜನ ಇಲ್ಲದಿದ್ದುದೇ ಕಾರಣವಾಗಿತ್ತು. ವೃದ್ಧರು ಮತ್ತು ಬೆರಳೆಣಿಕೆಯಷ್ಟು ಸಂಖ್ಯೆಯ ಮಧ್ಯ ವಯಸ್ಸಿನವರು ಮಾತ್ರ ಅಲ್ಲಿ ಉಪಸ್ಥಿತರಿದ್ದರು. ಆ ಸನ್ನಿವೇಶವು ಸಾಂಸ್ಕೃತಿಕ ಲೋಕದ ದುರಂತಕ್ಕೆ ಕನ್ನಡಿ ಹಿಡಿದಂತಿತ್ತು.

ಪಾಲಕರಾಗಿ, ಶಿಕ್ಷಕರಾಗಿ, ಸಮಾಜದ ಪ್ರಜ್ಞಾವಂತ ನಾಗರಿಕರಾಗಿ ಹೀಗೆ ಹಲವು ಪಾತ್ರಗಳ ಮೂಲಕ ಮಕ್ಕಳು ಮತ್ತು ಯುವಜನರಲ್ಲಿ ಸಾಹಿತ್ಯ, ಸಂಗೀತ, ನಾಟಕ, ಕಲೆಗಳ ಕುರಿತು ಆಸಕ್ತಿ, ಅಭಿರುಚಿ ಬೆಳೆಸಬೇಕಾದ ಮಹತ್ವದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. 'ಬದುಕು ಯಾಂತ್ರಿಕವಾಗುತ್ತಿರುವ ಯುಗದಲ್ಲಿ ನಮ್ಮನ್ನು ಆಗೀಗಲಾದರೂ ಮನುಷ್ಯರನ್ನಾಗಿಸುವ ಸಾಮರ್ಥ್ಯವು ಸಾಹಿತ್ಯ ಮತ್ತು ಇತರ ಕಲೆಗಳಿಗಿದೆ' ಎಂದಿದ್ದಾರೆ ಕಥೆಗಾರ ಯಶವಂತ ಚಿತ್ತಾಲ.

ನಾಟಕ ಪ್ರದರ್ಶನ, ಪುಸ್ತಕ ಬಿಡುಗಡೆ, ಸಂಗೀತ ಕಛೇರಿಯಂತಹ ಕಾರ್ಯಕ್ರಮಗಳಿಗೆ ಜನರನ್ನು ಸೇರಿಸುವುದೇ ಆಯೋಜಕರಿಗೆ ಬಹು ದೊಡ್ಡ ತಲೆನೋವಾಗಿದೆ. ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಾಮಾನ್ಯವಾಗಿ ವಯೋವೃದ್ಧರೇ ಪ್ರೇಕ್ಷಕರ ಸಾಲಿನಲ್ಲಿ ಗೋಚರಿಸುತ್ತಾರೆ. ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸೇರಿಸಲು ಕೆಲವೊಮ್ಮೆ ಸಿನಿಮಾಲೋಕದ ತಾರೆಗಳನ್ನು ಅತಿಥಿಗಳನ್ನಾಗಿ ಆಮಂತ್ರಿಸುವುದುಂಟು. ಆಗೆಲ್ಲ ಸೆಲೆಬ್ರಿಟಿಗಳೊಂದಿಗೆ ಸೆಲ್ಫಿ ತೆಗೆದುಕೊಳ್ಳುವ ಉಮೇದು ಪ್ರೇಕ್ಷಕರಲ್ಲಿ ಮೂಡಿ, ಕಾರ್ಯಕ್ರಮದ ನಿಜವಾದ ಉದ್ದೇಶ ಮೂಲೆಗುಂಪಾಗುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಭಿಕರನ್ನು ಆಕರ್ಷಿಸಲು ಉಪಾಹಾರ ಅಥವಾ ಊಟದ ವ್ಯವಸ್ಥೆಯನ್ನು ಮಾಡುವ ಪರಿಪಾಟ ಒಂದು ಸಂಪ್ರದಾಯದಂತಾಗಿದೆ. ಇಂತಹ ಪ್ರಲೋಭನೆಯ ಮೂಲಕ ಜನರನ್ನು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕರೆತರಬೇಕಾದ ದುಃಸ್ಥಿತಿ ನಿರ್ಮಾಣವಾಗಿದೆ.

ರಾಜ್ಯದ ಬೇರೆ ಬೇರೆ ಭಾಗಗಳಲ್ಲಿನ ಲೇಖಕರು ತಮ್ಮ ಪುಸ್ತಕಗಳನ್ನು ರಾಜಧಾನಿ ಬೆಂಗಳೂರಿನಲ್ಲಿ ಬಿಡುಗಡೆಗೊಳಿಸುವ ಪರಿಪಾಟ ಹೆಚ್ಚುತ್ತಿದೆ. ರಾಜಧಾನಿಯ ಹೊರಗೆ ಪುಸ್ತಕ ಬಿಡುಗಡೆಯಂತಹ ಕಾರ್ಯಕ್ರಮಗಳಿಗೆ ಜನರನ್ನು ಸೇರಿಸುವುದು ಕಷ್ಟದ ಕೆಲಸ ಎನ್ನುವುದು ಇದಕ್ಕೆ ಕೊಡುವ ಕಾರಣವಾಗಿದೆ. ಬೆಂಗಳೂರಿನ ಚಿಕ್ಕ ಸಭಾಂಗಣವೊಂದರಲ್ಲಿ ಸೇರುವ ನೂರರಿಂದ ನೂರೈವತ್ತು ಪ್ರೇಕ್ಷಕರನ್ನು ಇಡೀ ರಾಜ್ಯದ ಓದುಗ ವಲಯದ ಪ್ರತಿನಿಧಿಗಳೆಂದಾಗಲಿ ಅಥವಾ ಸಾಂಸ್ಕೃತಿಕ ಜವಾಬ್ದಾರಿ ಹೊತ್ತ ನೇತಾರರೆಂದಾಗಲಿ ಪರಿಭಾವಿಸಬೇಕೆ ಎನ್ನುವ ಪ್ರಶ್ನೆ ಸಹಜವಾಗಿಯೇ ಎದುರಾಗುತ್ತದೆ.

ಮನೆ ಮತ್ತು ಶಾಲೆಯಲ್ಲಿ ಮಕ್ಕಳಲ್ಲಿ ಸಾಂಸ್ಕೃತಿಕ ಅಭಿರುಚಿಯನ್ನು ಬೆಳೆಸುವ ವಾತಾವರಣ ಇಲ್ಲದಿರುವುದು ಇಂದು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೇಕ್ಷಕರ ಕೊರತೆಯ ಹಿಂದಿರುವ ಕಾರಣವಾಗಿದೆ. ಅದೆಷ್ಟೋ ಮನೆಗಳಲ್ಲಿ ಪುಸ್ತಕದ ಪುಟ್ಟ ಗೂಡು ಸಹ ಇರುವುದಿಲ್ಲ. ಮಕ್ಕಳನ್ನು ಸಂಗೀತ, ನಾಟಕ, ಚಿತ್ರಕಲಾ ಪ್ರದರ್ಶನಗಳಿಗೆ ಕರೆದೊಯ್ಯುವ ಮನೋಭಾವದ ಪಾಲಕರ ಸಂಖ್ಯೆ ಕ್ಷೀಣಿಸುತ್ತಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳ ವೀಕ್ಷಣೆಗೆ ಬಳಕೆಯಾಗುವ ಸಮಯವನ್ನು ಮಕ್ಕಳು ಶಾಲಾ ಹೋಂವರ್ಕ್, ಪರೀಕ್ಷಾ ಸಿದ್ಧತೆ ಮತ್ತು ಪಠ್ಯಪುಸ್ತಕಗಳ ಓದಿಗೆ ವಿನಿಯೋಗಿಸಿಕೊಳ್ಳಲಿ ಎಂದು ಪಾಲಕರು ಅಪೇಕ್ಷಿಸುತ್ತಿದ್ದಾರೆ. ಶಾಲಾ ರಜಾದಿನಗಳಲ್ಲೂ ಮಕ್ಕಳನ್ನು ಬೇಸಿಗೆ ಶಿಬಿರಗಳಿಗೆ ಸೇರಿಸಿ ಬೋಧನೆ ಮತ್ತು ಪರೀಕ್ಷೆಯಂತಹ ಶೈಕ್ಷಣಿಕ ವಾತಾವರಣದಲ್ಲೇ ಸಮಯ ಕಳೆಯುವಂತೆ ನೋಡಿಕೊಳ್ಳುತ್ತಿದ್ದಾರೆ.

ಸಾಂಸ್ಕೃತಿಕ ಹವ್ಯಾಸಗಳ ಕೊರತೆಯ ಕಾರಣದಿಂದ ವಿದ್ಯಾರ್ಥಿಗಳಲ್ಲಿ ಹಿಂಸಾಪ್ರವೃತ್ತಿ ಹೆಚ್ಚುತ್ತಿದೆ. ಪುಸ್ತಕಗಳ ಓದು, ಸಂಗೀತ ಆಲಿಸುವುದು, ನಾಟಕದಂತಹ ಸಾಂಸ್ಕೃತಿಕ ಹವ್ಯಾಸಗಳಿಲ್ಲದ ಮಕ್ಕಳು ಮೊಬೈಲ್ ಫೋನ್ ವ್ಯಸನಿಗಳಾಗುತ್ತಿದ್ದಾರೆ. ಈಗಂತೂ ಮಕ್ಕಳ ಮೊಬೈಲ್ ಗೀಳು ಕೊರೊನಾ ನಂತರ ಕಾಲದ ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ.



ಸಾಂಸ್ಕೃತಿಕ ಹವ್ಯಾಸಗಳ ಕೊರತೆಯು ಭಾಷೆಯ ದುರ್ಬಳಕೆಗೆ ಕಾರಣವಾಗುತ್ತಿದೆ. ಕೆಲವು ಜಾಹೀರಾತುಗಳು ಮತ್ತು ಸಿನಿಮಾಗಳಲ್ಲಿ ಭಾಷೆಯನ್ನು ಕೆಟ್ಟದಾಗಿ ಬಳಕೆ ಮಾಡಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಸಿನಿಮಾ ಮಾಧ್ಯಮದ ಪ್ರಭಾವದಿಂದಾಗಿ, ಶಬ್ದಕೋಶದಲ್ಲೂ ಸಿಗದ, ಅರ್ಥವೇ ಇಲ್ಲದ ಪದಗಳು ಶಾಲೆ ಮತ್ತು ಕಾಲೇಜುಗಳ ಆವರಣಗಳಲ್ಲಿ ಹರಿದಾಡುತ್ತಿವೆ. 'ಮಕ್ಕಳನ್ನು ಸಾಹಿತ್ಯದ ಓದುಗರನ್ನಾಗಿಸುವುದು ಅತ್ಯಂತ ಅವಶ್ಯವಾಗಿದೆ. ಸಾಹಿತ್ಯದ ಮೂಲಕವೇ ಮಗು ಪ್ರೀತಿ ಮತ್ತು ಅಂತಃಕರಣ ತುಂಬಿರುವ ಭಾಷೆಯನ್ನು ಕಲಿಯಬೇಕಿದೆ' ಎನ್ನುತ್ತಾರೆ ನೊಬೆಲ್ ಪ್ರಶಸ್ತಿ ಪುರಸ್ಕೃತ ಕವಿ ಜೋಸೆಫ್ ಬ್ರಾಡ್‌ಸ್ಕಿ. ಬ್ರಾಡ್‌ಸ್ಕಿ ಅವರ ಮಾತು ಮಕ್ಕಳಲ್ಲಿ ಬೆಳೆಸಬೇಕಾದ ಸಾಂಸ್ಕೃತಿಕ ಹವ್ಯಾಸದ ಅಗತ್ಯವನ್ನು ಧ್ವನಿಸುತ್ತದೆ.

ಸೃಜನಶೀಲ ಹವ್ಯಾಸವು ಮನುಷ್ಯ ಸ್ವಭಾವದಲ್ಲಿ ಪರಿವರ್ತನೆಯನ್ನು ತಂದು ಆ ಮೂಲಕ ಸಮಾಜದಲ್ಲಿ ಕೇಡಿನ ಪ್ರಮಾಣವನ್ನು ತಗ್ಗಿಸುವ ಕೆಲಸ ಮಾಡುತ್ತದೆ. ಪರಿಣಾಮವಾಗಿ, ಮಕ್ಕಳಲ್ಲಿ ಸೃಜನಶೀಲ ಹವ್ಯಾಸಗಳನ್ನು ಬೆಳೆಸುವುದು, ಆ ಮೂಲಕ ಸುಸಂಸ್ಕೃತ ಸಮಾಜವನ್ನು ನಿರ್ಮಾಣ ಮಾಡುವುದು ಪ್ರತಿಯೊಬ್ಬರ ಸಾಂಸ್ಕೃತಿಕ ಜವಾಬ್ದಾರಿಯಾಗಬೇಕು.

ವಾಚಕರ ವಾಣಿ

ಅತ್ಯಾಚಾರ ಪ್ರಕರಣ: ಕಟ್ಟುನಿಟ್ಟಾಗಿ ಪರಿಗಣಿಸಿ

ರಾಜ್ಯದಲ್ಲಿ ಐದು ವರ್ಷಗಳಲ್ಲಿ 2,803 ಮಹಿಳೆಯರ ಮೇಲೆ ಅತ್ಯಾಚಾರ ನಡೆದ ಪ್ರಕರಣಗಳು ವರದಿಯಾಗಿದ್ದು, ಇವುಗಳ ಪೈಕಿ 75 ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ ಎಂದು ವರದಿಯಾಗಿದೆ (ಪ್ರ.ವಾ., ಫೆ. 4). ಅಂದರೆ ಶೇಕಡ 3ರಿಂದ 4ರಷ್ಟು ಪ್ರಕರಣಗಳಲ್ಲಿ ಮಾತ್ರ ಆರೋಪ ಸಾಬೀತಾಗಿದೆ ಎಂದಾಯಿತು. ಸಾಕ್ಷ್ಯಾಧಾರಗಳ ಕೊರತೆ, ಸುಳ್ಳು ಪ್ರಕರಣ, ತನಿಖೆ ಹಾಗೂ ವಿಚಾರಣೆ ವಿಳಂಬದಿಂದ 1,932 ಪ್ರಕರಣಗಳಲ್ಲಿ ಆರೋಪಿಗಳ ಖುಲಾಸೆಯಾಗಿರುವುದಾಗಿ ವರದಿ ವಿವರಿಸಿದೆ. ಆದರೆ ಈ ಕಾರಣಗಳಿಗಿಂತಲೂ ಹೆಚ್ಚಾಗಿ ಹಣ, ರಾಜಕೀಯ ಪ್ರಭಾವ, ಪೊಲೀಸರು ಎಫ್‌ಐಆರ್ ಹಂತದಲ್ಲಿಯೇ ಪ್ರಕರಣವನ್ನು ದುರ್ಬಲಗೊಳಿಸುವುದು, ಪೊಲೀಸ್ ಠಾಣೆಗಳಲ್ಲೇ ನಡೆಯುವಂತಹ ರಾಜಿಸಂಧಾನ... ಇಂತಹ ಹತ್ತಾರು ಅಂಶಗಳು ಸೇರಿರುತ್ತವೆ.

ಗ್ರಾಮಾಂತರ ಪ್ರದೇಶದ ಪಂಚಾಯಿತಿ ಕಟ್ಟೆಗಳಲ್ಲಿ ಅತ್ಯಾಚಾರ ಆರೋಪಿಗೆ ದಂಡ ವಿಧಿಸುವ ಮೂಲಕ ಪ್ರಕರಣವನ್ನು ಸಮಾಪ್ತಿಗೊಳಿಸಿದಂತಹ ನಿದರ್ಶನಗಳೂ ಇವೆ. ಹೀಗಾಗಿ, ಅರ್ಧದಷ್ಟು ಪ್ರಕರಣಗಳು ದಾಖಲಾಗದೆ ತೆರೆಮರೆಯಲ್ಲೇ ಇತ್ಯರ್ಥಗೊಳ್ಳುತ್ತವೆ. ಅತ್ಯಾಚಾರ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗದ ವಿನಾ ದೇಶದಲ್ಲಿ ಅತ್ಯಾಚಾರ ಪ್ರಕರಣಗಳ ಸಂಖ್ಯೆಯನ್ನು ತಗ್ಗಿಸುವುದು ಕಷ್ಟಕರ.

ಬೂಕನಕೆರೆ ವಿಜೇಂದ್ರ, ಮೈಸೂರು

ಸಹೋದರ ಸಂಬಂಧ: ಪಾಂಡವರ ಅಮೂಲ್ಯ ಮಾದರಿ

ಮಧ್ಯಪ್ರದೇಶದಲ್ಲಿ ತಂದೆಯ ಅಂತ್ಯಕ್ರಿಯೆಯನ್ನು ಯಾರು ನೆರವೇರಿಸಬೇಕು ಎಂಬ ವಿಚಾರವಾಗಿ ಸಹೋದರರ ನಡುವೆ ಜಗಳ ನಡೆದು, ಮೃತದೇಹವನ್ನು ಕತ್ತರಿಸಿ ಅರ್ಧ ಭಾಗವನ್ನು ತನಗೆ ಕೊಡುವಂತೆ, ಸಹೋದರರ ಪೈಕಿ ಒಬ್ಬ ಪಟ್ಟುಹಿಡಿದದ್ದಾಗಿ ವರದಿಯಾಗಿದೆ (ಪ್ರ.ವಾ., ಫೆ. 4). ತಂದೆಯ ಮೃತದೇಹದಲ್ಲಿ ಪಾಲು ಕೇಳುವ ಮಕ್ಕಳ ಅಮಾನವೀಯ ಹಟ ಓದಿ ಹೃದಯ ಒಡೆದಂತಾಯಿತು. ತಂದೆಯ ಅಂತ್ಯಸಂಸ್ಕಾರ ನಡೆಸುವ ವಿಚಾರದಲ್ಲಿ ಹೀಗೆ ಹಟ ಹಿಡಿದದ್ದು ದುರದೃಷ್ಟಕರ. ಊರಿನವರ ಮಧ್ಯಸ್ಥಿಕೆಯ ಪರಿಣಾಮವಾಗಿ ದುರುಳ ಸಹೋದರರ ಹಟ ಸಾಧನೆಯಾಗಲಿಲ್ಲ ಎಂಬುದು ಬೇರೆ ಮಾತು. ತಂದೆ– ತಾಯಿ ಕಷ್ಟ-ನಷ್ಟ ಅನುಭವಿಸಿ ತಮ್ಮ ಮಕ್ಕಳನ್ನು ಸಾಕಿ ಸಲಹುತ್ತಾರೆ. ಆದರೆ ಮಕ್ಕಳಲ್ಲಿ ಇಂತಹ ರಾಕ್ಷಸಿ ಪ್ರವೃತ್ತಿ ಮೂಡುವುದಾದರೂ ಹೇಗೆ ಎಂದು ಆಶ್ಚರ್ಯವಾಗುತ್ತದೆ. ಶೈಕ್ಷಣಿಕ ಫಲಿತಾಂಶ ಹೆಚ್ಚಳದ ಬಗ್ಗೆ ಶಾಲೆಗಳ ಮೇಲೆ ಸದಾ ಒತ್ತಡ ಹೆಚ್ಚಾಗುತ್ತಿದೆಯೇ ವಿನಾ ನೈತಿಕ ಮೌಲ್ಯವನ್ನು ಹೆಚ್ಚಿಸುವ ವಿಷಯವನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ.

ವೃದ್ಧಾಪ್ಯದಲ್ಲಿ ಮಕ್ಕಳೊಂದಿಗೆ ಹೊಂದಿಕೊಂಡು ಬದುಕುವ ಸಹನೆಯನ್ನು ವಯೋವೃದ್ಧ ತಂದೆ– ತಾಯಿ ಮೈಗೂಡಿಸಿಕೊಳ್ಳುವುದು ಅಗತ್ಯವಾದರೂ ಮಕ್ಕಳು ನಾನು ತಾನು ಎಂದು ಪೈಪೋಟಿ, ಈರ್ಷ್ಯೆಗೆ ಬಿದ್ದರೆ ಹೆತ್ತವರ ಬದುಕು ನರಕವಾಗುತ್ತದೆ. 'ಹುಟ್ಟುತ್ತಾ ಅಣ್ಣ ತಮ್ಮಂದಿರು, ಬೆಳೆಯುತ್ತಾ ದಾಯಾದಿಗಳು' ಎಂಬ ಗಾದೆ ಸರಿ ಇರಬಹುದು. ಆದರೂ ನಮ್ಮಲ್ಲಿ ಲಕ್ಷಾಂತರ ಕುಟುಂಬಗಳು ಇಂದಿಗೂ ಒಗ್ಗಟ್ಟಿನಿಂದ ಮಾದರಿಯಾಗಿ ಬದುಕುತ್ತಿವೆ. ಪರಸ್ಪರ ನಂಬಿಕೆ, ಸಹಕಾರದಿಂದ ಬದುಕುತ್ತಾ ತಪ್ಪುಗ್ರಹಿಕೆಗಳನ್ನು ತ್ಯಜಿಸುವುದರಿಂದ ಸಹೋದರ ಸಂಬಂಧ ಅಜರಾಮರವಾಗಿರುತ್ತದೆ. ಪಾಂಡವರು ಇದಕ್ಕೆ ಅಮೂಲ್ಯ ಮಾದರಿಯಾಗಿ ನಿಲ್ಲುತ್ತಾರೆ. ದಶರಥನ ಮಕ್ಕಳ ಮನೆಯಲ್ಲಿ ಸ್ವಾರ್ಥದ ಕಿಡಿ ಹೊತ್ತಿದ್ದರೂ ಸಹೋದರ ವಾತ್ಸಲ್ಯ ಮಾತ್ರ ಕಿಂಚಿತ್ತೂ ಕಡಿಮೆಯಾಗಲಿಲ್ಲ. ನಮ್ಮ ಸಂಸ್ಕೃತಿಯ ಸಾರ ಬದುಕಿನ ದಾರಿದೀಪವಾಗಲಿ.

ತಿರುಪತಿ ನಾಯಕ್, ಕಲಬುರಗಿ

ನ್ಯಾಕು-ಲಾಕು!

ಆಮಿಷಕ್ಕೆ ಬಲಿಯಾಗಿದೆ
ಗ್ರೇಡ್ ಕೊಡುವ ನ್ಯಾಕು,
ಅದಕ್ಕೇ ಪ್ರಶ್ನೆಪತ್ರಿಕೆಗಳು
ಪರೀಕ್ಷೆಗೆ ಮುನ್ನಾ ಲೀಕು
ಅಂಕಪಟ್ಟಿಗಳು ಫೇಕು,
ಶಿಕ್ಷಣ ವ್ಯವಸ್ಥೆ
ವಿಷವರ್ತುಲದಿ
ಆಗಿದೆ ಲಾಕು!

ಎಲ್.ಎನ್.ಪ್ರಸಾದ್
ತುರುವೇಕೆರೆ

ಗುರು–ವಿರಕ್ತರು ಒಂದಾದರೆ ಸಮಸ್ಯೆಗೆ ಪರಿಹಾರ

ಕೂಡಲಸಂಗಮದಲ್ಲಿ ನಡೆದ ಹಂಡೆವಜೀರ ಸಮಾಜದ ಸಮಾವೇಶದಲ್ಲಿ ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ 'ವೀರಶೈವದಿಂದ ಲಿಂಗಾಯತ, ಲಿಂಗಾಯತದಿಂದ ವೀರಶೈವ ತೆಗೆದರೆ ಸಮಾಜಕ್ಕೆ ನಷ್ಟ. ಭಿನ್ನಾಭಿಪ್ರಾಯ ಬಿಟ್ಟು ಒಗ್ಗೂಡಿ ನಡೆದರೆ ಸಮಾಜಕ್ಕೆ ಭವಿಷ್ಯವಿದೆ. ಧರ್ಮವನ್ನು ಒಡೆಯುವ ಕಾರ್ಯವನ್ನು ಯಾರೂ ಮಾಡಬಾರದು' ಎಂದು ಹೇಳಿದರೆ, ಸಚಿವ ಶಿವಾನಂದ ಪಾಟೀಲ 'ಗುರು–ವಿರಕ್ತರಲ್ಲಿ ಭಿನ್ನಾಭಿಪ್ರಾಯವಿದೆ. ವೀರಶೈವ- ಲಿಂಗಾಯತರು ಒಗ್ಗಟ್ಟಾದರೆ ದೇಶವನ್ನೇ ಆಳುತ್ತೇವೆ' ಎಂದಿದ್ದಾರೆ (ಪ್ರ.ವಾ., ಫೆ. 3). ಈ ಧರ್ಮದಲ್ಲಿನ ಕೆಲವು ಸಮಸ್ಯೆಗಳು ಬಗೆಹರಿಯದ ವಿನಾ ಸಮಾಜ ಒಂದುಗೂಡುವುದು ಕನಸಿನ ಮಾತು. ಗುರು–ವಿರಕ್ತರು ಒಂದಾದರೆ ಸಮಾಜ ಒಗ್ಗೂಡುತ್ತದೆ. ಸಮಾನಮನಸ್ಕ ಗುರು–ವಿರಕ್ತರು ಒಂದು ಕಡೆ ಸೇರಿ ಈ ಸಂಬಂಧ ಚರ್ಚಿಸಿ ತೀರ್ಮಾನಕ್ಕೆ ಬರಬೇಕು.

ಶಿವಕುಮಾರ ಬಂಡೋಳಿ, ಹುಣಸಗಿ, ಯಾದಗಿರಿ

ಬಿಪಿಎಲ್ ಪಡಿತರ ಚೀಟಿ: ಬದಲಾಗಲಿ ಮಾನದಂಡ

ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುವ ಪ್ರಕರಣಗಳು ಪದೇ ಪದೇ ವರದಿಯಾಗುತ್ತಿವೆ. ಬಿಪಿಎಲ್ ಪಡಿತರ ಚೀಟಿದಾರರಿಗೆ ಸರ್ಕಾರ ನೀಡುವ ಸವಲತ್ತುಗಳನ್ನು ಪಡೆದುಕೊಳ್ಳಲು ಅರ್ಹರಲ್ಲದವರು ಸಹ ವಾಮಮಾರ್ಗದಲ್ಲಿ ಬಿಪಿಎಲ್ ಪಡಿತರ ಚೀಟಿ ಮಾಡಿಸಿಕೊಂಡಿರುತ್ತಾರೆ. ಆದರೆ ಅವರಿಗೆ ಪಡಿತರ ಧಾನ್ಯದ ಅವಶ್ಯಕತೆ ಇರುವುದಿಲ್ಲ. ತಮಗೆ ಬೇಡವಾದ ಪಡಿತರ ಧಾನ್ಯಗಳನ್ನು ಅವರು ಮಾರಿಕೊಳ್ಳುತ್ತಾರೆ. ಇದರಿಂದಾಗಿ, ಮಧ್ಯವರ್ತಿಗಳಿಗೆ ಲಾಭ, ಸರ್ಕಾರಕ್ಕೆ ನಷ್ಟ. ಕಾಳಸಂತೆಯಲ್ಲಿ ಪಡಿತರ ಅಕ್ಕಿ ಮಾರಾಟವಾಗುವುದು ಸರ್ವೇ ಸಾಮಾನ್ಯ ಎಂಬಂತಾಗಿದೆ.

ಪಡಿತರ ಅಕ್ಕಿಗೆ ಪಾಲಿಶ್ ಮಾಡಿಸಿ ಉತ್ತಮ ದರ್ಜೆಯ ಅಕ್ಕಿಯೆಂದು ಬಿಂಬಿಸಿ ಪಕ್ಕದ ರಾಜ್ಯಗಳಲ್ಲಿ ಅಧಿಕ ಬೆಲೆಗೆ ಮಾರಾಟ ಮಾಡುತ್ತಿರುವ ಪ್ರಕರಣಗಳೂ ಹೆಚ್ಚುತ್ತಿವೆ. ಅನರ್ಹ ಬಿಪಿಎಲ್ ಪಡಿತರ ಚೀಟಿಗಳನ್ನು ಗುರುತಿಸಿ ಮುಟ್ಟುಗೋಲು ಹಾಕಿಕೊಳ್ಳುವ ಕೆಲಸ ಆಮೆಗತಿಯಲ್ಲಿ ಸಾಗಿದೆ. ಬಿಪಿಎಲ್ ಪಡಿತರ ಚೀಟಿ ಪಡೆದುಕೊಳ್ಳಲು ಪ್ರಸ್ತುತ ಇರುವ ಮಾನದಂಡಗಳನ್ನು ಪರಿಷ್ಕರಿಸಿ ಅಕ್ರಮಗಳಿಗೆ ಕಡಿವಾಣ ಹಾಕಬೇಕು. ಈ ಮೂಲಕ ಸರ್ಕಾರದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟವನ್ನು ತಪ್ಪಿಸಬೇಕು.

ಜಿ.ನಾಗೇಂದ್ರ ಕಾವೂರು, ಸಂಡೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಡೊನಾಲ್ಡ್ ಟ್ರಂಪ್ ತೆರಿಗೆ ತಂತ್ರಗಾರಿಕೆ



ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತವೂ ಸೇರಿದಂತೆ ಹಲವು ದೇಶಗಳ ಮೇಲೆ ಸುಂಕ ಹೇರುವುದಾಗಿ ಹೇಳುತ್ತಲೇ ಇದ್ದರು. ಆದರೆ, ಭಾರತವನ್ನು ಹೊರತುಪಡಿಸಿ ಕೆನಡಾ, ಮೆಕ್ಸಿಕೊ ಮತ್ತು ಚೀನಾ ಮೇಲೆ ಅವರು ತೆರಿಗೆ ಹೇರಿದಾಗ ಹಲವರು ಅಚ್ಚರಿ ಮತ್ತು ಕಳವಳ ವ್ಯಕ್ತಪಡಿಸಿದ್ದರು. ಅವರ ಈ ಕ್ರಮದ ಹಿಂದಿನ ಉದ್ದೇಶವೇ ಬೇರೆ ಎನ್ನುವುದು ಈಗ ಸ್ಪಷ್ಟವಾಗುತ್ತಿದೆ. ತಮ್ಮ ದೇಶವನ್ನು ಕಾಡುತ್ತಿರುವ ಅಕ್ರಮ ವಲಸಿಗರ ಒಳನುಸುಳುವಿಕೆ, ಮಾದಕ ದ್ರವ್ಯ ಕಳ್ಳಸಾಗಣೆಯಂಥ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅವರು ತೆರಿಗೆ ಹೇರಿಕೆಯನ್ನು ಸಾಧನವನ್ನಾಗಿ ಬಳಸಿಕೊಂಡಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ

ಪ್ರಜಾವಾಣಿ ವಾರ್ತೆ

ಕೆನಡಾ, ಮೆಕ್ಸಿಕೊದ ಎಲ್ಲ ಉತ್ಪನ್ನಗಳ ಮೇಲೆ ಶೇ 25ರಷ್ಟು ಹಾಗೂ ಚೀನಾದ ಸರಕುಗಳ ಮೇಲೆ ಹೆಚ್ಚುವರಿಯಾಗಿ ಶೇ 10ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದರು.

ಟ್ರಂಪ್ ಅವರ ತೆರಿಗೆ ಅಸ್ತ್ರಕ್ಕೆ ಆ ರಾಷ್ಟ್ರಗಳಿಂದಲೂ ಪ್ರತಿ ಅಸ್ತ್ರಗಳು ಪ್ರಯೋಗವಾದವು. ಕೆನಡಾ, ಅಮೆರಿಕದ ಉತ್ಪನ್ನಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸುವುದಾಗಿ ಘೋಷಿಸಿತು. ಚೀನಾ ಕೂಡ ಅಮೆರಿಕದ ಕಲ್ಲಿದ್ದಲು, ಎಲ್‌ಎನ್‌ಜಿ ಮೇಲೆ ಶೇ 15ರಷ್ಟು ಮತ್ತು ಕಚ್ಚಾ ತೈಲ, ಶಸ್ತ್ರಾಸ್ತ್ರಗಳ ಮೇಲೆ ಶೇ 10ರಷ್ಟು ಸುಂಕ ವಿಧಿಸುವ ನಿರ್ಧಾರ ಕೈಗೊಂಡಿತು.

ಸ್ವದೇಶದಲ್ಲೇ ವಿರೋಧ: ಟ್ರಂಪ್ ನಿರ್ಧಾರಕ್ಕೆ ಮೊದಲು ಅಮೆರಿಕದಿಂದಲೇ ವಿರೋಧ ವ್ಯಕ್ತವಾಯಿತು. ತೆರಿಗೆ ಹೇರಿಕೆಯ ಹೊರೆಯು ಅಮೆರಿಕದ ಗ್ರಾಹಕರ ಮೇಲೆ ಬೀಳಲಿದ್ದು, ಸರಕುಗಳ ಬೆಲೆ ಹೆಚ್ಚಾಗಲಿದೆ ಎನ್ನುವ ಅಭಿಪ್ರಾಯ ಕೇಳಿಬಂದವು. ಮಾರಾಟಕ್ಕೆ ಅಣಿಯಾಗಿರುವ ಸರಕುಗಳ ಬೆಲೆ ಹೆಚ್ಚಿಸುವುದಷ್ಟೇ ಅಲ್ಲ, ಇತರೆ ವಸ್ತುಗಳನ್ನು ತಯಾರಿಸಲು ಬೇಕಾದ ಮಧ್ಯಂತರ ಸರಕುಗಳ ಬೆಲೆಯೂ ಇದರಿಂದ ಹೆಚ್ಚಾಗುತ್ತದೆ ಎಂದು ಬಾಸ್ಟನ್‌ನ ಫೆಡರಲ್ ರಿಸರ್ವ್ ಅಧ್ಯಕ್ಷೆ ಸೂಸಾನ್ ಎಂ.ಕಾಲಿನ್ಸ್ ಪ್ರತಿಕ್ರಿಯಿಸಿದರು.

ಇಷ್ಟಾದರೂ, ಟ್ರಂಪ್ ಸರ್ಕಾರ ತೆರಿಗೆ ವಿಧಿಸಿದ್ದನ್ನು ಸಮರ್ಥಿಸಿಕೊಂಡಿತು. ಕೆನಡಾ, ಚೀನಾ ಮತ್ತು ಮೆಕ್ಸಿಕೊದಿಂದ ಅಮೆರಿಕದ ಒಳಗೆ ಫೆಂಟಾನಿಲ್ (ಮಾದಕ ದ್ರವ್ಯ) ಪ್ರವೇಶಿಸುತ್ತಿದ್ದು, ಅದು ಜನರನ್ನು ಕೊಲ್ಲುತ್ತಿದೆ; ಜತೆಗೆ ವಲಸಿಗರು ಒಳಬರುತ್ತಿದ್ದು, ದೇಶದ ಭದ್ರತೆಗೆ ಧಕ್ಕೆ ಉಂಟಾಗುತ್ತಿದೆ ಎನ್ನುವುದು ಶ್ವೇತಭವನದ ಸಮರ್ಥನೆ.

ಚೀನಾ, ಕೆನಡಾ ಮತ್ತು ಮೆಕ್ಸಿಕೊಗಳಿಂದ ಅಮೆರಿಕಕ್ಕೆ ವಾರ್ಷಿಕ 1 ಲಕ್ಷ ಕೋಟಿ ಡಾಲರ್ (₹87.06 ಲಕ್ಷ ಕೋಟಿ) ಮೊತ್ತದ ಸರಕುಗಳು ಆಮದಾಗುತ್ತಿದ್ದು, ಒಟ್ಟು ಆಮದಿನಲ್ಲಿ ಈ ರಾಷ್ಟ್ರಗಳ ಪಾಲು ಮೂರನೇ ಒಂದರಷ್ಟಿದೆ. ಅಮೆರಿಕದ ತೆರಿಗೆ ಹೇರಿಕೆ, ಅದಕ್ಕೆ ಪ್ರತಿಯಾಗಿ ಇತರೆ ದೇಶಗಳೂ ಪ್ರತೀಕಾರದ ಕ್ರಮಕ್ಕೆ ಮುಂದಾಗಿರುವುದರಿಂದ ವ್ಯಾಪಾರ ಸಮರ ಏರ್ಪಡುತ್ತದೆ. ಪೂರೈಕೆ ಸರಪಳಿಗೆ ಹಾನಿಯಾಗಿ, ಅಂತರರಾಷ್ಟ್ರೀಯ ವ್ಯಾಪಾರ ವ್ಯವಸ್ಥೆಯನ್ನು ಪತನಗೊಳಿಸುವುದಲ್ಲದೇ, ದೇಶಗಳ ಆರ್ಥಿಕತೆಗಳಿಗೂ ಪೆಟ್ಟು ನೀಡುವ ಸಾಧ್ಯತೆಗಳಿವೆ ಎನ್ನುವ ಕಳವಳ ವ್ಯಕ್ತವಾಯಿತು.

ಮುಂದೇನು ಘಟಿಸಬಹುದು ಎನ್ನುವ ಕದನ ಕುತೂಹಲ ಮೂಡಿರುವಾಗಲೇ ಟ್ರಂಪ್ ಅವರು ಅನಿರೀಕ್ಷಿತ ನಿರ್ಧಾರ ಕೈಗೊಂಡಿದ್ದಾರೆ. ಕೆನಡಾ, ಮೆಕ್ಸಿಕೊದಿಂದ ಬರುವ ಸರಕುಗಳ ಮೇಲೆ ಶೇ 25ರಷ್ಟು ಸುಂಕ ಹೇರಿದ್ದ ತಮ್ಮ ನಿರ್ಧಾರವನ್ನು 30 ದಿನಗಳ ಮಟ್ಟಿಗೆ ತಡೆಹಿಡಿದಿದ್ದಾರೆ. ತಮ್ಮ ಸಾಂಪ್ರದಾಯಿಕ ಎದುರಾಳಿಯಾದ ಚೀನಾ ಮೇಲೆ ವಿಧಿಸಿದ್ದ ತೆರಿಗೆ ಮಾತ್ರ ಜಾರಿಯಲ್ಲಿರಲಿದೆ ಎಂದಿದ್ದಾರೆ.

ಟ್ರಂಪ್ ಅವರ ವರ್ತನೆಯನ್ನು ಹಲವು ವಿಧಗಳಲ್ಲಿ ವಿಶ್ಲೇಷಿಸಲಾಗುತ್ತಿವೆ. ಅವರು ಕೆನಡಾ ಮತ್ತು ಮೆಕ್ಸಿಕೊ ಮೇಲೆ ತೆರಿಗೆ ಹೇರಿದ್ದರ ಹಿಂದೆ ಬೇರೆಯದೇ ಉದ್ದೇಶಗಳಿದ್ದವು ಎನ್ನಲಾಗುತ್ತಿದೆ. ಅಮೆರಿಕಕ್ಕೆ ಕೆನಡಾ ಹಾಗೂ ಮೆಕ್ಸಿಕೊ ಗಡಿಗಳಿಂದ ದೊಡ್ಡ ಪ್ರಮಾಣದಲ್ಲಿ ವಲಸಿಗರು ಬರುತ್ತಿದ್ದಾರೆ. ಹಾಗೆಯೇ, ಭಾರಿ ಪ್ರಮಾಣದಲ್ಲಿ ಮಾದಕ ವಸ್ತುಗಳನ್ನೂ ದೇಶದೊಳಗೆ ಕಳ್ಳಸಾಗಣೆ ಮಾಡಲಾಗುತ್ತಿದೆ. ತೆರಿಗೆಯನ್ನು ಅಸ್ತ್ರವಾಗಿಸಿಕೊಂಡು, ಅದಕ್ಕೆಲ್ಲ ಪರಿಹಾರ ಕಂಡುಕೊಳ್ಳುವ ಸಲುವಾಗಿಯೇ ಟ್ರಂಪ್ ಅವರು ತೆರಿಗೆ ಹೇರುವ ಕಾರ್ಯತಂತ್ರ ಅನುಸರಿಸಿದರು ಎನ್ನಲಾಗುತ್ತಿದೆ.

ಮೊದಲು ತೆರಿಗೆ ಹೇರಿಕೆ, ನಂತರ ಮಾತುಕತೆ: ಸದ್ಯಕ್ಕೆ, ಟ್ರಂಪ್ ಅವರು ಅಂದುಕೊಂಡಂತೆಯೇ ವಿದ್ಯಮಾನಗಳು ಘಟಿಸಿವೆ. ತೆರಿಗೆ ಹೇರಿಕೆ ಘೋಷಣೆ ಮಾಡಿದ ನಂತರ ಅಮೆರಿಕದ ಅಧ್ಯಕ್ಷರೊಂದಿಗೆ ಮೆಕ್ಸಿಕೊದ ಪ್ರಧಾನಿ ಕ್ಲಾಡಿಯಾ ಶೈನ್‌ಬಾಮ್ ಮತ್ತು ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಅವರು 'ಸಂಧಾನ' ಮಾತುಕತೆ ನಡೆಸಿದ್ದಾರೆ. ತಾವು ಮೆಕ್ಸಿಕೊ ಪ್ರಧಾನಿ ಕ್ಲಾಡಿಯಾ ಅವರೊಂದಿಗೆ ಒಂದು ಒಪ್ಪಂದಕ್ಕೆ ಬಂದಿರುವುದಾಗಿ ಟ್ರಂಪ್ ಅವರೇ ಹೇಳಿದ್ದಾರೆ. ಜಸ್ಟಿನ್ ಟ್ರುಡೊ ಅವರೊಂದಿಗೆ ನಡೆಸಿದ ಆರಂಭದ ಮಾತುಕತೆಯೂ ಅತ್ಯುತ್ತಮವಾಗಿತ್ತು ಎಂದು ಹೇಳಿರುವ ಅವರು, ಮಾತುಕತೆ ಮುಂದುವರೆಸುವುದಾಗಿಯೂ ತಿಳಿಸಿದ್ದಾರೆ.

ಮಾತುಕತೆಯ ಫಲವಾಗಿ ಕೆನಡಾವು ಗಡಿಯಲ್ಲಿ ಈ ಹಿಂದೆ ಘೋಷಿಸಿದಂತೆ 90 ಕೋಟಿ ಡಾಲರ್ (₹7,835 ಕೋಟಿ) ಯೋಜನೆಯನ್ನು ಮುಂದುವರೆಸಲಿದೆ. ಜತೆಗೆ, ಗಡಿಯಲ್ಲಿ ಹೆಚ್ಚುವರಿ ತಂತ್ರಜ್ಞಾನ ಮತ್ತು ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸುತ್ತದೆ. ತಮ್ಮ ಅನೇಕ ಬೇಡಿಕೆಗಳಿಗೆ ಕೆನಡಾ ಸಮ್ಮತಿಸಿದೆ ಎಂದೂ ಟ್ರಂಪ್ ತಿಳಿಸಿದ್ದಾರೆ. ಮೆಕ್ಸಿಕೊ ಕೂಡ ವಲಸಿಗರ ನುಸುಳುವಿಕೆ ತಡೆಯಲು ಮತ್ತು ಮಾದಕ ವಸ್ತುಗಳ ಕಳ್ಳಸಾಗಣೆ ತಡೆಯಲು ಅಮೆರಿಕದ–ಮೆಕ್ಸಿಕೊ ಗಡಿಯಲ್ಲಿ 10,000 ಹೆಚ್ಚುವರಿ ಸೇನಾ ಸಿಬ್ಬಂದಿ ನಿಯೋಜಿಸಲು ಸಮ್ಮತಿಸಿದೆ.

ಚೀನಾ, ತಾನೂ ಅಮೆರಿಕದ ಸರಕುಗಳಿಗೆ ತೆರಿಗೆ ವಿಧಿಸುವುದರ ಜತೆಗೆ ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ (ಡಬ್ಲ್ಯುಟಿಒ) ಈ ಬಗ್ಗೆ ದೂರು ದಾಖಲಿಸುವುದಾಗಿ ಅಮೆರಿಕದಲ್ಲಿ ಚೀನಾ ರಾಯಭಾರಿಯಾಗಿರುವ ಫು ಕಾಂಗ್ ತಿಳಿಸಿದ್ದಾರೆ. ತೆರಿಗೆ ಹೇರಿಕೆಯು ಡಬ್ಲ್ಯುಟಿಒ ನಿಯಮಗಳ ಉಲ್ಲಂಘನೆಯಾಗಿದೆ; ಅಮೆರಿಕವು ಚೀನಾವನ್ನು ಪ್ರತೀಕಾರದ ಕ್ರಮಗಳಿಗೆ ಮುಂದಾಗುವಂತೆ ಪ್ರಚೋದಿಸುತ್ತಿದೆ ಎಂದೂ ಅವರು ಹೇಳಿದ್ದಾರೆ. ವ್ಯಾಪಾರ ಸಮರದಲ್ಲಿ ಯಾರೊಬ್ಬರೂ ಗೆಲ್ಲಲು ಸಾಧ್ಯವಾಗುವುದಿಲ್ಲ ಎನ್ನುವುದು ಅವರ ನಿಲುವು.

ಕೆಲವು ಮೂಲಗಳ ಪ್ರಕಾರ, ಟ್ರಂಪ್ ಅವರು ಚೀನಾದೊಂದಿಗೆ ಕೂಡ ಮಾತುಕತೆ ನಡೆಸುವ ಸಂಭವ ಇದೆ. ಮುಂದಿನ ಒಂದೆರಡು ದಿನಗಳಲ್ಲಿ ಅವರು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಜತೆಗೆ ಮಾತನಾಡಲಿದ್ದಾರೆ ಎನ್ನಲಾಗುತ್ತಿದೆ.

ತೆರಿಗೆ ಹೇರಿಕೆಯನ್ನು ಅಮೆರಿಕ ತನ್ನ ಕಾರ್ಯಸಾಧನೆಗೆ ಬಳಸಿಕೊಳ್ಳುತ್ತಿದೆ ಎನ್ನುವುದನ್ನು ಟ್ರಂಪ್ ಮಾತುಗಳೇ ದೃಢಪಡಿಸಿವೆ. ತೆರಿಗೆ ವಿಧಿಸುವುದು ಆರ್ಥಿಕತೆಯ ಅಥವಾ ಬೇರೆ ಯಾವುದೇ ರೀತಿಯ ಕಾರ್ಯಸಾಧನೆಗೆ ಅತ್ಯಂತ ಉಪಯುಕ್ತವಾದ ಸಾಧನವಾಗಿದೆ ಎಂದು ಟ್ರಂಪ್ ಅವರೇ ಹೇಳಿರುವುದು ಅವರ ಕಾರ್ಯತಂತ್ರಕ್ಕೆ ನಿದರ್ಶನವಾಗಿದೆ. 'ತೆರಿಗೆ ಹೇರಿಕೆ ನಿಮಗೆ ಒಳ್ಳೆಯ ಫಲವನ್ನೇ ನೀಡುತ್ತದೆ. ಅದರಿಂದ ನಾವು ತುಂಬಾ ಶಕ್ತಿಶಾಲಿಗಳಾಗಿ, ಶ್ರೀಮಂತ ರಾಷ್ಟ್ರವಾಗಿ ಹೊರಹೊಮ್ಮಬಹುದಾಗಿದೆ ಎನ್ನುವುದು ಅವರ ಮಾರ್ಮಿಕ ಮಾತು.

ಆಧಾರ: ಪಿಟಿಐ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಬಿಬಿಸಿ, ಭಾರತೀಯ ರಾಯಭಾರ ಕಚೇರಿ ವೆಬ್‌ಸೈಟ್



ಭಾರತಕ್ಕೆ ಲಾಭ?

ಅಮೆರಿಕ ಮತ್ತು ಚೀನಾ ನಡುವಿನ ವ್ಯಾಪಾರ ಸಮರವು ಭಾರತದ ರಫ್ತುದಾರರಿಗೆ ಅನುಕೂಲ ಕಲ್ಪಿಸಲಿದೆ ಎಂದು ಹೇಳಲಾಗುತ್ತಿದೆ. ಟ್ರಂಪ್ ಅವರು ಮೊದಲ ಬಾರಿಗೆ ಅಧ್ಯಕ್ಷರಾಗಿದ್ದಾಗ ಚೀನಾದ ಸರಕುಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಿದ್ದರು. ಈ ನಿರ್ಧಾರದಿಂದಾಗಿ ಹೆಚ್ಚು ಪ್ರಯೋಜನ ಪಡೆದ ದೇಶಗಳ ಪೈಕಿ ಭಾರತ ನಾಲ್ಕನೇ ಸ್ಥಾನದಲ್ಲಿತ್ತು. ಈಗಲೂ ಇದು ಪುನರಾವರ್ತನೆಯಾಗಲಿದೆ ಎನ್ನಲಾಗಿದೆ.

ಭಾರತದ ಮೇಲೆ ತೆರಿಗೆ ಯಾಕಿಲ್ಲ?

ಭಾರತದಿಂದ ಅಮೆರಿಕಕ್ಕೆ ರಫ್ತು ಮಾಡಲಾಗುವ ಸರಕುಗಳ ಮೇಲೆಯೂ ತೆರಿಗೆ ಹಾಕುವ ಬೆದರಿಕೆಯನ್ನು ಡೊನಾಲ್ಡ್ ಟ್ರಂಪ್ ಒಡ್ಡಿದ್ದರು. 'ಭಾರತವು ಅಮೆರಿಕದ ಉತ್ಪನ್ನಗಳ ಮೇಲೆ ಹೆಚ್ಚು ತೆರಿಗೆ ವಿಧಿಸುತ್ತದೆ. ಆದರೆ, ಅಮೆರಿಕ, ಭಾರತದ ಉತ್ಪನ್ನಗಳಿಗೆ ತೆರಿಗೆ ವಿಧಿಸುತ್ತಿಲ್ಲ' ಎಂದು ಅವರು ಹೇಳಿದ್ದರು. ಆದರೆ, ಮೆಕ್ಸಿಕೊ, ಚೀನಾ ಮತ್ತು ಕೆನಡಾಗಳ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವ ನಿರ್ಧಾರವನ್ನು ಘೋಷಿಸುವ ಸಂದರ್ಭದಲ್ಲಿ ಟ್ರಂಪ್ ಭಾರತವನ್ನು ಕೈಬಿಟ್ಟಿದ್ದಾರೆ.


ಸದ್ಯ ತೆರಿಗೆ ಭಾರದಿಂದ ಭಾರತ ತಪ್ಪಿಸಿಕೊಂಡಿದೆ. ಆದರೆ, ಮುಂದಿನ ದಿನಗಳಲ್ಲಿ ಟ್ರಂಪ್ ಭಾರತದ ಮೇಲೂ ತೆರಿಗೆ ಸಮರ ಸಾರಬಹುದು ಎಂದೂ ಹೇಳಲಾಗುತ್ತಿದೆ. ತಮ್ಮ ಮೊದಲ ಅವಧಿಯಲ್ಲಿ ಅವರು ಭಾರತದ ಮೇಲೆ ಹೆಚ್ಚಿನ ತೆರಿಗೆ ವಿಧಿಸಿದ್ದರು. ಅದಕ್ಕೆ ಪ್ರತಿಯಾಗಿ ಭಾರತ ಕೂಡ ತೆರಿಗೆ ಹೆಚ್ಚಿಸಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಎರಡೂ ದೇಶಗಳ ನಡುವೆ ವಾಣಿಜ್ಯಾತ್ಮಕ ಸಂಬಂಧ ಸದೃಢವಾಗಿದೆ. ಹೀಗಾಗಿ, ಟ್ರಂಪ್ ಭಾರತದ ಸರಕುಗಳಿಗೆ ಹೆಚ್ಚುವರಿ ತೆರಿಗೆ ವಿಧಿಸಲಾರರು ಎಂಬ ವಾದವೂ ಇದೆ. ಭಾರತವು ಅಲ್ಲಿನ ಉತ್ಪನ್ನಗಳ ಮೇಲೆ ಸರಾಸರಿ ಶೇ 10ರಿಂದ ಶೇ 11ರಷ್ಟು ತೆರಿಗೆ ವಿಧಿಸುತ್ತದೆ.

ಭಾರತ ಮತ್ತು ಅಮೆರಿಕದ ನಡುವಣ ವ್ಯಾಪಾರ ಸಂಬಂಧ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಬೆಳೆಯುತ್ತಿದೆ. 2023–24ನೇ ಸಾಲಿನಲ್ಲಿ ಎರಡೂ ದೇಶಗಳ ನಡುವೆ ₹9.91 ಲಕ್ಷ ಕೋಟಿ ಮೌಲ್ಯದ ಸರಕುಗಳ ವ್ಯಾಪಾರ ನಡೆದಿದೆ (ಸೇವಾ ವಲಯ ಸೇರಿದರೆ ಈ ಮೊತ್ತ ₹15 ಲಕ್ಷ ಕೋಟಿ ದಾಟುತ್ತದೆ). ಭಾರತದ ಪಾಲಿಗೆ ಅಮೆರಿಕ ಅತಿ ದೊಡ್ಡ ರಫ್ತು ಮಾರುಕಟ್ಟೆ.

ಜಾಗತಿಕ ಮಟ್ಟದ ವ್ಯಾಪಾರದಲ್ಲಿ ಚೀನಾವು ತಂತ್ರಜ್ಞಾನ, ತಯಾರಿಕಾ ಕ್ಷೇತ್ರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅಮೆರಿಕಕ್ಕೆ ಪೈಪೋಟಿ ನೀಡುತ್ತಿದೆ. ಆದರೆ, ಭಾರತವು ಈ ಕ್ಷೇತ್ರಗಳಲ್ಲಿ ಅಮೆರಿಕಕ್ಕೆ ಪೈಪೋಟಿ ನೀಡುವಷ್ಟರ ಮಟ್ಟಿಗೆ ಬೆಳೆದಿಲ್ಲ. ಭಾರತದಲ್ಲಿ ಹೆಚ್ಚಿರುವ ಔಷಧಗಳ ಉತ್ಪಾದನೆ, ವಾಹನಗಳ ಉದ್ಯಮ, ರಾಸಾಯನಿಕಗಳು, ಟೆಕ್ಸ್‌ಟೈಲ್ ಕೈಗಾರಿಕೆಗಳು ಅಮೆರಿಕದ ಉದ್ದಿಮೆಗಳಿಗೆ ದೊಡ್ಡ ಪೈಪೋಟಿ ನೀಡುವುದಿಲ್ಲ. ಹೀಗಾಗಿ, ಅಮೆರಿಕ ಭಾರತದ ಬಗ್ಗೆ ಟ್ರಂಪ್ ಹೆಚ್ಚು ತಲೆ ಕೆಡಿಸಿಕೊಂಡಿಲ್ಲ ಎಂಬುದು ಕೆಲವು ತಜ್ಞರ ವಿಶ್ಲೇಷಣೆ.


ಜೊತೆಗೆ, ಟ್ರಂಪ್ ತೆರಿಗೆ ವಿಧಿಸುವ ಬೆದರಿಕೆ ಒಡ್ಡುತ್ತಿದ್ದಂತೆಯೇ ಭಾರತವು ಅಮೆರಿಕದೊಂದಿಗಿನ ವಾಣಿಜ್ಯ ಸಂಬಂಧದಲ್ಲಿ ರಕ್ಷಣಾತ್ಮಕ ನಿಲುವು ತೆಗೆದುಕೊಳ್ಳಲು ಮುಂದಾಗಿದೆ. ಇತ್ತೀಚೆಗೆ ಮಂಡಿಸಿರುವ ಬಜೆಟ್‌ನಲ್ಲಿ ವಿದೇಶದಿಂದ ಆಮದು ಮಾಡಿಕೊಳ್ಳುವ ದೊಡ್ಡ ಎಂಜಿನ್ ಸಾಮರ್ಥ್ಯದ ಮೋಟಾರ್ ಸೈಕಲ್‌ಗಳು, ಐಷಾರಾಮಿ ಕಾರುಗಳ ಮೇಲಿನ ಸುಂಕವನ್ನು ಇಳಿಸುವ ಘೋಷಣೆ ಮಾಡಿದೆ. ಇದು ಹಾರ್ಲೆ ಡೇವಿಡ್‌ಸನ್‌ನಂತಹ ಅಮೆರಿಕ ಬೈಕ್ ತಯಾರಿಕಾ ಕಂಪನಿಗಳು, ಎಲಾನ್ ಮಸ್ಕ್ ಒಡೆತನದ ಟೆಸ್ಲಾ ಸೇರಿದಂತೆ ಇನ್ನಿತರ ಅಮೆರಿಕ ವಾಹನ ತಯಾರಿಕ ಕಂಪನಿಗಳಿಗೆ ಅನುಕೂಲ ಕಲ್ಪಿಸಲಿದೆ.

ಎರಡೂ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧವೂ ಉತ್ತಮವಾಗಿದ್ದು, ಇದು ಕೂಡ ಟ್ರಂಪ್ ಅವರ ಮೃದು ನಿಲುವಿಗೆ ಕಾರಣ ಎಂದು ಹೇಳಲಾಗುತ್ತಿದೆ. ಪ್ರಧಾನಿ ಮೋದಿ ಅವರು ಇದೇ 13ರಂದು ಅಮೆರಿಕಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ.



ರಫ್ತು: ಕೃಷಿ ಉತ್ಪನ್ನಗಳು, ವಜ್ರ, ಆಭರಣಗಳು, ಜವಳಿ ಉತ್ಪನ್ನಗಳು, ಅಕ್ಕಿ, ಆಹಾರ ಧಾನ್ಯಗಳು, ವೈದ್ಯಕೀಯ ಸಲಕರಣೆಗಳು, ಸಂಸ್ಕರಿತ ಪೆಟ್ರೋಲಿಯಂ, ಚರ್ಮದ ಉತ್ಪನ್ನಗಳು, ರಸಗೊಬ್ಬರ, ಹೈನು ಉತ್ಪನ್ನಗಳು, ಎಂಜಿನಿಯರಿಂಗ್ ಸಲಕರಣೆಗಳು, ಖನಿಜಗಳು ಸೇರಿದಂತೆ ಹಲವು ಉತ್ಪನ್ನಗಳನ್ನು ಭಾರತ ಅಮೆರಿಕಕ್ಕೆ ರಫ್ತು ಮಾಡುತ್ತದೆ

ಆಮದು: ಕಚ್ಚಾ ತೈಲ, ಪೆಟ್ರೋಲಿಯಂ ಉತ್ಪನ್ನಗಳು, ಮುತ್ತು, ರತ್ನ, ಇನ್ನಿತರ ಬೆಲೆಬಾಳುವ ಶಿಲೆಗಳು, ಕಬ್ಬಿಣ ಮತ್ತು ಉಕ್ಕು, ರಾಸಾಯನಿಕಗಳು, ಪ್ಲಾಸ್ಟಿಕ್, ರಬ್ಬರ್, ಚರ್ಮದ ಉತ್ಪನ್ನಗಳು, ಶಿಲೆ, ಗಾಜು, ಲೋಹಗಳು ಸೇರಿದಂತೆ ಇನ್ನಿತರ ಉತ್ಪನ್ನಗಳನ್ನು ಭಾರತ ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತದೆ



ರಫ್ತು: ಭಾರತವು ಪ್ರಮುಖವಾಗಿ ಮಾಹಿತಿ ತಂತ್ರಜ್ಞಾನ, ಎಂಜಿನಿಯರಿಂಗ್ ಅಥವಾ ವೃತ್ತಿಪರ ಸೇವೆಗಳು, ಸಾರಿಗೆ, ಹಣಕಾಸಿನ ಸೇವೆಗಳು, ಮಾರಾಟದ ನಂತರದ ಸೇವೆಗಳನ್ನು ಅಮೆರಿಕಕ್ಕೆ ರಫ್ತು ಮಾಡುತ್ತದೆ

ಆಮದು: ಅದೇ ರೀತಿ ಸಾರಿಗೆ, ಕಂಪ್ಯೂಟರ್, ವಾಣಿಜ್ಯ ಸೇವೆಗಳು ಸೇರಿದಂತೆ ಇತರೆ ಸೇವೆಗಳನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತದೆ

ನವೀನ್ ಶಂಕರ್



ವಾಸ್ತವ ಬಿಚ್ಚಿಡುವ ವಿಭಿನ್ನ ಸಿನಿಮಾ

ಬಾಲ್ಯದಲ್ಲಿ ತನ್ನನ್ನು ತ್ಯಜಿಸಿದ ತಾಯಿಯನ್ನು ಹುಡುಕುತ್ತಾ, ಅವಳಿಗೊಂದಿಷ್ಟು ಪ್ರಶ್ನೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಹೆಜ್ಜೆ ಹಾಕುವ ನಾಯಕ. ಈ ಎಳೆಯಲ್ಲಿ ಹಲವು ಸಿನಿಮಾಗಳಿವೆ. ಕನ್ನಡದಲ್ಲೇ ಬಂದ 'ರತ್ನನ್ ಪ್ರಪಂಚ', ಮಲಯಾಳದ 'ಅರವಿಂದಂಡೆ ಅತಿಥಿಗಳ್' ಮುಂತಾದ ಸಿನಿಮಾಗಳಲ್ಲಿ ಇದೇ ಕಥಾಹಂದರವಿದೆ. ಇಲ್ಲಿ ಭಾವನಾತ್ಮಕ ಅಂಶಗಳಿಗೆ ಹೆಚ್ಚಿನ ಆದ್ಯತೆ. ಇಂತಹದೇ ಒಂದು ಹೊಸ ಎಳೆ 'ನೋಡಿದವರು ಏನಂತಾರೆ'. ಕಾದಂಬರಿಯಂತೆ ಸಾಗುವ ಈ ಸಿನಿಮಾದ ಚಿತ್ರಕಥೆ, ನಾಯಕ ತನ್ನನ್ನು ತಾನು ಅರಿತುಕೊಳ್ಳುವುದರ ಜೊತೆಗೆ, 'ನೋಡಿದವರು ಏನಂತಾರೆ' ಎಂಬ ಎಲ್ಲರೊಳಗಿರುವ ಪ್ರಶ್ನೆಗೆ ಉತ್ತರದಂತಿದೆ.

ನಾವು ನೋಡಿದ ಸಿನಿಮಾ

ನೋಡಿದವರು ಏನಂತಾರೆ

- **ನಿರ್ಮಾಣ:** ನಾಗೇಶ್ ಗೋಪಾಲ್
- **ನಿರ್ದೇಶನ:** ಕುಲದೀಪ್ ಕಾರಿಯಪ್ಪ
- **ತಾರಾಗಣ:** ನವೀನ್ ಶಂಕರ್, ಅಪೂರ್ವ ಭಾರದ್ವಾಜ್, ಪದ್ಮಾವತಿ ರಾವ್, ರಾಜೇಶ್ ಮರಿಯಮ್ಮನಹಳ್ಳಿ ಮತ್ತಿತರರು

ವಿರಾಜಪೇಟೆ ಮೂಲದ 'ಸಿದ್ಧಾರ್ಥ್ ದೇವಯ್ಯ'(ನವೀನ್ ಶಂಕರ್) ಬೆಂಗಳೂರಿನ ಕಂಪನಿಯೊಂದರಲ್ಲಿ ವೆಬ್ ಡಿಸೈನರ್. ಈತನಿಗೆ ಹುಡುಗಿಯೊಬ್ಬಳು ಕೈಕೊಟ್ಟಿದ್ದಾಳೆ. ಇದು ಈತನ ಕೆಲಸದ ಮೇಲೂ ಪರಿಣಾಮ ಬೀರಿದ್ದು, ಒತ್ತಡಕ್ಕೆ ಸಿಲುಕಿದ್ದಾನೆ. ಪ್ರೀತಿಸಿದ ಹುಡುಗಿ ಬಿಟ್ಟುಹೋದಳೆಂದು, ಬಾಲ್ಯದಲ್ಲೇ ತಾಯಿ ತನ್ನನ್ನು ತ್ಯಜಿಸಿದಳೆಂದು ಹೆಣ್ಣುಕುಲವನ್ನೇ ದ್ವೇಷಿಸಲಾರಂಭಿಸುತ್ತಾನೆ. ತಂದೆಯ ಅನಿರೀಕ್ಷಿತ ಸಾವು ಹಳೆಯ ನೆನಪುಗಳನ್ನು ಕೆದಕಿದೆ. ಈ ಸಂದರ್ಭದಲ್ಲಿ ಕೆಲಸವನ್ನೂ ಕಳೆದುಕೊಂಡು ತನ್ನನ್ನು ತಾನು ಕಂಡುಕೊಳ್ಳಲು ಹೊಸ ಪ್ರಯಾಣಕ್ಕೆ ಈತ ಸಜ್ಜಾಗುತ್ತಾನೆ. 'ನೋಡಿದವರು ಏನಂತಾರೆ' ಎಂಬಲ್ಲಿಂದ ಶುರುವಾಗುವ ಈತನ ಪಯಣ 'ನೋಡಿದವರು ಏನಾದರೂ ಅಂದುಕೊಳ್ಳಲಿ' ಎನ್ನುವವರೆಗೂ ಸಾಗುತ್ತದೆ.

ಸಿನಿಮಾದ ಆರಂಭಿಕ ದೃಶ್ಯಗಳು ನಿಧಾನಗತಿಯಲ್ಲಿದ್ದು 'ಸಿದ್ಧಾರ್ಥ್' ಹೊರಪ್ರಪಂಚಕ್ಕೆ ಹೆಜ್ಜೆ ಇಡುತ್ತಲೇ ಕ್ರಮೇಣ ವೇಗ ಪಡೆದುಕೊಳ್ಳುತ್ತದೆ. ರಾಜ್ ಬಿ.ಶೆಟ್ಟಿ ನಿರ್ದೇಶನದ 'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾದಂತೆ ಇಲ್ಲಿಯೂ ಸಾಹಿತ್ಯಕ್ಕೆ, ಸಂಭಾಷಣೆಗೆ ಹೆಚ್ಚಿನ ಆದ್ಯತೆ. ಆಳವಾದ ಅರ್ಥ ಹೊಂದಿದ ನಾಯಕನ ಮನಸ್ಸಿನ ಮಾತುಗಳು ಸಿನಿಮಾದುದ್ದಕ್ಕೂ ಪೋಣಿಸಲ್ಪಟ್ಟಿವೆ. ಬಹಳ ಸೂಕ್ಷ್ಮವಾಗಿ ಹಲವು ದೃಶ್ಯಗಳನ್ನು ನಿರ್ದೇಶಕರು ಕೆತ್ತಿದ್ದಾರೆ. ಉದಾಹರಣೆಗೆ ತಂದೆಯ ಸಾವಿನ ಸುದ್ದಿ ಕೇಳಿ ಒಂದು ಕ್ಷಣ ನಾಯಕ ಕಾರಿನೊಳಗೇ ಕುಳಿತು ತನ್ನ ಒತ್ತಡ, ಆಕ್ರೋಶ, ದುಃಖವನ್ನು ಹೊರಹಾಕುವ ರೀತಿ ಹಾಗೂ ತಂದೆ ಶವದೆದುರು ನಾಯಕ ಮೌನವಾಗಿ ಕುಳಿತಾಗ ನಡುಗುವ ಮೈ ಹೀಗೆ ಹಲವು ಸೂಕ್ಷ್ಮತೆಗಳು ಸಿನಿಮಾದೊಳಗಿವೆ. ಪಯಣದ ನಡುವೆ ಕುರಿ ಕಾಯುವ ಹುಡುಗ ಮಲ್ಲಣ್ಣನ(ರಾಜೇಶ್) ಜೊತೆಗಿರುವ ದೃಶ್ಯಗಳು, ಸಂಭಾಷಣೆ ಹೊಸ ದೃಷ್ಟಿಕೋನವನ್ನೇ ನೀಡಬಲ್ಲವು. ವಾಸ್ತವಕ್ಕೆ ಹತ್ತಿರವಾಗುವ ಸನ್ನಿವೇಶ, ಸಂಭಾಷಣೆಗಳೂ ಇಲ್ಲಿ ಅಡಕವಾಗಿವೆ. 'ಇನ್‌ಟು ದಿ ವೈಲ್ಡ್' ಕೃತಿಯ ನೇರ ಉಲ್ಲೇಖ ಇಲ್ಲಿದ್ದು, ಇದೇ ಎಳೆಯಲ್ಲಿ ಸಿನಿಮಾದ ಕಥೆ ಸಾಗುತ್ತದೆ. ಇದು ಮಾಸ್ ಸಿನಿಮಾವಲ್ಲ, ನೋಡಲು ತಾಳ್ಮೆ ಬಹಳ ಮುಖ್ಯ.

ನಟನೆಯಲ್ಲಿ ಸಿದ್ಧಾರ್ಥ್ ಆಗಿ ನವೀನ್ ಶಂಕರ್ ಜೀವಿಸಿದ್ದಾರೆ. ದೃಶ್ಯವೊಂದರಲ್ಲಿ ಎದೆಗೂಡು ಕಾಣುವಷ್ಟು ತೆಳ್ಳಗಾಗಿ ಪಾತ್ರದೊಳಗೆ ಇಳಿದು ನವೀನ್ ಇಲ್ಲಿ ಉಸಿರಾಡಿದ್ದಾರೆ. ಭಾವನಾತ್ಮಕ ದೃಶ್ಯಗಳಲ್ಲಿ ಅವರ ನಟನೆ ಗಂಟಲು ಬಿಗಿಯಾಗಿಸುತ್ತದೆ. ಕ್ಲೈಮ್ಯಾಕ್ಸ್ ದೃಶ್ಯದ ವೇಳೆಗೆ ತಾಯಿಯಾಗಿ ತೆರೆ ಪ್ರವೇಶಿಸುವ ಪದ್ಮಾವತಿ ರಾವ್ ನಟನೆ ಉತ್ಕೃಷ್ಟವಾಗಿದೆ. ಅಪೂರ್ವ ಭಾರದ್ವಾಜ್ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. 'ನೋಡಿದವರು ಏನಂತಾರೆ' ಎನ್ನುವ ಗೋಜಿಗೆ ಬೀಳದೆ, ಶೀರ್ಷಿಕೆಗೆ ತಕ್ಕಂತೆ ಯಾವ ಸಿದ್ಧಸೂತ್ರಕ್ಕೂ ಅಂಟಿಕೊಳ್ಳದೆ ತನ್ನೊಳಗಿದ್ದ ಕಥೆಯನ್ನು ನಿರ್ದೇಶಕರು ತೆರೆಗೆ ತಂದಿದ್ದಾರೆ. ಇದು ಅವರ ಮುಂದಿನ ಹೆಜ್ಜೆಗಳನ್ನೂ ಸ್ಪಷ್ಟಪಡಿಸಿದೆ.

ತಾಯಿಯ ಇಮೇಲ್ ವಿಳಾಸವನ್ನು ಪತ್ತೆಹಚ್ಚುವತ್ತ ಇದ್ದ ನಾಯಕನ ಆಸಕ್ತಿ ಆಕೆಯ ಜೀವನದ ಕುರಿತು ಓದುವಷ್ಟು ಇರಲಿಲ್ಲವೇ? ಹೀಗೆ ಒಂದೆರಡು ಪ್ರಶ್ನೆಗಳನ್ನೂ ಸಿನಿಮಾ ಉಳಿಸುತ್ತದೆ. ಮಯೂರೇಶ್ ಅಧಿಕಾರಿ ಸಂಗೀತ ಹಾಗೂ ಅಶ್ವಿನ್ ಛಾಯಾಚಿತ್ರಗ್ರಹಣ ಈ ಟ್ರಾವೆಲ್ ಕಥೆಯ ಬೆನ್ನೆಲುಬಾಗಿದೆ.

ಅಭಿಲಾಷ್ ಪಿ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಮಾತು ಚೊಲೋ ಇರಬೇಕು!

ನುಡಿ ಬೆಳಗು 125



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಸತ್ಯದ ಆಚರಣೆ ಬಹಳ ಮುಖ್ಯ. ಗಿಡಗೇರಿ ಅಂತ ಒಂದು ಊರೈತಿ. ಅಲ್ಲಿ 280 ಕೆರೆ ಇತ್ತು. ಬಹಳಷ್ಟು ಒತ್ತುವರಿಯಾಗಿತ್ತು. ಆ ಕೆರೆ ಪುನರುಜ್ಜೀವನಗೊಳಿಸಬೇಕು ಅಂತ ಹಳ್ಳಿ ಜನ ಪ್ರಯತ್ನ ಪಟ್ಟರು. 18 ವರ್ಷ ಆ ಕೆರೆಯಲ್ಲಿ ನೀರು ಇರಲಿಲ್ಲ. 7–8 ಕಿಮೀ ದಂಡೆ ನಿರ್ಮಿಸಿ, ಮಿಯಾವಾಕಿ ಅರಣ್ಯ ಮಾಡಿ, ಮಕ್ಕಳ ಆಟದ ಉದ್ಯಾನ ಮಾಡಿ, ಅಲ್ಲೊಂದು ಸಭಾಭವನ ನಿರ್ಮಾಣ ಮಾಡಲಾಯಿತು. 18 ವರ್ಷ ಆಗದಿದ್ದ ಮಳೆ ಆ ವರ್ಷ ಬಂದು ಕೆರೆ ತುಂಬಿತು. ಇದ್ಯಾವುದಕ್ಕೂ ಸರ್ಕಾರದ ಅನುದಾನ ಪಡೆಯಲಿಲ್ಲ. ಹಳ್ಳಿಯ ಜನ ಒಂದು ಕೋಟಿ ರೂಪಾಯಿ ಸೇರಿಸಿ ಕೆರೆ ಪುನರುಜ್ಜೀವನ ಮಾಡಿದರು. ಆಚರಣೆಯಿಂದ ಏನನ್ನಾದರೂ ಮಾಡಬಹುದು ಎಂದು ಇದು ತೋರಿಸುತ್ತದೆ.

ನಮಗೆ ಸಿಟ್ಟು ಬಂದರೆ ಭಾರತ್ ಬಂದ್, ಕರ್ನಾಟಕ ಬಂದ್, ಶಾಲೆ ಬಂದ್, ಅಂಗಡಿ ಬಂದ್ ಮಾಡುತ್ತೇವೆ. ಹೀಂಗಾದರೆ ನಾವು ದೇಶ ಕಟ್ಟುವುದು ಯಾವಾಗ? ಸದಾಚಾರದಿಂದ ದೇಶ ಕಟ್ಟಬೇಕು. ಮನುಷ್ಯನೊಳಗೆ ಸದಾಚಾರ ಇರಬೇಕು, ಸದ್ಬುದ್ಧಿ ಇರಬೇಕು. ಸದ್ಭಾವ ಇರಬೇಕು. ಹೃದಯದಲ್ಲಿ ಸತ್ಯ ಇತ್ತು ಅಂದರೆ ಸದ್ಬುದ್ಧಿ ಇರತೈತಿ. ಅದು ಯಾವುದು ಸರಿ ಯಾವುದು ತಪ್ಪು ಅಂತ ವಿಚಾರ ಮಾಡತೈತಿ. ನೀವು ತರಕಾರಿ ಮಾರುಕಟ್ಟೆಗೆ ಹೋಗುತ್ತೀರಿ. ಅಲ್ಲಿರುವ ಎಲ್ಲ ತರಕಾರಿಗಳನ್ನು ಚೀಲಕ್ಕೆ ಹಾಕಿಕೊಳ್ಳುತ್ತೀರೇನು? ಆರಿಸಿ ಹಾಕಿಕೊಳ್ಳುತ್ತೀರಿ ತಾನೆ? ಮನೆಯಲ್ಲಿ ತಾಯಂದಿರು ಅನ್ನ ಮಾಡುವಾಗ ಹಾಗೇ ಮಾಡೋದಿಲ್ಲ, ಅಕ್ಕಿಯನ್ನು ಮೊರದಲ್ಲಿ ಹಾಕಿಕೊಂಡು ನೆಲ್ಲು, ಕಲ್ಲು ತೆಗೆದು ಚೊಲೋ ಅಕ್ಕಿ ಕುಕ್ಕರ್‌ಗೆ ಹಾಕುತ್ತಾರೆ. ಯಾಕೆಂದರೆ ನೆಲ್ಲು (ಹೊಟ್ಟು) ಇದ್ದರೆ ಹೊಟ್ಟೆ ಕೆಡತೈತಿ ಅಂತ. ಹ್ಯಾಂಗ ಕೆಟ್ಟ ನೆಲ್ಲು ತೆಗೆದು ಚೊಲೋ ಅನ್ನ ಮಾಡಿಕೊಳ್ಳುತ್ತೀರೋ ಹಾಗೆಯೇ ಬದುಕಿನಲ್ಲಿ ಕೆಟ್ಟದ್ದು ಒಳ್ಳೇದು ಎಲ್ಲಾ ಬರತೈತಿ. ಕೆಟ್ಟದ್ದು ಬಿಸಾಡಬೇಕು. ಜೀವನದಲ್ಲಿ ಒಳ್ಳೆಯದನ್ನು ಅಳವಡಿಸಿಕೊಂಡು ಬದುಕುವುದಕ್ಕೆ ಸದ್ವಿಚಾರ ಅಂತಾರ.

ಒಬ್ಬ ಮನುಷ್ಯ ನಾಟಕ ನೋಡಿ ಮನೆಗೆ ಬಂದ. ಆಗ ಅವನಿಗೆ ತನ್ನ ಪತ್ನಿ ನೋಡಲು ಚೆನ್ನಾಗಿಲ್ಲ ಅನ್ನಿಸಿತು. ಆಗ ನೀವು ವಿಚಾರ ಮಾಡಬೇಕಲ್ಲ, ಬಣ್ಣ ಹಚ್ಚಿಕೊಂಡವರು ಯಾರು, ನನ್ನ ಬದುಕಿಗೆ ಬಣ್ಣ ಕೊಟ್ಟವರು ಯಾರು ಅಂತ. ಹಚ್ಚಿಕೊಂಡ ಬಣ್ಣ ಅಳಿಸಿ ಹೋಗತೈತಿ. ಬದುಕಿಗೆ ಬಣ್ಣ ಕೊಟ್ಟವರು ಕೊನೆ ತನಕ ಇರ್ತಾರೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಮನುಷ್ಯನಲ್ಲಿ ಸದ್ವಿಚಾರ, ಸದಾಚಾರ, ಸದ್ವಚನ ಇರಬೇಕು. ಒಳ್ಳೆಯ ಮಾತಿನಿಂದ ಮನೆ ಕಟ್ಟಬೇಕು.

ಮಹಾಭಾರತ ಹೇಗಾಯಿತು? ದ್ರೌಪದಿ ಒಂದೆಡೆ ಕುಳಿತಿದ್ದಳು. ಕೌರವ ನಡೆಯುವಾಗ ಎಡವಿ ಬಿದ್ದ. ಅದನ್ನು ನೋಡಿ ದ್ರೌಪದಿ, 'ಅಂಧನ ಮಗನೂ ಅಂಧನಂತೆ ಕಾಣುತ್ತಾನೆ' ಎಂದಳು. ಅಲ್ಲಿಂದಲೇ ಮಹಾಭಾರತ ಶುರುವಾಯಿತು. ಕುರುಡ ಎನ್ನುವ ಶಬ್ದ ಮಹಾಭಾರತಕ್ಕೆ ಕಾರಣವಾಯಿತು. ಶಬ್ದ ಮನೆ ಕೆಡಿಸುತ್ತದೆ, ಶಬ್ದ ಮನ ಕೆಡಿಸುತ್ತದೆ. ಸಿಮೆಂಟ್‌ನಿಂದ ಕಟ್ಟಿದ ಮನೆ ಬಿರುಕು ಬಂದರೆ ದುರಸ್ತಿ ಮಾಡಬಹುದು. ಆದರೆ, ಮಾತಿನಿಂದ ಸಂಬಂಧಗಳಲ್ಲಿ ಬಿರುಕು ಬಂದರೆ ದುರಸ್ತಿ ಮಾಡುವುದು ಕಷ್ಟ. ಮಾತು ಚೊಲೋ ಇದ್ದರೆ ಜೀವನ ಚೊಲೋ ಇರ್ತದೆ. ಮಾತು ಕೆಟ್ಟರೆ ಜೀವನ ಕೆಡುತ್ತದೆ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಫೆಬ್ರುವರಿ 5, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಅಷ್ಟಮಿ ಗಂ. 24-36 ನಕ್ಷತ್ರ: ಭರಣಿ ಗಂ. 20-33 ಯೋಗ: ಶುಕ್ಲ (ಶುಕ್ರ) ಗಂ. 21-19 ಕರಣ: ವಿಷ್ಟಿ ಗಂ. 13-32, ಮಕರ ಮಾಸದ 22 ನೇ ದಿನ, ಮಳೆನಕ್ಷತ್ರ: ಶ್ರವಣ 4. ರಾಹುಕಾಲ : ಮಧ್ಯಾಹ್ನ 12-00 – 01-30, ಸೂರ್ಯೋದಯ : 07-00 ಸೂರ್ಯಾಸ್ತ : 06-29
ಮುಸ್ಲಿಂ ದಿನಾಂಕ : 06 ಶಬನ್
ದಿನ ವಿಶೇಷ : ಭೀಮಾಷ್ಟಮಿ
ಅದೃಷ್ಟ ಸಂಖ್ಯೆ : 8, 6

ಮೇಷ: ಭವಿಷ್ಯದ ಭದ್ರತೆ ಕುರಿತ ಕಾಳಜಿ ಕುಟುಂಬದ ಸದಸ್ಯರಿಗೆ ಸಂತೃಪ್ತಿಯನ್ನು ತಂದುಕೊಡುವುದು. ವಿದ್ಯಾರ್ಜನೆಯಲ್ಲಿ ಉತ್ತಮ ಹಂತ ತಲುಪಲು ಸಾಧ್ಯವಾಗುವುದು. ಧಾರ್ಮಿಕ ಕೆಲಸಗಳಲ್ಲಿ ಆಸಕ್ತಿ ಮೂಡುತ್ತದೆ.

ವೃಷಭ: ಕೌಟುಂಬಿಕ ಜೀವನದಲ್ಲಿ ಅದರಲ್ಲೂ ಪ್ರಮುಖವಾಗಿ ವೈವಾಹಿಕ ಜೀವನದಲ್ಲಿ ಬದಲಾವಣೆಯೊಂದನ್ನು ಕಾಣುವಿರಿ. ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ಮಾಡುವ ಆಲೋಚನೆಯನ್ನು ಕಾರ್ಯರೂಪಕ್ಕೆ ತನ್ನಿರಿ.

ಮಿಥುನ: ಸ್ವಯಂಕೃತ ಅಪರಾಧಗಳಿಂದ ವ್ಯವಹಾರದಲ್ಲಿ ಹಿನ್ನಡೆಯುಂಟಾಗುವ ಲಕ್ಷಣ ತೋರುವುದು. ಲೇವಾದೇವಿ ವ್ಯವಹಾರವನ್ನು ಆಲೋಚನೆ ಮಾಡಿ ಕೈಗೊಳ್ಳುವುದು ಒಳ್ಳೆಯದು. ಹಿರಿಯರ ಮಾತಿನ ಬಗ್ಗೆ ಗಮನವಿರಲಿ.

ಕರ್ಕಾಟಕ: ನಿಮ್ಮಿಂದ ನಡೆದ ತಪ್ಪುಗಳಿಗೆ ಪ್ರಾಯಶ್ಚಿತ್ತವಾಗಿ ಮುಂದಿನ ದಿನಗಳಲ್ಲಿ ಯಾವುದೇ ಅವ್ಯವಹಾರ, ತಪ್ಪುಗಳು ನಡೆಯದಂತೆ ಜಾಗ್ರತೆ ವಹಿಸಿ. ಸ್ವಯಂ ಉದ್ಯೋಗಸ್ಥರಿಗೆ ಇನ್ನೊಬ್ಬರ ಸಹಾಯ ಅನಿವಾರ್ಯವಾಗುತ್ತದೆ.

ಸಿಂಹ: ನೂತನ ವ್ಯಕ್ತಿಯ ಪರಿಚಯವು ಸರ್ಕಾರಿ ಕೆಲಸಕ್ಕೆ ಅನುಕೂಲ ಉಂಟು ಮಾಡುತ್ತದೆ. ಮಕ್ಕಳ ವಿಚಾರವಾಗಿ ತೆಗೆದುಕೊಳ್ಳುವ ನಿರ್ಧಾರ ಸರಿಯಾಗಿಯೇ ಇರುತ್ತದೆ.

ಕನ್ಯಾ: ಆದರ್ಶ ಹಾಗೂ ತತ್ವಗಳ ಜತೆಗೆ ಹಿರಿಯರ ಉತ್ತಮ ಅನುಭವ ಹಾಗೂ ಸಲಹೆಗಳನ್ನು ಅಳವಡಿಸಿಕೊಂಡಲ್ಲಿ ಯೋಚಿಸಿದ ಕೆಲಸ ಸಂಪೂರ್ಣವಾಗುವುದು. ಪತ್ರಿಕೋದ್ಯಮದವರಿಗೆ ಕೆಲಸದ ಹೊರೆ ಹೆಚ್ಚುವುದು.

ತುಲಾ: ಧೈರ್ಯದಿಂದ ಎಲ್ಲರೆದುರೂ ಸತ್ಯವಾದವನ್ನು ಮಂಡಿಸುವಲ್ಲಿ ಯಶಸ್ವಿಯಾಗುವಿರಿ. ನಿರೀಕ್ಷೆಗೆ ಪೂರಕವಾದ ಪ್ರಚೋದನೆ ಲಭಿಸಲಿದೆ. ಅನವಶ್ಯಕವಾಗಿ ಕಾಲಹರಣ ಮಾಡಬೇಕಾಗುವುದು. ಕಟ್ಟುಪಾಡಿಗೆ ಸಿಕ್ಕಿಕೊಳ್ಳಬೇಡಿ.

ವೃಶ್ಚಿಕ: ಪ್ರಾಚೀನ ವಸ್ತುಗಳ ಸಂಗ್ರಹದಂಥ ವಿಚಾರದಲ್ಲಿ ಆಸಕ್ತಿ ಮೂಡಲಿದೆ. ಈಗಾಗಲೇ ತೆಗೆದುಕೊಂಡ ನಿರ್ಧಾರದ ಬಗ್ಗೆ ಅನುಮಾನಗಳು ಎದುರಾಗಬಹುದು.

ಧನು: ದೈಹಿಕ ಶಕ್ತಿ ಹೆಚ್ಚುವುದರಿಂದ ಕೆಲಸದಲ್ಲಿ ಉತ್ತಮ ಅಭಿವೃದ್ಧಿ ಕಾಣುವಿರಿ. ಸಜ್ಜನರ ಒಡನಾಟದಿಂದ ಕೆಲಸಗಳಿಗೆ ಹೆಚ್ಚಿನ ಪುಷ್ಟಿ ದೊರೆಯಲಿದೆ. ಸಿದ್ಧಿವಿನಾಯಕನ ಆರಾಧನೆಯು ಶುಭ ಉಂಟುಮಾಡುತ್ತದೆ.

ಮಕರ: ಚಾಣಾಕ್ಷತನ ತೋರಿದರೂ ಮಾತುಗಾರಿಕೆಯಲ್ಲಿ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ದಿನ ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಹೆಚ್ಚಿನ ಆದಾಯ ಉಂಟಾಗಲಿದೆ.

ಕುಂಭ: ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಶಿಕ್ಷಣ ವೃತ್ತಿಯಲ್ಲಿರುವವರಿಗೆ ಹೊಸ ಅನುಭವ ಸಿಗುವಂತಾಗಬಹುದು. ವೈದ್ಯರ ಭೇಟಿ ಅವಶ್ಯಕವಿದ್ದಲ್ಲಿ ಮಾಡಿ.


ಮೀನ: ಎಲ್ಲರೊಂದಿಗೆ ಎಲ್ಲ ವಿಚಾರದಲ್ಲಿ ಹೊಂದಿಕೊಳ್ಳುವ ಗುಣ ಹಾಗೂ ಸಾಮರ್ಥ್ಯ ಈ ದಿನ ಬಹಳಷ್ಟು ಮುಖ್ಯವೆನಿಸುವುದು. ಮುಂದೆ ಎದುರಾಗುವ ತೊಂದರೆಯನ್ನು ಮೊದಲೇ ಊಹಿಸಿಕೊಂಡು ಪರಿಹಾರ ಕಂಡುಕೊಳ್ಳಿ.

ಪದಬಂಧ 5944

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚರ್ಚೆಗೆ ಗ್ರಾಸವಾದ ವಾದ! (3)
3.ಪ್ರಯಾಸವಾಗದ ಪಯಣ (3)
5.ಅಭಿವ್ಯಕ್ತಿಗೊಳಿಸುತ್ತಿರುವ ಮನುಷ್ಯ! (2)
6.ವಿಲ ವಿಲ ಒದ್ದಾಡುತ್ತಿರುವ ಹೆಡ್ಡ! (3)
7.ತಕಲಿ ಹಿಡಿದಿರುವ ಶೂರ! (2)
11.ನಗರದಿಂದ ತಂದಿರುವ ಆಭರಣ (2)
13.ಲೋಹದ ತಟ್ಟೆಯಿದು (3)
14.ದ್ವಾಪರ ಯುಗದಲ್ಲಿ ತೆರೆಯುವ ಬಾಗಿಲು! (2)
15.ಒಳ್ಳೆಯ ಸ್ವಭಾವವಿದು (3)
16.ಗರ ಬಡಿದಂತಿರುವ ಮುಖ್ಯಪಟ್ಟಣ (3)

ಮೇಲಿಂದ ಕೆಳಕ್ಕೆ
1.ಮೋಕ್ಷಕ್ಕೊಂದು ಪರ್ಯಾಯ ಪದ (3)
2.ದನಗಳನ್ನು ಕಾಯುವವನು (4)
3.ನೀರಿನಿಂದ ತೊಳೆಯುವುದು (4)
4.ಈತ ಸರಿ ಸಮಾನನಾದವನು (3)
5.ಕಳೆಯುವ ಲೆಕ್ಕವಿದು (5)
8.ಲೀಲಾಜಾಲವಾಗಿ ಹರಾಜು ಹಾಕುತ್ತಿರುವವನು (5)
9.ಈ ತರ ಹಂಚುವಿಕೆ (4)
10.ಶತ್ರುತ್ವವನ್ನು ಹೀಗೆನ್ನಿ (4)
12.ಕತ್ತಿಯನ್ನು ಇಡುವ ಕೋಶ (3)
14.ನಾಲ್ಕು ಯುಗಗಳಲ್ಲಿ ಮೂರನೆಯದು (3)



5943ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವರಾತ 5.ಕರ್ಣ
6.ಪರಿಣಯ 7.ಕಪಟನಾಟಕ
9.ವಾರ 10.ತತ್ತಿ
11.ಕೊಳಗದಪ್ಪಲೆ 14.ಸಹವಾಸ
15.ರುಜು 16.ಶತಕ

ಮೇಲಿಂದ ಕೆಳಕ್ಕೆ:
1.ವರ್ಣಸಂಕರ 2.ತಟವಟ
3.ಪರಿಪಾಕ 4.ಆಯನ
8.ನಾರಂಗ 10.ತಲೆತಿರುಕ
11.ಕೊತವಾಲ 12.ದಶಮಾಂಶ
13.ಪ್ರಸವ

ಸುಡೊಕು 6329

	7			9			6	
1		9	6	4				
	6		5		2		9	
9		2				3		6
	4			5			7	
8		7	2		4	1		9
7			4		5		2	
				2		7		4
		4	1		9		3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6328 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ಮುಂದುವರಿದ ‘ಕೈ’, ಕಮಲ ಒಳಬೇಗುದಿ

ಸಿ.ಎಂ ಬದಲಾವಣೆ: ನಿಲ್ಲದ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಷಯದಲ್ಲಿ ‘ಬಾಯಿ ಮುಚ್ಚಿಕೊಂಡು’ ಇರುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಾಕೀತು ನೀಡಿದ ನಂತರವೂ ಕೆಲವು ಸಚಿವರು, ಶಾಸಕರು ಬಹಿರಂಗ ಹೇಳಿಕೆ ನೀಡುತ್ತಿರುವುದನ್ನು ಮುಂದುವರಿಸಿದ್ದಾರೆ.



ಆರ್.ವಿ. ದೇಶಪಾಂಡೆ

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಕಾಂಗ್ರೆಸ್ ಶಾಸಕ ಆರ್.ವಿ. ದೇಶಪಾಂಡೆ, ‘ಮುಖ್ಯಮಂತ್ರಿ ಬದಲಾವಣೆ ಪ್ರಶ್ನೆ ಹೈಕಮಾಂಡ್ ಮುಂದೆಯೂ ಇಲ್ಲ. ಶಾಸಕಾಂಗ ಪಕ್ಷದ ಮುಂದೆಯೂ ಇಲ್ಲ. ಈ ವಿಷಯ ಚರ್ಚೆಯೂ ಆಗುತ್ತಿಲ್ಲ’ ಎಂದರು.

‘ಡಿ.ಕೆ.ಶಿವಕುಮಾರ್ ಸಿ.ಎಂ ಆಗಬೇಕು ಎಂದು ಅಭಿಮಾನಿಗಳು ಹೇಳಿದರೆ, ಡಿ.ಕೆ. ಶಿವಕುಮಾರ್, ಹೈಕಮಾಂಡ್ ಅಥವಾ ನಾವು ಏನು ಮಾಡಲು ಆಗುತ್ತದೆ. ಹೈಕಮಾಂಡ್ ಸೂಚನೆ ನಂತರವೂ ಹೀಗೆ ಮಾತನಾಡಿದರೆ ಹೈಕಮಾಂಡ್ ನಾಯಕರೇ ಕ್ರಮ ತೆಗೆದುಕೊಳ್ಳಬೇಕು’ ಎಂದರು.

‘ಸಿದ್ದರಾಮಯ್ಯ ಐದು ವರ್ಷ ಸಿ.ಎಂ ಆಗಿರುತ್ತಾರೆಯೇ’ ಎಂಬ ಪ್ರಶ್ನೆಗೆ, ‘ಸಿದ್ದರಾಮಯ್ಯ ಅವರನ್ನು ಒಂದು ವರ್ಷ, ಎರಡು ವರ್ಷ, ಮೂರು ವರ್ಷ ಎಂದು ಆಯ್ಕೆ ಮಾಡಿಲ್ಲ’ ಎಂದರು.

ಅಶಿಸ್ತು ಅಂದರೆ ಅಶಿಸ್ತು: ‘ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕು’ ಎಂದು ಕೆಲವು ಶಾಸಕರ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸಿದ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್, ‘ಶಾಸಕರ ಅಭಿಪ್ರಾಯಕ್ಕೆ ನಾನೇನೂ ಪ್ರತಿಕ್ರಿಯೆ ನೀಡುವುದಿಲ್ಲ. ಆದರೆ, ಎಐಸಿಸಿ ಅಧ್ಯಕ್ಷರು ಹೇಳಿದ ಮೇಲೆ, ಅವರ ಮಾತನ್ನು ಎಲ್ಲರೂ ಪಾಲಿಸಬೇಕು. ನಂತರವೂ ಮಾತನಾಡುತ್ತಿದ್ದಾರೆಂದರೆ ನಾಯಕರೇ ತೀರ್ಮಾನ ತೆಗೆದುಕೊಳ್ಳಬೇಕು’ ಎಂದರು.

‘ಪಕ್ಷದ ಶಿಸ್ತು ಎಂದಾಗ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಹರಿಪ್ರಸಾದ್ ಎಂದು ಬರುವುದಿಲ್ಲ. ಅಶಿಸ್ತು ಅಂದರೆ ಅಶಿಸ್ತು. ಯಾರೇ ಅಶಿಸ್ತು ತೋರಿಸಿದರೂ ಪಕ್ಷದಲ್ಲಿ ಶಿಸ್ತು ಸಮಿತಿ ಇದೆ. ಆ ಸಮಿತಿಯವರು ಯಾವುದು ಶಿಸ್ತು, ಯಾವುದು ಅಶಿಸ್ತು ಎಂದು ತೀರ್ಮಾನ ಮಾಡಬೇಕು’ ಎಂದರು.

ನಾನೇನೂ ಮಾತನಾಡಲ್ಲ: ‘ಕಾಂಗ್ರೆಸ್‌ನಲ್ಲಿ ಯಾವುದೇ ಬಣ ಇಲ್ಲ. ಐದು ವರ್ಷ ಸರ್ಕಾರ ಇರಲಿದೆ. ಮುಂದೆ 2028ರಲ್ಲಿಯೂ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ’ ಎಂದ ಶಾಸಕ ಲಕ್ಷ್ಮಣ ಸವದಿ, ‘ಎಲ್ಲರೂ ಬಾಯಿ ಮುಚ್ಚಿಕೊಂಡು ಇರುವಂತೆ ನಮ್ಮ ಎಐಸಿಸಿ ಅಧ್ಯಕ್ಷರು ಹೇಳಿದ್ದಾರೆ. ಹೀಗಾಗಿ, ನಾನೇನೂ ಮಾತನಾಡಲ್ಲ’ ಎಂದರು.

‘ಡಿಕೆಶಿ ಸಿ.ಎಂ ಆಗಲಿ ಎಂದು ಬಯಸುವುದರಲ್ಲಿ ತಪ್ಪಿಲ್ಲ’



ಹುಕ್ಕೇರಿ (ಬೆಳಗಾವಿ ಜಿಲ್ಲೆ): ‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಲಿ ಎಂದು ಅವರ ಅಭಿಮಾನಿಗಳು ಬಯಸುವುದರಲ್ಲಿ ತಪ್ಪಿಲ್ಲ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ಮುಖ್ಯಮಂತ್ರಿ ಬದಲಾವಣೆ ಕುರಿತು ಹೇಳಿಕೆ ನೀಡದಂತೆ ಹೈಕಮಾಂಡ್ ಫರ್ಮಾನು ಹೊರಡಿಸಿದೆಯಲ್ಲವೇ’ ಎಂಬ ಪ್ರಶ್ನೆಗೆ, ‘ಪಕ್ಷಕ್ಕೆ ಹಾನಿ ಆಗಬಾರದೆಂದು ಹೈಕಮಾಂಡ್ ಹೇಳಿದೆ’ ಎಂದರು.

ದಲಿತ ಶಾಸಕರು ನವದೆಹಲಿಗೆ ಹೋಗುತ್ತಿರುವ ಕುರಿತ ಪ್ರಶ್ನೆಗೆ, ‘ನಾನು ನವದೆಹಲಿಗೆ ಹೋಗುತ್ತೇನೆ ಎಂದು ಯಾರು ಹೇಳಿದರು? ಹೋಗುವುದಾದರೆ, ಮಾಧ್ಯಮ ಮಿತ್ರರಿಗೆ ತಿಳಿಸಿಯೇ ಹೋಗುವೆ’ ಎಂದರು.

‘ಆಸೆ ಹೇಳಿಕೊಂಡರೆ ತಪ್ಪೇನಿದೆ’



ರಾಮನಗರ: ‘ಅವರವರ ನಾಯಕರು ಮುಖ್ಯಮಂತ್ರಿ ಆಗಬೇಕೆಂಬುದು ಕಾರ್ಯಕರ್ತರ ಆಸೆ. ಅದೇ ರೀತಿ, ನಮ್ಮ ನಾಯಕರಾದ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕು ಅಂತ ಹೇಳುವುದರಲ್ಲಿ ತಪ್ಪೇನಿದೆ’ ಎಂದು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಪ್ರಶ್ನಿಸಿದರು.

ಬಿವೈವಿ ವಿರೋಧಿಗಳ ಭಿನ್ನ ರಾಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಲ್ಲಿ ಬಿ.ವೈ. ವಿಜಯೇಂದ್ರ ಮುಂದುವರಿಯುವುದನ್ನು ತಡೆಯಲು ವರಿಷ್ಠರ ಭೇಟಿಗೆ ಬಂದಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣದ ನಾಯಕರೇ ಮಂಗಳವಾರ ‘ಭಿನ್ನ ರಾಗ’ ಹಾಡಿದರು.

ವಿಜಯೇಂದ್ರ ವಿರುದ್ಧ ದೂರು ನೀಡಲು ಶಾಸಕ ರಮೇಶ ಜಾರಕಿಹೊಳಿ, ಮಾಜಿ ಶಾಸಕ ಕುಮಾರ ಬಂಗಾರಪ್ಪ, ಶ್ರೀಮಂತ ಪಾಟೀಲ, ಮುಖಂಡ ಎನ್. ಆರ್.ಸಂತೋಷ್ ಅವರು ನವದೆಹಲಿಗೆ ಸೋಮವಾರ ಸಂಜೆ ಬಂದಿದ್ದಾರೆ.

ಕರ್ನಾಟಕ ಭವನದಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ಅನೌಪಚಾರಿಕವಾಗಿ ಮಾತನಾಡಿದ ಕುಮಾರ ಬಂಗಾರಪ್ಪ, ‘ವರಿಷ್ಠರನ್ನು ಇನ್ನೂ ಭೇಟಿ ಮಾಡಿಲ್ಲ. ಶಾಸಕ ಬಸನಗೌಡ ಪಾಟೀಲ ಯತ್ನಾಳ, ಮಾಜಿ ಶಾಸಕ ಅರವಿಂದ ಲಿಂಬಾವಳಿ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ದೆಹಲಿಗೆ ಬಂದ ನಂತರ ಚರ್ಚಿಸಿ ಭೇಟಿಗೆ ಸಮಯ ಕೇಳುತ್ತೇವೆ. ಬುಧವಾರ ಸಮಯ ಸಿಗಬಹುದು’ ಎಂದು ಆಶಿಸಿದರು.

ಆಗ ಅಲ್ಲಿಗೆ ಬಂದ ರಮೇಶ ಜಾರಕಿಹೊಳಿ ಸುದ್ದಿಗಾರರ ಜತೆಗೆ ಮಾತನಾಡಿ, ‘ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಪಕ್ಷದ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರನ್ನು ಮಂಗಳವಾರ ರಾತ್ರಿ ಭೇಟಿ ಮಾಡಿ ಚರ್ಚಿಸಿದ್ದೇವೆ. ನಮ್ಮ ಕೆಲಸಕ್ಕೆ ವರಿಷ್ಠರು ಶಹಬ್ಬಾಸ್‌ಗಿರಿ ಕೊಟ್ಟಿದ್ದಾರೆ’ ಎಂದರು.

‘ಹೋರಾಟ ಕೊನೆಯ ಹಂತಕ್ಕೆ ಬಂದಿದೆ. ಈಗ ಮಾಧ್ಯಮದ ಮುಂದೆ ಹೆಚ್ಚು ಮಾತನಾಡುವುದಿಲ್ಲ. ರಾಜ್ಯ ಘಟಕದ ಅಧ್ಯಕ್ಷರ ರೀತಿ ಹತಾಶೆಯಿಂದ ಹೇಳಿಕೆ ನೀಡುವುದಿಲ್ಲ. ವರಿಷ್ಠರಿಗೆ ವಾಸ್ತವಾಂಶ ತಿಳಿಸಿದ್ದೇವೆ. ಅವರು ಕೈಗೊಳ್ಳುವ ತೀರ್ಮಾನಕ್ಕೆ ಬದ್ಧ’ ಎಂದರು.

‘ವಿಜಯೇಂದ್ರ ಕರ್ಮಕಾಂಡವನ್ನು ವರಿಷ್ಠರ ಮುಂದೆ ಬಿಚ್ಚಿಡುತ್ತೇನೆ’ ಎಂಬ ಯತ್ನಾಳ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಈ ಬಗ್ಗೆ ಅವರನ್ನೇ ಕೇಳಿ’ ಎಂದರು.

ಕುಮಾರ ಬಂಗಾರಪ್ಪ, ಎನ್.ಆರ್. ಸಂತೋಷ್ ಅವರು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ಸಂತೋಷ್ ಅವರು ‘ನಾನು ನಿಮ್ಮ ಜತೆಗೆ ಇರುತ್ತೇನೆ’ ಎಂದು ಭರವಸೆ ನೀಡಿದರು ಎಂದು ಮೂಲಗಳು ತಿಳಿಸಿವೆ.

‘ಆಂತರಿಕ ಚುನಾವಣೆ ಎದುರಿಸಲಿ’



ಕಲಬುರಗಿ: ‘ಮತ್ತೆ ನಾನೇ ಅಧ್ಯಕ್ಷನಾಗುತ್ತೇನೆ ಎಂದು ಹೇಳುವ ಬಿ.ವೈ.ವಿಜಯೇಂದ್ರ ಮೊದಲು ಪಕ್ಷದ ಆಂತರಿಕ ಚುನಾವಣೆ ಎದುರಿಸಲಿ. ಆಗ ಮತದಾನದ ಮಹತ್ವ ತಿಳಿಯುತ್ತದೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಸೇಡಂನಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಜಾತಿವಾರು ವಿಶ್ಲೇಷಣೆ ಮಾಡಿ ರಾಜ್ಯ ಘಟಕದ ಅಧ್ಯಕ್ಷರ ಚುನಾವಣೆಗೆ ನಮ್ಮ ಬಣದ ಅಭ್ಯರ್ಥಿ ಆಯ್ಕೆ ಮಾಡಲಾಗುವುದು. ಲಿಂಗಾಯತರು ಸ್ಪರ್ಧಿಸಬೇಕು ಎಂದಾದರೆ ನಾನೇ ಸ್ಪರ್ಧಿಸುತ್ತೇನೆ. ಎನ್.ರವಿಕುಮಾರ್, ಚರಂತಿಮಠ ಸೇರಿ ಮೂವರನ್ನು ವಿಜಯೇಂದ್ರ ನನ್ನ ಬಳಿ ಕಳುಹಿಸಿದ್ದರು. ಮಾತನಾಡಿ ಹೋಗಿದ್ದಾರೆ’ ಎಂದರು. ‘ಶ್ರೀ ರಾಮುಲು ಅಧ್ಯಕ್ಷರಾದರೂ ಸ್ವಾಗತಿಸುತ್ತೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹೋರಾಟ ರೂಪಿಸಲು ಸಭೆ



ದಾವಣಗೆರೆ: ‘ಪಕ್ಷದ ಸಂಘಟನೆಗೆ ಶ್ರಮಿಸುತ್ತಿರುವ ಬಿ.ವೈ. ವಿಜಯೇಂದ್ರ ರಾಜ್ಯ ಘಟಕದ ಅಧ್ಯಕ್ಷರಾಗಿ ಮುಂದುವರಿಯಬೇಕು. ಅವರ ವಿರುದ್ಧ ದನಿ ಎತ್ತುತ್ತಿರುವ ಭಿನ್ನಮತೀಯರ ವಿರುದ್ಧವೇ ಬೆಂಗಳೂರಿನಲ್ಲಿ ಮಾಜಿ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರ ನಿವಾಸದಲ್ಲಿ ಫೆ.5ರಂದು ಸಭೆ ನಡೆಸುತ್ತೇವೆ’ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಭಿನ್ನಮತೀಯರ ವಿರುದ್ಧ ಹೇಗೆ ಹೋರಾಟ ರೂಪಿಸಬೇಕು ಎಂಬ ಬಗ್ಗೆ ಸಭೆಯಲ್ಲಿ ಚರ್ಚಿಸುತ್ತೇವೆ. ನಾವೆಲ್ಲ ವಿಜಯೇಂದ್ರ ಅವರ ಬೆನ್ನಿಗೆ ಗಟ್ಟಿಯಾಗಿ ನಿಲ್ಲುತ್ತೇವೆ’ ಎಂದರು.

ಸುದ್ದಿ 2 ನಿಮಿಷ

‘ಸೂತಕದ ಮನೆಯಾದ ರಾಜ್ಯ’

ಹಾಸನ: ‘ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯ ಸೂತಕದ ಮನೆಯಾಗಿದೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಇಲ್ಲಿ ಮಂಗಳವಾರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮೈಕ್ರೊ ಫೈನಾನ್ಸ್‌ನವರ ಕಿರುಕುಳದಿಂದ 24 ಜನರು ಸತ್ತಿದ್ದಾರೆ. ಕೇಳುವವರೇ ಇಲ್ಲವಾಗಿದೆ. ಸೂಕ್ತ ಚಿಕಿತ್ಸೆ ಸಿಗದೇ ಬಾಣಂತಿಯರು ಮೃತಪಟ್ಟಿದ್ದರೂ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಸಚಿವರು ಹಾಗೂ ಶಾಸಕರ ಧನದಾಹಕ್ಕೆ ಬೇಸತ್ತು ನಿಷ್ಠಾವಂತ ಅಧಿಕಾರಿಗಳು, ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ’ ಎಂದು ದೂರಿದರು.

‘ನಿತ್ಯ ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರ ನಡೆಯುತ್ತಿವೆ. ರಾಜ್ಯದಲ್ಲಿ ಮುಖ್ಯಮಂತ್ರಿ, ಗೃಹ ಸಚಿವರು ಇದ್ದಾರಾ ಹಾಗೂ ಸರ್ಕಾರ ಇದೆಯಾ ಎಂಬ ಪ್ರಶ್ನೆ ಕಾಡುತ್ತಿದೆ’ ಎಂದರು.

‘ನ.15 ಅಥವಾ 16ರಂದು ಸಿದ್ದರಾಮಯ್ಯ ಜಾಗ ಖಾಲಿ ಮಾಡುತ್ತಾರೆ. ಅಷ್ಟರಲ್ಲಿಯೇ ಎಲ್ಲವನ್ನೂ ಗುಡಿಸಿ ಗುಂಡಾಂತರ ಮಾಡುತ್ತಾರೆ. ಆ ಮೇಲೆ ಡಿ.ಕೆ. ಶಿವಕುಮಾರ್ ಬರುತ್ತಾರೋ, ಪರಮೇಶ್ವರ್ ಬರುತ್ತಾರೋ, ಜಾರಕಿಹೊಳಿ ಬರುತ್ತಾರೋ ಗೊತ್ತಿಲ್ಲ’ ಎಂದು ಟೀಕಿಸಿದರು.

‘ಬಿಜೆಪಿಯಲ್ಲಿರುವ ಅಸಮಾಧಾನ 15–20 ದಿನಗಳಲ್ಲಿ ಬಗೆಹರಿಯಲಿದೆ’ ಎಂದರು.



ಜಾತಿಗಣತಿ ವರದಿ ಶಿಫಾರಸು ಯಥಾವತ್ ಅನುಷ್ಠಾನಕ್ಕೆ ಒತ್ತಾಯ

ಬೆಂಗಳೂರು: ‘ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ (ಜಾತಿಗಣತಿ) ಕುರಿತ ಎಚ್.ಕಾಂತರಾಜ ಆಯೋಗದ ವರದಿ ವೈಜ್ಞಾನಿಕವಾಗಿಯೇ ಇದೆ. ಸರ್ಕಾರ ಅದನ್ನು ಯಥಾವತ್ ಅಂಗೀಕರಿಸಿ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಬೇಕು’ ಎಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ.ರಾಮಚಂದ್ರಪ್ಪ ಒತ್ತಾಯಿಸಿದರು.

ಕರ್ನಾಟಕ ಹಿಂದುಳಿದ ಜಾತಿಗಳ ಒಕ್ಕೂಟ ಮತ್ತು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಮಂಗಳವಾರ ಆಯೋಜಿಸಿದ್ದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಲಕ್ಷಾಂತರ ಸಿಬ್ಬಂದಿ ಮನೆ–ಮನೆಗೆ ಭೇಟಿ ನೀಡಿ ದತ್ತಾಂಶ ಕಲೆ ಹಾಕಿದ್ದಾರೆ. ಅವುಗಳನ್ನು ಬಿಇಎಲ್ ಡಿಜಿಟಲೀಕರಿಸಿದೆ ದತ್ತಾಂಶಗಳು ವೈಜ್ಞಾನಿಕವಾಗಿ ಇವೆ ಎಂದು ಐಐಎಂ–ಬಿ ದೃಢೀಕರಿಸಿದೆ’ ಎಂದರು.

ಮಹಾ ಒಕ್ಕೂಟದ ಸಂಚಾಲಕ ಎಣ್ಣೆಗೆರೆ ಆರ್.ವೆಂಕಟರಾಮಯ್ಯ, ‘ಕೆಲ ಸಮುದಾಯಗಳ ಮುಖಂಡರು ಈ ವರದಿ ಬಗ್ಗೆ ಇಲ್ಲಸಲ್ಲದ ಮಾತು ಆಡುತ್ತಿದ್ದಾರೆ. ಈ ಬಗ್ಗೆ ಅರಿವು ಮೂಡಿಸಲು ಮತ್ತು ಸರ್ಕಾರವನ್ನು ಒತ್ತಾಯಿಸಲು ರಾಜ್ಯದಾದ್ಯಂತ ಸಭೆಗಳನ್ನು ನಡೆಸುತ್ತೇವೆ’ ಎಂದರು.

ಬಿವೈವಿ ಬದಲಿಸಲು ಆರೆಸ್ಸೆಸ್‌ಗೆ ಅಶೋಕ, ಬೊಮ್ಮಾಯಿ ಮೊರೆ

ಒಂದನೇ ಪುಟದಿಂದ...

ವಿಜಯೇಂದ್ರ ಅವರನ್ನು ಮುಂದುವರೆಸುವ ಸಂಬಂಧ ಯಾರಿಗೂ ಒಲವು ಇಲ್ಲ. ಆದ್ದರಿಂದ ಬೇರೆ ಯಾರನ್ನಾದರೂ ಮಾಡುವುದು ಸೂಕ್ತ ಎಂಬ ಅಭಿಪ್ರಾಯ ಹೇಳಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ವಿಜಯೇಂದ್ರ ಅಧ್ಯಕ್ಷರಾದ ಮೇಲೆ ಪದಾಧಿಕಾರಿಗಳ ಮತ್ತು ಜಿಲ್ಲಾ ಅಧ್ಯಕ್ಷರ ಸಭೆಗಳನ್ನು ನಾಮ್‌ಕಾವಸ್ತೆ ಎಂಬಂತೆ ನಡೆಸಿದ್ದು ಬಿಟ್ಟರೆ, ಗಂಭೀರವಾಗಿ ಸಭೆಗಳನ್ನು ನಡೆಸಲಿಲ್ಲ. ಅವರಿಗೆ ಪಕ್ಷವನ್ನು ಮುನ್ನಡೆಸುವಲ್ಲಿ ಅನುಭವದ ಕೊರತೆ ಎದ್ದು ಕಾಣುತ್ತಿದೆ. ಒಂದು ವೇಳೆ ಮತ್ತೆ ಅಧ್ಯಕ್ಷರನ್ನಾಗಿ ಮಾಡಿದರೆ, ಪಕ್ಷ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ವಿಷಯವನ್ನು ಪಕ್ಷದ ವರಿಷ್ಠರ ಗಮನಕ್ಕೆ ತರಬೇಕು. ಬೇರೆಯವರನ್ನು ಅಧ್ಯಕ್ಷ ರನ್ನಾಗಿ ಮಾಡಬೇಕು’ ಎಂದೂ ಮನವಿ ಮಾಡಿದರು.

ಲಿಂಗಾಯತ ಸಮುದಾಯದವರಾದರೆ ವಿ.ಸೋಮಣ್ಣ, ಒಕ್ಕಲಿಗರ ಸಮುದಾಯಕ್ಕೆ ಕೊಡುವುದಾದರೆ ಆರ್. ಅಶೋಕ ಅವರನ್ನು ಪರಿಗಣಿಸಬಹುದು ಎಂಬ ಸಲಹೆಯನ್ನೂ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅದಕ್ಕೆ ಪ್ರತಿಕ್ರಿಯಿಸಿದ ಆರ್‌ಎಸ್‌ಎಸ್ ಮುಖಂಡರು, ‘ಪಕ್ಷದ ವಿದ್ಯಮಾನಗಳು ಗಮನಕ್ಕೆ ಬಂದಿವೆ. ನೀವು ತಿಳಿಸಿರುವ ವಿಚಾರವನ್ನು ವರಿಷ್ಠರ ಗಮನಕ್ಕೆ ತರುತ್ತೇನೆ ಎಂದು ಭರವಸೆ ನೀಡಿದ್ದಾರೆ’ ಎಂದು ಮೂಲಗಳು ಹೇಳಿವೆ.

ಅಲ್ಲದೆ, ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಅವರನ್ನು ಭೇಟಿ ಮಾಡಿರುವ ಈ ಇಬ್ಬರು ವಿಜಯೇಂದ್ರ ಅವರನ್ನು ಬದಲಿಸಬೇಕು ಎಂಬ ಮನವಿಯನ್ನೂ ಮಾಡಿದ್ದಾರೆ.

ಎರಡೂ ಹುದ್ದೆಗಳು ಬದಲು: ಸವದಿ

ಬಿಜೆಪಿಯಲ್ಲಿ ಅಧ್ಯಕ್ಷ ಹುದ್ದೆ ಮಾತ್ರವಲ್ಲದೆ, ವಿರೋಧಪಕ್ಷದ ನಾಯಕರ ಸ್ಥಾನದ ಬದಲಾವಣೆಯೂ ಆಗಲಿದೆ ಎಂದು ಕಾಂಗ್ರೆಸ್ ಶಾಸಕ ಲಕ್ಷ್ಮಣ ಸವದಿ ಹೇಳಿದ್ದಾರೆ.

‘ನನಗೆ ಬಿಜೆಪಿಯಲ್ಲಿ ಅನೇಕ ಮಂದಿ ಸ್ನೇಹಿತರು ಇದ್ದಾರೆ. ಅವರು ಈ ವಿಷಯ ಹೇಳಿದ್ದಾರೆ. ಹೀಗಾಗಿ ಖಾಲಿಯಾಗುವ ಎರಡು ಕುರ್ಚಿಗಳಿಗೆ ಸಾಕಷ್ಟು ಜನ ಟವೆಲ್ ಹಾಕಿದ್ದಾರೆ’ ಎಂದು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ಕ್ರಾಂತಿವೀರ ಬ್ರಿಗೇಡ್’ ಉದ್ಘಾಟನೆ • ಹಲವು ಸಾಧು, ಸಂತರ ಅಭಿಮತ

ಬಿಜೆಪಿಗೆ ಈಶ್ವರಪ್ಪ ಮರು ಸೇರ್ಪಡೆಗೆ ಸಲಹೆ

ಪ್ರಜಾವಾಣಿ ವಾರ್ತೆ

ವಿಜಯಪುರ: ‘ಬಿಜೆಪಿಯಿಂದ ಮುಖ್ಯಮಂತ್ರಿ ಆಗಬೇಕಾಗಿದ್ದ ಕೆ.ಎಸ್. ಈಶ್ವರಪ್ಪ ಅವರನ್ನು ಮೂಲೆಗುಂಪು ಮಾಡಿರುವುದು ಸರಿಯಲ್ಲ. ಅವರನ್ನು ಪಕ್ಷಕ್ಕೆ ಮರು ಸೇರ್ಪಡೆ ಮಾಡಿಕೊಳ್ಳಬೇಕು’ ಎಂದು ನಾಡಿನ ಕೆಲವು ಮಠಾಧೀಶರು ಬಿಜೆಪಿ ವರಿಷ್ಠರಿಗೆ ಸಲಹೆ ನೀಡಿದರು.

ಬಸವನ ಬಾಗೇವಾಡಿಯಲ್ಲಿ ಮಂಗಳವಾರ ನಡೆದ ‘ಕ್ರಾಂತಿವೀರ ಬ್ರಿಗೇಡ್’ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಮಖಣಾಪುರದ ಸೋಮೇಶ್ವರ ಸ್ವಾಮೀಜಿ, ‘ಈಶ್ವರಪ್ಪ ಅವರನ್ನು ಕಡೆಗಣಿಸಿದ ಕಾರಣಕ್ಕೆ ರಾಜ್ಯದಲ್ಲಿ ಬಿಜೆಪಿ ಅಧಿಕಾರ ಕಳೆದುಕೊಂಡಿದೆ. ಬಿಜೆಪಿ ಅವರನ್ನು ಮನೆಯೊಳಗೆ ಬಿಟ್ಟುಕೊಂಡು ಮಾರ್ಗದರ್ಶನ ಪಡೆಯಬೇಕು’ ಎಂದು ಹೇಳಿದರು.

ಹುಬ್ಬಳ್ಳಿಯ ಚಂದ್ರಶೇಖರ ಸ್ವಾಮೀಜಿ, ‘ಈಶ್ವರಪ್ಪ ಉಪ ಮುಖ್ಯಮಂತ್ರಿ ಆಗಿದ್ದವರು, ಭವಿಷ್ಯದಲ್ಲಿ ಮುಖ್ಯಮಂತ್ರಿ ಆಗುವವರು’ ಎಂದರು.

ಹಿಂದೂಗಳ ಸಂಖ್ಯೆ ಕ್ಷೀಣ: ಕನ್ನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರು, ‘ಹಿಂದೂಗಳ ಜನಸಂಖ್ಯೆ ದಿನೇ ದಿನೇ ಕಡಿಮೆಯಾಗಿವೆ.



ಸಮಾರಂಭದಲ್ಲಿ ‘ಕ್ರಾಂತಿವೀರ ಬ್ರಿಗೇಡ್’ ಲಾಂಛನವನ್ನು ಕನ್ನೇರಿ ಕಾಡ ಸಿದ್ದೇಶ್ವರ ಸ್ವಾಮೀಜಿ ಅನಾವರಣ ಮಾಡಿದರು. ಬ್ರಿಗೇಡ್ ಕಾರ್ಯಾಧ್ಯಕ್ಷ ಕೆ.ಇ.ಕಾಂತೇಶ್, ರಾಜ್ಯ ಸಂಚಾಲಕ ಕೆ.ಎಸ್.ಈಶ್ವರಪ್ಪ, ಮಖಣಾಪುರದ ಸೋಮೇಶ್ವರ ಸ್ವಾಮೀಜಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಭಾರತದಲ್ಲಿ ಹಿಂದೂಗಳ ಸಂಖ್ಯೆ ಶೇ 50ಕ್ಕಿಂತ ಕಡಿಮೆಯಾದರೆ ಸಂವಿಧಾನ ಉಳಿಯಲ್ಲ. ದೇಶದಲ್ಲಿ ಮುಸ್ಲಿಮರ ಸಂಖ್ಯೆ ಶೇ 51ರಷ್ಟಾದರೆ ಹಿಂದೂಗಳು ಉಳಿಯಲು ಸಾಧ್ಯವಿಲ್ಲ’ ಎಂದು ಆತಂಕ ವ್ಯಕ್ತಪಡಿಸಿದರು.

ಯಜಮಾನಿಕೆ ಸರಿಯಲ್ಲ: ತಿಂಥಣಿ ಶಾಖಾ ಮಠದ ಸಿದ್ದರಾಮಾನಂದಪುರಿ ಸ್ವಾಮೀಜಿ, ‘ಧರ್ಮದ ಹೆಸರಲ್ಲಿ ಇನ್ನೊಬ್ಬರ ಮೇಲೆ ಹೇರಿಕೆ, ಯಜಮಾನಿಕೆ ಸರಿಯಲ್ಲ ದೇಶದ ಸಂವಿಧಾನ ಬದಲಾಯಿಸುವ, ಸಂವಿಧಾನ ವಿರೋಧಿ ಹೇಳಿಕೆ ಒಪ್ಪುವುದಿಲ್ಲ’ ಎಂದು ಹೇಳಿದರು.

ಕೆ.ಎಸ್.ಈಶ್ವರಪ್ಪ ದಂಪತಿ ಹಾಗೂ ಪುತ್ರ ಕೆ.ಇ.ಕಾಂತೇಶ್ ದಂಪತಿ, ಬ್ರಿಗೇಡ್‌ನ ಕಾರ್ಯಕರ್ತರು ಸಮಾರಂಭದಲ್ಲಿ ಉಪಸ್ಥಿತರಿದ್ದ 1008 ಸಾಧು, ಸಂತರ ಪಾದಪೂಜೆ ಹಾಗೂ ಗೋಪೂಜೆ ನೆರವೇರಿಸಿದರು. ಮಠಾಧೀಶರು ಈಶ್ವರಪ್ಪ ಕೈಗೆ ಖಡ್ಗವನ್ನು ಕೊಟ್ಟು ಬೆಂಬಲ ವ್ಯಕ್ತಪಡಿಸಿದರು. 10 ಸಾವಿರಕ್ಕೂ ಅಧಿಕ ಜನರು ಪಾಲ್ಗೊಂಡಿದ್ದರು.

‘ಗೋ ಮಾತೆ ಕಡಿಯುವವರ ಕೈ ಕಡಿಯಿರಿ’

‘ಕ್ರಾಂತಿವೀರ ಬ್ರಿಗೇಡ್’ನ ರಾಜ್ಯ ಸಂಚಾಲಕ ಕೆ.ಎಸ್.ಈಶ್ವರಪ್ಪ ಅವರು, ‘ಧರ್ಮ, ಗೋ ಮಾತೆ ಮರೆತಿರುವುದರಿಂದ ದೇಶಕ್ಕೆ ಅಪಾಯ ಎದುರಾಗಿದೆ. ಗೋ ಮಾತೆಯನ್ನು ಕಡಿಯುವವರ ಕೈ ಕಡಿಯುವ ತೀರ್ಮಾನ ಮಾಡೋಣ’ ಎಂದು ಕರೆ ನೀಡಿದರು.

‘ಬ್ರಿಗೇಡ್‌ಗೆ ರಾಜಕೀಯ ಉದ್ದೇಶ ಇಲ್ಲ. ಸಾಧು ಸಂತರ ಪಾದದ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ, ನಿಮ್ಮ ಮಾರ್ಗದರ್ಶನದಲ್ಲಿ ಹಿಂದೂ ಧರ್ಮದ ಉಳಿವಿಗಾಗಿ ಬ್ರಿಗೇಡ್ ಶ್ರಮಿಸಲಿದೆ’ ಎಂದು ಹೇಳಿದರು.

ಪ್ರೀತಿ ಮಾಡಿದ್ದಕ್ಕೆ ಯುವಕನ ಕೊಲೆ

ಸಿರುಗುಪ್ಪ (ಬಳ್ಳಾರಿ ಜಿಲ್ಲೆ): ಮಗಳನ್ನು ಪ್ರೀತಿಸಿದ ಯುವಕ ಮಂಜುನಾಥ ಗೌಡ (22) ಎಂಬಾತನನ್ನು ಕೊಲೆ ಮಾಡಿ ಅರ್ಧ ಶವ ಹೂತಿಟ್ಟಿದ್ದ ಆರೋಪದ ಮೇಲೆ ಯುವತಿಯ ತಂದೆ ಮಲ್ಲಯ್ಯ (45) ಹಾಗೂ ಆಕೆಯ ಸಹೋದರ ಸುರೇಶ್ (21) ಅವರನ್ನು ಸಿರುಗುಪ್ಪ ಪೊಲೀಸರು ಬಂಧಿಸಿದ್ದಾರೆ.

‘ಮಲ್ಲಯ್ಯನ ಮಗಳನ್ನು ಮಂಜುನಾಥ ಪ್ರೀತಿಸುತ್ತಿದ್ದ. ಈ ಬಗ್ಗೆ ಮಂಜುನಾಥನಿಗೆ ಯುವತಿಯ ಮನೆಯವರು ಹಲವು ಬಾರಿ ಎಚ್ಚರಿಕೆ ನೀಡಿದ್ದರು. ಹೀಗಿದ್ದರೂ ಆತ ಸರಿಹೋಗಿರಲಿಲ್ಲ. ಡಿ.28ರಂದು ರಾತ್ರಿ ಯುವತಿಯ ಮೊಬೈಲ್ ನಿಂದಲೇ ಮಂಜುನಾಥನಿಗೆ ಕರೆ ಮಾಡಿದ್ದ ಮಲ್ಲಯ್ಯ, ನಿರ್ಜನ ಪ್ರದೇಶಕ್ಕೆ ಅತನನ್ನು ಕರೆಸಿಕೊಂಡು ಮಗ ಸುರೇಶ್ ಜತೆ ಸೇರಿ ಕೊಲೆ ಮಾಡಿದ್ದ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ ತಿಳಿಸಿದ್ದಾರೆ. ‘ಹಗರಿ ನದಿಯ ಬಳಿಯ ಹುಣಸೆ ತೋಪಿನಲ್ಲಿ ಕೊಳೆತ ಸ್ಥಿತಿಯಲ್ಲಿ ಮೃತ ದೇಹ ಪತ್ತೆಯಾಗಿತ್ತು. ಕಾಲುಗಳನ್ನು ನೆಲದಲ್ಲಿ ಹೂತು, ದೇಹವನ್ನು ಹೊರಗೆ ಬಿಟ್ಟಿದ್ದರು. ಇಡೀ ದೇಹವನ್ನು ನಾಯಿಗಳು ಹರಿದು ತಿಂದಿದ್ದವು.



ರಥೋತ್ಸವ ಮಂಗಳೂರಿನ ರಥಬೀದಿಯ ವೆಂಕಟರಮಣ ದೇವಸ್ಥಾನದ ರಥೋತ್ಸವ ಮಂಗಳವಾರ ಸಂಜೆ ವಿಜೃಂಭಣೆಯಿಂದ ನಡೆಯಿತು ಚಿತ್ರ: ಫಕ್ರುದ್ದೀನ್ ಎಚ್.

ನಬಾರ್ಡ್ ಅನುದಾನ ಹೆಚ್ಚಳ ನಿರ್ಮಲಾಗೆ ‘ಕೈ’ ಸಂಸದರ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಅಲ್ಪಾವಧಿ ಬೆಳೆ ಸಾಲ ವಿತರಣೆಗೆ ಸಾಧ್ಯವಾಗುವಂತೆ ಪ್ರಸಕ್ತ ಸಾಲಿನಲ್ಲಿ ಕರ್ನಾಟಕಕ್ಕೆ ಒದಗಿಸಿರುವ ನಬಾರ್ಡ್ ನೆರವು ಕಡಿತಗೊಳಿಸಿರುವುದರಿಂದ ರೈತರು ಸಂಕಷ್ಟಕ್ಕೆ ಈಡಾಗಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರ ತುರ್ತು ಗಮನ ಹರಿಸಬೇಕು’ ಎಂದು ಒತ್ತಾಯಿಸಿ ಕಾಂಗ್ರೆಸ್‌ನ ಸಂಸದರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಸಲ್ಲಿಸಿದರು.

‘2024–25ರ ಕೃಷಿ ಸಾಲಕ್ಕಾಗಿ ₹9,162 ಕೋಟಿ ಅನುದಾನ ನೀಡುವಂತೆ ಕೇಂದ್ರ ಸಚಿವರಿಗೆ ರಾಜ್ಯ ಸರ್ಕಾರ ಮನವಿ ಸಲ್ಲಿಸಿತ್ತು. ಆದರೆ, ನಬಾರ್ಡ್ ₹2,340 ಕೋಟಿ ಮಾತ್ರ ಮಂಜೂರು ಮಾಡಿದೆ. ಇದು ಕಳೆದ ವರ್ಷಕ್ಕಿಂತ ಶೇ 58ರಷ್ಟು ಕಡಿಮೆ. ಇದರಿಂದಾಗಿ, ರಾಜ್ಯದ ರೈತಾಪಿ ವರ್ಗದ ಆರ್ಥಿಕ ವೆಚ್ಚದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಅಲ್ಲದೇ, ರಾಜ್ಯದ ಆರ್ಥಿಕ ಸ್ಥಿತಿಯ ಮೇಲೂ ಪರಿಣಾಮ ಬೀರಲಿದೆ. ಸಾಲಮಿತಿಯನ್ನು ಹೆಚ್ಚಿಸಲು ಕ್ರಮ ತೆಗೆದುಕೊಳ್ಳುವಂತೆ ನಬಾರ್ಡ್ ಮತ್ತು ಆರ್‌ಬಿಐಗೆ ಸೂಚಿಸಬೇಕು’ ಎಂದು ಸಂಸದರು ಮನವಿ ಮಾಡಿದರು.

ಎಲ್‌ಐಸಿ ಹಾಗೂ ಜೀವವಿಮಾ ಪ್ರತಿನಿಧಿಗಳ ಭವಿಷ್ಯಕ್ಕೆ ಮಾರಕವಾಗುವ ತಿದ್ದುಪಡಿಯಿಂದ ಪ್ರತಿನಿಧಿಗಳಿಗೆ ತೊಂದರೆಯಾಗಲಿದೆ. ವಿಮಾ ಸೆಕ್ಷನ್ 42(2) ತಿದ್ದುಪಡಿ ಪ್ರಸ್ತಾವನೆಯಂತೆ ಏಜೆಂಟ್‌ಗಳಿಗೆ ಬಹು ವಿಮಾ ಕಂಪನಿಗಳೊಂದಿಗೆ ಕೆಲಸ ಮಾಡುವ ಅವಕಾಶ ಕಲ್ಪಿಸಲಾಗಿದೆ. ಇದು ಸಾರ್ವಜನಿಕ ಸಂಸ್ಥೆಯಾದ ಎಲ್‌ಐಸಿಯ ಸ್ಥಿರತೆಯನ್ನು ಹಾಳು ಮಾಡುವ ಜೊತೆಗೆ, ಲಕ್ಷಾಂತರ ಏಜೆಂಟ್‌ಗಳ ಉದ್ಯೋಗ ಭದ್ರತೆಗೆ ಹಾಗೂ ಗ್ರಾಹಕರ ವಿಶ್ವಾಸಕ್ಕೆ ಆಘಾತ ತರುವಂತಿದೆ’ ಎಂದು ಅವರು ಸಚಿವರ ಗಮನಕ್ಕೆ ತಂದರು.

ನಿಯೋಗದಲ್ಲಿ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ, ಶ್ರೇಯಸ್ ಎಂ. ಪಟೇಲ್, ಪ್ರಿಯಾಂಕಾ ಜಾರಕಿಹೊಳಿ, ಸಾಗರ್ ಖಂಡ್ರೆ, ಸುನೀಲ್ ಬೋಸ್ ಇದ್ದರು.

ಶಾಂತಾಬಾಯಿ, ಅಶ್ವತ್ಥನಾರಾಯಣಗೆ ಪ್ರಶಸ್ತಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್.ಪಿ. ವರದರಾಜು ಬಳಗ ನೀಡುವ ‘ಎಸ್.ಪಿ. ವರದರಾಜು ಪ್ರಶಸ್ತಿ’ಗೆ ಈ ಬಾರಿ ರಂಗಭೂಮಿ ಕ್ಷೇತ್ರದಿಂದ ಕಲಾವಿದೆ ಶಾಂತಾಬಾಯಿ ಬೀಳಗಿ ಮತ್ತು ಚಲನಚಿತ್ರ ಕ್ಷೇತ್ರದಿಂದ ಸ್ಥಿರ ಛಾಯಾಗ್ರಾಹಕ ‘ಪ್ರಗತಿ’ ಅಶ್ವತ್ಥ ನಾರಾಯಣ ಆಯ್ಕೆಯಾಗಿದ್ದಾರೆ.

ನಟ ರಾಜ್‌ಕುಮಾರ್ ಅವರ ಸೋದರ ಎಸ್.ಪಿ. ವರದರಾಜು ಹೆಸರಿನಲ್ಲಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ತಲಾ 10 ಸಾವಿರ ನಗದು ಒಳಗೊಂಡಿದೆ. ಬಳಗವು ರಂಗಭೂಮಿ ಹಾಗೂ ಸಿನಿಮಾ ಕ್ಷೇತ್ರದ ಸಾಧಕರಿಗೆ ಪ್ರತಿವರ್ಷ ಈ ಪ್ರಶಸ್ತಿ ನೀಡುತ್ತಿದೆ. ಹುಬ್ಬಳ್ಳಿಯ ನಿವಾಸಿ ಶಾಂತಾಬಾಯಿ ಬೀಳಗಿ ಅವರು ರಂಗಭೂಮಿ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಆಯ್ಕೆ ಮಾಡಲಾಗಿದೆ. ‘ಪ್ರಗತಿ’ ಅಶ್ವತ್ಥ ನಾರಾಯಣ ಅವರು 50 ವರ್ಷಗಳು ಸಿನಿಮಾ ಸ್ಥಿರ ಛಾಯಾಗ್ರಾಹಕರಾಗಿ ದುಡಿದಿದ್ದಾರೆ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದ್ದಾರೆ.



ಶಾಂತಾಬಾಯಿ ಬೀಳಗಿ



‘ಪ್ರಗತಿ’ ಅಶ್ವತ್ಥ ನಾರಾಯಣ

ಪ್ರಶಸ್ತಿ ಪ್ರದಾನ ಸಮಾರಂಭವು ಇಲ್ಲಿನ ನಯನ ಸಭಾಂಗಣದಲ್ಲಿ ಇದೇ 11ರಂದು ಸಂಜೆ 5.30ಕ್ಕೆ ನಡೆಯಲಿದೆ. ವಿಧಾನ ಪರಿಷತ್ತಿನ ಸದಸ್ಯೆಯೂ ಆಗಿರುವ ಕಲಾವಿದೆ ಉಮಾಶ್ರೀ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ. ಚಲನಚಿತ್ರ ನಿರ್ದೇಶಕ ಪಿ.ಶೇಷಾದ್ರಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುತ್ತಾರೆ ಎಂದು ಅವರು ಹೇಳಿದ್ದಾರೆ.

ಆಸ್ತಿ ನೋಂದಣಿಗೆ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಕಾವೇರಿ–2 ತಂತ್ರಾಂಶದಲ್ಲಿ ಎರಡು ದಿನಗಳಿಂದ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದು, ಆಸ್ತಿ ನೋಂದಣಿಗೆ ಜನರು ಪರದಾಡಿದರು.

ಗ್ರಾಮೀಣ ಹಾಗೂ ನಗರ ಪ್ರದೇಶಗಳ ಆಸ್ತಿ ನೋಂದಣಿಗೆ ಸರ್ಕಾರ ಇ-ಸ್ವತ್ತು, ಇ-ಖಾತಾ ಕಡ್ಡಾಯಗೊಳಿಸಿದ ನಂತರ ಹಲವು ಸಮಸ್ಯೆಗಳು ಎದುರಾಗಿದ್ದು, ನೋಂದಣಿ ಪ್ರಕ್ರಿಯೆಗೆ ತೊಡಕಾಗಿತ್ತು. ಈಗ ತಾಂತ್ರಿಕ ಸಮಸ್ಯೆಯಿಂದಾಗಿ ರಾಜ್ಯದ ಎಲ್ಲ 252 ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲೂ ನೋಂದಣಿ ಪ್ರಕ್ರಿಯೆಗೆ ತೊಡಕಾಗಿದೆ. ಪ್ರತಿ ದಿನ ಸರಾಸರಿ ಎಂಟು ಸಾವಿರ ಆಸ್ತಿಗಳ ನೋಂದಣಿ ನಡೆಯುತ್ತಿತ್ತು. ಎರಡು ದಿನಗಳಲ್ಲಿ ಈ ಸಂಖ್ಯೆ ಶೇ 50ರಷ್ಟು ಕುಸಿದಿದೆ.

ಜನರು ಸ್ವತ್ತುಗಳ ನೋಂದಣಿಗಾಗಿ ಕಚೇರಿಗಳಿಗೆ ಅಲೆದಾಡುವುದು, ವಿಳಂಬವಾಗುವುದನ್ನು ತಪ್ಪಿಸಲು, ನೋಂದಣಿ ಪ್ರಕ್ರಿಯೆಯನ್ನು ಸುಲಲಿತಗೊಳಿಸಲು ಕಾವೇರಿ ತಂತ್ರಾಂಶದ ಬದಲು ಕಾವೇರಿ–2 ತಂತ್ರಾಂಶ ಅನುಷ್ಠಾನಗೊಳಿಸಲಾಗಿತ್ತು. ಜನರೇ ದಾಖಲೆಗಳನ್ನು ಅಪ್‌ಲೋಡ್ ಮಾಡಿದ ನಂತರ ಉಪ ನೋಂದಣಾಧಿಕಾರಿಗಳು ಆನ್‌ಲೈನ್‌ನಲ್ಲೇ ಪರಿಶೀಲನೆ ನಡೆಸುತ್ತಿದ್ದಾರೆ. ಅನುಮೋದನೆ ದೊರೆತ ನಂತರ ನೋಂದಣಿ ದಿನ, ಸಮಯ ಸಿಗುತ್ತಿದೆ. ಆ ಸಮಯಕ್ಕೆ ಕಚೇರಿಗೆ ತೆರಳಿ ನೋಂದಣಿ ಮಾಡಿಕೊಳ್ಳುತ್ತಿದ್ದಾರೆ.

ಫೆ. 3ರ ಬೆಳಿಗ್ಗೆಯಿಂದಲೇ ತಾಂತ್ರಿಕ ಸಮಸ್ಯೆಯ ಕಾರಣ ದಾಖಲೆಗಳು ಸರಿಯಾಗಿ ಅಪ್‌ಲೋಡ್ ಆಗುತ್ತಿಲ್ಲ. ಕೆಲವರಿಗೆ ಸಾಧ್ಯವಾದರೂ, ಉಪ ನೋಂದಣಾಧಿಕಾರಿಗಳ ಲಾಗಿನ್ ಕಾರ್ಯನಿರ್ವಹಿಸುತ್ತಿಲ್ಲ. ಮುದ್ರಾಂಕ ಶುಲ್ಕ ಪಾವತಿಸಲು ಚಲನ್ ಸಿಗುತ್ತಿಲ್ಲ. ಹಿಂದಿನ ದಿನಗಳಲ್ಲೇ ದಾಖಲೆಗಳನ್ನು ಅಪ್‌ಲೋಡ್ ಮಾಡಿ ದಿನಾಂಕ, ಸಮಯ ಪಡೆದವರು ನೋಂದಣಿಗಾಗಿ ಇಡೀ ದಿನ ಕಾದು ವಾಪಸ್ ಆಗುತ್ತಿದ್ದಾರೆ. ಕಚೇರಿಗಳಲ್ಲಿ ಜನ ಸಂದಣಿ ಹೆಚ್ಚಾಗಿದೆ.

‘ಎರಡು ದಿನಗಳಿಂದ ಕಾವೇರಿ 2 ತಂತ್ರಾಂಶದ ಲಿಂಕ್ ಸಿಗುತ್ತಿಲ್ಲ. ಮೊದಲೇ ಎಲ್ಲ ಪ್ರಕ್ರಿಯೆ ಮುಗಿಸಿ, ದಿನಾಂಕ ನಿಗದಿ ಮಾಡಿಕೊಂಡವರಿಗೆ ರಜೆ ಹಾಕಿದ್ದು ವ್ಯರ್ಥವಾಗಿದೆ. ಋಣಭಾರ ಪ್ರಮಾಣಪತ್ರ, ದೃಢೀಕರಣ ಪ್ರಮಾಣಪತ್ರ ಸಿಗುತ್ತಿಲ್ಲ. ಬ್ಯಾಂಕ್ ವ್ಯವಹರಗಳಿಗೆ ದಾಖಲೆ ಸಲ್ಲಿಸಲು ಪರದಾಡುವಂತಾಗಿದೆ’ ಎಂದು ಆರ್‌ಆರ್ ನಗರದ ಶಾಂತರಾಜ್ ಹೇಳಿದರು.

> **ಎರಡು ದಿನಗಳಿಂದ ಕಾಣಿಸಿಕೊಂಡ ತಾಂತ್ರಿಕ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಾಗಿದೆ. ಸಮಸ್ಯೆ ಶೀಘ್ರ ಬಗೆಹರಿಯಲಿದೆ**
> **ಕೆ.ಎ.ದಯಾನಂದ**
> ನೋಂದಣಿ ಮಹಾ ಪರಿವೀಕ್ಷಕ

ಬಾಕ್ಸಿಂಗ್– ಕರಾಟೆ ಬಿಟ್ಟು ಕಳ್ಳತನಕ್ಕೆ ಇಳಿದಿದ್ದ ಆರೋಪಿ

ಪ್ರೇಯಸಿಗೆ ₹3 ಕೋಟಿಯ ಮನೆ ಕಟ್ಟಿದ್ದ ಕಳ್ಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ರಾಜ್ಯಗಳಲ್ಲಿ 150ಕ್ಕೂ ಹೆಚ್ಚು ಮನೆಗಳ್ಳತನ ನಡೆಸಿ, ಕದ್ದ ಹಣ ಹಾಗೂ ಚಿನ್ನಾಭರಣದಿಂದಲೇ ಪ್ರೇಯಸಿಗೆ ₹3 ಕೋಟಿ ವೆಚ್ಚದಲ್ಲಿ ಐಷಾರಾಮಿ ಮನೆ ನಿರ್ಮಿಸಿಕೊಟ್ಟಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಮಹಾರಾಷ್ಟ್ರದ ಪಂಚಾಕ್ಷರಿ ಸಂಗಯ್ಯಸ್ವಾಮಿ (37) ಎಂಬಾತನನ್ನು ಮಡಿವಾಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆರೋಪಿಯು ಕೋಲ್ಕತ್ತದಲ್ಲಿ ಪ್ರೇಯಸಿಗೆ ಮನೆ ನಿರ್ಮಿಸಿರುವ ವಿಷಯ ತನಿಖೆ ವೇಳೆ ಗೊತ್ತಾಗಿದೆ.

ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕೃತ್ಯಕ್ಕೆ ಸಂಬಂಧಿಸಿದಂತೆ ಆರೋಪಿಯಿಂದ 181 ಗ್ರಾಂ ಚಿನ್ನದ ಗಟ್ಟಿ, 33 ಗ್ರಾಂ ಬೆಳ್ಳಿ ಸಾಮಗ್ರಿ ವಶಕ್ಕೆ ಪಡೆದುಕೊಳ್ಳಲಾಗಿದೆ. ಇವುಗಳ ಮೌಲ್ಯ ₹12.25 ಲಕ್ಷ ಎಂದು ಅಂದಾಜಿಸಲಾಗಿದೆ.

ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ 13 ದಿನ ತಮ್ಮ ವಶಕ್ಕೆ ಪಡೆದುಕೊಳ್ಳಲಾಗಿದೆ.

ಮಹಾರಾಷ್ಟ್ರ ಕಾರಾಗೃಹದಿಂದ ವರ್ಷದ ಹಿಂದೆ ಬಿಡುಗಡೆಯಾಗಿದ್ದ ಆರೋಪಿ, ಜ.9ರಂದು ಮಡಿವಾಳ ಠಾಣೆ ವ್ಯಾಪ್ತಿಯ ಉದ್ಯಮಿಯೊಬ್ಬರ ಮನೆಯ ಬಾಗಿಲು ಒಡೆದು 410 ಗ್ರಾಂ ಚಿನ್ನಾಭರಣ ಕಳವು ಮಾಡಿ ಪರಾರಿ ಆಗಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಸುಮಾರು 200 ಸಿ.ಸಿ.ಟಿ.ವಿ. ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಾವಳಿ ಪರಿಶೀಲಿಸಿ ಆರೋಪಿಯನ್ನು ಮಡಿವಾಳ ಮಾರುಕಟ್ಟೆಯಲ್ಲಿ ಬಂಧಿಸಲಾಯಿತು. ಆರೋಪಿಯ ವಿಚಾರಣೆ ವೇಳೆ ಹಲವು ವಿಚಾರಗಳು ಬಯಲಾಗಿವೆ ಎಂದು ಪೊಲೀಸರು ಮಾಹಿತಿ ನೀಡಿದರು.

ಸಂಗಯ್ಯಸ್ವಾಮಿ ಮಹಾರಾಷ್ಟ್ರ, ಗುಜರಾತ್, ತೆಲಂಗಾಣ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ನಡೆದ ಕೃತ್ಯಗಳಲ್ಲಿ ಭಾಗಿಯಾಗಿದ್ದ. ಆಗಾಗ ಬೆಂಗಳೂರು ನಗರಕ್ಕೂ ಬಂದು ಮನೆ ಕಳ್ಳತನ ಮಾಡಿ ಮಹಾರಾಷ್ಟ್ರಕ್ಕೆ ತೆರಳುತ್ತಿದ್ದ.

‘ಆರೋಪಿಯ ತಂದೆ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ತಂದೆಯ ಸಾವಿನ ಬಳಿಕ ತಾಯಿಗೆ ಅನುಕಂಪದ ಆಧಾರದಲ್ಲಿ ನೌಕರಿ ನೀಡಲಾಗಿತ್ತು. ಪಂಚಾಕ್ಷರಿ ಬಾಕ್ಸಿಂಗ್ ಪಟು; ಕರಾಟೆಯಲ್ಲೂ ಸಾಧನೆ ಮಾಡಿದ್ದ. ಕರಾಟೆಯಲ್ಲಿ ‘ಬ್ಲಾಕ್ ಬೆಲ್ಟ್’ ಪಡೆದಿದ್ದ. ಮಹಾರಾಷ್ಟ್ರ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ನಡೆಯುತ್ತಿದ್ದ ಬಾಕ್ಸಿಂಗ್ ಟೂರ್ನಿಗಳಲ್ಲಿ ಸ್ಪರ್ಧಿಸಿ ಬಹುಮಾನಗಳಿಸಿದ್ದ. ಈ ಮಧ್ಯೆ ಮದ್ಯಪಾನದ ಚಟಕ್ಕೆ ಬಿದ್ದಿದ್ದ. ವಿಲಾಸಿ ಜೀವನಕ್ಕಾಗಿ ಬಾಕ್ಸಿಂಗ್ ಬಿಟ್ಟು, 2009ರಿಂದ ಕಳ್ಳತನ ಮಾಡಲು ಇಳಿದಿದ್ದ. ಕಳ್ಳತನದಿಂದಲೇ ಕೋಟ್ಯಂತರ ರೂಪಾಯಿ ಗಳಿಸಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗೆ ಮದುವೆ ಆಗಿತ್ತು. 18 ವರ್ಷಗಳಿಂದ ಮನೆ ಕಳ್ಳತನ ಮಾಡುತ್ತಿದ್ದ ಆರೋಪಿ, ಮುಂಬೈನ ಪಬ್‌ವೊಂದರಲ್ಲಿ ಪರಿಚಯವಾದ ಯುವತಿಯನ್ನು ಪ್ರೀತಿಸುತ್ತಿದ್ದ. ಆಕೆಗೆ ಕೋಲ್ಕತ್ತದಲ್ಲೇ ₹3 ಕೋಟಿ ವೆಚ್ಚದಲ್ಲಿ ಐಷಾರಾಮಿ ಮನೆ ನಿರ್ಮಿಸಿಕೊಟ್ಟಿದ್ದ. ಆಕೆಯ ಜನ್ಮ ದಿನಾಚರಣೆ ವೇಳೆ ₹22 ಲಕ್ಷ ಮೌಲ್ಯದ ಅಕ್ವೇರಿಯಂ ಅನ್ನು ಉಡುಗೊರೆಯಾಗಿ ನೀಡಿದ್ದ. ಅಲ್ಲದೇ ತಾಯಿ ಹೆಸರಿನಲ್ಲಿ ಬೆಂಗಳೂರಿನಲ್ಲೂ ಮನೆಯೊಂದನ್ನು ಖರೀದಿಸಿದ್ದ. ಯಾರಿಗೂ ಅನುಮಾನ ಬರಬಾರದೆಂದು ಬೆಂಗಳೂರಿನಲ್ಲಿ ಮನೆ ಖರೀದಿಗೆ ಬ್ಯಾಂಕ್‌ವೊಂದರಿಂದ ಸಾಲ ಸಹ ಪಡೆದುಕೊಂಡಿದ್ದ’ ಎಂದಿವೆ.

ಕದ್ದಿದ್ದ ಚಿನ್ನಾಭರಣಗಳನ್ನು ‘ಫೈರ್ ಗನ್ ಫರ್‌ನೇಸ್’ ಸೇರಿದಂತೆ ಕೆಲವು ಉಪಕರಣಗಳನ್ನು ಬಳಸಿ ಚಿನ್ನದ ಗಟ್ಟಿಯಾಗಿ ಮಾರ್ಪಾಡು ಮಾಡುತ್ತಿದ್ದ. ನಂತರ, ಚಿನ್ನದ ಗಟ್ಟಿಯನ್ನು ಚಿನ್ನಾಭರಣ ಅಂಗಡಿಗೆ ಮಾರಾಟ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಬಾಲಿವುಡ್ ನಟಿಗೂ ಹಣ ನೀಡಿದ್ದ



ಪಂಚಾಕ್ಷರಿ


ಆರೋಪಿಯ ವಿಚಾರಣೆ ವೇಳೆ ಹಲವು ಮಹತ್ವ ವಿಚಾರಗಳು ಬಯಲಾಗಿವೆ. 2012ರಲ್ಲಿ ಬಾಲಿವುಡ್‌ನ ನಟಿಯೊಬ್ಬಳಿಗೆ ₹15 ಲಕ್ಷ ಕೊಟ್ಟಿದ್ದು ಪತ್ತೆಯಾಗಿದೆ. ‘ಆಕೆಯ ಜತೆಗೆ ಖಾಸಗಿ ಕ್ಷಣ ಕಳೆಯಲು ತಾರಾ ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಿದ್ದೇನೆಂದು ವಿಚಾರಣೆ ವೇಳೆ ಆರೋಪಿ ಬಾಯ್ಬಿಟ್ಟಿದ್ದಾನೆ’ ಎಂದು ಮೂಲಗಳು ಹೇಳಿವೆ.

ಪಿ.ಜಿಯಲ್ಲಿ ವಾಸ್ತವ್ಯ

ಕಳ್ಳತನ ಮಾಡಲು ಕೆಲವು ತಿಂಗಳ ಹಿಂದೆಯೇ ಬೆಂಗಳೂರಿಗೆ ಬಂದಿದ್ದ ಪಂಚಾಕ್ಷರಿ, ಕೋರಮಂಗಲದ ವೆಂಕಟರೆಡ್ಡಿ ಲೇಔಟ್‌ನಲ್ಲಿರುವ ಪಿ.ಜಿಯಲ್ಲಿ ವಾಸ್ತವ್ಯ ಮಾಡಿದ್ದ. ಪಿ.ಜಿಯಲ್ಲೂ ಅನುಮಾನ ಬಾರದಂತೆ ಓಡಾಟ ನಡೆಸುತ್ತಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

‘28 ಪ್ರವಾಸೋದ್ಯಮ ಯೋಜನಾ ಪ್ರಸ್ತಾವಗಳಿಗೆ ಅನುಮೋದನೆ’

ಪ್ರಜಾವಾಣಿ ವಾರ್ತೆ



ಎಚ್.ಕೆ.ಪಾಟೀಲ

ಮುಖ್ಯಾಂಶಗಳು

- ಒಟ್ಟು ₹793 ಕೋಟಿ ಬಂಡವಾಳ ಹೂಡಿಕೆ ನಿರೀಕ್ಷೆ
- ನಾಲ್ಕು ಸಾವಿರ ನೇರ ಉದ್ಯೋಗ ಸೃಷ್ಟಿ: ಸಚಿವ

ಬೆಂಗಳೂರು: ‘ರಾಜ್ಯದ ಪ್ರವಾಸೋದ್ಯಮ ನೀತಿಯಡಿ ಎರಡು ಮೆಗಾ ಸೇರಿ ಒಟ್ಟು 28 ಪ್ರವಾಸೋದ್ಯಮ ಯೋಜನಾ ಪ್ರಸ್ತಾವಗಳಿಗೆ ಅನುಮೋದನೆ ನೀಡಲಾಗಿದೆ’ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ವಿಧಾನಸೌಧ ಸಮಿತಿ ಕೊಠಡಿಯಲ್ಲಿ ಉನ್ನತಮಟ್ಟದ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘28 ಯೋಜನೆಗಳ ಪೈಕಿ ಒಂದಕ್ಕೆ ಮಾತ್ರ ಸ್ಥಳ ವೀಕ್ಷಣೆಯ ಷರತ್ತು ವಿಧಿಸಲಾಗಿದೆ. ಈ ಯೋಜನೆಗಳ ಮೂಲಕ ಒಟ್ಟು ₹793 ಕೋಟಿ ಬಂಡವಾಳ ಹೂಡಿಕೆ ಆಗಲಿದೆ. ನಾಲ್ಕು ಸಾವಿರ ನೇರ ಉದ್ಯೋಗಗಳು ಸೃಷ್ಟಿ ಆಗಲಿವೆ’ ಎಂದರು.

‘ಎರಡು ಮೆಗಾ ಯೋಜನೆಗಳಲ್ಲಿ ಹಂಪಿ ಬಳಿ 99 ವಸತಿ ಕೊಠಡಿಗಳನ್ನು ಹೊಂದಿದ ದೊಡ್ಡ ಹೋಟೆಲ್ ನಿರ್ಮಾಣವೂ ಸೇರಿದೆ. ಪೂರ್ಣ ಪ್ರಮಾಣದ ಬಂಡವಾಳ ಹೂಡುವ ಖಾಸಗಿ ಸಂಸ್ಥೆಗಳಿಗೆ ನೀತಿ ಪ್ರಕಾರ ಪ್ರೋತ್ಸಾಹ ಧನ ಮತ್ತಿತರ ಸವಲತ್ತುಗಳನ್ನು ಸರ್ಕಾರ ನೀಡಲಿದೆ’ ಎಂದರು.

ವ್ಯಾವಹಾರಿಕ ಸಲಹೆ ಹೊಣೆ ‘ರೈಟ್ಸ್’ ಸಂಸ್ಥೆಗೆ

‘ರಾಜ್ಯದಲ್ಲಿ ಒಟ್ಟು 11 ರೋಪ್‌ವೇಗಳನ್ನು ನಿರ್ಮಿಸಲು ಸರ್ಕಾರ ತೀರ್ಮಾನಿಸಿದೆ. ಈ ಪೈಕಿ, ತುಮಕೂರು ಜಿಲ್ಲೆಯ ಮಧುಗಿರಿ, ಕೊಡಗು ಜಿಲ್ಲೆಯ ಮಲ್ಲಳ್ಳಿ ಫಾಲ್ಸ್ ಮತ್ತು ಬೆಳಗಾವಿ ಜಿಲ್ಲೆಯ ಸವದತ್ತಿ ಯಲ್ಲಮ್ಮ ಮೂರು ರೋಪ್‌ವೇ ಪ್ಯಾಕೇಜ್‌ಗಳಿಗೆ ವ್ಯಾವಹಾರಿಕ ಸಲಹೆಗಾರ ಹೊಣೆಯನ್ನು ‘ರೈಟ್ಸ್’ ಸಂಸ್ಥೆಗೆ ನೀಡಲಾಗಿದೆ’ ಎಂದು ಸಚಿವ ಪಾಟೀಲ ವಿವರಿಸಿದರು.

‘ಬಜೆಟ್‌ಹೋಟೆಲ್‌ಗಳಿಗೆ ₹5 ಕೋಟಿ ಬಂಡವಾಳ ಹೂಡಬೇಕಾಗುತ್ತದೆ. ಸರ್ಕಾರದಿಂದ ಶೇ 15ರಷ್ಟು ಅಥವಾ ಗರಿಷ್ಠ ₹2 ಕೋಟಿವರೆಗೆ ಸಹಾಯಧನ ಲಭಿಸಲಿದೆ. ಪ್ರೀಮಿಯಂ ಹೋಟೆಲ್‌ಗಳಿಗೆ ₹10 ಕೋಟಿ ಬಂಡವಾಳ ಹೂಡಿದರೆ ಸಹಾಯಧನದ ಮೊತ್ತ ಶೇ 15 ಅಥವಾ ಗರಿಷ್ಠ ₹5 ಕೋಟಿ ಲಭಿಸಲಿದೆ’ ಎಂದು ವಿವರಿಸಿದರು.

‘ಉನ್ನತಮಟ್ಟದ ಸಮಿತಿಯು ಪ್ರಾಥಮಿಕ ತೀರುವಳಿ ಮತ್ತು ನೋಂದಣಿ ಪ್ರಸ್ತಾವಗಳಿಗೂ ಒಪ್ಪಿಗೆ ನೀಡಿದೆ. ಈ ಅರ್ಜಿಗಳು ಯಾವುದೇ ವರ್ಷದ್ದಾಗಿರಲಿ ಅನುಮತಿಯಂತೆ ಪ್ರವಾಸೋದ್ಯಮ ನೀತಿ ವ್ಯಾಪ್ತಿಗೆ ಒಳಪಡಲಿದ್ದು, ಪ್ರೋತ್ಸಾಹ ಧನ, ವಿನಾಯಿತಿ ಮತ್ತಿತರ ನೆರವು ಸಿಗಲಿದೆ’ ಎಂದು ಸಚಿವರು ಹೇಳಿದರು.

ನರೇಗಾ: ರಾಜ್ಯದ ಕಾರ್ಮಿಕರಿಗೆ ₹140 ಕೋಟಿ ಪಾವತಿ ಬಾಕಿ

ನವದೆಹಲಿ: ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕರ್ನಾಟಕದಲ್ಲಿ ಕಾರ್ಮಿಕರಿಗೆ ₹140 ಕೋಟಿ ಕೂಲಿ ಪಾವತಿ ಬಾಕಿ ಇದೆ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ತಿಳಿಸಿದೆ.

ಲೋಕಸಭೆಯಲ್ಲಿ ಸದಸ್ಯ ತಾರಿಕ್ ಅನ್ವರ್ ಮಂಗಳವಾರ ಕೇಳಿರುವ ಪ್ರಶ್ನೆಗೆ ಗ್ರಾಮೀಣಾಭಿವೃದ್ಧಿ ಖಾತೆಯ ರಾಜ್ಯ ಸಚಿವ ಕಮಲೇಶ್ ಪಾಸ್ವಾನ್ ಉತ್ತರಿಸಿ, ‘ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ವ್ಯಾಪ್ತಿಯಲ್ಲಿ ಕಾರ್ಮಿಕರಿಗೆ ₹6,433 ಕೋಟಿ ಪಾವತಿ ಮಾಡಿಲ್ಲ’ ಎಂದರು. ‘ಕಾಯ್ದೆಯ ಪ್ರಕಾರ, ಕೆಲಸ ಮಾಡಿದ 15 ದಿನಗಳೊಳಗೆ ಫಲಾನುಭವಿಗಳು ಕೂಲಿ ಪಡೆಯಲು ಅರ್ಹರು. ಕಾರ್ಮಿಕರಿಗೆ ಕಾಲಮಿತಿಯೊಳಗೆ ಕೂಲಿ ಪಾವತಿಸಲು ಸಾಮಾನ್ಯ ಕಾರ್ಯಾಚರಣೆ ವಿಧಾನ ರೂಪಿಸಲಾಗಿದೆ’ ಎಂದರು.

‘ತೋಟಗಾರಿಕೆ ವಿಶ್ವವಿದ್ಯಾಲಯ ಯಥಾಸ್ಥಿತಿಯಲ್ಲಿ ಮುಂದುವರಿಸಿ’

ಬೆಂಗಳೂರು: ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಬೇಕು ಎಂದು ಇದೇ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಂಘ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಶಿವಾನಂದ, ವಿಶ್ರಾಂತ ಕುಲಪತಿಗಳಾದ ಶಂಕರ್ ದಂಡಿನ್, ಎಚ್.ಬಿ. ಲಿಂಗಯ್ಯ ಅವರು, ‘ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸುಪರ್ದಿಯಲ್ಲಿರುವ ಕಾಲೇಜು, ಸಂಶೋಧನಾ ಕೇಂದ್ರ, ವಿಸ್ತರಣಾ ಘಟಕಗಳನ್ನು ಮಂಡ್ಯದಲ್ಲಿ ನೂತನವಾಗಿ ಪ್ರಾರಂಭವಾಗುವ ಕೃಷಿ ಮತ್ತು ಸಮಗ್ರ ವಿಶ್ವವಿದ್ಯಾಲಯಕ್ಕೆ ಸ್ಥಳಾಂತರಿಸಬಾರದು’ ಎಂದು ಒತ್ತಾಯಿಸಿದರು.

ಕರ್ನಾಟಕ ಪಂಚಾಯತ್‌ರಾಜ್ ಆಯುಕ್ತಾಲಯ

ಕರ್ನಾಟಕ ಸರ್ಕಾರ

ಕಾಳಿದಾಸ ಮಾರ್ಗ, ಕೆ.ಜಿ. ರಸ್ತೆ, ಬೆಂಗಳೂರು–560009. ದೂರವಾಣಿ 080–22010422
e-mail: prcdeputysecretaryadm@gmail.com

ಸಂಖ್ಯೆ: KPRC/CSM/25/2025 ದಿನಾಂಕ: 04.02.2025

ನೇಮಕಾತಿ ಪ್ರಕಟಣೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಸಮಾಲೋಚಕರನ್ನಾಗಿ ಗುತ್ತಿಗೆ ಆಧಾರದ ಮೇಲೆ ಮುಂದಿನ ಒಂದು ವರ್ಷದ ಅವಧಿಗೆ ನೇಮಕಾತಿ ಮಾಡಿಕೊಳ್ಳಲು **ದಿನಾಂಕ: 12/02/2025 ರಂದು ಬೆಳಿಗ್ಗೆ 11.00 ಗಂಟೆಗೆ ಆಯುಕ್ತಾಲಯದ ಕಛೇರಿಯಲ್ಲಿ ನಡೆಯಲಿರುವ ನೇರ ಸಂದರ್ಶನದಲ್ಲಿ (Walk-In Interview)** ಆಸಕ್ತ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ. ವಿವರವಾದ ಮಾಹಿತಿಯನ್ನು ಆಯುಕ್ತಾಲಯದ ಜಾಲತಾಣ **www.prcrdpr.karnataka.gov.in** ಮೂಲಕ ಅಥವಾ ಆಯುಕ್ತಾಲಯದ ಸೂಚನಾ ಫಲಕದಿಂದ ಪಡೆಯಬಹುದಾಗಿದೆ. ದಾಖಲಾತಿಗಳ ಪರಿಶೀಲನೆಗಾಗಿ ಆಸಕ್ತ ಅಭ್ಯರ್ಥಿಗಳು ಸದರಿ ದಿನದಂದು ಬೆಳಿಗ್ಗೆ 9.30 ಗಂಟೆಗೆ ಆಯುಕ್ತಾಲಯದ ಕಛೇರಿಯಲ್ಲಿ ಹಾಜರಾಗುವುದು.

ಕ್ರ.ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
1	ಸಮಾಲೋಚಕರು	01

ಸಹಿ/– ಉಪ ನಿರ್ದೇಶಕರು (ಆಡಳಿತ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಕಾಳಿದಾಸ ಮಾರ್ಗ, ಕೆ.ಜಿ. ರಸ್ತೆ, ಬೆಂಗಳೂರು.

DIPR/CP/YC/4830/2024-25

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಉಪನಿರ್ದೇಶಕರ ಕಛೇರಿ, ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಹಂಪಿನಗರ, ಬೆಂಗಳೂರು – 560 104. ದೂರವಾಣಿ: 080–23209691
ಇ–ಮೇಲ್: westzone_hampinagar@rediffmail.com

ಸಂಖ್ಯೆ: ನಕೇಗ್ರಂ/ಪವ/ಲೆಪವಿ/93/ಗ್ರಂ.ರ.ಕೀ.ಸ್ಯಾ/ಇ–ಟೆಂ/863/2024–25 ದಿನಾಂಕ: 04.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ, ಬೆಂಗಳೂರು ಈ ಕಛೇರಿ ವ್ಯಾಪ್ತಿಯಲ್ಲಿರುವ ಶಾಖಾ/ವಾಚನಾಲಯ/ಗ್ರಾಮ ಪಂಚಾಯಿತಿಯ ಗ್ರಂಥಾಲಯಗಳಿಗೆ 2024–25ನೇ ಸಾಲಿಗೆ ಒಂದು ವರ್ಷಗಳ ರೇಟ್ ಕಾಂಟ್ರಾಕ್ಟ್ **ಆಧಾರದ ಮೇಲೆ ಗ್ರಂಥಾಲಯಕ್ಕೆ ಅವಶ್ಯಕವಾಗಿ ಬೇಕಾಗಬಹುದಾದಂತಹ “ಗ್ರಂಥಾಲಯ ರಕ್ಷಣೆಗಾಗಿ ಕೀಟನಾಶಕ/ಸ್ಯಾನಿಟೈಜೇಷನ್”** ಸಿಂಪಡಣೆ ಮಾಡಲು ದ್ವಿ ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಮೂರು ವರ್ಷಗಳ ಅನುಭವವುಳ್ಳ ನೋಂದಾಯಿತ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಭಾಗವಹಿಸಬಹುದು. ಟೆಂಡರ್‌ಗೆ ನಿಗದಿಪಡಿಸಿರುವ ಇ.ಎಂ.ಡಿ. ಮೊತ್ತ ರೂ. 40,000/– (ರೂಪಾಯಿ ನಲವತ್ತು ಸಾವಿರ ಮಾತ್ರ). ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು https://kppp.karnataka.gov.in ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: **11.02.2025 ಸಮಯ ಸಾಯಂಕಾಲ 04:00 ಗಂಟೆಗೆ.** ತಾಂತ್ರಿಕ ಬಿಡ್ಡುಗಳನ್ನು ದಿನಾಂಕ: **12.02.2025ರ ಸಮಯ ಸಾಯಂಕಾಲ 04:00 ಗಂಟೆಗೆ** ತೆರೆಯಲಾಗುವುದು.

ಟೆಂಡರ್‌ದಾರರು ಹೆಚ್ಚಿನ ವಿವರಗಳನ್ನು ಈ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಕಛೇರಿ ದೂರವಾಣಿ ಸಂಖ್ಯೆ: 080–23209691

ಸಹಿ/–
ಉಪನಿರ್ದೇಶಕರು,
ನಗರ ಕೇಂದ್ರ ಗ್ರಂಥಾಲಯ, ಪಶ್ಚಿಮ ವಲಯ,
ಹಂಪಿನಗರ, ಬೆಂಗಳೂರು.

ವಾಸಾಸಂಇ/ವಾಪ್ರ/4791/ಎಂಎಎ/24–25

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ– 571 401
(Autonomous Medical Institution, Government of Karnataka)
Phone: 08232-231003, 222086, 231197, 224040,
Fax: 08232-231001
E-Mail Address: mimsmandyaoffice@gmail.com ,
mimsmandya@gmail.com

ಇ–ಟೆಂಡರ್ ಪ್ರಕಟಣೆ – (ದ್ವಿಲಕೋಟೆ ಪದ್ಧತಿ)

ಸಂಖ್ಯೆ: ಮಿಮ್ಸ್/ಸರಬ–ಡಿ/Suture/ಇ–ಟೆಂ/15A/2024–25, ದಿನಾಂಕ : 01.02.2025

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ Suture materials items ಗಳನ್ನು ಮರು ಇ–ಟೆಂಡರ್ ಮುಖೇನ ಖರೀದಿಸುವ ಸಲುವಾಗಿ ಉತ್ಪಾದಕರವರಿಂದ/ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಜಿಒಕೆ ಇ–ಪ್ರ್ಯೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಕ್ರ. ಸಂ : 01. ವಿವರಗಳು : ಸೂಚರ್ಸ್ ಐಟಂಗಳು. ಟೆಂಡರ್‌ನ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : 98.00. ಇ.ಎಂ.ಡಿ ಮೊತ್ತ : 1,96,000/–. ಅರ್ಜಿ ಸಲ್ಲಿಕೆ ಪ್ರಾರಂಭ ದಿನಾಂಕ : 04.02.2025. ಅರ್ಜಿ ಸಲ್ಲಿಕೆ ಅಂತಿಮ ದಿನಾಂಕ : 18.02.2025. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/628/2024–25

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ರಾಯಚೂರು.
ದೂರವಾಣಿ ಸಂಖ್ಯೆ : 08532–225778
THESE WORKS ARE GENARAL & ST CONTRACTORS

ಲೋಇ/ರಾವಿ/ತಾಂಶಾ–4/ಟೆಂಪ್ರ/2024–25/4824 ದಿ: 29–01–2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ– 2, 3 & 4)

1) **ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ:** ಲೋಇ/ರಾವಿ/ತಾಂಶಾ–4/ಟೆಂಪ್ರ/2024–25/4824 ದಿನಾಂಕಃ 29–01–2025 2) **ಕಾಮಗಾರಿ ಹೆಸರು:** ರಾಯಚೂರು ಜಿಲ್ಲೆಯ ಒಟ್ಟು 8 ಕಾಮಗಾರಿಗಳು. ರಾಯಚೂರು, ದೇವದುರ್ಗ, ಮಾನವಿ, ಲಿಂಗಸುಗೂರು ಮತ್ತು ಸಿಂಧನೂರು ತಾಲೂಕು ವಿವಿಧಡೆ ಕಟ್ಟಡ, ಸೇತುವೆ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. 3) **ಕಾಮಗಾರಿಯ ಮೊತ್ತ:** ಕನಿಷ್ಠ ರೂ. 2519174.04 ಗರಿಷ್ಠ ರೂ. 36554129.49 4) **ಮುಂಗಡ ಠೇವಣಿ ಮೊತ್ತ:** ಕನಿಷ್ಠರೂ. 50500.00 ಗರಿಷ್ಠ ರೂ. 548400.00 5) **ಕಾಲಾವಧಿ (ಮಳೆಗಾಲ ಸೇರಿ):** ಕನಿಷ್ಠ 3 (ಮೂರು) ತಿಂಗಳು ಗರಿಷ್ಠ 11 (ಹನ್ನೊಂದು) ತಿಂಗಳು 6) **ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:** 10/02/2025 ಸಂಜೆ 4.00 ಗಂಟೆಯವರೆಗೆ 7) **ಟೆಂಡರ್ ತೆರೆಯುವ ದಿನಾಂಕ:** 11/02/2025 ಸಂಜೆ 4.30 ಗಂಟೆಯವರೆಗೆ

ಹೆಚ್ಚಿನ ವಿವರಗಳು ವೆಬ್‌ಸೈಟ್ https://kppp.karnataka.gov.in/ ಮುಖಾಂತರ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.

DIP/RCR/715/KSMCA/716/2024-25

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಎಂ,ಪಿ.ವಿಭಾಗ, ರಾಮನಗರ
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:13/2024–25, ದಿನಾಂಕ:04.02.2025

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ 4701 ಲೆಕ್ಕ ಶೀರ್ಷಿಕೆಯಡಿಯಲ್ಲಿ ರಸ್ತೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ, ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ, ಪ್ರಿ ಬಿಡ್ ಸಭೆಯ ದಿನಾಂಕ, ಇ.ಎಂ.ಡಿ ಮುಂತಾದ ಇತರೆ ಮಾಹಿತಿಗಳನ್ನು https://kppp.karnataka.gov.in ಯಿಂದ download ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಎಂ.ಪಿ. ವಿಭಾಗ, ರಾಮನಗರ.
ಕಚೇರಿ ದೂ. ಸಂ: 080–29782259
ಇ–ಮೇಲ್ : eempdrmgm@gmail.com

ಕರ್ನಾಟಕ ಸರ್ಕಾರ
ಸಾರ್ವಜನಿಕ ಆಸ್ಪತ್ರೆ, ಕುಮಟಾ (ಉ.ಕ)
ದೂರವಾಣಿ: 08386–222021 Email ID: amogh.kumta@gmail.com
ಕ್ರಮಸಂಖ್ಯೆ: ಸಾಆಕು/61/2024–25 ದಿನಾಂಕ: 03/02/2025

ಇ–ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ಕುಮಟಾ, (ಜಿಲ್ಲೆ: ಉತ್ತರ ಕನ್ನಡ) ಇಲ್ಲಿ 2025–26ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಹ್ಯ ಸಂಪನ್ಮೂಲ ಸಂಸ್ಥೆಯ (ಮ್ಯಾನ್ ಪವರ್ ಏಜೆನ್ಸಿ) ಮುಖಾಂತರ ಗ್ರೂಪ್–ಡಿ/ನಾನ್ ಕ್ಲಿನಿಕಲ್ ಸೇವೆಯನ್ನು ಪೂರೈಸಲು ಇ–ಟೆಂಡರ್ ಕರೆಯಲಾಗಿದೆ. ಸಂಸ್ಥೆಯ ಹೆಸರು ಸಾರ್ವಜನಿಕ ಆಸ್ಪತ್ರೆ, ಕುಮಟಾ ಹುದ್ದೆಗಳ ಸಂಖ್ಯೆ–20, ಒಟ್ಟು ಟೆಂಡರ ಮೊತ್ತ ರೂ.54,63,936.00, ಇ.ಎಂ.ಡಿ ಮೊತ್ತ (ಶೇ.2ರಷ್ಟು) ರೂ.1,09,280.00.

ಟೆಂಡರ್ ವೇಳಾ ಪಟ್ಟಿಯ ವಿವರ: ಟೆಂಡರ್ ಪ್ರಕಟಣೆ ದಿನಾಂಕ: 03/02/2025, ಇ–ಟೆಂಡರ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭಿಸುವ ದಿನಾಂಕ: 03/02/2025 ಬೆಳಗ್ಗೆ 12:00 ಘಂಟೆಗೆ, ಇ–ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18/02/2025ರ ಸಂಜೆ 04:00 ಘಂಟೆಗೆ ಇ–ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20/02/2025ರ ಬೆಳಗ್ಗೆ 11–00 ಘಂಟೆಗೆ, ಇ–ಟೆಂಡರಿನ ಆರ್ಥಿಕ ಬಿಡ್ ತೆರೆಯುವ ದಿನಾಂಕ: 27/02/2025ರ ಬೆಳಗ್ಗೆ11–00 ಘಂಟೆಗೆ.

ಅರ್ಹ ಟೆಂಡರ್‌ದಾರರಿಗೆ ಸರ್ಕಾರದ ಮಾರ್ಗಸೂಚಿಯನ್ವಯ ಖಾಲಿ ಹುದ್ದೆಯ ಆಗತ್ಯತೆಯನುಸಾರ, ಅನುದಾನ ಲಭ್ಯತೆಯನುಸಾರ ಹುದ್ದೆಗಳ ಭರ್ತಿಗೆ ತಿಳಿಸಲಾಗುವುದು. ಈ ಮೇಲಿನ ದಿನಾಂಕಗಳಂದು ಸಾರ್ವಜನಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು.

ಸಹಿ/– ಆಡಳಿತ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ, ಕುಮಟಾ (ಉ.ಕ)

DIPR/ADK/KSMCA/837/24-25 dt. 04.02.2025

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910 ಇ–ಮೇಲ್: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–728/2024–25 ದಿನಾಂಕ: 04.02.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಕಂಡ ವಿವರಗಳನ್ವಯ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಬೇಟಿ ನೀಡಿ ಪಡೆಯಬಹುದಾಗಿದೆ.

Sl. No.	Item Description	Qty (Nos.)	EMD (Rs.)
1	Supply of Laminated Pouch for Idli / Dosa batter (900 grm) for a period of one year.	27,37,500	2,15,000/-
2	Supply of Laminated Pouch for Idli / Dosa batter (450 grm) for a period of one year.	9,12,500	

ಟೆಂಡರ್ ಪ್ರಾರಂಭವಾಗುವ ದಿನಾಂಕ : **04.02.2025 ರಿಂದ.** ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : **11.02.2025 ರಂದು ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **18.02.2025 ರ ಸಂಜೆ 5.20 ಗಂಟೆ ಒಳಗಾಗಿ.** ತಾಂತ್ರಿಕ ಟೆಂಡರ್ ತೆರಯುವ ದಿನಾಂಕ : **19.02.2025 ರಂದು ಸಂಜೆ 5.25 ಗಂಟೆಗೆ.** ವಾಣಿಜ್ಯ ಟೆಂಡರ್ ತೆರಯುವ ದಿನಾಂಕ : **ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ.** ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ನಗರಸಭಾ ಕಾರ್ಯಾಲಯ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ–573201.
ದೂ.ಸಂ: 08172–268276, 233702 Email: commn_hassan@yahoo.com
ನಂ:ಪೌಆ/ನಸಹಾ/ಎಇಇ(ಪರಿಸರ)/ಪಾರಂಪರಿಕತ್ಯಾಜ್ಯ/ಸಿಆರ್29/2024–25 ದಿನಾಂಕ: 03–02–2025

ಮರು ಟೆಂಡರ್ ಪ್ರಕಟಣೆ:

ಸ್ವಚ್ಛ ಭಾರತ್ ಮಿಷನ್ 2.0 ನಡಿ ಹಾಸನ ನಗರಸಭಾ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ಪ್ರದೇಶದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯದ ಸಂಸ್ಕರಣೆ ಮತ್ತು ವಿಲೇವಾರಿ ಕಾಮಗಾರಿ ಅನಷ್ಠಾನಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮಗಳು–2000 ರಂತೆ ನೊಂದಾಯಿತ ಆರ್ಹ ಸಿವಿಲ್ ವೊದಲನೆ ದರ್ಜೆ ಅರ್ಹ ಗುತ್ತಿಗೆದಾರರುಗಳಿಂದ ತ್ರಿ–ಲಕೋಟೆ ಪದ್ಧತಿಯಡಿ ಕೆಡಬ್ಲ್ಯೂ–4 ಮತ್ತು ಕೆಡಬ್ಲ್ಯೂ–6 ಟೆಂಡರ್ ದಸ್ತಾವೇಜು ಮೂಲಕ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಅಹ್ವಾನಿಸಲಾಗಿದೆ. (ವಿವರ ಕೆಳಗಿನಂತಿದೆ) ಕ್ರ.ಸ.ಇಂಡೆಂಟ್ ನಂ.1) E-Proc.No: DMA/2023-24/OW/WORK_INDENT7488/CALL-3 ಕಾಮಗಾರಿ ವಿವರ: ಹಾಸನ ನಗರಸಭಾ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿ ಪ್ರದೇಶದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯವನ್ನು ಕೇಂದ್ರ ಪರಿಸರ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಮಾರ್ಗಸೂಚಿ ಪ್ರಕಾರ ವೈಜ್ಞಾನಿಕವಾಗಿ ಸಂಸ್ಕರಿಸಿ, ವಿಲೇವಾರಿ ಮಾಡುವ ಕಾಮಗಾರಿ ಟೆಂಡರ್ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ ಲಕ್ಷಗಳಲ್ಲಿ): 1012.78 ಆಸಕ್ತ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳುವುದು. ಗುತ್ತಿಗೆದಾರರು ಟೆಂಡರ್ ದಾಸ್ತಾವೇಜುಗಳನ್ನು ಇ– ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ವಿದ್ಯುನ್ಮಾನ ಸಂಗ್ರಹಣೆ ಮೂಲಕ WWW.KPPP. KARNATAKA.GOV.IN ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿದೆ. ಇ.ಎಂ.ಡಿ ಮೊತ್ತ ಹಾಗೂ ಟೆಂಡರ್ ಶುಲ್ಕವನ್ನು ವಿದ್ಯುನ್ಮಾನ ಸಂಗ್ರಹಣೆ ಪೋರ್ಟಲ್‌ನಲ್ಲಿ ಪಾವತಿಸುವುದು. ಟೆಂಡರ್‌ನ ವೇಳಪಟ್ಟಿ ಮತ್ತು ಮಾಹಿತಿಗಳ ವಿವರ ಈ ಕೆಳಕಂಡತಿದೆ. ಟೆಂಡರ್‌ನ ವೇಳಾಪಟ್ಟಿಗಳ ವಿವರ ಕೆಳಕಂಡಂತಿದೆ ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 13 ತಿಂಗಳು 3.5 ದಿವಸ ಇ.ಎಂ.ಡಿ ಮೊತ್ತ ರೂ15.00 ಲಕ್ಷ ಟೆಂಡರ್ ಪೂರ್ವಭಾವಿ ಸಭೆ ದಿನಾಂಕ 07–02–2025 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 10–02–2025 ಪೂರ್ವಾರ್ಹತೆ ಬಿಡ್ ತೆರೆಯುವ ದಿನಾಂಕ 12–02–2025 ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14–02–2025 ಟೆಂಡರ್ ನಿಬಂದನೆಗಳಲ್ಲಿ ಹಾಗೂ ಟೆಂಡರ್ ಸಲ್ಲಿಸುವ ಅವಧಿಯ ಮುಂದೂಡಿಕೆಯಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ, ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರಚುರಪಡಿಸಲಾಗುವುದು ಮತ್ತು ಈ ಬಗ್ಗೆ ಯಾವುದೇ ಪತ್ರಿಕಾ ಪ್ರಕಟಣೆಯನ್ನು ನೀಡಲಾಗುವುದಿಲ್ಲ.

ಸಹಿ/–ಅದ್ಯಕ್ಷರು, ನಗರಸಭೆ, ಹಾಸನ.
ಸಹಿ/–ಪೌರಾಯುಕ್ತರು, ನಗರಸಭೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/912/ಕೆಎಸ್‌ಎಂಸಿಎ/2024–25

(ಕರ್ನಾಟಕ ಸರ್ಕಾರ)
ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ, (ವಿಭಾಗೀಯ ಮಟ್ಟದ 150 ಹಾಸಿಗೆಗಳ ಆಸ್ಪತ್ರೆ)
email:crawfordhospital@gmail.com phone:08173-243098
ಸಂ.ಕ್ರಾ.ಸಾ.ಆ.ಸ/ಗ್ರೂಪ್–ಡಿ &ನಾ.ಕ್ಲಿ..ಟೆ/241/2023–24
ದಿನಾಂಕ:29.01.2025

ಇ–ಪ್ರಕ್ಯೂರ್‌ಮೆಂಟ್ ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಹೊರಗುತ್ತಿಗೆ ಗ್ರೂಪ್–ಡಿ /ನಾನ್–ಕ್ಲಿನಿಕಲ್ ಸೇವೆಗಾಗಿ ಅರ್ಹ ಟೆಂಡರ್‌ದಾರರಿಂದ/ ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999–2000 ಮೇರೆಗೆ ದ್ವಿಲಕೋಟೆ ಪದ್ಧತಿಯನ್ವಯ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರಿನ ವಾರ್ಷಿಕ ಅಂದಾಜು ಮೊತ್ತ 65,00,000/–ಆಸಕ್ತ ಸರಬರಾಜುದಾರರು ವೆಬ್‌ಸೈಟ್ www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವ ಮೂಲಕ ಇ– ಪ್ರಕ್ಯೂರ್ ಮೆಂಟ್ ನಲ್ಲಿ ಭಾಗವಹಿಸಬಹುದು. ರೂ. 162500/–ಗಳ ಇ.ಎಂ.ಡಿ ಯನ್ನು ಇ– ಪಾವತಿ ಮೂಲಕ ಸಕಾಲದಲ್ಲಿ ಭರ್ತಿಮಾಡಿದ ಟೆಂಡರ್‌ಗಳನ್ನು ದಿ॥ 07/02/2025 ರ ಸಂಜೆ 4.30 ಗಂಟೆಯೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಅಥವಾ ವೆಬ್‌ಸೈಟ್‌ನಲ್ಲಿ ನೋಡಬಹುದು.

ಸಹಿ/–ಆಡಳಿತ ವೈದ್ಯಾಧಿಕಾರಿಗಳು, ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ,

ವಾಸಾಸಂಇ/ಹಿಸನಿ/ಹಾಸನ/901/ಕೆಎಸ್‌ಎಂಸಿಎ/2024–25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಾರಾಹಿ ಯೋಜನಾ ವಿಭಾಗ ಸಿದ್ದಾಪುರ, ಉಡುಪಿ ಜಿಲ್ಲೆ. 576229
ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಇಂ/ಕನೀನಿನಿ/ವಾಯೋವಿ/ಪಿಬಿ/ಟೆಂಡರ್/20/2024–25/1397 ದಿನಾಂಕ: 31–01–2025.

ಟೆಂಡರ್ ಪ್ರಕಟಣೆ

(ಇ–ಪ್ರಕ್ಯೂರ್‌ಮೆಂಟ್ ವೇದಿಕೆ) (Two Tender Document System)

ವಾರಾಹಿ ಯೋಜನಾ ವಿಭಾಗದ ಕಾರ್ಯ ವ್ಯಾಪ್ತಿಯಡಿ ಬರುವ ಕಾಮಗಾರಿಗೆ ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಸಂಬಂಧಪಟ್ಟ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ವಿವರಗಳು ಕೆಳಕಂಡಂತಿರುತ್ತದೆ.

(1) ಗುತ್ತಿಗೆದಾರರು **https://kppp.karnataka.gov.in** ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. (2) ವಾರಾಹಿ ಎಡದಂಡೆ ವಿತರಣಾ ನಾಲೆ – 32ರ ನಿರ್ಮಾಣ ಕಾಮಗಾರಿ. (3) ಟೆಂಡರಿಗಿಟ್ಟ ಮೊತ್ತ **ರೂ. 31020.41 ಲಕ್ಷಗಳು** (4) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಬಹುದಾದ **ದಿನಾಂಕ: 03/02/2025.** (5) ಗುತ್ತಿಗೆದಾರರು ಟೆಂಡರ್ ಬಗ್ಗೆ ಪೂರ್ವಭಾವಿ ಸಭೆ **ದಿನಾಂಕ: 12/02/2025** (6) ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರಿನಲ್ಲಿ ಭಾಗವಹಿಸಲು ಕೊನೆಯ **ದಿನಾಂಕ: 14/03/2025 ಸಂಜೆ 5.00** ಗಂಟೆಯವರೆಗೆ (7) ಟೆಂಡರ್‌ನ್ನು ತೆರೆಯುವ **ದಿನಾಂಕ: 15/03/2025 ಸಂಜೆ 5.15 ಗಂಟೆಗೆ** (8) ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in** ಅಂತರ್ಜಾಲ ಅಥವಾ ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ವಾರಾಹಿ ಯೋಜನಾ ವಿಭಾಗ, ಇವರನ್ನು ಸಂಪರ್ಕಿಸುವುದು. (9) ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ, **https://kppp.karnataka.gov.in** ವೆಬ್‌ಸೈಟ್ ನಲ್ಲಿ ಪ್ರಚುರಪಡಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ,
ವಾರಾಹಿ ಯೋಜನಾ ವಿಭಾಗ, ಸಿದ್ದಾಪುರ, ಉಡುಪಿ ಜಿಲ್ಲೆ

ವಾಸಾಇ/ಸನಿಉ/ಕೆಎಸ್‌ಎಂಸಿಎ/685/24–25 ದಿ: 04.02.25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ–1/ಮ.ಪ ಟೆಂಡರ.ಪ್ರ–17/2024–25/4136 ದಿನಾಂಕ: 03–02–2025

ಮರು ಟೆಂಡರ್ (Call-2) ಪ್ರಕಟಣೆ (ಇ–ಪ್ರಕ್ಯೂರಮೆಂಟ್ ಪದ್ಧತಿಯಲ್ಲಿ ಮಾತ್ರ)

ಉಲ್ಲೇಖ: ಈ ಕಚೇರಿ ಪತ್ರ ಸಂಖ್ಯೆ: ಸಂ: ಕಾ.ನಿ.ಇಂ./ಲೋ.ಇ.ವಿ.ಕಾ/ಪಿ.ಬಿ–1/ಟೆಂಡರ– 17 /2024–25/3929 ದಿನಾಂಕ: 20–01–2025

ಉಲ್ಲೇಖಿದ ಈ ಕಚೇರಿಯ ಪತ್ರದಲ್ಲಿ ಕರೆಯಲಾಗಿದ್ದ 2024–25 ನೇ ಸಾಲಿನ 1) 5054-SH Improvements ಯೋಜನೆ ಅಡಿಯಲ್ಲಿ ವರ್ಕ ಇನ್‌ಡೆಂಟ್ 17500 (12.64 ಲಕ್ಷಗಳು) CAT-II(A) 2) 5054-MDR Improvements ಯೋಜನೆ ಅಡಿಯಲ್ಲಿ ವರ್ಕ ಇನ್‌ಡೆಂಟ್ –17501 (21.11 ಲಕ್ಷಗಳು) SC, ವರ್ಕ ಇನ್‌ಡೆಂಟ್ –17287(48.09 ಲಕ್ಷಗಳು) OTHERS, ವರ್ಕ ಇನ್‌ಡೆಂಟ್ –17512 (40.90 ಲಕ್ಷಗಳು) CAT-II(A), 3) 5054-MDR Renewal ಯೋಜನೆ ಅಡಿಯಲ್ಲಿ ವರ್ಕ ಇನ್‌ಡೆಂಟ್ –17153 (49.95 ಲಕ್ಷಗಳು) OTHERS, ವರ್ಕ ಇನ್‌ಡೆಂಟ್ –17230 (43.98 ಲಕ್ಷಗಳು) CAT-II(A) ಕರೆಯಲಾಗಿದ್ದ ಕಾಮಗಾರಿಗಳು ಮರು ಟೆಂಡರನ (Call-2) ದಿನಾಂಕದ ವಿವರ ಈ ಕೆಳಗಿನಂತಿದೆ.

(1) ಗುತ್ತಿಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿ: 10–02–2025 16.30 ಗಂಟೆವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿ: 11–02–2025 16.30 ಗಂಟೆವರೆಗೆ (3) ಟೆಂಡರನ ಆರ್ಥಿಕ ಬಿಡ್ ತೆರೆಯುವ ದಿ: 12–02–2025 17.00 ಗಂಟೆವರೆಗೆ.

ಹೆಚ್ಚಿನ ವಿವರಗಳನ್ನು, ಹೆಚ್ಚಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಕಾರವಾರ ಇವರ ಕಛೇರಿಗೆ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಕಾರವಾರ

DIPR/ADK/KSMCA/844/24-25 dt.04.02.2025

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟ ಇವರ ಕಛೇರಿ,
ಸಂಖ್ಯೆ.ಲೋಇ:ಬಾವಿ:ಪಿಬಿ:ಕೆಡಬ್ಲು:2024–25/03756 ದಿನಾಂಕ:01–02–2025

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ/ಡಬ್ಲೂ–2 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಬಾಗಲಕೋಟ ವಿಭಾಗದಅಡಿಯಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಯ ಟೆಂಡರ್ ಅಹ್ವಾನಿಸಲಾಗಿದೆ.

ವರ್ಕ ಇಂಡೆಂಟ್ ನಂ: ವರ್ಕ ಇಂಡೆಂಟ್ ನಂ:19190, 19198, 19185 & 19200 ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರಗಿಟ್ಟ ಮೊತ್ತ **ರೂ. 47.87 ಲಕ್ಷ** ಹಾಗೂ ಕನಿಷ್ಠ ಮೊತ್ತ **ರೂ. 24.33ಲಕ್ಷ** ಗಳ ವರೆಗಿನ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ.

ಅ)	ಟೆಂಡರ್ ಆಕ್ಷೇಪಣೆಗಾಗಿ ನಿಗಧಿ ಪಡಿಸಿದ ದಿನಾಂಕ:	11–02–2025 ರಂದು ಸಂಜೆ 5–30 ಘಂಟೆಯವರೆಗೆ
ಬ)	ಟೆಂಡರ್ ಸ್ವೀಕರಿಸುವ ದಿನಾಂಕ	12–02–2025 ರಂದು ಸಂಜೆ 4–00 ಘಂಟೆಯವರೆಗೆ
ಕ)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	13–02–2025 ರಂದು ಸಂಜೆ 4.30 ಘಂಟೆಯವರೆಗೆ
ಡ)	ಆರ್ಥಿಕ ಬಿಡ್ ತೆರೆಯುವ ದಿನಾಂಕ	14–02–2025 ರಂದುಸಂಜೆ 4.30 ಘಂಟೆಯವರೆಗೆ

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ http://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬಾಗಲಕೋಟೆ.

ವಾ.ಸಾ.ಇ/ಬಾಗಲಕೋಟ/466/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)–1/2024–25/8496–513 ದಿನಾಂಕ: 04.02.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್‌ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಕ್ರ.ಸಂ.	ವಿಚಾರಣಾ ಸಂಖ್ಯೆ / ಕಾಮಗಾರಿಗಳ ವಿವರ
1	**ಬಿಡ್ ವಿಚಾರಣಾ ಸಂಖ್ಯೆ. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್/1958** ರ ಅನ್ವಯ ಮೈಸೂರು ತಾಲ್ಲೂಕು ಮತ್ತು ಜಿಲ್ಲೆಯ **ಮಾರಶೆಟ್ಟಿಹಳ್ಳಿಯಲ್ಲಿ** 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ವಾಜಮಂಗಲ–ಕಡಕೊಳ ಡಿಸಿ ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ಮಾರಶೆಟ್ಟಿಹಳ್ಳಿ ಉಪಕೇಂದ್ರದವರೆಗೆ 110ಕೆವಿ ಡಿಸಿ ನ್ಯಾರೋ ಬೇಸ್ಡ್ ಗೋಪುರಗಳ ಮೇಲೆ **0.085ಕಿಮೀ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
2	**ಬಿಡ್ ವಿಚಾರಣಾ ಸಂಖ್ಯೆ. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್/1956** ರ ಅನ್ವಯ ಮೈಸೂರು ತಾಲ್ಲೂಕು ಮತ್ತು ಜಿಲ್ಲೆಯ **ವಸಂತನಗರದಲ್ಲಿ** 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ವಾಜಮಂಗಲ–ದೇವನೂರು ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ವಸಂತನಗರ ಉಪಕೇಂದ್ರದವರೆಗೆ 110ಕೆವಿ ಡಿಸಿ ನ್ಯಾರೋ ಬೇಸ್ಡ್ ಗೋಪುರಗಳ ಮೇಲೆ **0.08ಕಿಮೀ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
3	**ಬಿಡ್ ವಿಚಾರಣಾ ಸಂಖ್ಯೆ. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್/1962** ರ ಅನ್ವಯ ಕೆ.ಆರ್ ನಗರ ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ **ಮೇಲೂರುನಲ್ಲಿ** 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಕಡವಿನಕೋಟೆ–ಸಾಲಿಗ್ರಾಮ ಎಸ್‌ಸಿ ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ಮೇಲೂರು ಉಪಕೇಂದ್ರದವರೆಗೆ 110ಕೆವಿ ಡಿಸಿ ನ್ಯಾರೋ ಬೇಸ್ಡ್ ಗೋಪುರಗಳ ಮೇಲೆ **0.901ಕಿಮೀ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
4	**ಬಿಡ್ ವಿಚಾರಣಾ ಸಂಖ್ಯೆ. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್/1957** ರ ಅನ್ವಯ ಸರಗೂರು ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ **ಬಸಾಪುರ(ಸಾಗರೆ)**ದಲ್ಲಿ 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಸಂತೆ ಸರಗೂರು–ಬಿ.ಮಟಕೆರೆ ಎಸ್‌ಸಿ ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ಬಸಾಪುರ(ಸಾಗರೆ) ಉಪಕೇಂದ್ರದವರೆಗೆ 110ಕೆವಿ ಗೋಪುರಗಳ ಮೇಲೆ **3.025ಕಿಮೀ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ಕೊಯೋಟ್ ವಾಹಕದಿಂದ ನಿರ್ಮಿಸುವುದು.
5	**ಬಿಡ್ ವಿಚಾರಣಾ ಸಂಖ್ಯೆ. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್/1960** ರ ಅನ್ವಯ ಕೆ.ಆರ್ ನಗರ ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ **ಚಿಕ್ಕನೇರಳೆಯಲ್ಲಿ** 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಕುಶಾಲನಗರ–ಚುಂಚನಕಟ್ಟೆ–ಕೆ.ಆರ್.ನಗರ ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ಚಿಕ್ಕನೇರಳೆ ಉಪಕೇಂದ್ರದವರೆಗೆ 110ಕೆವಿ ಡಿಸಿ ಗೋಪುರಗಳ ಮೇಲೆ **0.335ಕಿಮೀ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
6	**ಬಿಡ್ ವಿಚಾರಣಾ ಸಂಖ್ಯೆ. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್/1954** ರ ಅನ್ವಯ ಸರಗೂರು ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ **ಕೆ.ಬೆಳ್ತೂರುನಲ್ಲಿ** 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಕಡಕೊಳ–ಸರಗೂರು–ಹೆಚ್.ಡಿ.ಕೋಟೆ ಎಸ್‌ಸಿ ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ಕೆ.ಬೆಳ್ತೂರು ಉಪಕೇಂದ್ರದವರೆಗೆ 110ಕೆವಿ ಗೋಪುರಗಳ ಮೇಲೆ **0.322ಕಿಮೀ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
7	**ಬಿಡ್ ವಿಚಾರಣಾ ಸಂಖ್ಯೆ. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್/1963** ರ ಅನ್ವಯ ಪಿರಿಯಾಪಟ್ಟಣ ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ **ಪಂಚವಳ್ಳಿ (ಚೌಕೂರು)**ಯಲ್ಲಿ 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಪಿರಿಯಾಪಟ್ಟಣ–ಹನಗೋಡು ಎಸ್‌ಸಿ ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ಪಂಚವಳ್ಳಿ (ಚೌಕೂರು) ಉಪಕೇಂದ್ರದವರೆಗೆ 110ಕೆವಿ ಗೋಪುರಗಳ ಮೇಲೆ **2.01ಕಿಮೀ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
8	**ಬಿಡ್ ವಿಚಾರಣಾ ಸಂಖ್ಯೆ. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್/1964** ರ ಅನ್ವಯ ಹುಣಸೂರು ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ **ಕರ್ಣಕುಪ್ಪೆಯಲ್ಲಿ** 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಹನಗೋಡು–ಪೊನ್ನಂಪೇಟೆ ಎಸ್‌ಸಿ ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ಕರ್ಣಕುಪ್ಪೆ ಉಪಕೇಂದ್ರದವರೆಗೆ 110ಕೆವಿ ಡಿಸಿ ನ್ಯಾರೋ ಬೇಸ್ಡ್ ಗೋಪುರಗಳ ಮೇಲೆ **1.275ಮೀ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
9	**ಬಿಡ್ ವಿಚಾರಣಾ ಸಂಖ್ಯೆ. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್/1961** ರ ಅನ್ವಯ ಹುಣಸೂರು ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ **ಮನುಗನಹಳ್ಳಿಯಲ್ಲಿ** 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಹೂಟಗಳ್ಳಿ–ಬಿಳಿಕೆರೆ ಡಿಸಿ ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ಮನುಗನಹಳ್ಳಿ ಉಪಕೇಂದ್ರದವರೆಗೆ **1.060ಕಿಮೀ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
10	**ಬಿಡ್ ವಿಚಾರಣಾ ಸಂಖ್ಯೆ. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್/1959** ರ ಅನ್ವಯ ಹುಣಸೂರು ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ **ಕಟ್ಟೆಮಳಲವಾಡಿಯಲ್ಲಿ** 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಇಲವಾಲ–ಪಿರಿಯಾಪಟ್ಟಣ ಎಸ್‌ಸಿ ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ಕಟ್ಟೆಮಳಲವಾಡಿ ಉಪಕೇಂದ್ರದವರೆಗೆ 110ಕೆವಿ ಗೋಪುರಗಳ ಮೇಲೆ **0.0857ಕಿಮೀ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
11	**ಬಿಡ್ ವಿಚಾರಣಾ ಸಂಖ್ಯೆ. ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್/1955** ರ ಅನ್ವಯ ಪಿರಿಯಾಪಟ್ಟಣ ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ **ಬೆಳ್ತೂರು(ಹುಣಸವಾಡಿ)**ನಲ್ಲಿ 2x12.5ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ಕುಶಾಲನಗರ–ಪಿರಿಯಾಪಟ್ಟಣ ಡಿಸಿ ಪ್ರಸರಣ ಮಾರ್ಗದಿಂದ ಪ್ರಸ್ತಾಪಿತ 66/11ಕೆವಿ ಬೆಳ್ತೂರು (ಹುಣಸವಾಡಿ) ಉಪಕೇಂದ್ರದವರೆಗೆ **3.986ಕಿಮೀ** ಉದ್ದಕ್ಕೆ 66ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ಕೊಯೋಟ್ ವಾಹಕದಿಂದ ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್ ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ “E Procurement KPTCL” ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ **13.02.2025** ರಂದು **15:00 ಗಂಟೆಗೆ** ಅಥವಾ ನಂತರದಿಂದ ಪಡೆಯಬಹುದು. **ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ 15.03.2025 ಮತ್ತು ಸಮಯ 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕದ ವಿಸ್ತರಣೆ/ತಿದ್ದುಪಡಿ ಇದ್ದಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ, ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್,
ಕ.ವಿ.ಪ್ರ.ನಿ.ನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು–560009

10 ಗ್ರಾಂ ಚಿನ್ನದ ದರ ₹85,800



ನವದೆಹಲಿ (ಪಿಟಿಐ): ಆಭರಣ ತಯಾರಕರು ಮತ್ತು ಚಿಲ್ಲರೆ ಮಾರಾಟಗಾರರಿಂದ ಬೇಡಿಕೆ ಹೆಚ್ಚಾಗಿದ್ದರಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಸತತ ಐದನೇ ದಿನವಾದ ಮಂಗಳವಾರವೂ ಚಿನ್ನದ ಧಾರಣೆ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹500 ಹೆಚ್ಚಳವಾಗಿ, ₹85,800ರಂತೆ ಮಾರಾಟವಾಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹85,400 ಆಗಿದೆ. ಜನವರಿ 1ರಿಂದ ಇಲ್ಲಿಯವರೆಗೆ 10 ಗ್ರಾಂ ಚಿನ್ನದ ದರವು ₹6,410 (ಶೇ 8) ಹೆಚ್ಚಳವಾಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹500 ಇಳಿಕೆಯಾಗಿ, ₹95,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-36000
ಹಳತು	45500-49500
ಚಿತ್ರದುರ್ಗ	
ಅಪಿ	49419-49829
ಬೆಟ್ಟೆ	23649-24099
ಕೆಂಪುಗೋಟು	20409-20810
ರಾಶಿ	48939-49369
ಸಾಗರ	
ಬಿಳಿಗೋಟು	10290-18690
ಚಾಲಿ	28699-32610
ಕೆಂಪುಗೋಟು	20199-22199
ರಾಶಿ	36899-50599
ಸಿಪ್ಪೆಗೋಟು	10829-17011
ಶಿವಮೊಗ್ಗ	
ಬೆಟ್ಟೆ	40014-56509
ಗೊರಬಲು	17551-30199
ರಾಶಿ	34669-50899
ಸರಕು	47810-92540
ಸಿದ್ದಾಪುರ	
ಬಿಳಿಗೋಟು	22109-27109
ಚಾಲಿ	32139-37949
ಕೋಕ	12899-17699
ಹೊಸಚಾಲಿ	23109-31599
ಕೆಂಪುಗೋಟು	21119-21619
ರಾಶಿ	42099-49099
ತಟ್ಟಿಬೆಟ್ಟೆ	29099-44099
ಶಿರಸಿ	
ಬೆಟ್ಟೆ	26098-40201
ಬಿಳಿಗೋಟು	16099-30599
ಚಾಲಿ	35098-40000
ಕೆಂಪುಗೋಟು	12700-25818
ರಾಶಿ	43099-47708
ಯಲ್ಲಾಪುರ	
ಅಪಿ	66899-68499
ಬಿಳಿಗೋಟು	11899-26216
ಚಾಲಿ	27099-38636
ಕೋಕ	3801-16602
ಕೆಂಪುಗೋಟು	11899-26216
ರಾಶಿ	39689-66615
ತಟ್ಟಿಬೆಟ್ಟೆ	27199-38805

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟನೆ

‘ಹಳೆ ತೆರಿಗೆ ಪದ್ಧತಿ ಕೈ ಬಿಡಲ್ಲ’

ನವದೆಹಲಿ (ಪಿಟಿಐ): ‘ಹಳೆಯ ತೆರಿಗೆ ಪದ್ಧತಿಯನ್ನು ರದ್ದುಪಡಿಸುವ ಯಾವುದೇ ಪ್ರಸ್ತಾವವು ಸರ್ಕಾರದ ಮುಂದಿಲ್ಲ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟಪಡಿಸಿದ್ದಾರೆ.

ಮಂಗಳವಾರ ನಡೆದ ಖಾಸಗಿ ಕಾರ್ಯಕ್ರಮವೊಂದರಲ್ಲಿ ಅವರು ಮಾತನಾಡಿದರು.

‘ದೆಹಲಿ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಮಧ್ಯಮ ವರ್ಗದವರಿಗೆ ಅನುಕೂಲ ಕಲ್ಪಿಸಲು ಆದಾಯ ತೆರಿಗೆ ಕಡಿತಕ್ಕೆ ಕ್ರಮಕೈಗೊಂಡಿದೆ ಎಂಬ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಇಂತಹ ಟೀಕೆಗಳಿಗೆ ಅರ್ಥವೂ ಇಲ್ಲ’ ಎಂದರು.

ವಾರ್ಷಿಕ ₹12 ಲಕ್ಷದವರೆಗೆ ಆದಾಯ ಹೊಂದಿರುವವರ ಆದಾಯ ತೆರಿಗೆ ಹೊರೆಯು ಹೊಸ ತೆರಿಗೆ ಪದ್ಧತಿ ಅಡಿ 2025–26ನೇ ಆರ್ಥಿಕ ವರ್ಷದಿಂದ (ಏಪ್ರಿಲ್ 1) ಶೂನ್ಯಕ್ಕೆ ಇಳಿಯಲಿದೆ. ವೇತನದಾರ ವರ್ಗದವರಿಗೆ ಸ್ಟ್ಯಾಂಡರ್ಡ್ ಡಿಡಕ್ಷನ್‌ನ ಸೌಲಭ್ಯವಿದೆ. ಹಾಗಾಗಿ, ಈ ವರ್ಗದವರಿಗೆ ವಾರ್ಷಿಕ ₹12.75 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಹೊರೆ ಇರುವುದಿಲ್ಲ.

2025–26ನೇ ಸಾಲಿನ ಬಜೆಟ್‌ನಲ್ಲಿ ಬಂಡವಾಳ ವೆಚ್ಚಕ್ಕೆ ₹11.21 ಲಕ್ಷ ಕೋಟಿ ನಿಗದಿಪಡಿಸಲಾಗಿದೆ. ಇದು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4.3ರಷ್ಟಿದೆ. ಬಜೆಟ್‌ನಲ್ಲಿ ಬಂಡವಾಳ ವೆಚ್ಚವನ್ನು ಕಡಿತಗೊಳಿಸಿಲ್ಲ ಎಂದು ನಿರ್ಮಲಾ ಸ್ಪಷ್ಟಪಡಿಸಿದರು.

2024–25ರಲ್ಲಿ ಬಂಡವಾಳ ವೆಚ್ಚವನ್ನು ಪರಿಷ್ಕರಿಸಿದ್ದ ಸರ್ಕಾರವು, ₹10.18 ಲಕ್ಷ ಕೋಟಿ ನಿಗದಿಪಡಿಸಿತ್ತು.

ಜಿಎಸ್‌ಟಿ ಹೊರೆ ಇಳಿಕೆ: ಶೀಘ್ರ ನಿರ್ಧಾರ

‘148 ವಸ್ತುಗಳ ಮೇಲಿನ ಜಿಎಸ್‌ಟಿ ಕಡಿಮೆಗೊಳಿಸುವ ಹಾಗೂ ನಾಲ್ಕು ಸ್ಲ್ಯಾಬ್‌ಗಳ ಪರಿಷ್ಕರಣೆ ಕಾರ್ಯ ಅಂತಿಮಗೊಂಡಿದೆ. ಶೀಘ್ರವೇ, ಜಿಎಸ್‌ಟಿ ಮಂಡಳಿಯು ಈ ಕುರಿತು ಅಂತಿಮ ತೀರ್ಮಾನ ಕೈಗೊಳ್ಳಲಿದೆ’ ಎಂದು ಸಚಿವೆ ನಿರ್ಮಲಾ ಹೇಳಿದರು.



ಪ್ರಸ್ತುತ ಜಿಎಸ್‌ಟಿ ಅಡಿ ಶೇ 5, ಶೇ 12, ಶೇ 18 ಹಾಗೂ ಶೇ 28ರಷ್ಟು ತೆರಿಗೆ ವಿಧಿಸಲಾಗುತ್ತದೆ. ಐಷಾರಾಮಿ ಸರಕುಗಳ ಮೇಲೆ ಶೇ 28ರಷ್ಟು ತೆರಿಗೆ ವಿಧಿಸಿದರೆ, ಜೀವನಾವಶ್ಯಕ ಸರಕುಗಳು ಶೇ 5ರ ತೆರಿಗೆ ಸ್ಲ್ಯಾಬ್‌ನಡಿ ಬರುತ್ತವೆ.

ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯಡಿ ತೆರಿಗೆ ಪ್ರಮಾಣ ಸರಳೀಕರಣ ಮತ್ತು ಸ್ಲ್ಯಾಬ್‌ಗಳ ಪರಿಷ್ಕರಣೆ ಬಗ್ಗೆ ಆರು ಸಚಿವರನ್ನು ಒಳಗೊಂಡ ಸಮಿತಿ ರಚಿಸಲಾಗಿದೆ. ಈ ಸಮಿತಿಯು ಅಂತಿಮ ವರದಿ ಸಿದ್ಧಪಡಿಸಿದೆ ಎಂದು ಹೇಳಲಾಗಿದೆ.

‘ಜಿಎಸ್‌ಟಿ ದರ ಸರಳೀಕರಣ ಮತ್ತು ಸ್ಲ್ಯಾಬ್‌ಗಳ ಪರಿಷ್ಕರಣೆ ಬಗ್ಗೆ ಮೂರು ವರ್ಷದಿಂದಲೂ ಪರಾಮರ್ಶೆ ನಡೆದಿದೆ. ಶೀಘ್ರವೇ, ಇದಕ್ಕೆ ಅಂತಿಮ ರೂಪ ಸಿಗಲಿದೆ’ ಎಂದು ಸಚಿವೆ ಹೇಳಿದರು.

8ಕ್ಕೆ ಆರ್‌ಬಿಐ ಸಭೆ

ಸಚಿವೆ ನಿರ್ಮಲಾ ಅವರು ಫೆಬ್ರುವರಿ 8ರಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಆಡಳಿತ ಮಂಡಳಿ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಸಂಸತ್‌ನಲ್ಲಿ ಆಯವ್ಯಯ ಮಂಡನೆಯಾದ ಬಳಿಕ ಹಣಕಾಸು ಸಚಿವರು ಆರ್‌ಬಿಐನ ಆಡಳಿತ ಮಂಡಳಿ ಸಭೆಯಲ್ಲಿ ಮಾತನಾಡುವುದು ರೂಢಿಗತವಾಗಿ ನಡೆದುಕೊಂಡು ಬಂದಿದೆ. 2025–26ನೇ ಸಾಲಿನ ಬಜೆಟ್‌ನ ಪ್ರಮುಖ ಅಂಶಗಳ ಬಗ್ಗೆ ಸಭೆಯಲ್ಲಿ ನಿರ್ಮಲಾ ಅವರು ಪ್ರಸ್ತಾಪಿಸುವ ನಿರೀಕ್ಷೆಯಿದೆ.

ಸುದ್ದಿ 2 ನಿಮಿಷ

ರಾಜ್ಯಕ್ಕೆ ಕಳೆದ ಬಾರಿಗಿಂತ ಶೇ 10ರಷ್ಟು ಹೆಚ್ಚು ತೆರಿಗೆ ಪಾಲು: ಸಚಿವ ಜೋಶಿ

ನವದೆಹಲಿ: ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಕಳೆದ ವರ್ಷಕ್ಕಿಂತ ಶೇ 10ರಷ್ಟು ಹೆಚ್ಚು ತೆರಿಗೆ ಪಾಲು ಹಂಚಿಕೆ ಮಾಡಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣ ‘ಎಕ್ಸ್’ ಖಾತೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿರುವ ಅವರು, ‘2025-26ನೇ ಆರ್ಥಿಕ ವರ್ಷದಲ್ಲಿ ಕರ್ನಾಟಕಕ್ಕೆ ₹51,876 ಕೋಟಿ ತೆರಿಗೆ ಹಂಚಿಕೆ ಮಾಡಲಾಗಿದೆ’ ಎಂದಿದ್ದಾರೆ.

‘2014-15ರಲ್ಲಿ ₹24,789.78 ಕೋಟಿ ತೆರಿಗೆ ಪಾಲು ಹಂಚಿಕೆ ಆಗಿದ್ದರೆ, 2025-26ರ ಆರ್ಥಿಕ ವರ್ಷ ಇದಕ್ಕಿಂತ ಶೇ 108ರಷ್ಟು ಅಧಿಕ ತೆರಿಗೆ ಹಂಚಿಕೆಯಾಗಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

‘15ನೇ ಹಣಕಾಸು ಆಯೋಗವು ಕರ್ನಾಟಕಕ್ಕೆ ತೆರಿಗೆ ಪಾಲನ್ನು ಶೇ 3.647ರಷ್ಟು ನಿಗದಿಪಡಿಸಿದೆ. 2004-2014ರ ಅವಧಿಯಲ್ಲಿ ರಾಜ್ಯಕ್ಕೆ ಕೇವಲ ₹81,795 ಕೋಟಿ ನೀಡಲಾಗಿತ್ತು. 2014-2024ರ ಅವಧಿಯಲ್ಲಿ ಎನ್‌ಡಿಎ ಸರ್ಕಾರ ₹2,85,452 ಕೋಟಿ ತೆರಿಗೆ ಹಂಚಿಕೆ ಮಾಡಿದೆ’ ಎಂದು ಅವರು ತಿಳಿಸಿದ್ದಾರೆ.

ಸ್ಟಾರ್ಟ್ ಅಪ್‌ಗೆ ತೆರಿಗೆ ವಿನಾಯಿತಿ: ಸ್ಟಾರ್ಟ್ ಅಪ್‌ಗಳಿಗೆ 10 ವರ್ಷಗಳ ಸಂಪೂರ್ಣ ತೆರಿಗೆ ವಿನಾಯಿತಿ ನೀಡಿದೆ. ಜತೆಗೆ, ₹10,000 ಕೋಟಿ ಅನುದಾನ ಸಹ ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.




ಶೇ 98.15ರಷ್ಟು ನೋಟು ವಾಪಸ್

ಮುಂಬೈ (ಪಿಟಿಐ): ₹2 ಸಾವಿರ ಮುಖಬೆಲೆಯ ಶೇ 98.15ರಷ್ಟು ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ವಾಪಸ್ ಆಗಿವೆ. ಸಾರ್ವಜನಿಕರ ಹತ್ತಿರ ಇನ್ನೂ ₹6,557 ಕೋಟಿ ಮೌಲ್ಯದ ನೋಟು ಉಳಿದುಕೊಂಡಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಒಟ್ಟು ₹3.56 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ 2023ರ ಮೇ 19ರಂದು ಆರ್‌ಬಿಐ ಘೋಷಿಸಿತ್ತು.

ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಹಾಗೂ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವುದಕ್ಕೆ ಬೆಂಗಳೂರು ಸೇರಿ ಆರ್‌ಬಿಐನ 19 ಪ್ರಾದೇಶಿಕ ಕಚೇರಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,361
ಇಂದಿನ ಅಂತ್ಯ	23,739
▲	378
ದಿನದ ಗರಿಷ್ಠ	23,762

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹495
12 ಕ್ಕೆ	₹66
ಮೈಸೂರು	
100ಕ್ಕೆ	₹497

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹382-690
ದ್ವಿತಳಿ (ಬಿ.ವಿ)	₹177-850

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹189
ಆರ್‌ಎಸ್‌ಎಸ್-5	₹184
ಗುಡ್ ಲಾಟ್	₹179

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹26000
ಎಸಿ	₹14420
ಆರ್‌ಪಿ	₹21000
ಆರ್‌ಸಿ	₹12285

ಡೊನಾಲ್ಡ್ ಟ್ರಂಪ್‌ಗೆ ಸಡ್ಡು ಪ್ರತಿ ಸುಂಕ ಹೇರಿದ ಚೀನಾ



ಬೀಜಿಂಗ್ (ಎ.ಪಿ): ಚೀನಾದಿಂದ ಆಮದಾಗುವ ಉತ್ಪನ್ನಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿರುವ ಅಧಿಕ ಸುಂಕಕ್ಕೆ ಪ್ರತಿಯಾಗಿ, ಅಮೆರಿಕದಿಂದ ಆಮದಾಗುವ ಉತ್ಪನ್ನಗಳ ಮೇಲೆಯೂ ಚೀನಾ ಸುಂಕವನ್ನು ಹೆಚ್ಚಿಸಿದೆ.

ಅಧಿಕ ಪ್ರಮಾಣದ ಸುಂಕ ವಿಧಿಸುವುದರ ಜೊತೆಗೆ ಗೂಗಲ್‌ನ ವಿಶ್ವಾಸಾರ್ಹತೆ ಹಾಗೂ ಇತರೆ ವ್ಯಾಪಾರಿ ಕ್ರಮಗಳ ಕುರಿತಂತೆ ತನಿಖೆ ನಡೆಸಲೂ ಚೀನಾ ಸರ್ಕಾರ ತೀರ್ಮಾನಿಸಿದೆ.

ಈ ಮಧ್ಯೆ, ಟ್ರಂಪ್ ಅವರು ಮುಂದಿನ ಕೆಲ ದಿನಗಳಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಜೊತೆಗೆ ಚರ್ಚೆ ನಡೆಸುವ ಸಾಧ್ಯತೆ ಇದೆ. ಎರಡೂ ರಾಷ್ಟ್ರಗಳ ನಡುವೆ ಸುಂಕ ಸಮರ ನಡೆಯುತ್ತಿರುವುದು ಇದೇ ಮೊದಲೇನೂ ಅಲ್ಲ.

2018ರಲ್ಲೂ ಟ್ರಂಪ್ ಅವರು ಚೀನಾ ಉತ್ಪನ್ನಗಳ ಮೇಲೆ ಸುಂಕ ಏರಿಸಿದ್ದರು. ಆಗಲೂ ಸುಂಕ ಸಮರ ನಡೆದಿತ್ತು. ಈ ಬಾರಿ ಸ್ಪರ್ಧೆಯನ್ನು ಎದುರಿಸಲು ಚೀನಾ ಹೆಚ್ಚು ಸನ್ನದ್ಧವಾಗಿದೆ ಎನ್ನುತ್ತಾರೆ ಪರಿಣತರು.

‘ಚೀನಾ ಉತ್ತಮವಾದ ರಫ್ತು ನಿಯಂತ್ರಣ ವ್ಯವಸ್ಥೆ ಹೊಂದಿದೆ. ನಾವು ವಿವಿಧ ಉತ್ಪನ್ನಗಳಿಗೆ ಚೀನಾದ ಮೇಲೆ ಅವಲಂಬಿತರಾಗಿದ್ದೇವೆ. ನಮ್ಮ ಆರ್ಥಿಕತೆ ಮೇಲೆ ಅವರು ಗಣನೀಯ ಪರಿಣಾಮ ಬೀರಬಹುದಾಗಿದೆ’ ಎಂದು ಅಮೆರಿಕ ವಿದೇಶಾಂಗ ಇಲಾಖೆ ಮಾಜಿ ಅಧಿಕಾರಿ ಫಿಲಿಪ್ ಲಕ್ ಹೇಳಿದರು.

ಸೋಮವಾರದಿಂದ ಜಾರಿಗೆ ಬರುವಂತೆ ಕಚ್ಚಾ ತೈಲ, ಕೃಷಿ ಪರಿಕರಗಳು, ಅತಿ ಹೆಚ್ಚು ಸಾಮರ್ಥ್ಯದ ಎಂಜಿನ್‌ಗಳುಳ್ಳ ಕಾರುಗಳು ಸೇರಿ ಅಮೆರಿಕದ ಆಮದು ಉತ್ಪನ್ನಗಳ ಮೇಲೆ ಹೆಚ್ಚಿನ ಸುಂಕ ವಿಧಿಸಲಾಗುವುದು ಎಂದು ಚೀನಾ ತಿಳಿಸಿದೆ.

ಕಲ್ಲಿದ್ದಲು ಮತ್ತು ಎನ್‌ಎಲ್‌ಜಿ ಅನಿಲ ಉತ್ಪನ್ನಗಳ ಮೇಲೆ ಶೇ 15ರಷ್ಟು, ಕಚ್ಚಾ ತೈಲ, ಕೃಷಿ ಪರಿಕರಗಳು, ಬೃಹತ್ ಎಂಜಿನ್‌ವುಳ್ಳ ಕಾರುಗಳ ಮೇಲೆ ಶೇ 10ರಷ್ಟು ಸುಂಕ ವಿಧಿಸಲಾಗುವುದು ಎಂದು ತಿಳಿಸಿದೆ.

ಹೂಡಿಕೆದಾರರ ಸಂಪತ್ತು ₹5.95 ಲಕ್ಷ ಕೋಟಿ ವೃದ್ಧಿ

ಸುಂಕ ವಿಳಂಬ: ಗೂಳಿ ಓಟ



ಮುಂಬೈ (ಪಿಟಿಐ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಮೆಕ್ಸಿಕೊ ಮತ್ತು ಕೆನಡಾ ಮೇಲೆ ಹೇರಿದ್ದ ಸುಂಕವನ್ನು ಒಂದು ತಿಂಗಳಮಟ್ಟಿಗೆ ತಡೆ ಹಿಡಿದಿರುವುದರಿಂದ, ದೇಶದ ಷೇರುಪೇಟೆಯಲ್ಲಿ ಮಂಗಳವಾರ ಗೂಳಿ ಓಟ ಜೋರಾಯಿತು.

ಸೋಲ್, ಟೋಕಿಯೊ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಯೂ ಏರಿಕೆ ದಾಖಲಿಸಿವೆ. ಇದು ದೇಶೀಯ ಸೂಚ್ಯಂಕಗಳು ಶೇ2ರಷ್ಟು ಏರಿಕೆ ಕಾಣಲು ನೆರವಾಯಿತು. ಇದರಿಂದ ಹೂಡಿಕೆದಾರರ ಸಂಪತ್ತು ₹5.95 ಲಕ್ಷ ಕೋಟಿ ಹೆಚ್ಚಳವಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,397 ಅಂಶ ಏರಿಕೆ ಕಂಡು (ಶೇ 1.81) ಒಂದು ತಿಂಗಳ ಹಿಂದಿನ ಗರಿಷ್ಠ ಮಟ್ಟವಾದ 78,583 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 1,471 ಅಂಶ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 378 ಅಂಶ ಹೆಚ್ಚಳಗೊಂಡು 23,739 ಅಂಶಗಳಲ್ಲಿ ಮುಕ್ತಾಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಎಲ್ ಆ್ಯಂಡ್ ಟಿ ಷೇರಿನ ಮೌಲ್ಯದಲ್ಲಿ ಶೇ 5ರಷ್ಟು ಏರಿಕೆಯಾಗಿದೆ. ಅದಾನಿ ಪೋರ್ಟ್ಸ್, ಇಂಡಸ್ ಇಂಡ್ ಬ್ಯಾಂಕ್, ಟಾಟಾ ಮೋಟರ್ಸ್, ರಿಲಯನ್ಸ್ ಇಂಡಸ್ಟ್ರೀಸ್, ಅಲ್ಟ್ರಾ ಟೆಕ್ ಸಿಮೆಂಟ್, ಏಷ್ಯನ್ ಪೇಂಟ್ಸ್ ಷೇರಿನ ಮೌಲ್ಯ ಏರಿಕೆಯಾಗಿದೆ.

ಐಟಿಸಿ ಹೋಟೆಲ್ಸ್, ಜೊಮಾಟೊ, ನೆಸ್ಲೆ ಮತ್ತು ಮಾರುತಿ ಸುಜುಕಿ ಷೇರಿನ ಮೌಲ್ಯ ಇಳಿಕೆಯಾಗಿದೆ.

ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆಯು ಶೇ 1.05ರಷ್ಟು ಇಳಿಕೆಯಾಗಿದೆ. ಪ್ರತಿ ಬ್ಯಾರಲ್ 75.16 ಡಾಲರ್ ಆಗಿದೆ.

ಸೋಮವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹3,958 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆಯು ಬುಧವಾರದಿಂದ ಆರಂಭವಾಗಲಿದೆ. ಫೆಬ್ರುವರಿ 7ರಂದು ರೆಪೊ ದರ ಕಡಿತ ಸಂಬಂಧ ಗವರ್ನರ್ ಅವರು ಅಧಿಕೃತವಾಗಿ ಮಾಹಿತಿ ನೀಡಲಿದ್ದಾರೆ. ಸಭೆಯ ತೀರ್ಮಾನವು ಮಾರುಕಟ್ಟೆಯ ಏರಿಳಿತದ ಮೇಲೆ ಪರಿಣಾಮ ಬೀರಲಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ರೂಪಾಯಿ ಮೌಲ್ಯ ಚೇತರಿಕೆ



ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಕುಸಿದಿದ್ದ ರೂಪಾಯಿ ಮೌಲ್ಯವು ಮಂಗಳವಾರದ ವಹಿವಾಟಿನಲ್ಲಿ ಚೇತರಿಕೆ ಕಂಡಿದೆ.

ರೂಪಾಯಿ ಮೌಲ್ಯ 4 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹87.07 ಆಗಿದೆ.

ಸೋಮವಾರದ ವಹಿವಾಟಿನಲ್ಲಿ 49 ಪೈಸೆ ಕುಸಿದಿತ್ತು.

ಅಮೆರಿಕದ ಸುಂಕ ನೀತಿಯ ಅನಿಶ್ಚಿತತೆಯಿಂದಾಗಿ ರೂಪಾಯಿ ಮೌಲ್ಯದಲ್ಲಿ ಏರಿಳಿತವಾಗುವ ಸಾಧ್ಯತೆಯಿದೆ. ಅಮೆರಿಕದ ಸರಕುಗಳ ಮೇಲೆ ಚೀನಾ ಹೆಚ್ಚಿನ ಸುಂಕ ವಿಧಿಸಲು ಮುಂದಾಗಿದೆ. ಈ ನೀತಿಯು ಜಾಗತಿಕ ವಹಿವಾಟಿನ ಮೇಲೂ ಪರಿಣಾಮ ಬೀರಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

2,664 ಉದ್ದೇಶಪೂರ್ವಕ ಸುಸ್ತಿದಾರರು



ನವದೆಹಲಿ (ಪಿಟಿಐ): ಕಳೆದ ವರ್ಷದ ಮಾರ್ಚ್ ಅಂತ್ಯಕ್ಕೆ ದೇಶದಲ್ಲಿ ಬ್ಯಾಂಕ್ ಸಾಲ ತೀರಿಸದೆ 2,664 ಮಂದಿ ಉದ್ದೇಶಪೂರ್ವಕವಾಗಿ ಸುಸ್ತಿದಾರರಾಗಿದ್ದಾರೆ ಎಂದು ಕೇಂದ್ರ ಸರ್ಕಾರವು, ಮಂಗಳವಾರ ರಾಜ್ಯಸಭೆಗೆ ತಿಳಿಸಿದೆ.

‘ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಹಿತಿ ಅನ್ವಯ ಈ ಸುಸ್ತಿದಾರರ ಪಟ್ಟಿಯಲ್ಲಿ ಸಾಗರೋತ್ತರ ಸುಸ್ತಿದಾರರು ಸೇರ್ಪಡೆಯಾಗಿಲ್ಲ’ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಉದ್ದೇಶ ಪೂರ್ವಕ ಸುಸ್ತಿದಾರರಿಂದ ಬ್ಯಾಂಕ್‌ಗಳಿಗೆ ಮರು ಪಾವತಿ ಸಬೇಕಿರುವ ಸಾಲ ವಸೂಲಾತಿಗೆ ಸರ್ಕಾರ ಮತ್ತು ಆರ್‌ಬಿಐನಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಈ ಸುಸ್ತಿದಾರರಿಗೆ ಬ್ಯಾಂಕ್‌ಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಹೆಚ್ಚುವರಿ ಸೌಲಭ್ಯ ಕಲ್ಪಿಸಿಲ್ಲ. ಹೊಸ ಉದ್ಯಮ ವಹಿವಾಟು ನಡೆಸದಂತೆ ಐದು ವರ್ಷದವರೆಗೆ ನಿರ್ಬಂಧ ಹೇರಲಾಗಿದೆ ಎಂದು ತಿಳಿಸಿದ್ದಾರೆ.

ವಿನಿಮಯ ದರ

$ ಡಾಲರ್	87.07
£ ಪೌಂಡ್	108.21
€ ಯುರೊ	90.05
¥ ಯೆನ್ (100ಕ್ಕೆ)	56

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1390 (1360)
ಸೋಯಾ (ರಿಫೈನ್ಡ್)	₹1270 (1260)
ಸೂರ್ಯಕಾಂತಿ (ರಿಫೈನ್ಡ್)	₹1365 (1365)
ಪಾಮೋಲಿನ್	₹1310 (1320)

‘ಕ್ವಿನ್ ಸಿಟಿ’ ಸಹಭಾಗಿತ್ವಕ್ಕೆ ಪ್ರತ್ಯೇಕ ಗೋಷ್ಠಿ: ಎಂ.ಬಿ.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ದೇಶ–ವಿದೇಶಗಳ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಮತ್ತು ಹೆಸರಾಂತ ಉದ್ಯಮಗಳು ‘ಕ್ವಿನ್ ಸಿಟಿ’ಯಲ್ಲಿ ಶಿಕ್ಷಣ, ಸಂಶೋಧನೆ ಮತ್ತು ನಾವೀನ್ಯ ಕ್ಷೇತ್ರದಲ್ಲಿ ಸಹಭಾಗಿತ್ವ ಹೊಂದುವ ಕುರಿತು ಪ್ರತ್ಯೇಕ ಗೋಷ್ಠಿ ಏರ್ಪಡಿಸಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಇದೇ 13ರಂದು ನಡೆಯುವ ಈ ಗೋಷ್ಠಿಯ ಸಂದರ್ಭದಲ್ಲಿ 5ರಿಂದ 6 ವಿದೇಶಿ ವಿಶ್ವವಿದ್ಯಾಲಯಗಳು ಮತ್ತು 7–8 ಭಾರತೀಯ ವಿಶ್ವವಿದ್ಯಾಲಯಗಳ ಜತೆ ಒಡಂಬಡಿಕೆ ಮಾಡಿಕೊಳ್ಳಲಾಗುವುದು. ಈ ಕಾರ್ಯಕ್ರಮದಲ್ಲಿ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಮತ್ತು ಪ್ರತಿಷ್ಠಾನಗಳು ಭಾಗವಹಿಸಲಿವೆ ಎಂದಿದ್ದಾರೆ.

ಒಡಂಬಡಿಕೆಗಳಿಗೆ ಸಹಿ ಹಾಕುವ ಸಂಬಂಧ ಮಾತುಕತೆ ಪ್ರಗತಿಯಲ್ಲಿದ್ದು, ಯಾವ ವಿ.ವಿಗಳೊಂದಿಗೆ ಒಡಂಬಡಿಕೆ ಆಗಲಿದೆ ಎನ್ನುವುದು ಅಂತಿಮವಾಗಲಿದೆ.



ಉದ್ದೇಶಿತ ಕ್ವಿನ್ ಸಿಟಿಯ ಮಾದರಿ

ಯುಜಿಸಿ ನಿಯಮಗಳ ಪ್ರಕಾರ, ಮೊದಲ 500 ಸ್ಥಾನಗಳಲ್ಲಿರುವ ವಿಶ್ವವಿದ್ಯಾಲಯಗಳು ಭಾರತದಲ್ಲಿ ತಮ್ಮ ಕ್ಯಾಂಪಸ್ ಅನ್ನು ತೆರೆಯಲು ಅವಕಾಶವಿದೆ. ರಾಜ್ಯ ಇದರ ಸದ್ಬಳಕೆ ಮಾಡಿಕೊಳ್ಳಲಿದೆ ಎಂದು ಎಂ.ಬಿ.ಪಾಟೀಲ ಹೇಳಿದ್ದಾರೆ.

ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಕೈಗಾರಿಕೋದ್ಯಮಗಳಲ್ಲಿನ ಹೂಡಿಕೆ ಬಗ್ಗೆ ಮಾತ್ರ ಗಮನವಿರುವುದಿಲ್ಲ. ಕೌಶಲಪೂರ್ಣ ಮಾನವ ಸಂಪನ್ಮೂಲ ಸೃಷ್ಟಿಯೂ ಸೇರಿ ಸಂಶೋಧನೆ ಮತ್ತು ಅದಕ್ಕೆ ಪೂರಕವಾಗಿರುವ ವಲಯಗಳಿಗೂ ಆದ್ಯತೆ ಇರಲಿದೆ. ಏಕೆಂದರೆ, ಕ್ವಿನ್ ಸಿಟಿ ಯೋಜನೆಯು ಭವಿಷ್ಯದ ನಗರಾಭಿವೃದ್ಧಿ ಪರಿಕಲ್ಪನೆ ಮತ್ತು ಜಾಗತಿಕ ಗುಣಮಟ್ಟದ ಉದ್ಯಮಶೀಲತೆ, ಕೌಶಲ ಮುಂತಾದವನ್ನು ಒಳಗೊಂಡಿದೆ ಎಂದು ತಿಳಿಸಿದ್ದಾರೆ.

ಈ ಗೋಷ್ಠಿಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಸೇರಿ ಇತರ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದ್ದಾರೆ.

ಮಾಹೆ, ಪಿಇಎಸ್, ಎಂ.ಎಸ್. ರಾಮಯ್ಯ, ದಯಾನಂದ ಸಾಗರ್, ಚಾಣಕ್ಯ, ಅಜೀಂ ಪ್ರೇಮ್‌ಜಿ, ಸೇಂಟ್ ಜೋಸೆಫ್ಸ್, ಅಮಿಟಿ, ಬಿಎಲ್‌ಇಡಿ, ಕ್ರೈಸ್ಟ್, ಜೈನ್, ಕೆಎಲ್‌ಇ ಸೇರಿದಂತೆ ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಿಗೆ ಆಹ್ವಾನ ನೀಡಲಾಗಿದೆ.

ಅಲ್ಲದೇ, ಐಐಎಸ್, ಜೆಎನ್‌ಸಿಎಸ್ ಆರ್, ನಿಮ್ಹಾನ್ಸ್, ನ್ಯಾಷನಲ್ ಲಾ ಸ್ಕೂಲ್ ನ್ಯೂಯಾರ್ಕ್‌ನ ಸೇಂಟ್ ಜಾನ್ ಯೂನಿವರ್ಸಿಟಿ, ಇಂಗ್ಲೆಂಡಿನ ಯೂನಿವರ್ಸಿಟಿ ಆಫ್ ಯಾರ್ಕ್, ವೆಲ್ಲೂರಿನ ವಿಐಟಿ ಮತ್ತು ಕ್ರಿಶ್ಚಿಯನ್ ಮೆಡಿಕಲ್ ಕಾಲೇಜು ಮುಂತಾದ ಶಿಕ್ಷಣ ಸಂಸ್ಥೆಗಳ ಪರಿಣತರು ಭಾಗವಹಿಸಲಿದ್ದಾರೆ.



ರಾಜನಾಥ ಸಿಂಗ್ ಅವರಿಗೆ ಎಂ.ಬಿ.ಪಾಟೀಲ ಹೂಗುಚ್ಛ ನೀಡಿದರು. ಗುಂಜನ್ ಕೃಷ್ಣ, ವಿ.ಸೋಮಣ್ಣ, ಪ್ರಲ್ಹಾದ ಜೋಶಿ, ಎಚ್‌ಡಿ.ಕುಮಾರಸ್ವಾಮಿ ಇದ್ದರು

ಹೂಡಿಕೆದಾರರ ಸಮಾವೇಶಕ್ಕೆ ಆಹ್ವಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ನವದೆಹಲಿಯಲ್ಲಿ ಮಂಗಳವಾರ ಕೇಂದ್ರ ಸಚಿವರನ್ನು ಭೇಟಿ ಮಾಡಿ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಭಾಗವಹಿಸುವಂತೆ ಕೋರಿ ಅಧಿಕೃತ ಆಹ್ವಾನ ನೀಡಿದರು.

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಆಹಾರ ಸಚಿವ ಪ್ರಲ್ಹಾದ ಜೋಶಿ, ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಕಾರ್ಮಿಕ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಆಹ್ವಾನ ನೀಡಿದರು. ಹೂಡಿಕೆದಾರರ ಸಮಾವೇಶದಲ್ಲಿ ಭಾಗವಹಿಸುವುದಾಗಿ ಸಚಿವರು ಭರವಸೆ ನೀಡಿದರು.

ಪಾಟೀಲ ಅವರು ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಹಾಗೂ ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನು ಬುಧವಾರ ಭೇಟಿ ಮಾಡಿ ಆಹ್ವಾನ ನೀಡಲಿದ್ದಾರೆ.

ಈ ಸಂದರ್ಭದಲ್ಲಿ ಕೈಗಾರಿಕಾ ಇಲಾಖೆ ಆಯುಕ್ತರಾದ ಗುಂಜನ್ ಕೃಷ್ಣ ಸೇರಿದಂತೆ ಇತರ ಅಧಿಕಾರಿಗಳು ಇದ್ದರು. ಬೆಂಗಳೂರಿನಲ್ಲಿ ಇದೇ 11ರಿಂದ 14ರ ವರೆಗೆ ಹೂಡಿಕೆದಾರರ ಸಮಾವೇಶ ನಡೆಯಲಿದೆ.

ಸಂಕ್ಷಿಪ್ತ ಸುದ್ದಿ

ವಿವಾದಿತ ದಕ್ಷಿಣ ಚೀನಾದಲ್ಲಿ ಅಮೆರಿಕ, ಫಿಲಿಪ್ಪೀನ್ಸ್ ತಾಲೀಮು

ಮನಿಲಾ (ಎಪಿ): ವಿವಾದಿತ ದಕ್ಷಿಣ ಚೀನಾ ಪ್ರದೇಶದಲ್ಲಿರುವ ದ್ವೀಪ ಸ್ಕಾರ್‌ಬೊರೊ ಶೋಲ್ ಮೇಲೆ ಅಮೆರಿಕ ಮತ್ತು ಫಿಲಿಪ್ಪೀನ್ಸ್ ದೇಶಗಳು ಮಂಗಳವಾರ ಯುದ್ಧ ನೌಕೆಗಳ ಜಂಟಿ ತಾಲೀಮು ನಡೆಸಿದವು ಎಂದು ಫಿಲಿಪ್ಪೀನ್ಸ್ ಅಧಿಕಾರಿಗಳು ತಿಳಿಸಿದರು.

ಕಳೆದ ವರ್ಷ ಈ ಪ್ರದೇಶಕ್ಕೆ ಪ್ರವೇಶಿಸಿದ್ದ ಫಿಲಿಪ್ಪೀನ್ಸ್ ಯುದ್ಧವಿಮಾನಗಳನ್ನು ಚೀನಾದ ಯುದ್ಧ ವಿಮಾನಗಳು ಹಿಮ್ಮೆಟ್ಟಿಸಿದ್ದವು.

ಅಮೆರಿಕ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಪ್ರಮಾಣವಚನ ಸ್ವೀಕರಿಸಿದ ನಂತರ ಇದೇ ಮೊದಲ ಬಾರಿಗೆ ಉಭಯ ದೇಶಗಳು ಜಂಟಿ ಸಮರಾಭ್ಯಾಸ ನಡೆಸಿದವು.

ಅಮೆರಿಕ ವಾಯುಪಡೆಯ ಎರಡು ಬಿ–1 ಬಾಂಬರ್ ಯುದ್ಧ ವಿಮಾನಗಳು ಮತ್ತು ಫಿಲಿಪ್ಪೀನ್ಸ್ ವಾಯುಪಡೆಯ ಮೂರು ಎಫ್‌ಎ–50 ಯುದ್ಧ ವಿಮಾನಗಳು ತಾಲೀಮು ನಡೆಸಿದವು. ಶತ್ರು ದೇಶಗಳ ಯುದ್ಧ ವಿಮಾನಗಳನ್ನು ಹೊಡೆದುರುಳಿಸುವ ಬಗ್ಗೆ ಸಹ ತರಬೇತಿ ನಡೆಸಲಾಯಿತು ಎಂದು ಫಿಲಿಪ್ಪೀನ್ಸ್ ವಾಯುಪಡೆಯ ವಕ್ತಾರರು ತಿಳಿಸಿದ್ದಾರೆ.

ಹೂಡಿಕೆ ನಿಧಿ ಆರಂಭಿಸಲು ಟ್ರಂಪ್ ಆದೇಶ

ವಾಷಿಂಗ್ಟನ್ (ಎಪಿ): ಸರ್ಕಾರಿ ಸ್ವಾಮ್ಯದ ಹೂಡಿಕೆ ನಿಧಿಯೊಂದನ್ನು ಆರಂಭಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸುವ ಕಾರ್ಯಾದೇಶಕ್ಕೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ಸಹಿ ಮಾಡಿದ್ದಾರೆ.

ಈ ನಿಧಿಯು ಚೀನಾ ಮೂಲದ ಟಿಕ್‌ಟಾಕ್ ಕಂಪನಿಯಲ್ಲಿ ಒಂದಿಷ್ಟು ಷೇರು ಪಾಲನ್ನು ತನ್ನದಾಗಿಸಿಕೊಳ್ಳಬಹುದು ಎಂದು ಟ್ರಂಪ್ ಹೇಳಿದ್ದಾರೆ.

ಅಮೆರಿಕದಲ್ಲಿ ಪಾಲುದಾರರನ್ನು ಅಥವಾ ಖರೀದಿದಾರರನ್ನು ಕಂಡುಕೊಳ್ಳಲು ಏಪ್ರಿಲ್ ಆರಂಭದವರೆಗೆ ಅವಕಾಶ ಕಲ್ಪಿಸಿ ಟ್ರಂಪ್ ಅವರು ಈಗಾಗಲೇ ಆದೇಶ ಹೊರಡಿಸಿದ್ದಾರೆ. ಟಿಕ್‌ಟಾಕ್‌ನಲ್ಲಿ ಅಮೆರಿಕವೇ ಶೇಕಡ 50ರಷ್ಟು ಪಾಲು ಹೊಂದಬಹುದು ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಫೆ.14ರಂದು ರೈತರೊಂದಿಗೆ ಮಾತುಕತೆ: ಕೇಂದ್ರ

ನವದೆಹಲಿ (ಪಿಟಿಐ): ಪಂಜಾಬ್ ಮತ್ತು ಹರಿಯಾಣ ಗಡಿಭಾಗದಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರೊಂದಿಗೆ ಫೆ.14ರಂದು 6ನೇ ಸುತ್ತಿನ ಮಾತುಕತೆ ನಡೆಸಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ.

ಕೃಷಿ ಖಾತೆ ರಾಜ್ಯ ಸಚಿವ ರಾಮನಾಥ ಠಾಕೂರ್ ಅವರು ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಈ ಬಗ್ಗೆ ತಿಳಿಸಿದ್ದಾರೆ. ಬೆಳೆಗಳಿಗೆ ನೀಡುವ ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಖಾತ್ರಿ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರೈತರು ಹಲವು ತಿಂಗಳುಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ.

ಭೂತಾನ್ ದೊರೆ ಪವಿತ್ರ ಸ್ನಾನ



ಮಹಾಕುಂಭ ನಗರ (ಪಿಟಿಐ): ಭೂತಾನ್ ದೊರೆ ಜಿಗ್ಮೆ ಖೇಸರ್ ನಮ್‌ಗ್ಯಾಲ್ ವಾಂಗ್ಚುಕ್ ಅವರು ಮಂಗಳವಾರ ಮಹಾಕುಂಭ ಮೇಳಕ್ಕೆ ಭೇಟಿ ನೀಡಿದರಲ್ಲದೆ, ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು.

ಪವಿತ್ರ ಸ್ನಾನಕ್ಕೂ ಮುನ್ನ ಅವರು ಸೂರ್ಯನಿಗೆ ಅರ್ಘ್ಯ ಸಮರ್ಪಣೆ ಸೇರಿದಂತೆ ವಿವಿಧ ಧಾರ್ಮಿಕ ಆಚರಣೆಗಳನ್ನು ಮಾಡಿದರು. ವಾಂಗ್ಚುಕ್ ಅವರು ಪವಿತ್ರ ಸ್ನಾನ ಮಾಡುವಾಗ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಸಚಿವರಾದ ಸ್ವತಂತ್ರ ದೇವ್ ಸಿಂಗ್ ಮತ್ತು ನಂದಗೋಪಾಲ್ ಗುಪ್ತಾ ಹಾಗೂ ವಿಷ್ಣುಸ್ವಾಮಿ ಪಂಥದ ಮುಖಂಡ ಜಗದ್ಗುರು ಸಂತೋಷ್ ದಾಸ್ ಮಹಾರಾಜ್ ಜತೆಗಿದ್ದರು.

₹1,000 ಕೋಟಿ ಮೌಲ್ಯದ ಸ್ವತ್ತು ಜಪ್ತಿ

ನವದೆಹಲಿ (ಪಿಟಿಐ): ಚೆನ್ನೈ ಮೂಲದ ಕಂಪನಿ ವಿರುದ್ಧ ಇತ್ತೀಚೆಗೆ ನಡೆಸಿದ ಶೋಧ ಕಾರ್ಯಾಚರಣೆಯ ಸಂದರ್ಭದಲ್ಲಿ ₹1,000 ಕೋಟಿ ಮೌಲ್ಯದ ಸ್ವತ್ತನ್ನು ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ ತಿಳಿಸಿದೆ.

ಛತ್ತೀಸಗಢದಲ್ಲಿ ಕಲ್ಲಿದ್ದಲು ನಿಕ್ಷೇಪಗಳನ್ನು ಮೋಸದಿಂದ ಸ್ವಾದೀನ ಪಡಿಸಿಕೊಂಡ ಆರೋಪ ಕಂಪನಿಯ ಮೇಲೆ ಇದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಆರ್‌ಕೆಎಂ ಪವರ್‌ಜೆನ್ ಪ್ರೈವೇಟ್ ಲಿ. ಸಂಸ್ಥೆ ಮತ್ತು ಸಂಬಂಧಿತ ವ್ಯಕ್ತಿಗಳಾದ ಅಂದಲ್ ಆರುಮುಗಂ, ಎಸ್.ಆರುಮುಗಂ ಮತ್ತಿತರರಿಗೆ ಸಂಬಂಧಿಸಿದ ಪ್ರದೇಶಗಳಲ್ಲಿ ಶೋಧ ನಡೆಸಲಾಗಿತ್ತು ಎಂದು ಇ.ಡಿ ತಿಳಿಸಿದೆ. ಯಾವಾಗ ಶೋಧ ನಡೆದಿತ್ತು ಎಂದು ಇ.ಡಿ ತಿಳಿಸಿಲ್ಲ.

ರಾಹುಲ್ ಆರೋಪ ಸುಳ್ಳು: ರಾಜನಾಥ್

ನವದೆಹಲಿ (ಪಿಟಿಐ): ಭಾರತ-ಚೀನಾ ಗಡಿಯಲ್ಲಿನ ಪರಿಸ್ಥಿತಿ ಕುರಿತು ಸೇನಾ ಮುಖ್ಯಸ್ಥರ ಹೇಳಿಕೆಯ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಂಸತ್ತಿನಲ್ಲಿ ಮಾಡಿದ ಭಾಷಣದಲ್ಲಿ 'ಸುಳ್ಳು ಆರೋಪ' ಮಾಡಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಂಗಳವಾರ ತಿರುಗೇಟು ನೀಡಿದ್ದಾರೆ.

'ಸೇನಾ ಮುಖ್ಯಸ್ಥರು ಯಾವುದೇ ಸಂದರ್ಭದಲ್ಲೂ ಅಂತಹ ಮಾತುಗಳನ್ನಾಡಿಲ್ಲ. ರಾಹುಲ್ ಅವರು ರಾಷ್ಟ್ರೀಯ ಹಿತಾಸಕ್ತಿಯ ವಿಷಯಗಳಲ್ಲೂ ಬೇಜವಾಬ್ದಾರಿತನದಿಂದ ಮಾತನಾಡುವುದು ದುರದೃಷ್ಟಕರ' ಎಂದು 'ಎಕ್ಸ್'ನಲ್ಲಿ ಮಂಗಳವಾರ ಹೇಳಿದ್ದಾರೆ. 'ಚೀನೀಯರು ನಮ್ಮ ಗಡಿಯೊಳಗೆ ಇದ್ದಾರೆ ಎಂದು ಸೇನೆಯ ಮುಖ್ಯಸ್ಥರೇ ಹೇಳಿದ್ದಾರೆ' ಎಂದು ರಾಹುಲ್ ಭಾಷಣದಲ್ಲಿ ಪ್ರಸ್ತಾಪಿಸಿದ್ದರು.

ಬಂಧಿತ ವಿದೇಶಿಯರನ್ನು ವಾಪಸ್ ಕಳುಹಿಸದ ಅಸ್ಸಾಂ ಸರ್ಕಾರ: ಸುಪ್ರೀಂ ಕೋರ್ಟ್ ತರಾಟೆ

'ಒಳ್ಳೆಯ ಮುಹೂರ್ತಕ್ಕೆ ಕಾಯುತ್ತಿದ್ದೀರಾ?'

ನವದೆಹಲಿ (ಪಿಟಿಐ): ವಿದೇಶಿ ವ್ಯಕ್ತಿಗಳು ಎಂದು ಘೋಷಿತರಾದವರನ್ನು ಬಂಧನ ಕೇಂದ್ರಗಳಲ್ಲಿ ಅನಿರ್ದಿಷ್ಟ ಅವಧಿಗೆ ಇರಿಸಿಕೊಳ್ಳುವ ಅಸ್ಸಾಂ ಸರ್ಕಾರದ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಅಂಥವರನ್ನು ಅವರ ದೇಶಕ್ಕೆ ಕಳುಹಿಸಲು 'ಒಳ್ಳೆಯ ಮುಹೂರ್ತಕ್ಕಾಗಿ ಕಾಯುತ್ತಿದ್ದೀರಾ' ಎಂದು ಪ್ರಶ್ನಿಸಿದೆ.

ಅಸ್ಸಾಂ ಸರ್ಕಾರ ಸತ್ಯವನ್ನು ಮುಚ್ಚಿಡುತ್ತಿದೆ ಎಂದು ಹೇಳಿರುವ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಉಜ್ವಲ್ ಭೂಯಾನ್ ಅವರು ಇರುವ ವಿಭಾಗೀಯ ಪೀಠವು, ಬಂಧಿತರನ್ನು ವಿದೇಶಿ ವ್ಯಕ್ತಿಗಳು ಎಂದು ಗುರುತಿಸಿದ ನಂತರ ಅವರನ್ನು ತಕ್ಷಣವೇ ಅವರ ದೇಶಕ್ಕೆ ಕಳುಹಿಸಬೇಕು ಎಂದು ಹೇಳಿದೆ.

'ಅವರ ವಿಳಾಸ ಗೊತ್ತಿಲ್ಲ ಎಂಬ ಕಾರಣಕ್ಕೆ ಅವರನ್ನು ವಾಪಸ್ ಕಳುಹಿಸುವ ಪ್ರಕ್ರಿಯೆ ಆರಂಭಿಸಲು ನೀವು ನಿರಾಕರಿಸುತ್ತಿದ್ದೀರಿ... ಅದಕ್ಕೆ ನಾವೇಕೆ ತಲೆ ಕೆಡಿಸಿಕೊಳ್ಳಬೇಕು? ನೀವು ಅವರನ್ನು ಅವರ ದೇಶಕ್ಕೆ ಕಳುಹಿಸಿ' ಎಂದು ಪೀಠವು ಹೇಳಿದೆ.

ಬಂಧಿತರ ವಿದೇಶಿ ವಿಳಾಸ ಗೊತ್ತಿಲ್ಲದ ಕಾರಣಕ್ಕೆ ಅವರ ರಾಷ್ಟ್ರೀಯತೆಯನ್ನು ಪರಿಶೀಲಿಸುವ ಅರ್ಜಿ ನಮೂನೆಗಳನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಕಳುಹಿಸುತ್ತಿಲ್ಲ ಎಂದು ಅಸ್ಸಾಂ ಸರ್ಕಾರ ಹೇಳಿದ್ದಕ್ಕೆ ಪೀಠವು ಆಶ್ಚರ್ಯ ವ್ಯಕ್ತಪಡಿಸಿತು.

ವಿದೇಶಿ ಪ್ರಜೆಗಳು ಎಂದು ಘೋಷಿಸಿರುವ 63 ಜನರನ್ನು ಅವರ ದೇಶಕ್ಕೆ ಕಳುಹಿಸುವ ಪ್ರಕ್ರಿಯೆಯನ್ನು ಆರಂಭಿಸುವಂತೆ ಪೀಠವು ಸೂಚಿಸಿತು.

ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಿದ್ದ ಅಸ್ಸಾಂನ ಮುಖ್ಯ ಕಾರ್ಯದರ್ಶಿ ರವಿ ಕೋಟ ಅವರನ್ನು ಪೀಠವು ತರಾಟೆಗೆ ತೆಗೆದುಕೊಂಡಿತು. 'ವಿಳಾಸ ಇಲ್ಲದಿದ್ದರೂ ಅವರನ್ನು ಅವರ ದೇಶಕ್ಕೆ ಕಳುಹಿಸಬಹುದು. ಅವರನ್ನು ಅನಿರ್ದಿಷ್ಟ ಅವಧಿಗೆ ಬಂಧನದಲ್ಲಿ ಇರಿಸಿಕೊಳ್ಳುವಂತಿಲ್ಲ' ಎಂದು ಪೀಠವು ರವಿ ಅವರಿಗೆ ಹೇಳಿತು.

'ನೀವು ಅವರನ್ನು ಅವರ ದೇಶದ ರಾಜಧಾನಿಗೆ ಕಳುಹಿಸಿ. ವ್ಯಕ್ತಿಯು ಪಾಕಿಸ್ತಾನದಿಂದ ಬಂದವ ಎಂದಾದರೆ, ಅಲ್ಲಿನ ರಾಜಧಾನಿ ನಿಮಗೆ ಗೊತ್ತಿಲ್ಲವೇ? ಅವರ ವಿಳಾಸ ಗೊತ್ತಿಲ್ಲ ಎಂಬ ಕಾರಣ ನೀವು ಅವರನ್ನು ಇಲ್ಲಿ ಬಂಧನದಲ್ಲಿ ಇರಿಸಿಕೊಳ್ಳುವುದು ಹೇಗೆ? ನಿಮಗೆ ಅವರ ವಿಳಾಸ ಯಾವತ್ತೂ ಗೊತ್ತಾಗುವುದಿಲ್ಲ' ಎಂದು ಹೇಳಿತು.

ಅಸ್ಸಾಂ ಸರ್ಕಾರದ ಪ್ರಮಾಣಪತ್ರದಲ್ಲಿನ ಲೋಪಗಳಿಗಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಕ್ಷಮೆ ಯಾಚಿಸಿದರು. 'ನಾನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜೊತೆ ಮಾತನಾಡುತ್ತೇನೆ. ಇದು ರಾಜ್ಯಗಳಿಗೆ ಸಂಬಂಧಿಸಿದ ವಿಷಯವಲ್ಲ. ಇದು ಕೇಂದ್ರಕ್ಕೆ ಸಂಬಂಧಿಸಿದ್ದು' ಎಂದು ಅವರು ಹೇಳಿದರು ವಿಚಾರಣೆಯನ್ನು ಫೆಬ್ರುವರಿ 25ಕ್ಕೆ ಮುಂದೂಡಲಾಗಿದೆ.

'ಆಡಳಿತಾತ್ಮಕ ಮಿತಿಗಳ ಹೆಸರಿನಲ್ಲಿ ನೌಕರರ ಹಕ್ಕು ಕಸಿಯಬಾರದು'

ಆಡಳಿತಾತ್ಮಕ ಮಿತಿಗಳ ಹೆಸರಿನಲ್ಲಿ ನೌಕರರ ನ್ಯಾಯಬದ್ಧ ಹಕ್ಕುಗಳನ್ನು ಕಸಿಯುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಗಾಜಿಯಾಬಾದ್ ನಗರ ನಿಗಮವು ತಮ್ಮನ್ನು ವಜಾಗೊಳಿಸಿ ಹೊರಡಿಸಿದ್ದ ಆದೇಶ ಪ್ರಶ್ನಿಸಿ ನಿಗಮದ ದಿನಗೂಲಿ ನೌಕರರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

'ಎಲ್ಲ ದಿನಗೂಲಿಗಳ ಸೇವೆಯನ್ನು 6 ತಿಂಗಳ ಒಳಗಾಗಿ ಕಾಯಂಗೊಳಿಸಬೇಕು ಹಾಗೂ ಶೇ 50ರಷ್ಟು ಬಾಕಿ ವೇತನ ಪಾವತಿಸಬೇಕು' ಎಂದು ಆದೇಶಿಸಿದೆ.

'ಸಮಾನ ಕೆಲಸಕ್ಕೆ ಸಮಾನ ವೇತನ' ಎಂಬ ತತ್ವದ ಮಹತ್ವವನ್ನು ನ್ಯಾಯಾಲಯ ಹಲವು ಬಾರಿ ಒತ್ತಿ ಹೇಳಿದೆ' ಎಂದಿರುವ ಸುಪ್ರೀಂ ಕೋರ್ಟ್, ತೋಟಗಾರಿಕೆ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದವರನ್ನು ಕೆಲಸದಿಂದ ವಜಾಗೊಳಿಸಿ ಗಾಜಿಯಾಬಾದ್ ನಗರ ನಿಗಮ ಹೊರಡಿಸಿದ್ದ ಆದೇಶಗಳನ್ನು ರದ್ದುಗೊಳಿಸಿದೆ. ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಹಾಗೂ ಪಿ.ಬಿ.ವರಾಳೆ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿದೆ. ಕಾಯಂ ನೌಕರರು ಮಾಡುವಷ್ಟೇ ಕೆಲಸವನ್ನು ಮಾಡಿರುವ ದಿನಗೂಲಿಗಳನ್ನು, ಯಾವುದೇ ನೋಟಿಸ್ ಅಥವಾ ಲಿಖಿತ ಆದೇಶ ಇಲ್ಲವೇ ಪರಿಹಾರವಿಲ್ಲದೇ ನೌಕರಿಯಿಂದ ತೆಗೆಯುವಂತಿಲ್ಲ ಎಂದು ನ್ಯಾಯಪೀಠ ಹೇಳಿದೆ. 'ನೈತಿಕ ಹಾಗೂ ಕಾನೂನು ದೃಷ್ಟಿಯಿಂದ ನೋಡಿದಾಗ, ಕಾಯಂ ನೌಕರರು ಮಾಡುವಷ್ಟೆ ಕೆಲಸವನ್ನು ಮಾಡಿರುವ ದಿನಗೂಲಿಗಳನ್ನು, ಸೇವೆ ಅಗತ್ಯವಿಲ್ಲ ಎಂಬ ಕಾರಣ ಹೇಳಿ ಅವರನ್ನು ಕೆಲಸದಿಂದ ವಜಾ ಮಾಡುವಂತಿಲ್ಲ' ಎಂದೂ ಹೇಳಿದೆ.

ನಿಗಮದ ತೋಟಗಾರಿಕೆ ವಿಭಾಗದಲ್ಲಿ ಈ ದಿನಗೂಲಿಗಳು 1998ರಲ್ಲಿ ನೇಮಕಗೊಂಡಿದ್ದರು. ಅವರನ್ನು ವಜಾಗೊಳಿಸಿ, ಗಾಜಿಯಾಬಾದ್ ನಗರ ನಿಗಮವು 2005ರಲ್ಲಿ ಆದೇಶಿಸಿತ್ತು.



'ಸುಪ್ರೀಂ' ಹೇಳಿದ್ದು

- ದಿನಗೂಲಿಗಳನ್ನು ವಜಾಗೊಳಿಸಿರುವುದು ಕಾರ್ಮಿಕ ಕಾಯ್ದೆ ಉಲ್ಲಂಘನೆಯಾಗಿದೆ
- ಪಾಲಿಕೆ ಬಜೆಟ್ ಹಾಗೂ ನೇಮಕಾತಿ ನಿಯಮಗಳ ಪಾಲನೆ ಪರಿಗಣಿಸಿದರೂ, ಈ ಅಂಶಗಳು ಉದ್ಯೋಗದಾತರು ಹೊಂದಿರುವ ಶಾಸನಬದ್ಧ ಹೊಣೆಗಾರಿಕೆ ಅಥವಾ 'ಸಮಾನ ಕೆಲಸಕ್ಕೆ ಸಮಾನ ವೇತನ' ಹಕ್ಕಿಗೆ ಧಕ್ಕೆ ತರುವಂತಿರಬಾರದು

'2ನೇ ಪತಿಯಿಂದಲೂ ಜೀವನಾಂಶ ಕೇಳಬಹುದು'

ನವದೆಹಲಿ: ಮೊದಲ ಮದುವೆಯು ಕಾನೂನಿನ ಪ್ರಕಾರ ಚಾಲ್ತಿಯಲ್ಲಿ ಇದ್ದರೂ, ಎರಡನೆಯ ಪತಿಯಿಂದ ಜೀವನಾಂಶ ಕೇಳುವ ಹಕ್ಕು ಮಹಿಳೆಗೆ ಅಪರಾಧ ದಂಡಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 125ರ ಅಡಿಯಲ್ಲಿ ಇರುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮಹಿಳೆಯೊಬ್ಬರು ಸಲ್ಲಿಸಿದ್ದ ಮೇಲ್ಮನವಿಯನ್ನು ಮಾನ್ಯ ಮಾಡಿದ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಸತೀಶ್ ಚಂದ್ರ ಶರ್ಮ ಅವರು ಇರುವ ವಿಭಾಗೀಯ ಪೀಠವು, ಸೆಕ್ಷನ್ 125ರ ಅಡಿಯಲ್ಲಿ ಸಿಗುವ ಜೀವನಾಂಶವು ಮಹಿಳೆ ಪಡೆದುಕೊಳ್ಳುವ ಸೌಲಭ್ಯವಲ್ಲ; ಅದು ಪತಿಯ ಪಾಲಿನ ಕರ್ತವ್ಯ ಎಂದು ಹೇಳಿದೆ.

ಮಹಿಳೆ ಮತ್ತು ಪ್ರತಿವಾದಿ ಪುರುಷ ವಿವಾಹಿತರಂತೆ ಇದ್ದರು, ಇಬ್ಬರೂ ಒಟ್ಟಾಗಿ ಮಗುವನ್ನು ಸಲಹುತ್ತಿದ್ದರು. ಹೀಗಾಗಿ, ಜೀವನಾಂಶದ ಪ್ರಯೋಜನವು ಮಹಿಳೆಗೂ ಸಿಗಬೇಕು ಎಂದು ಆಕೆಯ ಪರ ವಕೀಲರು ವಾದಿಸಿದ್ದರು. ಮಹಿಳೆಗೆ ಮೊದಲೇ ಒಂದು ಮದುವೆ ಆಗಿದೆ ಎಂಬುದನ್ನು ಎರಡನೆಯ ಪತಿಯಿಂದ ಮುಚ್ಚಿಟ್ಟಿರಲಿಲ್ಲ ಎಂದು ತಿಳಿಸಿದ್ದರು.

ನೀಟ್ ಪಿಜಿ 2024: ಹೊಸದಾಗಿ 3ನೇ ಸುತ್ತಿನ ಕೌನ್ಸೆಲಿಂಗ್– ಕೇಂದ್ರಕ್ಕೆ ನೋಟಿಸ್ ಜಾರಿ

ನವದೆಹಲಿ (ಪಿಟಿಐ): ನೀಟ್ ಪಿಜಿ -2024ರ ಅಖಿಲ ಭಾರತ ಕೋಟಾದ ಮೂರನೇ ಸುತ್ತಿನ ಸೀಟುಗಳಿಗೆ ಹೊಸದಾಗಿ ಕೌನ್ಸೆಲಿಂಗ್ ನಡೆಸಲು ಕೋರಿದ್ದ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆಯನ್ನು ದಾಖಲಿಸುವಂತೆ ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ.

ನೋಟಿಸ್ ಜಾರಿಗೆ ಸೂಚಿಸಿದ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ಕೆ.ವಿನೋದ್ ಚಂದ್ರನ್ ಅವರಿದ್ದ ನ್ಯಾಯಪೀಠವು, ಈ ಕುರಿತ ವಿಚಾರಣೆಯನ್ನು ಫೆಬ್ರುವರಿ 7ಕ್ಕೆ ಮುಂದೂಡಿತು. ನೀಟ್ ಪಿಜಿ- 2024ರ ಅಖಿಲ ಭಾರತ ಕೋಟಾದ (ಎಐಕ್ಯೂ) ಮೂರನೇ ಸುತ್ತಿನ ಕೌನ್ಸೆಲಿಂಗ್‌ಗೆ ಅರ್ಹರಾಗಿದ್ದ ಅರ್ಜಿದಾರರು, ಕೆಲವು ರಾಜ್ಯಗಳಲ್ಲಿ ಎರಡನೇ ಸುತ್ತಿನ ಕೌನ್ಸೆಲಿಂಗ್ ಮುಗಿಯುವ ಮೊದಲೇ ಮೂರನೇ ಸುತ್ತಿನ ಕೌನ್ಸೆಲಿಂಗ್ ಆರಂಭವಾಗಿತ್ತು ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ಸಂಸದ ಶಶಿ ತರೂರ್ ವಿರುದ್ಧದ ಅರ್ಜಿ ವಜಾ

ನವದೆಹಲಿ (ಪಿಟಿಐ): ಕಾಂಗ್ರೆಸ್ ಸಂಸದ ಶಶಿ ತರೂರ್ ಅವರ ವಿರುದ್ಧ ಬಿಜೆಪಿ ನಾಯಕ ರಾಜೀವ್ ಚಂದ್ರಶೇಖರ್ ಹೂಡಿದ್ದ ಮಾನನಷ್ಟ ಮೊಕದ್ದಮೆ ಅರ್ಜಿಯನ್ನು ದೆಹಲಿ ಕೋರ್ಟ್ ವಜಾ ಮಾಡಿದೆ.

ಹೆಚ್ಚುವರಿ ಮುಖ್ಯ ಮ್ಯಾಜಿಸ್ಟ್ರೇಟ್ ಕೋರ್ಟ್‌ನ ನ್ಯಾಯಾಧೀಶರಾದ ಪಾರಸ್ ದಲಾಲ್, ಅವರು 'ಮಾನಹಾನಿ ಅಂಶ ಕಾಣುತ್ತಿಲ್ಲ' ಎಂದು ತಿಳಿಸಿ, ತರೂರ್ ಅವರಿಗೆ ಸಮನ್ಸ್ ಜಾರಿ ಮಾಡಲು ನಿರಾಕರಿಸಿದರು.

'2024ರ ಲೋಕಸಭೆ ಚುನಾವಣೆಯಲ್ಲಿ ಮತದಾರರಿಗೆ ಲಂಚ ನೀಡಿದ್ದಾರೆ' ಎಂದು ಶಶಿ ತರೂರ್ ನನ್ನ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ' ಎಂದು ರಾಜೀವ್ ಚಂದ್ರಶೇಖರ್ ಮೊಕದ್ದಮೆ ಹೂಡಿದ್ದರು.

ಕುನೊ: ಎರಡು ಮರಿಗಳಿಗೆ ಜನ್ಮ ನೀಡಿದ ಚೀತಾ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಶೋಪುರ ಜಿಲ್ಲೆಯ ಕುನೊ ರಾಷ್ಟ್ರೀಯ ಉದ್ಯಾನದಲ್ಲಿನ ಚೀತಾ ವೀರಾ ಎರಡು ಮರಿಗಳಿಗೆ ಜನ್ಮ ನೀಡಿದೆ ಎಂದು ಮುಖ್ಯಮಂತ್ರಿ ಮೋಹನ್ ಯಾದವ್ ತಿಳಿಸಿದ್ದಾರೆ.

ಈ ಎರಡು ಮರಿಗಳ ಜನನದಿಂದ ಕುನೊದಲ್ಲಿ ಚೀತಾಗಳ ಸಂಖ್ಯೆ 26ಕ್ಕೆ ಏರಿಕೆಯಾಗಿದೆ. ಈ ಪೈಕಿ 14 ಮರಿಗಳಿವೆ.

'ರಾಜ್ಯದಲ್ಲಿ ಚೀತಾಗಳ ಸಂಖ್ಯೆ ಹೆಚ್ಚುತ್ತಿದೆ' ಎಂಬುದನ್ನು ಹಂಚಿಕೊಳ್ಳಲು ಸಂತೋಷವಾಗಿದೆ ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.



ಸಿದ್ಧತೆ ದೆಹಲಿ ವಿಧಾನಸಭೆ ಚುನಾವಣೆಯ ಮತದಾನ ಬುಧವಾರ ನಡೆಯಲಿದ್ದು, ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಸಿಬ್ಬಂದಿ ಗೋಲ್ ಮಾರ್ಕೆಟ್‌ನಲ್ಲಿ ಸ್ಥಾಪಿಸಿದ್ದ ವಿತರಣಾ ಕೇಂದ್ರದಲ್ಲಿ ಇವಿಎಂ ಹಾಗೂ ಇತರ ಸಾಮಗ್ರಿಗಳನ್ನು ಪಡೆದು ಮಂಗಳವಾರ ಮತಗಟ್ಟೆಗಳತ್ತ ತೆರಳಿದರು –ಪಿಟಿಐ ಚಿತ್ರ

ಫ್ಲ್ಯಾಟ್‌ನ ಹಂಚಿಕೆ ರದ್ದತಿ: ಸುಪ್ರೀಂ ಕೋರ್ಟ್ ನಿರ್ದೇಶನ

'ಮೂಲಬೆಲೆಯ ಶೇ10ಕ್ಕಿಂತ ಅಧಿಕ ಕಡಿತ ಬೇಡ'

ಪ್ರಜಾವಾಣಿ ವಾರ್ತೆ

ನವದೆಹಲಿ: ಖರೀದಿದಾರರು ಫ್ಲ್ಯಾಟ್ ಹಂಚಿಕೆ ರದ್ದುಗೊಳಿಸಿದಾಗ, ರಿಯಲ್ ಎಸ್ಟೇಟ್ ಡೆವಲಪರ್‌ಗಳು ಫ್ಲ್ಯಾಟ್‌ನ ಮೂಲ ಬೆಲೆಯ ಶೇ 10ಕ್ಕಿಂತ ಹೆಚ್ಚು ಮೊತ್ತವನ್ನು ಕಡಿತ ಮಾಡಿಕೊಳ್ಳಬಾರದು ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ.

ಫ್ಲ್ಯಾಟ್‌ಗಳ ಮಾರಾಟಕ್ಕೆ ಸಂಬಂಧಿಸಿ ಮಾಡಿಕೊಳ್ಳಲಾಗುವ ಒಪ್ಪಂದದಲ್ಲಿನ ನಿಬಂಧನೆಗಳನ್ನು ಗಮನಿಸಿದಾಗ ಅವು ಏಕಪಕ್ಷೀಯ, ಅತಾರ್ಕಿಕ ಹಾಗೂ ಅಸಂಬದ್ಧವಾಗಿರುವುದು ಕಂಡುಬರುತ್ತದೆ. ಇದು ನ್ಯಾಯಸಮ್ಮತವಲ್ಲದ ವ್ಯಾಪಾರವಾಗುತ್ತದೆ ಎಂದೂ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಎಸ್.ವಿ.ಎನ್.ಭಟ್ಟಿ ಅವರು ಇದ್ದ ನ್ಯಾಯಪೀಠವು ಈ ಕುರಿತ ಅರ್ಜಿಯ ವಿಚಾರಣೆ ನಡೆಸಿ, ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು 2022ರ ಅಕ್ಟೋಬರ್ 25ರಂದು ನೀಡಿದ್ದ ತೀರ್ಪನ್ನು ಎತ್ತಿ ಹಿಡಿದಿದೆ.

'ರಿಯಲ್ ಎಸ್ಟೇಟ್ ಡೆವಲಪರ್ ಹಾಗೂ ಖರೀದಾರರ ನಡುವೆ ಒಪ್ಪಂದವಾದರೂ, ಇಂತಹ ವ್ಯವಹಾರದಲ್ಲಿ ಚೌಕಾಸಿ ಕುರಿತಂತೆ ಸಮಾನ ಅಧಿಕಾರ ಇರುವುದಿಲ್ಲ. ಹೀಗಾಗಿ, ಇಂತಹ ನ್ಯಾಯಸಮ್ಮತವಲ್ಲದ ಹಾಗೂ ಅಸಂಬದ್ಧ ಒಪ್ಪಂದದ ಜಾರಿಗೆ ನ್ಯಾಯಾಲಯಗಳು ಅನುಮತಿ ನೀಡುವುದಿಲ್ಲ' ಎಂದು ಪೀಠ ಹೇಳಿದೆ.

ಪ್ರಕರಣ ಏನು?: ಅನಿಲ್ ಕುಮಾರ್ ಹಾಗೂ ಇತರರು 2014ರಲ್ಲಿ, ಗುರುಗ್ರಾಮದಲ್ಲಿ ಗೋದ್ರೇಜ್ ಪ್ರಾಜೆಕ್ಟ್ಸ್ ಡೆವಲೆಪ್‌ಮೆಂಟ್ ಲಿಮಿಟೆಡ್ ನಿರ್ಮಿಸುತ್ತಿದ್ದ 'ಗೋದ್ರೇಜ್ ಸಮಿಟ್' ಅಪಾರ್ಟ್‌ಮೆಂಟ್‌ನಲ್ಲಿ ₹1,70,81,400 ಬೆಲೆಯ ಫ್ಲ್ಯಾಟ್ ಕಾಯ್ದಿರಿಸಿದ್ದರು. ಮುಂಗಡ ಹಣವಾಗಿ ₹51,12,310 ಠೇವಣಿಯಾಗಿ ಇರಿಸಿದ್ದರು.

ಫ್ಲ್ಯಾಟ್‌ಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಕುರಿತು ಖರೀದಿದಾರರಿಗೆ ಕಂಪನಿಯು ಪತ್ರ ನೀಡಿತ್ತು. ಫ್ಲ್ಯಾಟ್ ಹಂಚಿಕೆಯನ್ನು ರದ್ದುಗೊಳಿಸಲು ನಿರ್ಧರಿಸಿದ್ದ ಖರೀದಿದಾರರು ಠೇವಣಿಯಾಗಿ ಇಟ್ಟಿದ್ದ ತಮ್ಮ ಹಣ ಮರಳಿಸುವಂತೆ 2017ರಲ್ಲಿ ಕಂಪನಿಯನ್ನು ಕೋರಿದ್ದರು.

ಆಗ, ಫ್ಲ್ಯಾಟ್‌ನ ಮೂಲಬೆಲೆಯ ಶೇ 20ರಷ್ಟು ಹಣವನ್ನು ಕಡಿತ ಮಾಡಿಕೊಂಡು, ಉಳಿದ ಹಣ ಮರಳಿಸಲು ಕಂಪನಿ ಮುಂದಾಗಿತ್ತು. ಇದಕ್ಕೆ, ಕಂಪನಿಯು ಒಪ್ಪಂದದಲ್ಲಿನ ನಿಬಂಧನೆಗಳನ್ನು ಉಲ್ಲೇಖಿಸಿತ್ತು. ಕಂಪನಿಯ ಈ ಕ್ರಮ ಪ್ರಶ್ನಿಸಿ ಖರೀದಿದಾರರು ಆಯೋಗದ ಮೊರೆ ಹೋಗಿದ್ದರು. 'ಫ್ಲ್ಯಾಟ್‌ನ ಮೂಲ ಬೆಲೆಯ ಶೇ 10ರಷ್ಟು ಮೊತ್ತವನ್ನು ಕಡಿತಗೊಳಿಸಿ, ಠೇವಣಿ ಹಣವನ್ನು ದೂರುದಾರರಿಗೆ ಮರಳಿಸುವಂತೆ' ಆಯೋಗವು ಗೋದ್ರೇಜ್ ಪ್ರಾಜೆಕ್ಟ್ಸ್ ಡೆವಲೆಪ್‌ಮೆಂಟ್ ಲಿಮಿಟೆಡ್‌ಗೆ ನಿರ್ದೇಶನ ನೀಡಿತ್ತು.

ರಾಹುಲ್ ಗಾಂಧಿ ವಿರುದ್ಧ ಹಕ್ಕುಚ್ಯುತಿ ಕ್ರಮಕ್ಕೆ ಮನವಿ



ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ಹಕ್ಕುಚ್ಯುತಿ ನಿಯಮಗಳ ಅಡಿಯಲ್ಲಿ ಕ್ರಮ ಜರುಗಿಸುವಂತೆ ಕೋರಿ ಬಿಜೆಪಿ ಸಂಸದ ನಿಶಿಕಾಂತ ದುಬೆ ಅವರು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಗೆ ಮಂಗಳವಾರ ಮನವಿ ಮಾಡಿದ್ದಾರೆ.

ರಾಹುಲ್ ಅವರು ಲೋಕಸಭೆಯಲ್ಲಿ ಮಾತನಾಡುವ ಸಂದರ್ಭದಲ್ಲಿ ಸುಳ್ಳು ಹೇಳಿದ್ದಾರೆ, ನಿಂದನಾತ್ಮಕವಾಗಿ ಮಾತನಾಡಿದ್ದಾರೆ ಎಂದು ದುಬೆ ಅವರು ಆರೋಪಿಸಿದ್ದಾರೆ. ರಾಹುಲ್ ಅವರು ವದಂತಿಗಳನ್ನು ಹಬ್ಬಿಸಲು ತಮಗಿರುವ ವಿಶೇಷ ಹಕ್ಕುಗಳನ್ನು ಬಳಸಿಕೊಳ್ಳುತ್ತಿದ್ದಾರೆ, ಆರೋಪಗಳಿಗೆ ಆಧಾರ ಒದಗಿಸುವ ಕೆಲಸವನ್ನು ಅವರು ಮಾಡುತ್ತಿಲ್ಲ ಎಂದು ದುಬೆ ಅವರು ಸ್ಪೀಕರ್‌ಗೆ ಸಲ್ಲಿಸಿರುವ ನೋಟಿಸ್‌ನಲ್ಲಿ ಹೇಳಿದ್ದಾರೆ.

ರಾಷ್ಟ್ರಪತಿ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆ ಸಂದರ್ಭದಲ್ಲಿ ರಾಹುಲ್ ಅವರು ಹಲವು ವಿಷಯಗಳನ್ನು ಪ್ರಸ್ತಾಪಿಸಿದ್ದರು.

ಚೀನಾ ದೇಶವು ಭಾರತದ ಭೂಪ್ರದೇಶವನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡಿದೆ, ಮೊಬೈಲ್ ಫೋನ್‌ಗಳು ಭಾರತದಲ್ಲಿ ತಯಾರಾಗುತ್ತಿಲ್ಲ ಎಂಬುದು ಸೇರಿದಂತೆ ಹಲವು ಆರೋಪಗಳನ್ನು ರಾಹುಲ್ ಮಾಡಿದ್ದಾರೆ.

ಸೋನಿಯಾ ವಿರುದ್ಧ ಹಕ್ಕುಚ್ಯುತಿ ನೋಟಿಸ್

ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ವಿಚಾರವಾಗಿ ರಾಜ್ಯಸಭಾ ಸದಸ್ಯೆ ಸೋನಿಯಾ ಗಾಂಧಿ ಅವರು ಅವಹೇಳನಕಾರಿಯಾದ ಪದಗಳನ್ನು ಬಳಕೆ ಮಾಡಿದ್ದಾರೆ ಎಂದು ದೂರಿರುವ ಬಿಜೆಪಿಯ ಕೆಲವು ಸಂಸದರು, ಸೋನಿಯಾ ಅವರ ವಿರುದ್ಧ ಹಕ್ಕುಚ್ಯುತಿ ನಿಲುವಳಿ ಸೂಚನೆ ಮಂಡಿಸಲು ಅವಕಾಶ ಕಲ್ಪಿಸುವಂತೆ ಕೋರಿ ನೋಟಿಸ್ ನೀಡಿದ್ದಾರೆ.

ಸೋನಿಯಾ ಅವರು ಆಡಿರುವ ಮಾತುಗಳು ಬುಡಕಟ್ಟು ಸಮುದಾಯ ವಿರೋಧಿ ಮನಃಸ್ಥಿತಿಯನ್ನು ಸ್ಪಷ್ಟವಾಗಿ ಬಿಂಬಿಸುತ್ತಿವೆ ಎಂದು ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರಿಗೆ ನೀಡಿರುವ ನೋಟಿಸ್‌ನಲ್ಲಿ ಹೇಳಲಾಗಿದೆ.

ರಾಹುಲ್ ವಿರುದ್ಧ ಪ್ರಧಾನಿ ಕೆಂಡ

ಒಂದನೇ ಪುಟದಿಂದ...

ರಾಷ್ಟ್ರಪತಿಯವರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಉತ್ತರ ನೀಡಿದ ಪ್ರಧಾನಿ, ರಾಹುಲ್ ಅವರನ್ನು ಗುರಿಯಾಗಿಸಿಕೊಂಡು ಹಲವು ಬಾರಿ ಪರೋಕ್ಷವಾಗಿ ಕುಟುಕಿದರು. ಬಡವರ ಗುಡಿಸಲುಗಳಲ್ಲಿ ಫೋಟೊ ತೆಗೆಸಿಕೊಂಡು ತಮ್ಮನ್ನು ರಂಜಿಸಿಕೊಳ್ಳುವವರಿಗೆ ಸಂಸತ್ತಿನಲ್ಲಿ ಬಡವರ ಕುರಿತು ಆಡಿದ ಮಾತುಗಳು ಬೋರು ಹೊಡೆಸುತ್ತವೆ ಎಂದರು.

'ಸಂವಿಧಾನದ ಪುಸ್ತಕವನ್ನು ಕಿಸೆಯಲ್ಲಿ ಇಟ್ಟುಕೊಂಡು ಓಡಾಡುವವರಿಗೆ ತಾವು ಮುಸ್ಲಿಂ ಮಹಿಳೆಯರನ್ನು ಹೇಗೆ ಕಷ್ಟಕ್ಕೆ ಸಿಲುಕಿಸಿದೆವು ಎಂಬುದು ಗೊತ್ತಿದೆಯೇ? ನಾವು ತ್ರಿವಳಿ ತಲಾಖ್ ಕಾನೂನು ತಂದು ಮುಸ್ಲಿಂ ಮಹಿಳೆಯರಿಗೆ ಹಕ್ಕುಗಳನ್ನು ನೀಡಿದೆವು' ಎಂದು ಮೋದಿ ಹೇಳಿದರು.

ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರನ್ನು ಪರೋಕ್ಷವಾಗಿ ಟೀಕಿಸಿದ ಪ್ರಧಾನಿ, 'ಕೆಲವು ಪಕ್ಷಗಳು ಆಪ್‌ದಾ (ವಿಪತ್ತು) ಇದ್ದಂತೆ' ಎಂದರು. 'ಸರ್ಕಾರದ ಕೆಲವು ಯೋಜನೆಗಳು ಭಾರಿ ಪ್ರಮಾಣದಲ್ಲಿ ಹಣ ಉಳಿಸಿದವು. ಆದರೆ ನಾವು ಆ ಹಣವನ್ನು ಶೀಷಮಹಲ್ ಕಟ್ಟಿಸಲು ಬಳಸಲಿಲ್ಲ' ಎಂದು ಹೇಳಿದರು.

'ನಾವು ಸುಳ್ಳು ಘೋಷಣೆಗಳನ್ನು ಮಾಡಲಿಲ್ಲ. ನಿಜವಾದ ಅಭಿವೃದ್ಧಿಯನ್ನು ಜನರಿಗೆ ನೀಡಿದೆವು' ಎಂದರು.

ಬಜೆಟ್ ಘೋಷಣೆಗಳನ್ನು ಶ್ಲಾಘಿಸಿದ ಮೋದಿ ಅವರು, 2002ರಲ್ಲಿ ₹2 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಇರಲಿಲ್ಲ, ಈಗ ₹12 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಇರುವುದಿಲ್ಲ ಎಂದು ಹೇಳಿದರು.

ನರೇಂದ್ರ ಮೋದಿ ಹೇಳಿದ್ದು...



- ನಮ್ಮ ಸರ್ಕಾರವು ಎಸ್‌ಸಿ, ಎಸ್‌ಟಿ, ಒಬಿಸಿ ಸಮುದಾಯಗಳ ವಿದ್ಯಾರ್ಥಿಗಳಿಗೆ ಹತ್ತು ವರ್ಷಗಳಲ್ಲಿ 58 ಸಾವಿರ ಎಂಬಿಬಿಎಸ್ ಸೀಟುಗಳನ್ನು ನೀಡಿದೆ. ಈ ಸಮುದಾಯಗಳಿಗೆ 2014ಕ್ಕೂ ಮೊದಲು 25,500 ಸೀಟುಗಳು ಇದ್ದವು.
- ಎಸ್‌ಸಿ ಸಮುದಾಯಗಳ ವಿದ್ಯಾರ್ಥಿಗಳಿಗೆ 2014ಕ್ಕೂ ಮೊದಲು 7,700 ಸೀಟುಗಳು ಸಿಗುತ್ತಿದ್ದವು. ಈಗ ಆ ಸಂಖ್ಯೆ 17 ಸಾವಿರವಾಗಿದೆ. ಎಸ್‌ಟಿ ಸಮುದಾಯಗಳಿಗೆ 3,800 ಸೀಟುಗಳು ಸಿಗುತ್ತಿದ್ದವು, ಈಗ ಅವುಗಳ ಸಂಖ್ಯೆ 9 ಸಾವಿರ.
- ಒಬಿಸಿ ಸಮುದಾಯಗಳಿಗೆ ಸಿಗುತ್ತಿದ್ದ 14 ಸಾವಿರ ಸೀಟುಗಳ ಸಂಖ್ಯೆಯು ಈಗ 32 ಸಾವಿರಕ್ಕೆ ಹೆಚ್ಚಿದೆ.
- ಮೀಸಲಾತಿಯ ಸೌಲಭ್ಯ ಇರುವ ಈ ಮೂರು ವರ್ಗಗಳಿಗೆ ಸಿಗುವ ಎಂಬಿಬಿಎಸ್ ಸೀಟುಗಳ ಸಂಖ್ಯೆಯಲ್ಲಿ ಶೇಕಡ 127ರಷ್ಟು ಹೆಚ್ಚಳ ಆಗಿದೆ.
- ನಮ್ಮ ಸರ್ಕಾರವು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಸಮುದಾಯಗಳ ಜನರಿಗೆ ಅತಿಹೆಚ್ಚಿನ ಪ್ರಮಾಣದಲ್ಲಿ ಅವಕಾಶಗಳನ್ನು ಕೊಡಿಸಲು ಕೆಲಸ ಮಾಡಿದೆ. ಸಮಾಜದಲ್ಲಿ ಬಿಕ್ಕಟ್ಟು ಸೃಷ್ಟಿಸದೆಯೇ ಈ ಕೆಲಸ ಮಾಡಲಾಗಿದೆ.

(ದೇಶದಲ್ಲಿ ಜಾತಿ ಗಣತಿ ನಡೆಸಬೇಕು ಎಂಬ ಆಗ್ರಹ ಇರುವ ಸಂದರ್ಭದಲ್ಲಿ ಪ್ರಧಾನಿಯವರು ಲೋಕಸಭೆಯಲ್ಲಿ ಈ ಮಾಹಿತಿ ನೀಡಿದ್ದಾರೆ)

'ಕಾಲ್ತುಳಿತ: ಸಾವಿನ ನಿಖರ ಸಂಖ್ಯೆ ನೀಡಿ'

ನವದೆಹಲಿ (ಪಿಟಿಐ): ಮಹಾಕುಂಭ ಮೇಳದಲ್ಲಿ ಜ.29ರಂದು ಉಂಟಾದ ಕಾಲ್ತುಳಿತದಲ್ಲಿ 30 ಜನ ಮೃತಪಟ್ಟಿದ್ದಾರೆ ಎಂದು ಉತ್ತರ ಪ್ರದೇಶ ಸರ್ಕಾರ ಹೇಳಿದೆ. 'ಸಾವಿನ ಸಂಖ್ಯೆಯನ್ನು ಸರ್ಕಾರ ಮುಚ್ಚಿಡುತ್ತಿದೆ' ಎಂದು ವಿರೋಧ ಪಕ್ಷಗಳು ಆರಂಭದಿಂದಲೂ ಆರೋಪಿಸುತ್ತಲೇ ಬಂದಿವೆ. ರಾಷ್ಟ್ರಪತಿ ಅವರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಂಗಳವಾರ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ನಡೆದ ಚರ್ಚೆಗಳಲ್ಲಿ ಸಾವಿನ ಸಂಖ್ಯೆಯ ಕುರಿತು ವಾಕ್ಸಮರಗಳು ನಡೆದವು. ಸಂಸತ್ತು ಆವರಣದಲ್ಲಿ ಸಂಸದೆ ಹೇಮಾ ಮಾಲಿನಿ ಅವರು ನೀಡಿದ ಹೇಳಿಕೆಯು ವಿವಾದದ ಸ್ವರೂಪ ಪಡೆದುಕೊಂಡಿದೆ. ಸಂಸದ ಸಂಜಯ್ ರಾವುತ್ ಅವರ ಹೇಳಿಕೆಗೆ ಬಿಜೆಪಿ ಸಂಸದರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಜೆಸಿಬಿ ಮೂಲಕ ಶವ ಸಾಗಾಟ'



ನೆಲದ ತುಂಬೆಲ್ಲಾ ಬಿದ್ದಿದ್ದ ಮೃತದೇಹಗಳನ್ನು, ಬಟ್ಟೆ ಹಾಗೂ ಚಪ್ಪಲಿಗಳ ರಾಶಿಯನ್ನು ಉತ್ತರ ಪ್ರದೇಶ ಸರ್ಕಾರವು ಜೆಸಿಬಿ ಮತ್ತು ಟ್ರ್ಯಾಕ್ಟರ್ ಟ್ರ್ಯಾಲಿಗಳಲ್ಲಿ ಸಾಗಿಸಿತು. ಜನರು ಇಲ್ಲಿಗೆ 'ಪುಣ್ಯ' ಸಂಪಾದಿಸಲು ಬರುತ್ತಾರೆ. ಆದರೆ, ತಮ್ಮ ಪ್ರೀತಿಪಾತ್ರರ ಮೃತದೇಹಗಳು ಸಿಗದೇ, ದೇಹಗಳನ್ನು ಇಲ್ಲಿಯೇ ಬಿಟ್ಟು ತಾವು ಊರಿಗೆ ಮರಳುವ ಒತ್ತಡವನ್ನು ಸರ್ಕಾರ ನಿರ್ಮಾಣ ಮಾಡಿತು.

ಚಮತ್ಕಾರ ನೋಡಿ, ಸರ್ಕಾರಕ್ಕೆ ಮೃತದೇಹಗಳು ಸಿಕ್ಕಿವೆ. ಆದರೆ, ಅದರ ಲೆಕ್ಕವನ್ನು ಮಾತ್ರ ಕೊಡುತ್ತಿಲ್ಲ. ನಾವು ಡಿಜಿಟಲ್ ಮಹಾಕುಂಭ ಮೇಳವನ್ನು ಆಯೋಜಿಸಿದ್ದೇವೆ ಎನ್ನುತ್ತದೆ. ಆದರೆ, ಸತ್ತವರ ಲೆಕ್ಕ ನೀಡುವುದಿಲ್ಲ. ಬಜೆಟ್‌ನಲ್ಲಿನ ಸಂಖ್ಯೆಗಳನ್ನು ಕೇಂದ್ರ ಸರ್ಕಾರ ಪುಂಖಾನುಪುಂಖವಾಗಿ ಹೇಳುತ್ತದೆ. ಆದರೆ, ಸಾವಿನ ಸಂಖ್ಯೆಯನ್ನು ಮಾತ್ರ ನೀಡುವುದಿಲ್ಲ.

ಉತ್ತರ ಪ್ರದೇಶ ಸರ್ಕಾರವು ಸಾವಿನ ನಿಖರ ಸಂಖ್ಯೆಯನ್ನು ಮುಚ್ಚಿಡುತ್ತಿದೆ. ಕಾಲ್ತುಳಿತದಂಥ ಘಟನೆಗಳಾಗುವುದಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಕುಂಭಮೇಳದ ವಿಪತ್ತು ನಿರ್ವಹಣೆಯನ್ನು ಮತ್ತು ಕಳೆದು ಹೋದವರ ಪತ್ತೆಗಾಗಿ ಸ್ಥಾಪಿಸಲಾಗಿರುವ ಕೇಂದ್ರಗಳ ಜವಾಬ್ದಾರಿಯನ್ನು ಸೇನೆಗೆ ವಹಿಸಬೇಕು.

ಸಾವಿನ ಸಂಖ್ಯೆ ಎಷ್ಟು, ಎಷ್ಟು ಜನರಿಗೆ ಗಾಯಗಳಾಗಿವೆ. ಮೇಳದಲ್ಲಿನ ಔಷಧೋಪಚಾರದ ಲಭ್ಯತೆಯ ಮಾಹಿತಿ, ವೈದರ ಸಂಖ್ಯೆ, ಆಹಾರ, ನೀರು, ಸಂಚಾರಕ್ಕೆ ಮಾಡಿದ ವ್ಯವಸ್ಥೆ ಏನು... ಹೀಗೆ ಎಲ್ಲ ಮಾಹಿತಿಗಳನ್ನು ಕೇಂದ್ರ ಸರ್ಕಾರವು ಸಂಸತ್ತಿನ ಮುಂದಿಡಬೇಕು. ಘಟನೆಯ ಬಗ್ಗೆ ಸರ್ವ ಪಕ್ಷದ ಸಭೆ ಕರೆಯಬೇಕು.

'ಶಾಹಿ ಸ್ನಾನ' ಮಾಡದಂತೆ ಉತ್ತರ ಪ್ರದೇಶ ಸರ್ಕಾರವು ಸನ್ಯಾಸಿಗಳಲ್ಲಿ ಮನವಿ ಮಾಡಿತು. ಹೀಗೆ ಮಾಡುವುದರ ಮೂಲಕ ಸನಾತನ ಧರ್ಮದ ಸಂಪ್ರದಾಯಗಳನ್ನು ಗಾಳಿಗೆ ತೂರಿತು. ಈ ಬಗ್ಗೆ ಭಾರಿ ವಿರೋಧ ವ್ಯಕ್ತವಾದ ಬಳಿಕ ಶಾಹಿ ಸ್ನಾನಕ್ಕೆ ಅವಕಾಶ ಮಾಡಿಕೊಟ್ಟಿತು. ಶವಾಗಾರದಲ್ಲಿ ಹೆಣಗಳನ್ನು ಇಟ್ಟುಕೊಂಡು, ಕುಂಭಮೇಳಕ್ಕೆ ಹೆಲಿಕಾಪ್ಟರ್‌ನಲ್ಲಿ ಹೂಮಳೆಗರೆಯಲಾಯಿತು. ಇದೆಂಥ ಸನಾತನ ಪರಂಪರೆ?

ಉತ್ತರ ಪ್ರದೇಶದ ಮುಖ್ಯಮಂತ್ರಿ ಅವರಂತು ಘಟನೆ ಕುರಿತು ಸಂತಾಪವನ್ನೂ ಸೂಚಿಸಲಿಲ್ಲ. ರಾಷ್ಟ್ರಪತಿ ಹಾಗೂ ಪ್ರಧಾನಿ ಅವರು ಸಂತಾಪ ಸೂಚಿಸಿದ ಬಳಿಕ, ಘಟನೆ ನಡೆದ 17 ತಾಸುಗಳ ನಂತರ ಮುಖ್ಯಮಂತ್ರಿ ಸಂತಾಪ ಸೂಚಿಸಿದರು.

ಅಖಿಲೇಶ್ ಯಾದವ್, ಸಂಸದ, ಸಮಾಜವಾದಿ ಪಕ್ಷದ ಮುಖ್ಯಸ್ಥ

'2 ಸಾವಿರ ಮಂದಿ ಮೃತಪಟ್ಟಿದ್ದಾರೆ'



'4–5 ದಿನಗಳ ಹಿಂದೆ ಕಾಲ್ತುಳಿತದ ಘಟನೆ ನಡೆದಾಗ, ಇದೊಂದು ವದಂತಿ ಎನ್ನಲಾಗಿತ್ತು. ಆಮೇಲೆ, 30 ಜನ ಮೃತಪಟ್ಟಿದ್ದರು. ಇದು ಸಾವಿನ ನಿಖರವಾದ ಸಂಖ್ಯೆಯೇ? ಮುಚ್ಚಿಡಬೇಡಿ... ಒಬ್ಬ ವ್ಯಕ್ತಿ ಮೃತಪಟ್ಟರೂ ಅದು ನಮ್ಮದೇ ಜವಾಬ್ದಾರಿ... ನಾವೇ ನಮ್ಮ ಕಣ್ಣಾರೆ ಕಂಡಿದ್ದೇವೆ, ಸುಮಾರು 2 ಸಾವಿರ ಜನರು ಮೃತಪಟ್ಟಿದ್ದಾರೆ. ಕಾಲ್ತುಳಿತದ ಘಟನೆಯನ್ನು ಸೂಕ್ತ ರೀತಿಯಲ್ಲಿ ಸರ್ಕಾರ ನಿರ್ವಹಿಸಲಿಲ್ಲ. ಇದನ್ನು ರಾಜಕೀಯ ಕಾರ್ಯಕ್ರಮವನ್ನಾಗಿ ಮಾಡಲಾಗಿದೆ. ಬೇರೆ ದೇಶಗಳಲ್ಲಿ ಇಂಥ ಘಟನೆ ನಡೆದಿದ್ದರೆ, ಪ್ರಧಾನಿ ಸೇರಿ ಮುಖ್ಯಮಂತ್ರಿಯ ರಾಜೀನಾಮೆಗಾಗಿ ದೊಡ್ಡ ಆಗ್ರಹವೇ ಮಾಡಲಾಗುತ್ತಿತ್ತು.

ಸಂಜಯ್ ರಾವುತ್, ಸಂಸದ

(ಸಂಜಯ್ ರಾವುತ್ ಅವರ ಈ ಹೇಳಿಕೆಯಿಂದ ರಾಜ್ಯಸಭೆಯಲ್ಲಿ ಗದ್ದಲ ಉಂಟಾಯಿತು. ತಮ್ಮ ಹೇಳಿಕೆಯನ್ನು ಸಾಬೀತು ಮಾಡುವಂತೆ ರಾವುತ್ ಅವರಿಗೆ ಉಪಸಭಾಪತಿ ಆದೇಶ ನೀಡಿದರು. 'ನನ್ನ ಹೇಳಿಕೆಯ ಕುರಿತು ದಾಖಲೆ ನೀಡುತ್ತೇನೆ' ಎಂದು ರಾವುತ್ ಹೇಳಿದರು)

'ಅದೇನು ದೊಡ್ಡ ಘಟನೆಯಲ್ಲ'



ನಾವೆಲ್ಲರೂ ಕುಂಭಮೇಳಕ್ಕೆ ಹೋಗಿದ್ದೇವೆ. ಪವಿತ್ರ ಸ್ನಾನವು ಸುಸೂತ್ರವಾಗಿಯೇ ನಡೆಯಿತು. ಎಲ್ಲವನ್ನೂ ಬಹಳ ಚೆನ್ನಾಗಿ ವ್ಯವಸ್ಥೆ ಮಾಡಲಾಗಿದೆ. ಕಾಲ್ತುಳಿತ ಘಟನೆ ನಡೆದದ್ದು ಹೌದು. ಅದು ಬಹಳ ದೊಡ್ಡ ಘಟನೆ ಏನಲ್ಲ. ಎಷ್ಟು ದೊಡ್ಡ ಘಟನೆಯೆಂದು ನನಗೇನು ಗೊತ್ತಿಲ್ಲ. ಆದರೆ, ಘಟನೆಯನ್ನು ಉತ್ಪ್ರೇಕ್ಷೆ ಮಾಡಿ ಹೇಳಲಾಗುತ್ತಿದೆ. ಎಷ್ಟೊಂದು ಜನರು ಬರುತ್ತಿದ್ದಾರೆ, ಇಷ್ಟೆಲ್ಲಾ ಜನರನ್ನು ನಿರ್ವಹಿಸುವುದು ಕಷ್ಟದ ಕೆಲಸ. ಆದರೆ, ನಾವು ಇದನ್ನು ಚೆನ್ನಾಗಿಯೇ ನಿರ್ವಹಿಸುತ್ತಿದ್ದೇವೆ.

ಹೇಮಾ ಮಾಲಿನಿ, ಸಂಸದೆ

'ದುಡ್ಡಿರುವವರು ಹೋಗಿ ಮುಳುಗಿ, ಮೋಕ್ಷ ಪಡೆಯಿರಿ'



'ನಾನು ಆ 'ಬಾಬಾ'ನ ಹೆಸರು ಹೇಳುವುದಿಲ್ಲ. ಆದರೆ, ಅವರೊಂದು ಹೇಳಿಕೆ ನೀಡಿದ್ದಾರೆ. ಕಾಲ್ತುಳಿತದಲ್ಲಿ ಮೃತಪಟ್ಟವರು 'ಮೋಕ್ಷ' ಪಡೆದುಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ. ಆದ್ದರಿಂದ, ದೇಶದಲ್ಲಿರುವ 'ಬಾಬಾ'ಗಳು, ರಾಜಕಾರಣಿಗಳು, ಹೆಚ್ಚು ಹೆಚ್ಚು ದುಡ್ಡಿರುವವರು ಮೋಕ್ಷ ಪಡೆಯುವುದಕ್ಕಾಗಿ ತ್ರಿವೇಣಿ ಸಂಗಮಕ್ಕೆ ಹೋಗಿ ಮುಳುಗಿ.

ನೆಹರೂ ಅವರ ಕಾಲಘಟ್ಟದಲ್ಲಿಯೂ ಕಾಲ್ತುಳಿತ ಸಂಭವಿಸಿತ್ತು. ಆದರೆ, ಸಾವಿನ ಸಂಖ್ಯೆಯನ್ನು ನೀಡಲಾಗಿತ್ತು. ಆ ಕಾಲದಲ್ಲಿ ಸಾಮಾಜಿಕ ಮಾಧ್ಯಮ ಇರಲಿಲ್ಲ. ಈಗಂತೂ ಅತ್ಯಾಧುನಿಕ ತಂತ್ರಜ್ಞಾನವಿದೆ, ಜಾಲತಾಣ ಮಾಧ್ಯಮಗಳಿವೆ... ಕಾಲ್ತುಳಿತದಲ್ಲಿ ಕನಿಷ್ಠ ಎಂದರೂ ಸುಮಾರು 300–600 ಜನ ಮೃತಪಟ್ಟಿದ್ದಾರೆ ಎಂದು ಜನರೇ ಹೇಳುತ್ತಿದ್ದಾರೆ. ಈ ಮೃತದೇಹಗಳಿಗೆ ಹಿಂದೂ ಸಂಪ್ರದಾಯದಂತೆ ಅಂತ್ಯಸಂಸ್ಕಾರವನ್ನೂ ಮಾಡಲಾಗಿಲ್ಲ.

ಪಪ್ಪು ಯಾದವ್, ಸಂಸದ

ನೀತಿ ಸಂಹಿತೆ ಉಲ್ಲಂಘನೆ, ಸರ್ಕಾರಿ ಅಧಿಕಾರಿಯ ಕರ್ತವ್ಯಕ್ಕೆ ಅಡ್ಡಿ ಮಾಡಿದ ಆರೋಪ

ಸಿ.ಎಂ ಆತಿಶಿ ವಿರುದ್ಧ ಎಫ್‌ಐಆರ್ ದಾಖಲು



ನವದೆಹಲಿ/ ಚಂಡೀಗಡ (ಪಿಟಿಐ): ನೀತಿ ಸಂಹಿತೆ ಉಲ್ಲಂಘನೆ ಮತ್ತು ಸರ್ಕಾರಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ದೆಹಲಿ ಮುಖ್ಯಮಂತ್ರಿ ಮತ್ತು ಕಾಲ್ಕಾಜಿ ಕ್ಷೇತ್ರದ ಎಎಪಿ ಅಭ್ಯರ್ಥಿ ಆತಿಶಿ ಅವರ ವಿರುದ್ಧ ದೆಹಲಿ ಪೊಲೀಸರು ಮಂಗಳವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಎಎಪಿ ಬೆಂಬಲಿಗರು ಫತೇಹ್ ಸಿಂಗ್ ಮಾರ್ಗ್‌ನಲ್ಲಿ ಸರ್ಕಾರಿ ಅಧಿಕಾರಿಯ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರು. ಈ ಸಂದರ್ಭದಲ್ಲಿ ಬೆಂಬಲಿಗರೊಂದಿಗೆ ಆತಿಶಿ ಅವರು ಇದ್ದರು. ಎಎಪಿಯ ಇಬ್ಬರು ಸದಸ್ಯರು ಪೊಲೀಸ್ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಕೇಜ್ರಿವಾಲ್ ವಿರುದ್ಧ ಪ್ರಕರಣ: 'ಹರಿಯಾಣ ಸರ್ಕಾರವು ಯಮುನಾ ನದಿಯಲ್ಲಿ ವಿಷ ಮಿಶ್ರಣ ಮಾಡುತ್ತಿದೆ' ಎಂಬ ಹೇಳಿಕೆಗೆ ಸಂಬಂಧಿಸಿ ಎಎಪಿ ವರಿಷ್ಠ ಅರವಿಂದ ಕೇಜ್ರಿವಾಲ್ ವಿರುದ್ಧ ಹರಿಯಾಣದ ಕುರುಕ್ಷೇತ್ರ ಜಿಲ್ಲೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ. ಕುರುಕ್ಷೇತ್ರದ ವಕೀಲ ಜಗಮೋಹನ್ ಮನ್‌ಚಂದ್ ದೂರು ನೀಡಿದ್ದರು.

ಪಕ್ಷಪಾತ ಧೋರಣೆ: ಆತಿಶಿ

ಬಿಜೆಪಿ ನಾಯಕರು ಗೂಂಡಾಗಿರಿ ಮಾಡುತ್ತಾರೆ. ಆದರೆ ಅವರನ್ನು ಚುನಾವಣಾ ಆಯೋಗ ಮತ್ತು ದೆಹಲಿ ಪೊಲೀಸ್ ರಕ್ಷಿಸುತ್ತಿವೆ. ಎಎಪಿ ನಾಯಕರು ಮತ್ತು ಕಾರ್ಯಕರ್ತರನ್ನು ಗುರಿಯಾಗಿಸಿ ಪಕ್ಷಪಾತ ಧೋರಣೆ ತೋರುತ್ತಿವೆ ಎಂದು ದೆಹಲಿ ಮುಖ್ಯಮಂತ್ರಿ ಆತಿಶಿ ಮಂಗಳವಾರ ದೂರಿದರು.

ಕಾಲ್ಕಾಜಿ ಕ್ಷೇತ್ರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭಾರತದಲ್ಲಿ ಪ್ರಜಾಪ್ರಭುತ್ವವು ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರ ಕೈಯಲ್ಲಿದೆ. ಆಯೋಗವು ರಾಷ್ಟ್ರಕ್ಕಾಗಿ ಸೇವೆ ಸಲ್ಲಿಸುತ್ತಿದೆಯೇ ಇಲ್ಲವೇ ಎಂದು ದೇಶವು ಗಮನಿಸುತ್ತಿದೆ' ಎಂದು ಹೇಳಿದರು.

'ಕಾಲ್ಕಾಜಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಮೇಶ್ ಬಿಧೂಡಿ ಮತ್ತು ಅವರ ಕುಟುಂಬಸ್ಥರು ಬಹಿರಂಗವಾಗಿ ಗೂಂಡಾಗಿರಿ ಮಾಡುತ್ತಿದ್ದಾರೆ. ಆದರೆ ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ದೂರಿದರು.

ಎಎಪಿ ಆರೋಪಕ್ಕೆ ಆಯೋಗ ತಿರುಗೇಟು

ಚುನಾವಣಾ ಆಯೋಗವನ್ನು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ನಡೆಸುತ್ತಿದ್ದಾರೆ ಎಂಬ ಎಎಪಿ ಆರೋಪಕ್ಕೆ ಆಯೋಗ ಮಂಗಳವಾರ ತಿರುಗೇಟು ನೀಡಿದೆ.

ದೆಹಲಿ ಚುನಾವಣೆಯಲ್ಲಿ ಚುನಾವಣಾ ಪ್ರಾಧಿಕಾರವನ್ನು ಕೆಣಕಲು ಪುನರಾವರ್ತಿತ ಉದ್ದೇಶಪೂರ್ವಕ ಒತ್ತಡ ತಂತ್ರಗಳನ್ನು ಹೇರುತ್ತಿರುವುದು ಮೂವರು ಸದಸ್ಯರ ಆಯೋಗದ ಗಮನಕ್ಕೆ ಬಂದಿದೆ ಎಂದು ಹೇಳಿದೆ.

ಚುನಾವಣಾ ಆಯೋಗವು ಏಕ ವ್ಯಕ್ತಿಯ ಸಂಸ್ಥೆ ಎಂದು ಬಿಂಬಿಸಲಾಗುತ್ತಿದೆ ಎಂದು ಅದು ಹೇಳಿದೆ. 'ಆಯೋಗವು ಸಾಂವಿಧಾನಿಕ ಸಂಯಮವನ್ನು ಹೊಂದಲು ಮತ್ತು ಪ್ರಕೋಪಗಳನ್ನು ಚಾಣಾಕ್ಷತನದಿಂದ, ನಿಷ್ಠುರವಾಗಿ ನಿರ್ವಹಿಸಲು ನಿರ್ಧರಿಸಿದೆ. ಯಾವುದೇ ಪ್ರಚೋದನೆಗಳಿಂದ ಪ್ರಭಾವಿತವಾಗುವುದಿಲ್ಲ' ಎಂದು 'ಎಕ್ಸ್'ನಲ್ಲಿ ತಿಳಿಸಿದೆ. ಬಿಜೆಪಿಯ ನೀತಿ ಸಂಹಿತೆ ಉಲ್ಲಂಘನೆಯನ್ನು ಆಯೋಗವು ನಿರ್ಲಕ್ಷಿಸುತ್ತಿದೆ ಎಂದು ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಸೇರಿದಂತೆ ಪಕ್ಷದ ಪ್ರಮುಖ ನಾಯಕರು ಆರೋಪಿಸಿದ್ದರು.

ರಾಷ್ಟ್ರೀಯ ಕ್ರೀಡಾಕೂಟ: ಧಿನಿಧಿ ದೇಸಿಂಗು ಕೂಟ ದಾಖಲೆ, ಶ್ರೀಹರಿ ನಟರಾಜ್‌ಗೆ ಚಿನ್ನ


ಈಜುಕೊಳದಲ್ಲಿ ಕರ್ನಾಟಕದ ಪಾರಮ್ಯ



ಉತ್ತರಾಖಂಡದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದ ಈಜಿನಲ್ಲಿ ಪಾರಮ್ಯ ಮೆರೆದ ಕರ್ನಾಟಕ ತಂಡ (ಎಡದಿಂದ),ಆಕಾಶ್ ಮಣಿ, ಲತೀಶಾ ಮಂದಾನ, ಶಾಲಿನಿ ಆರ್ ದೀಕ್ಷಿತ್, ನೀನಾ ವೆಂಕಟೇಶ್, ಧೀನಿಧಿ ದೇಸಿಂಗು, ವಿದಿತ್ ಎಸ್ ಶಂಕರ್ ಮತ್ತು ಶ್ರೀಹರಿ ನಟರಾಜ್

ರಾಷ್ಟ್ರೀಯ ಕ್ರೀಡಾಕೂಟ: ಪದಕ ಪಟ್ಟಿ

	ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಕರ್ನಾಟಕ	28	12	13	53
2	ಸರ್ವಿಸಸ್	21	10	9	40
3	ಮಹಾರಾಷ್ಟ್ರ	16	33	27	76
4	ತಮಿಳುನಾಡು	11	16	16	43
5	ಮಣಿಪುರ	11	10	5	26


ಪದಕದೊಂದಿಗೆ ಸಂಭ್ರಮಿಸಿದ ಅಶ್ವಿನ್ ಭಟ್ ಮತ್ತು ಶಿಖಾ ಗೌತಮ್

ಬೆಂಗಳೂರು: ರಾಷ್ಟ್ರೀಯ ಕ್ರೀಡಾಕೂಟ ಆರಂಭವಾದ ದಿನದಿಂದಲೂ ಪದಕಗಳ ಬೇಟೆ ಆಡಿದ ಕರ್ನಾಟಕದ ಈಜುಪಟುಗಳಾದ ಶ್ರೀಹರಿ ನಟರಾಜ್ ಮತ್ತು ಧಿನಿಧಿ ದೇಸಿಂಗು ಅವರು ಈಜುಸ್ಪರ್ಧೆಗಳ ಕೊನೆಯ ದಿನವೂ ಪಾರಮ್ಯ ಮೆರೆದರು. ಇದರೊದಿಗೆ ಕರ್ನಾಟಕ ತಂಡವು ಈಜುಕೊಳದಿಂದ ಒಟ್ಟು 22 ಚಿನ್ನದ ಪದಕಗಳನ್ನು ಬಾಚಿಕೊಂಡಂತಾಯಿತು.

ಕರ್ನಾಟಕದ ಈ ಇಬ್ಬರು ಈಜು ತಾರೆಯರು ಹಲ್ದ್ವಾನಿಯ ಅಕ್ವಾಟಿಕ್ ಸೆಂಟರ್‌ನಲ್ಲಿ ನಡೆದ ಸ್ಪರ್ಧೆಗಳಲ್ಲಿ ತಲಾ 9 ಚಿನ್ನಗಳನ್ನು ಗೆದ್ದು ಅಮೋಘ ಸಾಧನೆ ಮೆರೆದರು. ಮಂಗಳವಾರ ಕರ್ನಾಟಕ ನಾಲ್ಕು ಚಿನ್ನಗಳನ್ನು ಗೆದ್ದುಕೊಂಡಿತು. ಕ್ರೀಡೆಗಳ ಪದಕ ಪಟ್ಟಿಯಲ್ಲಿ ಕರ್ನಾಟಕ 28 ಚಿನ್ನ, 12 ಬೆಳ್ಳಿ, 13 ಕಂಚಿನ ಪದಕಗಳನ್ನು ಗೆದ್ದು ಅಗ್ರಸ್ಥಾನ ಕಾಪಾಡಿಕೊಂಡಿದೆ.

ಶ್ರೀಹರಿಗೆ ಚಿನ್ನ: ಒಲಿಂಪಿಯನ್, 24 ವರ್ಷ ವಯಸ್ಸಿನ ಶ್ರೀಹರಿ ಅವರು ಪುರುಷರ 100 ಮೀಟರ್ಸ್ ಫ್ರೀಸ್ಟೈಲ್ ರೇಸ್‌ನಲ್ಲಿ 50.65 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನ ಗೆದ್ದರು. ಅವರಿಗೆ ತೀವ್ರ ಪೈಪೋಟಿ ನೀಡಿದ ಮಹಾರಾಷ್ಟ್ರದ ಹೀರ್ ಗಿತೇಶ್ ಶಾ (51.61ಸೆ)ಬೆಳ್ಳಿ ಗೆದ್ದರು.

ಮಹಿಳೆಯರ ವಿಭಾಗದಲ್ಲಿ 14 ವರ್ಷ ವಯಸ್ಸಿನ ಒಲಿಂಪಿಯನ್ ಧಿನಿಧಿ ತಮ್ಮ ಕೊರಳಿಗೆ ಮತ್ತೊಂದು ಚಿನ್ನದ ಪದಕ ಹಾಕಿಕೊಂಡರು. ತಮ್ಮದೇ ದಾಖಲೆಯನ್ನು ಉತ್ತಮಪಡಿಸಿ ಕೊಂಡರು. ಹೋದ ವರ್ಷ ಗೋವಾದಲ್ಲಿ ನಡೆದಿದ್ದ ಕೂಟದಲ್ಲಿ ಜಧಿನಿಧಿ ಅವರು (57.7ಸೆ) ದಾಖಲೆ ಮಾಡಿದ್ದರು.

ಪುರುಷರ 100 ಮೀಟರ್ಸ್ ಬ್ರೆಸ್ಟ್ ಸ್ಟ್ರೋಕ್ ವಿಭಾಗದಲ್ಲಿ ವಿದಿತ್ ಎಸ್. ಶಂಕರ್ ಅವರು 1ನಿ, 03.97 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನದ ಪದಕ ಗೆದ್ದರು.

ಫಲಿತಾಂಶಗಳು: ಪುರುಷರು: 100 ಮೀ ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಕರ್ನಾಟಕ; 50.65ಸೆ)-1, ಹೀರ್ ಗಿತೇಶ್ ಶಾ (ಮಹಾರಾಷ್ಟ್ರ)-2, ರಿಷಭ್ ದಾಸ್ (ಮಹಾರಾಷ್ಟ್ರ)-3

100 ಮೀ ಬ್ರೆಸ್ಟ್‌ಸ್ಟ್ರೋಕ್: ವಿದಿತ್ ಎಸ್. ಶಂಕರ್ (ಕರ್ನಾಟಕ; 1ನಿ,03.97ಸೆ)-1, ಎಸ್.ಧನುಷ್ (ತಮಿಳುನಾಡು)-2, ರಾಣಾ ಪ್ರತಾಪ್ (ಜಾರ್ಖಂಡ್)-3.

ಮಹಿಳೆಯರು: 100 ಮೀ ಫ್ರೀಸ್ಟೈಲ್: ಧಿನಿಧಿ ದೇಸಿಂಗು (ಕರ್ನಾಟಕ; ನೂತನ ದಾಖಲೆ: 57.34ಸೆ. ಹಳೆಯದು: 57.87ಸೆ-ಧೀನಿಧಿ ದೇಸಿಂಗು)-1, ತಿತೀಕ್ಷಾ ರಾವತ್ (ದೆಹಲಿ)-2, ಅದಿತಿ ಸತೀಶ್ ಹೆಗಡೆ (ಮಹಾರಾಷ್ಟ್ರ)-3.

100 ಮೀ ಬ್ರೆಸ್ಟ್‌ಸ್ಟ್ರೋಕ್: ಹರ್ಷಿತಾ ಜಯರಾಮ್ (ಕೇರಳ; 1ನಿ,14.34ಸೆ)-1, ಸಾನ್ವಿ ದೇಶ್ವಾಲ್ (ಮಹಾರಾಷ್ಟ್ರ)-2, ಜ್ಯೋತಿ ಪಾಟೀಲ (ಮಹಾರಾಷ್ಟ್ರ)-3

4X100 ಮೀ. ಮಿಶ್ರ ಮೆಡ್ಲೆ: ಕರ್ನಾಟಕ (ಶ್ರೀಹರಿ ನಟರಾಜ್, ವಿದಿತ್ ಎಸ್. ಶಂಕರ್, ನೈಶಾ ಶೆಟ್ಟಿ, ಧೀನಿಧಿ ದೇಸಿಂಗು; 4ನಿ,03.91ಸೆ)-1, ತಮಿಳುನಾಡು-2, ಮಹಾರಾಷ್ಟ್ರ -3.

ಉತ್ತರಾಖಂಡಕ್ಕೆ ಚಿನ್ನ:ಆತಿಥೇಯ ಉತ್ತರಾ ಖಂಡ ಕೆನೊಯಿಂಗ್‌ನಲ್ಲಿ (ಮಹಿಳೆಯರ ಸ್ಲಲೋಮ್ ಸಿ1 ಸ್ಪರ್ಧೆ) ಚಿನ್ನ ಗೆದ್ದಿತು. ಚಿನ್ನ ಗೆದ್ದ ಕೀರ್ತಿ: ಕರ್ನಾಟಕದ ಸೈಕ್ಲಿಸ್ಟ್ ಕೀರ್ತಿ ರಂಗಸ್ವಾಮಿ ಸೋಮವಾರ ನಡೆದ ಮಹಿಳೆಯರ 10 ಕಿ.ಮೀ. ಎಲ್ಮಿಟ್ ಸ್ಕ್ರಾಚ್ ರೇಸ್‌ನಲ್ಲಿ ಚಿನ್ನ ಗೆದ್ದಿದ್ದರು.

ಬ್ಯಾಡ್ಮಿಂಟನ್: ಕರ್ನಾಟಕದ ಮೇರು ಸಾಧನೆ

ಡೆಹ್ರಾಡೂನ್ (ಪಿಟಿಐ): ಕರ್ನಾಟಕದ ಬ್ಯಾಡ್ಮಿಂಟನ್ ಆಟಗಾರರು 38ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಮೇರು ಸಾಧನೆ ಮಾಡಿದರು. ಬ್ಯಾಡ್ಮಿಂಟನ್ ತಂಡವು ಈ ಬಾರಿ ಒಟ್ಟು ಆರು ಪದಕವನ್ನು ಜಯಿಸಿತು.

ಕರ್ನಾಟಕದ ಎಚ್.ವಿ. ನಿತಿನ್ ಮತ್ತು ಪ್ರಕಾಶ್ ರಾಜ್ ಜೋಡಿಯು ಪುರುಷರ ಡಬಲ್ಸ್‌ನಲ್ಲಿ 21-16, 21-14 ರಿಂದ ವೈಭವ್ ಮತ್ತು ಆಶಿತ್ ಸೂರ್ಯ ಜೋಡಿಯನ್ನು ಮಣಿಸಿ, ಚಿನ್ನದ ಪದಕ ಜಯಿಸಿತು. 25 ನಿಮಿಷಗಳ ಹೋರಾಟದಲ್ಲಿ ಕರ್ನಾಟಕದ ಜೋಡಿ ಮೇಲುಗೈ ಸಾಧಿಸಿತು.

ಮಹಿಳೆಯರ ವಿಭಾಗದಲ್ಲಿ ಕರ್ನಾಟಕದ ಅಶ್ವಿನ್ ಭಟ್ ಮತ್ತು ಶಿಖಾ ಗೌತಮ್ 21–11, 21–13ರಿಂದ ಉತ್ತರಾಖಂಡದ ಅನ್ಯಾ ಬಿಷ್ಟ್ ಮತ್ತು ಏಂಜೆಲ್ ಪುನೇರಾ ವಿರುದ್ಧ ಜಯಿಸಿದರು.

ಕರ್ನಾಟಕವು ಈ ಬಾರಿ ಒಟ್ಟು 6 ಪದಕ ಜಯಿಸಿದೆ. ಹೋದ ಬಾರಿ ನಾಲ್ಕು ಪದಕ ಜಯಿಸಿತ್ತು.

ತಮಿಳುನಾಡಿನ ಸತೀಶ್ ಕುಮಾರ್ ಕರುಣಾಕರನ್ ಅವರು ರಾಷ್ಟ್ರೀಯ ಕ್ರೀಡಾಕೂಟದ ಪುರುಷರ ಬ್ಯಾಡ್ಮಿಂಟನ್ ವಿಭಾಗದಲ್ಲಿ ಎರಡು ಚಿನ್ನದ ಪದಕ ಜಯಿಸಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಉದಯೋನ್ಮುಖ ಬ್ಯಾಡ್ಮಿಂಟನ್ ಆಟಗಾರ್ತಿ ಅನ್ಮೋಲ್ ಖರ್ಬ್ ಬಂಗಾರ ಪದಕಕ್ಕೆ ಕೊರಳೊಡ್ಡಿದರು.

ಅನ್ಮೋಲ್ ಖಾರ್ ಚಿನ್ನದ ಸಾಧನೆ

ಮಹಿಳೆಯರ ಸಿಂಗಲ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದರು. ಹರಿಯಾಣದ 18 ವರ್ಷದ ಅನ್ಮೋಲ್ ಅವರು ಫೈನಲ್‌ನಲ್ಲಿ 21-16, 22-20ರಿಂದ ಅನುಪಮಾ ಉಪಾಧ್ಯಾಯ ವಿರುದ್ಧ ಜಯಿಸಿದರು.

ಅನ್ಮೋಲ್ ಅವರು ಈಚೆಗೆ ಏಷ್ಯಾ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ತಂಡದಲ್ಲಿದ್ದರು. ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ರಾಷ್ಟ್ರೀಯ ಗೇಮ್ಸ್‌ನಲ್ಲಿ ಚಿನ್ನ ಗೆದ್ದಿರುವುದು ಅವರ ವೃತ್ತಿಜೀವನದಲ್ಲಿ ಮತ್ತೊಂದು ಪ್ರಮುಖ ಸಾಧನೆಯಾಗಿದೆ. ಈಚೆಗೆ ಗುವಾಹಟಿ ಮಾಸ್ಟರ್ಸ್‌ನಲ್ಲಿ ಅವರು ರನ್ನರ್ಸ್ ಅಪ್ ಆಗಿದ್ದರು. ಹೋದ ವರ್ಷ ಬೆಲ್ಜಿಯನ್ ಮತ್ತು ಪೋಲೆಂಡ್ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಅವರು ಗೆದ್ದಿದ್ದರು.

ರಾಷ್ಟ್ರೀಯ ಕೂಟದ ಮಿಶ್ರ ಡಬಲ್ಸ್ ಬ್ಯಾಡ್ಮಿಂಟನ್ ವಿಭಾಗದ ಫೈನಲ್‌ನಲ್ಲಿ ಸತೀಶಕುಮಾರ್ ಕರುಣಾಕರನ್ –ಆದ್ಯಾ ವಾರಿಯತ್ ಜೋಡಿಯು 21-11, 20-22, 21-8 ರಿಂದ ದೀಪ್ ರಾಮಭಿಯಾ ಮತ್ತು ಅಕ್ಷಯಾ ವಾರಂಗ್ ಅವರನ್ನು ಸೋಲಿಸಿ ಚಿನ್ನ ಗಳಿಸಿತು.

ಆತಿಥೇಯ ರಾಜ್ಯದ ಆಟಗಾರ ಮತ್ತು ಒಲಿಂಪಿಯನ್ ಲಕ್ಷ್ಯ ಸೇನ್ ಅವರು ಸೋಮವಾರ ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ಅವರು ವಿಶ್ವ ರ‍್ಯಾಂಕಿಂಗ್‌ನಲ್ಲಿ 10ನೇ ಸ್ಥಾನದಲ್ಲಿದ್ದಾರೆ.

ಟೇಕ್ವಾಂಡೊದಲ್ಲಿ ಫಿಕ್ಸಿಂಗ್ ಆರೋಪ: ನಿರ್ದೇಶಕರ ಬದಲಾವಣೆ

ಡೆಹ್ರಾಡೂನ್ (ಪಿಟಿಐ): ಫಿಕ್ಸಿಂಗ್ ಆರೋಪಗಳು ಮೇಲ್ನೋಟಕ್ಕೆದೃಢ ಪಟ್ಟ ಕಾರಣ ರಾಷ್ಟ್ರೀಯ ಕ್ರೀಡೆಗಳ ಟೇಕ್ವಾಂಡೊ ನಿರ್ದೇಶಕ ಟಿ.ಪ್ರವೀಣ್ ಕುಮಾರ್ ಅವರನ್ನು ಬದ ಲಾಯಿಸಲಾಗಿದ್ದು, ಕ್ರೀಡೆಗಳ ತಾಂತ್ರಿಕ ನಿರ್ವಹಣಾ ಸಮಿತಿಯು (ಜಿಟಿಸಿಸಿ) ಅವರ ಸ್ಥಾನಕ್ಕೆ ಎಸ್.ದಿನೇಶ್ ಕುಮಾರ್ ಅವರನ್ನು ನೇಮಕ ಮಾಡಿದೆ.

‘16 ತೂಕ ವಿಭಾಗಗಳ ಪೈಕಿ 10 ಸ್ಪರ್ಧೆಗಳಲ್ಲಿ ಪದಕಗಳು ಯಾರಿಗೆ ಸಿಗ ಬೇಕು ಎನ್ನುವುದು ಮೊದಲೇ ನಿರ್ಧಾ ಬರವಾಗಿತ್ತು. ಇದಕ್ಕಾಗಿ ಪ್ರವೀಣ್ ಕುಮಾರ್ ತಮಗೆ ಬೇಕಾದ ಆಯ್ದ ರಾಜ್ಯ ಸಂಸ್ಥೆಗಳ ಪದಾಧಿಕಾರಿಗಳು, ಕಾರ್ಯ ಕಾರಿ ಸಮಿತಿ ಸದಸ್ಯರನ್ನೇ ನೇಮಕ ಮಾಡಿದ್ದಾರೆ’ ಎನ್ನುವ ಆತಂಕಕಾರಿ ವಿಷಯ ಬಹಿರಂಗವಾದ ಬೆನ್ನಲ್ಲೇ ಜಿಟಿಸಿಸಿ ಕ್ರಮ ಕೈಗೊಂಡಿದೆ.

ಭಾರತ ತಂಡದಲ್ಲಿ ವರುಣ್ ಚಕ್ರವರ್ತಿ

ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಸ್ಪಿನ್ನರ್‌ಗೆ ಅವಕಾಶ ?



ಅಭ್ಯಾಸ ನಡೆಸಿದ ವರುಣ್ ಚಕ್ರವರ್ತಿ ಮತ್ತು ಆಲ್‌ರೌಂಡರ್ ಅಕ್ಷರ್ ಪಟೇಲ್

ನಾಗಪುರ (ಪಿಟಿಐ): ಅಮೋಘ ಲಯದಲ್ಲಿರುವ ‘ನಿಗೂಢ ಸ್ಪಿನ್ನರ್’ ವರುಣ ಚಕ್ರವರ್ತಿ ಅವರು ಇಂಗ್ಲೆಂಡ್ ವಿರುದ್ಧ ಏಕದಿನ ಕ್ರಿಕೆಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡದೊಂದಿಗೆ ಮಂಗಳವಾರ ಅಭ್ಯಾಸ ನಡೆಸಿದರು.

ಈಚೆಗೆ ಮುಗಿದ ಟಿ20 ಸರಣಿಯಲ್ಲಿ ಭಾರತ ತಂಡವು 4–1ರಿಂದ ಜಯಿಸಿತು. ಅದರಲ್ಲಿ ಚಕ್ರವರ್ತಿ ಉತ್ತಮವಾಗಿ ಆಡಿದ್ದರು. ಐದು ಪಂದ್ಯಗಳಲ್ಲಿ ಒಟ್ಟು 14 ವಿಕೆಟ್‌ಗಳನ್ನು ಗಳಿಸಿದರು. ಸರಣಿಶ್ರೇಷ್ಠ ಗೌರವಕ್ಕೂ ಪಾತ್ರರಾದರು.

ಇದೇ ತಿಂಗಳು ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ತಂಡದಲ್ಲಿಯೂ ಅವರು ಸ್ಥಾನ ಗಳಿಸುವ ಸಾಧ್ಯತೆ ಇದೆ. ಇಲ್ಲಿ ತಂಡದ ಆಟಗಾರರೊಂದಿಗೆ ಚಕ್ರವರ್ತಿ-ಯವರು ನೆಟ್ಸ್‌ನಲ್ಲಿ ಬೌಲಿಂಗ್ ಅಭ್ಯಾಸ ಮಾಡಿದರು. ಅವರು ತಮ್ಮ ಉತ್ತಮ ಲಯವನ್ನು ನಿರಂತರವಾಗಿ ಕಾಪಾಡಿಕೊಳ್ಳಬೇಕು. ಅದಕ್ಕಾಗಿ ನೆಟ್ಸ್‌ನಲ್ಲಿ ಅನುಭವಿಗಳಾದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಮತ್ತು ರಿಷಭ್ ಪಂತ್ ಅವರಿಗೆ ಬೌಲಿಂಗ್ ಮಾಡಬೇಕು ಎಂದು ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ ಯೋಜನೆ.

ಚಾಂಪಿಯನ್ಸ್ ಟ್ರೋಫಿಗೆ ತೆರಳುವ ತಂಡದಲ್ಲಿ ಬದಲಾವಣೆಗಳನ್ನು ಮಾಡಲು ಫೆಬ್ರುವರಿ 12 ಕೊನೆಯ ದಿನವಾಗಿದೆ. ಚಕ್ರವರ್ತಿಯವರು ಆ ತಂಡದಲ್ಲಿ ಸ್ಥಾನ ಪಡೆಯುವವರ ಸಾಲಿನಲ್ಲಿ ಮುಂಚೂಣಿಯಲ್ಲಿದ್ದಾರೆ.

ಭಾರತ ತಂಡದಲ್ಲಿ ಸದ್ಯ ಮೂವರು ‘ಫಿಂಗರ್ ಸ್ಪಿನ್ನರ್ಸ್’ ಇದ್ದಾರೆ. ಅದರಲ್ಲಿ ರವೀಂದ್ರ ಜಡೇಜ ಮತ್ತು ಅಕ್ಷರ್ ಪಟೇಲ್ ಎಡಗೈ ಸ್ಪಿನ್ ಬೌಲರ್‌ಗಳಾಗಿದ್ದಾರೆ. ಬಲಗೈ ಆಫ್‌ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ಹಾಗೂ ಚೈನಾಮನ್ ಕುಲದೀಪ್ ಯಾದವ್ ಅವರು ತಂಡಕ್ಕೆ ಮರಳುತ್ತಿದ್ದಾರೆ.

ಕುಲದೀಪ್ ಈಚೆಗೆ ಸ್ಪೋರ್ಟ್ಸ್ ಹರ್ನಿಯಾ ಶಸ್ತ್ರಚಿಕಿತ್ಸೆಗೊಳಗಾಗಿ ಚೇತರಿಸಿಕೊಂಡಿದ್ದಾರೆ. ಈಗ ತಂಡದಲ್ಲಿರುವ ಏಕೈಕ ಮಣಿಕಟ್ಟಿನ ಸ್ಪಿನ್ನರ್ ಅವರಾಗಿದ್ದಾರೆ.


‘ಏಕದಿನ ಕ್ರಿಕೆಟ್ ಬಳಗದ ನೆಟ್ಸ್‌ನಲ್ಲಿ ವರುಣ ಅಭ್ಯಾಸ ಮಾಡಬೇಕೆಂದು ಭಾರತ ತಂಡದ ಮ್ಯಾನೇಜ್‌ಮೆಂಟ್ ಸೂಚಿಸಿದೆ. ಅದರಿಂದಾಗಿ ವರುಣ ಅವರು ದೇಶಿ ಕ್ರಿಕೆಟ್‌ನಲ್ಲಿ ಆಡುವುದಿಲ್ಲ’ ಎಂದು ಬಿಸಿಸಿಐನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ದೇಶಿ ಕ್ರಿಕೆಟ್‌ನಲ್ಲಿ ಸೀಮಿತ ಓವರ್‌ಗಳ ಟೂರ್ನಿಗಳು ಈಗಾಗಲೇ ಮುಕ್ತಾಯವಾಗಿವೆ. ಅದರಿಂದಾಗಿ ಮಾರ್ಚ್‌ನಲ್ಲಿ ಐಪಿಎಲ್ ಆರಂಭ ವಾಗುವವರೆಗೂ ಚಕ್ರವರ್ತಿಗೆ ಯಾವುದೇ ಟೂರ್ನಿ ಇಲ್ಲ. ಸದ್ಯ ಅವರು ಉತ್ತಮ ಫಾರ್ಮ್‌ನಲ್ಲಿದ್ದಾರೆ. ಅದೇ ರೀತಿ ಚೆನ್ನಾಗಿ ಬೌಲಿಂಗ್ ಮಾಡುವುದನ್ನು ಮುಂದುವರಿಸಲಿ ಎಂಬುದು ಬಿಸಿಸಿಐ ಉದ್ದೇಶವಾಗಿದೆ’ ಎಂದೂ ತಿಳಿಸಿದ್ದಾರೆ.

2021ರಲ್ಲಿ ದುಬೈನಲ್ಲಿ ಆಯೋಜನೆಯಾಗಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ವರುಣ ಚಕ್ರವರ್ತಿ ಆಡಿದ್ದರು. ಆದರೆ ಅವರು ಆಗ ಅಷ್ಟೇನೂ ಪರಿಣಾಮಕಾರಿಯಾಗಿರಲಿಲ್ಲ. ಆದರೆ ಅಲ್ಲಿಂದ ಇಲ್ಲಿಯವರೆಗೆ ಅವರು ತಮ್ಮ ಕೌಶಲಗಳನ್ನು ಬಹಳಷ್ಟು ಸುಧಾರಿಸಿಕೊಂಡಿದ್ದಾರೆ. ಆದ್ದರಿಂದ ಅವರಿಗೆ ತಂಡದ ಬಾಗಿಲು ತೆರೆಯುವ ಸಾಧ್ಯತೆ ಇದೆ. ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಪ್ರಮುಖ ಬೌಲರ್ ಕೂಡ ಅವರಾಗಿದ್ದಾರೆ.

ಪ್ರಜ್ಞಾನಂದಗೆ ಆತ್ಮೀಯ ಸ್ವಾಗತ

ಟಾಟಾ ಸ್ಟೀಲ್ ಮಾಸ್ಟರ್ಸ್ ಗೆದ್ದು ತವರಿಗೆ ಚೆಸ್ ತಾರೆ


ಟಾಟಾ ಸ್ಟೀಲ್ ಚೆಸ್ ಟೂರ್ನಿ ಗೆದ್ದುಕೊಂಡ ನಂತರ ಮಂಗಳವಾರ ಚೆನ್ನೈಗೆ ಬಂದಿಳಿದ ಪ್ರಜ್ಞಾನಂದ ಅವರು ತಾಯಿ ನಾಗಲಕ್ಷ್ಮಿ ಅವರೊಂದಿಗೆ ವಿಮಾನ ನಿಲ್ದಾಣದಲ್ಲಿ ಟ್ರೋಫಿ ಪ್ರದರ್ಶಿಸಿದರು.

ಚೆನ್ನೈ: ನೆದರ್ಲೆಂಡ್ಸ್‌ನ ವಿಯ್ಕ್ ಆನ್ ಝೀಯಲ್ಲಿ ನಡೆದ ಟಾಟಾ ಸ್ಟೀಲ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಟ್ರೋಫಿ ಗೆದ್ದ ಆರ್. ಪ್ರಜ್ಞಾನಂದ ಅವರು ಮಂಗಳವಾರ ಬೆಳಿಗ್ಗೆ ಇಲ್ಲಿಗೆ ಬಂದಿಳಿದಾಗ ನೂರಾರು ಅಭಿಮಾನಿಗಳು, ತಮಿಳುನಾಡು ಸರ್ಕಾರದ ಅಧಿಕಾರಿಗಳು, ಚೆಸ್ ಫೆಡರೇಷನ್ ಪದಾಧಿಕಾರಿಗಳು ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡರು.

19 ವರ್ಷ ವಯಸ್ಸಿನ ಪ್ರಜ್ಞಾನಂದ ಅವರು ಭಾನುವಾರ ಮುಕ್ತಾಯಗೊಂಡ ಟೂರ್ನಿಯ ಟೈಬ್ರೇಕರ್‌ನಲ್ಲಿ ಸ್ವದೇಶದ ಆಟಗಾರ, ವಿಶ್ವ ಚಾಂಪಿಯನ್ ಗುಕೇಶ್ ಅವರನ್ನು ಮಣಿಸಿ, ವೃತ್ತಿ ಜೀವನದ ಅತಿ ದೊಡ್ಡ ಟೂರ್ನಿಯನ್ನು ಗೆದ್ದುಕೊಂಡಿದ್ದರು.

‘ಈ ಟೂರ್ನಿಯ ಗೆಲುವಿನಿಂದ ತುಂಬಾ ಸಂತಸವಾಗಿದೆ. ಅಂತಿಮವಾಗಿ ತಮಿಳುನಾಡಿನ ಇಬ್ಬರು ಟೈಬ್ರೇಕರ್‌ನಲ್ಲಿ ಆಡಿದ್ದು ಖುಷಿ ಎನಿಸಿತು. ನಾವಿಬ್ಬರೂ ಚೆನ್ನಾಗಿ ಆಡಿದ್ದೆವು. ಗುಕೇಶ್ ಅವರಿಗೂ ಅಭಿನಂದನೆಗಳು. ಅವರೂ ಅತ್ಯುತ್ತಮವಾಗಿ ಆಡಿದರು’ ಎಂದು ಪ್ರಜ್ಞಾನಂದ ವಿಮಾನ ನಿಲ್ದಾಣದಲ್ಲಿ ಸೇರಿದ್ದ ಮಾಧ್ಯಮದವರಿಗೆ ತಿಳಿಸಿದರು.

ದಿಗ್ಗಜ ಆಟಗಾರ ವಿಶ್ವನಾಥನ್ ಆನಂದ್ ನಂತರ ಈ ಪ್ರಶಸ್ತಿಗೆ ಪಾತ್ರರಾದ ಭಾರತದ ಮೊದಲ ಆಟಗಾರ ಎಂಬ ಗೌರವಕ್ಕೆ ಪ್ರಜ್ಞಾನಂದ ಭಾಜನರಾಗಿದ್ದಾರೆ. ಆನಂದ್ 2003, 2004 ಮತ್ತು 2006ರಲ್ಲಿ ಕೋರಸ್ ಟೂರ್ನಿಯಲ್ಲಿ (ಈಗಿನ ಟಾಟಾ ಸ್ಟೀಲ್ ಚೆಸ್) ಗೆದ್ದಿದ್ದರು. 1989 ಮತ್ತು 1998ರಲ್ಲಿ ಅವರು ಪ್ರಶಸ್ತಿ ಹಂಚಿಕೊಂಡಿದ್ದರು.

ಪ್ರಜ್ಞಾನಂದ ಅವರು ಮುಂದಿನ ಟೂರ್ನಿಯಾಗಿ ಫೆಬ್ರುವರಿ 25 ರಿಂದ ಮಾರ್ಚ್ 7ರವರೆಗೆ ನಡೆಯುವ ಪ್ರಾಗ್ ಮಾಸ್ಟರ್ಸ್‌ನಲ್ಲಿ ಆಡಲಿದ್ದಾರೆ.

‘ಫಿಡೆ ಮುಖ್ಯಸ್ಥರು ರಾಜೀನಾಮೆ ನೀಡಲಿ’

ಪ್ಯಾರಿಸ್ (ರಾಯಿಟರ್ಸ್): ಅಂತರರಾಷ್ಟ್ರೀಯ ಚೆಸ್ ಫೆಡರೇಷನ್ ಅಧ್ಯಕ್ಷ ಅರ್ಕಾಡಿ ದ್ವೊರ್ಕೊವಿಚ್ ಅವರು ಹುದ್ದೆ ತ್ಯಜಿಸಬೇಕು ಎಂದು ಫ್ರೀಸ್ಟೈಲ್ ಚೆಸ್ ಗ್ರ್ಯಾಂಡ್‌ಸ್ಲಾಮ್ ಟೂರ್ ಮುಖ್ಯಸ್ಥ ಜಾನ್ ಹೆನ್ರಿಕ್ ಬ್ಯೂಟ್ನರ್ ಮತ್ತು ಸಾರ್ವಕಾಲಿಕ ಶ್ರೇಷ್ಠ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಮಂಗಳವಾರ ಒತ್ತಾಯಿಸಿದ್ದಾರೆ.

ತಾವು ಆರಂಭಿಸಲಿರುವ ಹೊಸ ಸರಣಿಗೆ ಸಂಬಂಧಿಸಿ ಮಾತುಕತೆ ಮುರಿದುಬಿದ್ದ ಬೆನ್ನಲ್ಲೇ ಇವರಿಬ್ಬರು, ಫಿಡೆ ಅಧ್ಯಕ್ಷರ ರಾಜೀನಾಮೆಗೆ ಒತ್ತಾಯಿಸಿದ್ದಾರೆ.

ಈ ಸರಣಿಯನ್ನು ‘ವಿಶ್ವ ಚಾಂಪಿಯನ್’ ಎಂದು ಬ್ರ್ಯಾಂಡ್ ಮಾಡಬಾರದು ಎಂದು ಫ್ರೀಸ್ಟೈಲ್ ಚೆಸ್ ಕ್ಲಬ್ ಜಂಟಿ ಮಾಲ ಕರಾದ ಬ್ಯೂಟ್ನರ್ ಮತ್ತು ಕಾರ್ಲ್‌ಸನ್ ಅವರಿಗೆ ಫಿಡೆ ಎಚ್ಚರಿಕೆ ನೀಡಿತ್ತು. ‘ಸೋಮವಾರ ಬೆಳಗಿನ ಜಾವದವರೆಗೆ ದ್ವೊರ್ಕೊವಿಚ್ ಜೊತೆ ಮಾತುಕತೆ ನಡೆಸಿದೆವು. ಆದರೆ ಫಿಡೆ ಕೌನ್ಸಿಲ್ ಇಂಥ ಮಾತುಕತೆ ಒಪ್ಪುವುದಿಲ್ಲ ಎಂದು ದ್ವೊರ್ಕೊವಿಚ್ ನಮಗೆ ಸ್ಪಷ್ಟಪಡಿಸಿದರು’ ಎಂದು ಬ್ಯೂಟ್ನರ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ


ಪ್ರಿಕ್ವಾರ್ಟರ್ ಫೈನಲ್‌ಗೆ ಸುಮಿತ್ ನಗಾಲ್


ಸುಮಿತ್

ನವದೆಹಲಿ (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಅರ್ಜೆಂಟೀನಾದ ರೊಸಾರಿಯೊದಲ್ಲಿ ನಡೆಯುತ್ತಿರುವ ರೊಸಾರಿಯೊ ಚಾಲೆಂಜರ್ ಟೂರ್ನಿಯ ಮೊದಲ ಸುತ್ತಿನಲ್ಲಿ ಸ್ಥಳೀಯ ಫೇವರಿಟ್ ರೆಂಝೊ ಒಲಿವೊ ಅವರನ್ನು ಸೋಲಿಸಿ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು.

ಎಂಟನೇ ಶ್ರೇಯಾಂಕ ಪಡೆದಿರುವ, 27 ವರ್ಷ ವಯಸ್ಸಿನ ನಗಾಲ್ ಸೋಮವಾರ ಹೋರಾಟದ ಆಟವಾಡಿ 5–7, 6–1, 6–0 ಯಿಂದ ಒಲಿವೊ ಅವರನ್ನು ಮಣಿಸಿದರು.

ಕ್ರಿಕೆಟ್: ಡ್ರಾ ಪಂದ್ಯದಲ್ಲಿ ಕರ್ನಾಟಕ


ಮೆಕ್ನಿಲ್ ನರೋನಾ

ಬೆಂಗಳೂರು: ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ 23 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಕೇರಳ ಎದುರಿನ ಪಂದ್ಯವನ್ನು ಡ್ರಾ ಮಾಡಿಕೊಂಡಿತು. ಕರ್ನಾಟಕ ತಂಡವು ಮೊದಲ ಇನಿಂಗ್ಸ್ ಮುನ್ನಡೆಯನ್ನೂ ಸಾಧಿಸಿತು.

ಪಂದ್ಯದ ಕೊನೆಯ ದಿನವಾದ ಮಂಗಳವಾರ ಕರ್ನಾಟಕ ತಂಡವು 382 ರನ್‌ಗಳ ಗುರಿ ಬೆನ್ನಟ್ಟಿತು. ತಂಡದ ಆರಂಭಿಕ ಬ್ಯಾಟರ್ ಮೆಕ್ನಿಲ್ ನರೋನಾ (103; 162ಎ, 4X6, 6X4) ಮತ್ತು ಪ್ರಖರ್ ಚತುರ್ವೇದಿ (54; 62ಎ, 4X7, 6X1) ಅರ್ಧಶತಕ ಗಳಿಸಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 90 ರನ್ ಸೇರಿಸಿದರು. ಇದರಿಂದಾಗಿ ಎದುರಾಳಿ ಬೌಲರ್‌ಗಳ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

ಪ್ರಖರ್ ಔಟಾದ ನಂತರ ಕೆ.ಪಿ. ಕಾರ್ತಿಕೇಯ (1ರನ್) ಬೇಗನೆ ನಿರ್ಗಮಿಸಿದರು. ನಾಯಕ ಅನೀಶ್ವರ್ ಗೌತಮ್ (23 ರನ್) ಅವರು ಉತ್ತಮವಾಗಿ ಆಡಿದರು. ತಂಡವು55 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 241 ರನ್ ಗಳಿಸಿದ ಸಂದರ್ಭದಲ್ಲಿ ದಿನದಾಟಕ್ಕೆ ತೆರೆಬಿತ್ತು.

10 ಅಂಕ: ಈ ಬಾರಿಯ ಟೂರ್ನಿಯಲ್ಲಿ ಹೊಸ ಅಂಕ ನೀಡಿಕೆ ಪದ್ಧತಿ ಜಾರಿಯಾಗಿದೆ. ಅದರ ಅನ್ವಯ ಈ ಪಂದ್ಯದಲ್ಲಿ ಕರ್ನಾಟಕ ತಂಡಕ್ಕೆ 10 ಮತ್ತು ಕೇರಳ ತಂಡಕ್ಕೆ 8 ಪಾಯಿಂಟ್ ಲಭಿಸಿವೆ.

ಮೊದಲ ಇನಿಂಗ್ಸ್ ಆದರದಲ್ಲಿ ಕರ್ನಾಟಕಕ್ಕೆ 3 ಮ್ಯಾಚ್ ಪಾಯಿಂಟ್ಸ್ ದೊರೆತಿವೆ. ಕೇರಳಕ್ಕೆ 1 ಅಂಕ ಸಿಕ್ಕಿದೆ. ಉಭಯ ತಂಡಗಳು ತಲಾ 3 ಬ್ಯಾಟಿಂಗ್ ಪಾಯಿಂಟ್ ಪಡೆದಿವೆ ಮತ್ತು ತಲಾ 4 ಬೌಲಿಂಗ್ ಪಾಯಿಂಟ್ ಗಳಿಸಿವೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೇರಳ: 72.5 ಓವರ್‌ಗಳಲ್ಲಿ 327. ಕರ್ನಾಟಕ: 88.3 ಓವರ್‌ಗಳಲ್ಲಿ 334. ಎರಡನೇ ಇನಿಂಗ್ಸ್: ಕೇರಳ: 110.3 ಓವರ್‌ಗಳಲ್ಲಿ 8ಕ್ಕೆ 395 ಡಿ. ಕರ್ನಾಟಕ: 55 ಓವರ್‌ಗಳಲ್ಲಿ 4ಕ್ಕೆ241 (ಮೆಕ್ನಿಲ್ ನರೋನಾ 103, ಪ್ರಖರ್ ಚತುರ್ವೇದಿ 54, ಹರ್ಷಿಲ್ ಧರ್ಮಾನಿ 31, ಅನೀಶ್ವರ್ ಗೌತಮ್ 26,ಎಂ.ಯು. ಹರಿಕೃಷ್ಣನ್ 75ಕ್ಕೆ1, ಎಂ. ಕಿರಣ ಸಾಗರ್ 50ಕ್ಕೆ1) ಫಲಿತಾಂಶ: ಪಂದ್ಯ ಡ್ರಾ. ಕರ್ನಾಟಕಕ್ಕೆ ಮೊದಲ ಇನಿಂಗ್ಸ್ ಮುನ್ನಡೆ.

ಕೊಡಗು ಎಫ್‌ಸಿ ತಂಡಕ್ಕೆ ಜಯ


ಕೊಡಗು ತಂಡದ ಆದಿತ್ಯ ಪ್ರತಾಪ್ ಸಿಂಗ್ (ಎಡ) ಗೋಲು ಹೊಡೆದ ಕ್ಷಣ

ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಬೆಂಗಳೂರು: ಕೊಡಗು ಎಫ್‌ಸಿ ತಂಡ ಸೂಪರ್ ಡಿವಿಷನ್ ಲೀಗ್ ಪಂದ್ಯದಲ್ಲಿ ಮಂಗಳವಾರ 5–1 ಗೋಲುಗಳಿಂದ ಎಂಇಜಿ ಮತ್ತು ಸೆಂಟರ್ ಎಫ್‌ಸಿ ತಂಡವನ್ನು ಮಣಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡದ ಲಾಲ್‌ಕ್ರಾವ್ಸ್‌ಮಾವಿಯಾ (28ನೇ ನಿ.), ಆದಿತ್ಯ ಪ್ರತಾಪ್ ಸಿಂಗ್ ರಾಥೋಡ್ (32ನೇ ನಿ.)ಮತ್ತು ಬಿ.ಎಸ್.ಮೃಣಾಲ್ ಮುತ್ತಣ್ಣ(78ನೇ ನಿ.) ಮುಸಾಮಿಯಾನ್ ಸಯ್ಯದ್ (88ನೇ ನಿ,) ಗೋಲುಗಳನ್ನು ಹೊಡೆದರು. ಎಂಇಜಿ ತಂಡದ ಆಯುಷ್ (55ನೇ ನಿ.) ಒಂದು ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಬಿಎಫ್‌ಸಿ ತಂಡ ಎದುರಾಳಿ ಎಫ್‌ಸಿ ರಿಯಲ್ ಬೆಂಗಳೂರು ವಿರುದ್ಧ ಡ್ರಾ ಸಾಧಿಸಿತು.

ನೆದರ್ಲೆಂಡ್ಸ್‌ನಲ್ಲಿ ನೆಲಸಿರುವ ಅಂಪೈರ್ ದಾವಣಗೆರೆಯ ನಿತಿನ್ ಬಾತಿ

ಯುವ ವಿಶ್ವಕಪ್ ಫೈನಲ್ ಪಂದ್ಯ ನಿರ್ವಹಿಸಿದ್ದ ಕನ್ನಡಿಗ

• ನಾಗೇಶ್ ಶೆಣೈ

ಬೆಂಗಳೂರು: ಭಾರತ ವನಿತೆಯರ ತಂಡ ಎರಡು ದಿನಗಳ ಹಿಂದೆ ದಕ್ಷಿಣ ಆಫ್ರಿಕಾ ತಂಡವನ್ನು ಬಗ್ಗುಬಡಿದು ಎರಡನೇ ಬಾರಿ ಐಸಿಸಿ 19 ವರ್ಷದೊಳಗಿನವರ ಟಿ20 ಕ್ರಿಕೆಟ್ ವಿಶ್ವಕಪ್ ಗೆದ್ದುಕೊಂಡಿದ್ದು ಈಗ ಇತಿಹಾಸ. ಕ್ವಾಲಾಲಂಪುರದಲ್ಲಿ ನಡೆದ ಆ ಪಂದ್ಯದ ಫೈನಲ್‌ನ ಆನ್‌ಫೀಲ್ಡ್ ಅಂಪೈರ್‌ಗಳಲ್ಲಿ ಒಬ್ಬರು ಕನ್ನಡಿಗರಾಗಿದ್ದರು ಎಂಬುದು ವಿಶೇಷ.

ದಾವಣಗೆರೆ ಮೂಲದ ನಿತಿನ್ ಬಾತಿ ಅವರು ಆ ನಿರ್ಣಾಯಕ ಪಂದ್ಯದಲ್ಲಿ ಅಂಪೈರ್ ಆಗಿ ಕಾರ್ಯನಿರ್ವಹಿಸಿದವರು. 2017ರಲ್ಲಿ ನೆದರ್ಲೆಂಡ್ಸ್‌ಗೆ ಹೋಗಿ ನಂತರ ಅಲ್ಲಿನ ಪೌರತ್ವ ಹೊಂದಿರುವ ಕಾರಣ ಅವರಿಗೆ ಈ ಅಪೂರ್ವ ಅವಕಾಶ ದೊರೆಯಿತು. 38 ವರ್ಷ ವಯಸ್ಸಿನ ನಿತಿನ್ ಈ ವಿಶ್ವಕಪ್‌ನಲ್ಲಿ ಫೈನಲ್, ಸೆಮಿಫೈನಲ್ (ಆಸ್ಟ್ರೇಲಿಯಾ–ದಕ್ಷಿಣ ಡಆಫ್ರಿಕಾ) ಪಂದ್ಯ ಸೇರಿ ಏಳು ಪಂದ್ಯಗಳಿಗೆ ಅಂಪೈರ್ ಆಗಿದ್ದರು. ಜೊತೆಗೆ ಎರಡು ಪಂದ್ಯಗಳಿಗೆ ಟಿ.ವಿ. ಅಂಪೈರಿಂಗ್ ಹೊಣೆ ವಹಿಸಿದ್ದರು.

ಆದರೆ ಈ ಜವಾಬ್ದಾರಿ ಅವರಿಗೆ ಹೊಸದೇನೂ ಆಗಿರಲಿಲ್ಲ. ವೆಸ್ಟ್ ಇಂಡೀಸ್‌ನಲ್ಲಿ ಈ ಹಿಂದೆ 2022ರಲ್ಲಿ ನಡೆದ ಐಸಿಸಿ 19 ವರ್ಷದೊಳಗಿನ ಪುರುಷರ ವಿಶ್ವಕಪ್‌ಗೂ ಅಂಪೈರ್ ಆಗಿದ್ದರು. 13 ಏಕದಿನ ಅಂತರರಾಷ್ಟ್ರೀಯ ಪಂದ್ಯಗಳಿಗೂ ಅವರು ಅಂಪೈರ್ ಆಗಿ ಕಾರ್ಯನಿರ್ವಹಿ-ಸಿದ್ದಾರೆ.

ದಾವಣಗೆರೆಯಲ್ಲಿ ಹುಟ್ಟಿಬೆಳೆದ


ನಿತಿನ್ ಬಾತಿ

ಅವರು ಬೆಂಗಳೂರಿನ ಆರ್.ವಿ.ಎಂಜಿನಿ-ಯರಿಂಗ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ವ್ಯಾಸಂಗ ಮಾಡಿದ್ದರು. ಇಂಟೆಲ್ ಕಂಪನಿಗೆ ಸೇರಿಕೊಂಡ ಅವರು 2009ರಲ್ಲಿ ಲೆವೆಲ್ ವನ್ ಅಂಪೈರಿಂಗ್ ಕೋರ್ಸ್ ಮುಗಿಸಿದ್ದರು. ಎಂಟು ವರ್ಷ ಬೆಂಗಳೂರಿನಲ್ಲಿ ಕೆಎಸ್‌ಸಿಎ ಲೀಗ್ ಪಂದ್ಯಗಳಿಗೆ ಅಂಪೈರಿಂಗ್ ಮಾಡಿದ್ದರು. 2017ರಲ್ಲಿ ನೆದರ್ಲೆಂಡ್ಸ್‌ನಲ್ಲಿ ನೆಲೆಸಿದ ನಂತರ ಐಸಿಸಿ ಡೆವಲಪ್‌ಮೆಂಟ್ ಪ್ಯಾನೆಲ್ ಅಂಪೈರ್ ಆಗಲು ಬೇಕಾದ ಅರ್ಹತೆ ಪೂರೈಸಿದರು. 2021ರಲ್ಲಿ ಆ ದೇಶದ ಪೌರತ್ವ ಪಡೆದಿದ್ದಾರೆ. ರಜೆಯ ಮೇಲೆ ಇಂಡೊನೇಷ್ಯಾ ಪ್ರವಾಸದಲ್ಲಿರುವ ಅವರು ‘ಪ್ರಜಾವಾಣಿ’ ಜತೆ ಮಂಗಳವಾರ ಮಾತನಾಡಿದರು.

• **ಫೈನಲ್‌ನಲ್ಲಿ ಭಾರತ– ದಕ್ಷಿಣ ಆಫ್ರಿಕಾ ಪಂದ್ಯಕ್ಕೆ ಮೈದಾನಕ್ಕಿಳಿದ ಅನುಭವ ಹೇಳಿ**

ಇದನ್ನು ಪದಗಳಲ್ಲಿ ಹೇಳಲು ಸ್ವಲ್ಪ ಕಷ್ಟವಾಗುತ್ತದೆ. ನೆದರ್ಲೆಂಡ್ಸ್ ಪೌರತ್ವ ಇದ್ದ ಕಾರಣ ನನಗೆ ಈ ಅವಕಾಶ ದೊರೆಯಿತು. ಈ ವಿಶ್ವಕಪ್‌ನಲ್ಲಿ ಅದೇ ಮೊದಲ ಬಾರಿ ನಾನು ಭಾರತ ತಂಡ ಆಡುತ್ತಿರುವ ಪಂದ್ಯಕ್ಕೆ ಅಂಪೈರ್ ಆಗಿದ್ದೆ. ಆದರೆ ಮೈದಾನಕ್ಕಿಳಿಯು-ವಾಗ ತಟಸ್ಥ ದೇಶದ ಅಂಪೈರ್ ಆಗಿ ಕಾರ್ಯನಿರ್ವಹಿಸುವ ಕರ್ತವ್ಯಪ್ರಜ್ಞೆ ಮನಸ್ಸಿನಲ್ಲಿ ಇದ್ದೇ ಇತ್ತು.

• **ಯುವ ವಿಶ್ವಕಪ್‌ನಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಹೇಗಿತ್ತು?**

ಮಲೇಷ್ಯಾದಲ್ಲಿ ನಡೆದ ಮಹಿಳಾ ಯುವ ವಿಶ್ವಕಪ್‌ನ 9 ಪಂದ್ಯಗಳಿಗೆ ಅಂಪೈರ್ ಆಗಿದ್ದೆ. ಆದರೆ 2022ರ 19 ವರ್ಷದೊಳಗಿನ ಪುರುಷರ ವಿಶ್ವಕಪ್‌ನಲ್ಲೂ ಅಂಪೈರ್ ಆಗಿದ್ದ ಕಾರಣ ನನಗೆ ಇದು ಹೊಸದಾಗಿರಲಿಲ್ಲ. ಜೊತೆಗೆ 2023ರ ಏಕದಿನ ವಿಶ್ವಕಪ್ ಅರ್ಹತಾ ಟೂರ್ನಿ (ಸೂಪರ್ ಲೀಗ್)ಯಲ್ಲೂ ಅಂಪೈರ್ ಆಗಿದ್ದೆ. ನೆದರ್ಲೆಂಡ್ಸ್ ಜೊತೆ, ಪಾಕಿಸ್ತಾನ, ಇಂಗ್ಲೆಂಡ್, ಐರ್ಲೆಂಡ್, ವೆಸ್ಟ್ ಇಂಡೀಸ್ ತಂಡಗಳು ಅಲ್ಲಿ ಆಡಿದ್ದವು. ಆಗ ಅಂಪೈರ್‌ಗಳಾದ ರಿಚರ್ಡ್ ಇಲಿಂಗ್‌ವರ್ತ್ (ಇಂಗ್ಲೆಂಡ್), ಪಾಲ್ ರೈಫಲ್ (ಆಸ್ಟ್ರೇಲಿಯಾ) ಅವರ ಜೊತೆ ಒಡನಾಡುವ ಅವಕಾಶ ದೊರಕಿತ್ತು. ಇದು ನನಗೆ ಅನುಭವ ಹೆಚ್ಚಿಸಲು ಕಾರಣವಾಯಿತು.

• **ವಿಶೇಷ ಎನಿಸಿದ ಸಂದರ್ಭ ಇದೆಯೇ?**

ಮಲೇಷ್ಯಾದ ಕುಚಿಂಗ್ ನಗರದಲ್ಲಿ ನಾನು ಎರಡು ಪಂದ್ಯಗಳಿಗೆ ಅಂಪೈರ್ ಆಗಿದ್ದೆ. ಅಲ್ಲಿ ಮಳೆಯಿಂದಾಗಿ ಪಂದ್ಯಗಳನ್ನು ಆಡಿಸುವುದು ಪಂದ್ಯದ ಅಧಿಕಾರಿಗಳಿಗೆ ಸವಾಲಾಗಿತ್ತು. ಕೆಲವು ಪಂದ್ಯಗಳನ್ನು 13 ಓವರುಗಳಿಗೆ ಮೊಟಕುಗೊಳಿಸಲಾಯಿತು. ಇಂಥ ಒಂದು ಪಂದ್ಯದಲ್ಲಿ ಪ್ರಬಲ ನ್ಯೂಜಿಲೆಂಡ್ ತಂಡವನ್ನು, ನೈಜೀರಿಯಾ ಎರಡು ರನ್‌ಗಳಿಂದ ಸೋಲಿಸಿತು. ಅಚ್ಚರಿಯ ಫಲಿತಾಂಶ ಕಂಡ ಪಂದ್ಯದಲ್ಲಿ ನಾನು ಆನ್‌ಫೀಲ್ಡ್ ಅಂಪೈರ್ ಆಗಿದ್ದೆ.

ಐಸಿಸಿ ವಿಶ್ವಕಪ್ ಸೂಪರ್ ಲೀಗ್ (ಅರ್ಹತಾ ಸುತ್ತು) ಪಂದ್ಯದಲ್ಲಿ ಇಂಗ್ಲೆಂಡ್‌ನ ಇಯಾನ್ ಮಾರ್ಗನ್ ಅವರು ನೆದರ್ಲೆಂಡ್ಸ್ ವಿರುದ್ಧ ಆಡಿದ್ದ ಕೊನೆಯ ಪಂದ್ಯಕ್ಕೂ ನಾನು ಅಂಪೈರ್ ಆಗಿದ್ದೆ. ಅದೂ ನನಗೆ ನೆನಪಿನಲ್ಲುಳಿಯುವ ಪಂದ್ಯ.

• **ನೆದರ್ಲೆಂಡ್ಸ್‌ನಲ್ಲಿ ಅಂಪೈರಿಂಗ್ ಅವಕಾಶಗಳು ಹೇಗೆ?**

ಅಲ್ಲಿ ದೇಶಿ ಕ್ರಿಕೆಟ್ ನಮ್ಮ (ಭಾರತದ) ರೀತಿಯಲ್ಲಿಲ್ಲ. ಏಕದಿನ ಮತ್ತು ಟಿ20 ಲೀಗ್ ಪಂದ್ಯಗಳು ನಡೆಯುತ್ತವೆ. ಇವುಗಳಿಗೆ ಅಂಪೈರಿಂಗ್ ಮಾಡುತ್ತಿದ್ದೆ. ಆದರೆ ನೆದರ್ಲೆಂಡ್ಸ್, ಐಸಿಸಿಯ ಪೂರ್ಣಪ್ರಮಾಣದ ಸದಸ್ಯ ರಾಷ್ಟ್ರವಲ್ಲದ ಕಾರಣ ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡುವ ಅವಕಾಶ ಕಡಿಮೆ. ಆದರೆ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯಗಳ ವೇಳೆ (2022–23) ನನ್ನ ನಿರ್ವಹಣೆಗೆ ಸಂಬಂಧಿಸಿದ ವರದಿ ಬಹುಶಃ ನನಗೆ ಇಂಥ ಅವಕಾಶಗಳು ಸಿಗಲು ಕಾರಣವಾಗಿರಬಹುದು.

• **ನಿಮ್ಮ ಆಟದ ಹಿನ್ನೆಲೆ ಬಗ್ಗೆ?**

ನಾನು ದಾವಣಗೆರೆಯಲ್ಲಿ ಕ್ಲಬ್ ಕ್ರಿಕೆಟ್ ಆಡುವಾಗ ವಿಕೆಟ್ ಕೀಪಿಂಗ್ ಮಾಡುತ್ತಿದ್ದೆ. ಆದರೆ ಅದಕ್ಕಿಂತ ಮೇಲಿನ ಮಟ್ಟದಲ್ಲಿ ಆಡಲಾಗಲಿಲ್ಲ. 2006ರಲ್ಲಿ ಆಡುವುದನ್ನು ಬಿಟ್ಟು ಅಂಪೈರಿಂಗ್‌ಗೆ ಇಳಿದೆ. ಕೆಎಸ್‌ಸಿಎ ಲೀಗ್ ಪಂದ್ಯಗಳಿಗೆ ಅಂಪೈರಿಂಗ್ ಮಾಡತೊಡಗಿದ್ದೆ. ದಾವಣಗೆರೆಯಲ್ಲಿ ಕೋಚ್ ಆಗಿದ್ದ ದಿ.ಪ್ರಕಾಶ್ ಪವಾರ್ ಅವರ ಸಲಹೆ ಮೇರೆಗೆ ನಾನು ಅಂಪೈರಿಂಗ್‌ಗೆ ಇಳಿದಿದ್ದೆ.

ಕ್ರೀಡಾ ಫೆಡರೇಷನ್‌ಗಳ ಕಾರ್ಯನಿರ್ವಹಣೆ: ‘ಸುಪ್ರೀಂ’ ಆಕ್ರೋಶ

ನವದೆಹಲಿ (ಪಿಟಿಐ): ದೇಶದ ಕ್ರೀಡಾ ಫೆಡರೇಷನ್‌ಗಳ ಶುದ್ಧೀಕರಣ, ನಿಷ್ಪಕ್ಷಪಾತ ಕಾರ್ಯನಿರ್ವಹಣೆ ಮತ್ತು ಸ್ವಾಯತ್ತತೆಗೆ ಕಠಿಣ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂದು ಮಂಗಳವಾರ ಅಭಿಪ್ರಾಯಪಟ್ಟಿರುವ ಸುಪ್ರೀಂ ಕೋರ್ಟ್, ಸ್ವಹಿತಾಸಕ್ತಿಗಾಗಿ ಈ ಸಂಸ್ಥೆಗಳನ್ನು ತಮ್ಮ ಕಪಿಮುಷ್ಟಿಯಲ್ಲಿ ಇರಿಸಿಕೊಂಡಿರುವ ವ್ಯಕ್ತಿಗಳನ್ನು ಹೊರಹಾಕಬೇಕು ಎಂದು ಖಾರವಾಗಿ ತಿಳಿಸಿದೆ.

ಸಿಬಿಐ ತನಿಖೆ ಮತ್ತು ಏಷ್ಯನ್ ಕಬಡ್ಡಿ ಫೆಡರೇಷನ್‌ನ ಅಧ್ಯಕ್ಷರೆಂದು ‘ಹೇಳಿಕೊಂಡ’ ವ್ಯಕ್ತಿ ಭಾರತ ಅಮೆಚೂರ್ ಕಬಡ್ಡಿ ಫೆಡರೇಷನ್ (ಎಕೆಎಫ್‌ಐ) ಆಡಳಿತಾಧಿಕಾರಿಗೆ ಬರೆದಿರುವ ಪತ್ರಕ್ಕೆ ಸಂಬಂಧಿಸಿ ಕ್ರಮಗಳನ್ನು ಕೈಗೊಳ್ಳುವಂತೆ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟಿಶ್ವರ ಸಿಂಗ್ ಅವರಿದ್ದ ಪೀಠವು, ಕೇಂದ್ರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚಿಸಿತು.

‘ಪತ್ರದಲ್ಲಿ ಏಷ್ಯನ್ ಕಬಡ್ಡಿ ಫೆಡರೇಷನ್ ಅಧ್ಯಕ್ಷರೆಂದು ಹೇಳಿಕೊಂಡ ವ್ಯಕ್ತಿ ಬಳಸಿದ ಕಟು ಭಾಷೆಯನ್ನು ಗಮನಿಸಿದರೆ, ಕ್ರೀಡಾ ಸಂಸ್ಥೆಗಳ ಶುದ್ಧೀಕರಣಕ್ಕೆ ಮತ್ತು ಅವು ಸ್ವತಂತ್ರವಾಗಿ ಮತ್ತು ಸ್ವಾಯತ್ತತೆಯಿಂದ ಕಾರ್ಯನಿರ್ವಹಿಸಲು ಮತ್ತು ಸ್ವಹಿತಾಸಕ್ತಿಗಾಗಿಯೇ ಸಂಸ್ಥೆಗಳನ್ನು ಹಿಡಿತದಲ್ಲಿಟ್ಟುಕೊಂಡಿರುವ ವ್ಯಕ್ತಿಗಳನ್ನು ಹೊರದೂಡಲು ಚುನಾವಣಾ ಪ್ರಕ್ರಿಯೆ ಸುಧಾರಿಸುವ ಅಗತ್ಯವಿದೆ ಎಂದು ನಮಗೆ ಗೋಚರವಾಗುತ್ತಿದೆ’ ಎಂದು ಪೀಠ ಹೇಳಿದೆ.

ಇರಾನ್‌ನಲ್ಲಿ ನಡೆಯಲಿರುವ ಏಷ್ಯನ್ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ದೇಶದ ಆಟಗಾರರು ಭಾಗವಹಿಸಲು ಮತ್ತು ದೇಶದ ಕ್ರೀಡಾಪಟುಗಳು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳಲು ಅವಕಾಶವಾಗುವಂತೆ ಕ್ರಮ ಕೈಗೊಳ್ಳಬೇಕೆಂದು ಪೀಠವು ಮೆಹ್ತಾ ಅವರಿಗೆ ತಿಳಿಸಿತು.

ಕಬಡ್ಡಿ ಫೆಡರೇಷನ್ ಸೇರಿದಂತೆ ವಿವಿಧ ಕ್ರೀಡಾ ಸಂಸ್ಥೆಗಳಿಗೆ ಮಾನ್ಯತೆ ನೀಡುವಲ್ಲಿ ಮತ್ತು ಒಳಜಗಳ ಬಗೆಹರಿಸಲು ಮಾತುಕತೆ ಸೇರಿದಂತೆ ಸೌಹಾರ್ದಯುತ ಮಾರ್ಗ ಕಂಡುಕೊಳ್ಳುವಂತೆ ಕೇಂದ್ರಕ್ಕೆ ಕೋರ್ಟ್ ಸೂಚಿಸಿತು.